# ಯುಗಶ್ರೀ

## ವಿಶೇಷಾಂಕ

- ★ ಜಗದೊಡೆಯ
- ★ ಯೇಸುಕ್ರಿಸ್ತರ ಪುನರಾಗಮನ
- ★ ಗತ ಮಹಾತ್ಮರೊಡನೆ ಪ್ರಾರ್ಥಿಸಬಹುದೇ?
- ★ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ
- ★ ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ
- ★ ಅಹ್ಮದೀ — ಅಹ್ಮದಿಯೇತರ ಮುಸ್ಲಿಮರು
- ★ ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್

ನಾವು ಪ್ರವಾದಿಗಳನ್ನು ನಿರಂತರವಾಗಿ ಕಳುಹಿಸಿದೆವು. ಪ್ರತಿಯೊಂದು ಜನತೆಯ ಬಳಿಗೂ ಪ್ರವಾದಿ ಬಂದಾಗ ಜನರು ಅವರನ್ನು ತಿರಸ್ಕರಿಸುತ್ತಿದ್ದರು. ಆ ಸಮುದಾಯಗಳನ್ನು ಒಂದರ ನಂತರ ಇನ್ನೊಂದರಂತೆ ನಾವು ನಾಶಮಾಡುತ್ತಾ ಹೋದೆವು; ಹಾಗೆ ಅವರು ಕೇವಲ ಹಳೆಯ ಕಥೆಗಳಾಗಿ ಉಳಿದರು. ಪ್ರವಾದಿಗಳನ್ನು ನಂಬದೆ ಇರುವ ಜನರ ಮೇಲೆ ಶಾಪವಿದೆ.

—ಪವಿತ್ರ ಖುರ್‌ಆನ್ (23 : 45)

ತ್ರೈಮಾಸಿಕ

ಡಿಸೆಂಬರ್ 1985

ಬೆಲೆ: ರೂ. 2-00

# ಯುಗರಶ್ಮಿ ತ್ರೈಮಾಸಿಕ

10-23-1008, ಅನ್ಸಾರಿ ರೋಡ್, ಬಂದರ್, ಮಂಗಳೂರು – 575 001

ಬಿಡಿಪ್ರತಿ: ರೂ. 1–00

ವಾರ್ಷಿಕ ಚಂದಾ: ರೂ. 4–00

ಅಂಚೆ ಮೂಲಕ: ರೂ. 5–00

**ವಿಷಯ ಸೂಚಿಕೆ** **ಪುಟ**


* ದ್ವಿತೀಯ ದಶಕದಲ್ಲಿ ಪದಾರ್ಪಣೆ ಮಾಡಿರುವ ಪ್ರಥಮ ಇಸ್ಲಾಮೀ ಕನ್ನಡ ಪತ್ರಿಕೆ 1
* ಉಪದೇಶಗಳು ... 2
* ಸಂದೇಶಗಳು ... i, ii
* ಅಹ್ಮದಿಯತಿನ ನಿರ್ಮೂಲನ ಸಾಧ್ಯವೇ ? ... iii
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... iv
* ಜಗದೊಡೆಯ ... 3
* ಯೇಸುಕ್ರಿಸ್ತರ ಪುನರಾಗಮನ ... 6
* ಗತ ಮಹಾತ್ಮರೊಡನೆ ಪ್ರಾರ್ಥಿಸಬಹುದೇ ? ... 18
* ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ–7 ... 29
* ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ–2 ... 33
* ಅಹ್ಮದೀ ಮುಸ್ಲಿಮರು ಮತ್ತು ಅಹ್ಮದಿಯೇತರ ಮುಸ್ಲಿಮರು– ಯಾರ ವಿಶ್ವಾಸಗಳು ಯಥಾರ್ಥ ಇಸ್ಲಾಮಿಕ ? ... 43
* ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ ನಿಧನ ... 53
* ಹಝ್ರತ್ ಝಫ್ರುಲ್ಲಾ ಖಾನ್ ... 56
* ಝಫ್ರುಲ್ಲಾ ಖಾನ್: ಜೀವನದ ಮುಖ್ಯ ಘಟನೆಗಳು ... 58
* ಅಹ್ಮದಿಯಾ ವಾರ್ತೆಗಳು ... 60



**ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ**

## ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು. ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ

"...... ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ

ಪುಟಗಳು: **48** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: Book Secretary, Ahmadiyya Muslim Mission,
10-23-1008, Ansari Road, Bunder, Mangalore-575 001.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಸಂಪುಟ : 11 | ಸಪ್ಟಂಬರ್–ಡಿಸೆಂಬರ್ 1985 / ತಬೂಕ್–ಫತಹ್ 1364 | ಸಂಚಿಕೆ : 1 |
|---|---|---|

## ದ್ವಿತೀಯ ದಶಕಕ್ಕೆ ಪದಾರ್ಪಣೆ ಮಾಡಿರುವ ಪ್ರಥಮ ಇಸ್ಲಾಮೀ ಕನ್ನಡ ಪತ್ರಿಕೆ

ಈ ಸಂಚಿಕೆಯೊಂದಿಗೆ "ಯುಗರಶ್ಮಿ" ಹನ್ನೊಂದನೇ ಹರೆಯದಲ್ಲಿ ಅಡಿಯಿಟ್ಟಿದೆ. ಎರಡನೇ ದಶಕಕ್ಕೆ ಪದಾರ್ಪಣೆ ಮಾಡಿರುವ ಮೊತ್ತಮೊದಲ ಇಸ್ಲಾಮೀ ಕನ್ನಡ ಪತ್ರಿಕೆ ಎಂಬ ಕೀರ್ತಿ ಅದಕ್ಕೆ ಸಲ್ಲುತ್ತದೆ. ಕನ್ನಡ ಭಾಷೆಯಲ್ಲಿ ಹಲವಾರು ಇಸ್ಲಾಮೀ ಪತ್ರಿಕೆಗಳು ಹುಟ್ಟಿಕೊಂಡು ಕಣ್ಮರೆಯಾಗಿವೆ. ಅವುಗಳಲ್ಲಿ ಯಾವುದೂ ತನ್ನ ಹುಟ್ಟಿನ ಎರಡನೆಯ ದಶಕವನ್ನು ಪ್ರವೇಶಿಸುವಷ್ಟರ ವರೆಗೆ ಬದುಕಿ ಉಳಿದಿರಲಿಲ್ಲ.

"ಯುಗರಶ್ಮಿ"ಗೆ ಹಲವಾರು ಅಡೆತಡೆಗಳಿದ್ದರೂ ಈ ಯಶಸ್ಸಿಗೆ ಕಾರಣ ಸರ್ವನಿಯಾಮಕನಾದ ಅಲ್ಲಾಹನ ವಿಶೇಷ ನೆರವು ಮಾತ್ರವಾಗಿದೆಯೆಂದು ನಾವು ನಂಬುತ್ತೇವೆ. ಸರ್ವಶಕ್ತನಾದ ಅಲ್ಲಾಹನಿಗೆ ಕೋಟ್ಯಾನುಕೋಟಿ ವಂದನೆಗಳು. ಈ ಶುಭ ಸಂದರ್ಭದಲ್ಲಿ ನಾವು ನಮ್ಮ ಓದುಗರಿಗೂ ಅಭ್ಯುದಯಕಾಂಕ್ಷಿಗಳಿಗೂ ಶುಭಾಶಯಗಳನ್ನು ಹಾರೈಸುತ್ತೇವೆ.

"ಯುಗರಶ್ಮಿ"ಯ ಸಫಲತೆಯ ಸವಿನೆನಪಿಗಾಗಿ ನಾವು ಈ ವಿಶೇಷಾಂಕವನ್ನು ಹೊರಡಿಸಿದ್ದೇವೆ. ವಿಶೇಷ ಸಂಚಿಕೆಯಲ್ಲಿ ಇತರ ಪತ್ರಿಕೆಗಳು ಮಾಡುವಂತೆ ಅನೇಕ ಜಾಹೀರಾತುಗಳನ್ನು ಪ್ರಕಟಿಸಿ ಪುಟಗಳನ್ನು ಹೆಚ್ಚಿಸುವ ಬದಲು ನಾವು ಲೇಖನಗಳಿಂದ ಪುಟಗಳನ್ನು ತುಂಬಿಸಿದ್ದೇವೆ. ವಾಚಕರು ಓದಿ ಮನನಮಾಡಿ ಅವುಗಳ ಸದುಪಯೋಗವನ್ನು ಪಡೆಯಲೆಂಬುದು ನಮ್ಮ ಬಯಕೆಯಾಗಿದೆ.

"ಯುಗರಶ್ಮಿ"ಯ ಪಯಣ ಮಾರ್ಗದಲ್ಲಿರುವ ಎಡರು ತೊಡರುಗಳು ನೀಗಲ್ಪಡಲೆಂದೂ "ಯುಗರಶ್ಮಿ"ಗೆ ಅಲ್ಲಾಹನು ದೀರ್ಘಾಯುಸ್ಸನ್ನು ದಯಪಾಲಿಸಲೆಂದೂ ಪ್ರಾರ್ಥಿಸುತ್ತೇವೆ.

—ಸಂಪಾದಕ

# ಉಪದೇಶಗಳು

**ವಾಗ್ದತ್ತ ಧರ್ಮೋದ್ಧಾರಕ**



ಅಹ್ಮದಿಯಾ ಸಂಘಟನೆಯ ಸ್ಥಾಪಕ
**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

"ಲಕ್ಷಗಟ್ಟಲೆ ರೂಪಾಯಿಗಳು ಮೌಲ್ಯವುಳ್ಳ ಒಂದು ರತ್ನ ಮಗುವೊಂದರ ಕೈಗೆ ಸಿಕ್ಕಿದರೆ ಅದರ ದೃಷ್ಟಿಯಲ್ಲಿ ಅದೊಂದು ಆಟಿಕೆ ಮಾತ್ರವಾಗಿರಬಹುದು. ಕಾರಣವೇನೆಂದರೆ, ಆ ಮಗುವಿಗೆ ಅದರ ಕುರಿತಿರುವ ತಿಳುವಳಿಕೆ ಅಷ್ಟು ಮಾತ್ರವೇ ಆಗಿದೆ. ಒಬ್ಬಾತನಿಗೆ ತಿಳಿಯದಂತೆ ಜೇನಿನಲ್ಲಿ ವಿಷವನ್ನು ಬೆರಸಿ ಕೊಟ್ಟರೆ ಆತನು ಅದನ್ನು (ಶುದ್ಧ ಜೇನೆಂದು ಭಾವಿಸಿ) ಸಂತಸದಿಂದ ಸೇವಿಸುವನು. ಕಾರಣವೇನೆಂದರೆ, ಅದು ತನಗೆ ಮರಣವನ್ನು ತರುವುದೆಂದು ಆತನು ತಿಳಿದಿರುವುದಿಲ್ಲ. ಆ ಜೇನಿನ ಬಗ್ಗೆ ಆತನಿಗೆ ಸರಿಯಾದ ತಿಳುವಳಿಕೆ ಇರುವುದಿಲ್ಲ. ಆದರೆ ನೀವು ಅರಿತುಕೊಂಡು ಒಂದು ಸರ್ಪವಿರುವ ಹುತ್ತದೊಳಗೆ ಕೈಹಾಕುವುದಿಲ್ಲ. ಅದು ನಿಮ್ಮ ಮರಣಕ್ಕೆ ಹೇತುವಾಗುವುದೆಂದು ನಿಮಗೆ ಗೊತ್ತಿರುತ್ತದೆ. ಅದೇ ಪ್ರಕಾರ ಕಟುವಾದ ವಿಷವನ್ನು ನೀವು ಅರಿತುಕೊಂಡು ಸೇವಿಸುವುದಿಲ್ಲ. ಕಾರಣವೇನೆಂದರೆ, ಆ ವಿಷವನ್ನು ಸೇವಿಸಿದರೆ ನೀವು ಮರಣಹೊಂದುವಿರೆಂದು ನಿಮಗೆ ತಿಳಿದಿರುತ್ತದೆ.

ಆದರೆ ದೈವಾಜ್ಞೆಗಳನ್ನು ಉಲ್ಲಂಘಿಸುವುದರ ಮೂಲಕ ಉಂಟಾಗುವ ಮರಣದ ಕುರಿತು ನೀವೇಕೆ ಅಲಕ್ಷ್ಯರಾಗಿ ಬಿಡುತ್ತೀರಿ? ಅದರ ಕಾರಣವೇನೆಂದರೆ, ನಿಮಗೆ ಸರ್ಪದ ಕುರಿತು ಮತ್ತು ವಿಷದ ಬಗ್ಗೆ ಇರುವಷ್ಟು ತಿಳುವಳಿಕೆಯೂ ಪರಿಜ್ಞಾನವೂ ಈ ವಿಚಾರಕ್ಕೆ ಸಂಬಂಧಿಸಿ ಇಲ್ಲವೆಂಬುದೇ ಆಗಿದೆ. ಮನುಷ್ಯನ ಜೀವಕ್ಕೂ ಸೊತ್ತಿಗೂ ಸಂಭವಿಸುವ ನಷ್ಟದಿಂದ ಪಾರಾಗಬೇಕಾದರೆ ಆ ಬಗ್ಗೆ ತಿಳುವಳಿಕೆ ಇರಬೇಕಾಗಿದೆ. ಇದಕ್ಕೆ ಬೇರೊಂದು ಪಾಪ ಪರಿಹಾರ ಸಿದ್ಧಾಂತದ ಅಗತ್ಯವಿಲ್ಲ.

ಅಪರಾಧಗಳನ್ನೂ ಪಾಪ ಕೃತ್ಯಗಳನ್ನೂ ಗೈಯ್ಯಲು ರೂಢಿಸಿಕೊಂಡಿರುವ ಹಲವು ದುಷ್ಟರೂ ಅಕ್ರಮಿಗಳೂ ತಾವು ಹಿಡಿಯಲ್ಪಟ್ಟು ಕಠಿಣ ಶಿಕ್ಷೆಗಳಿಗೆ ಗುರಿಯಾಗುವೆವೋ ಎಂಬ ಭೀತಿಯುಂಟಾದರೆ ತಮ್ಮ ಸಾವಿರಾರು ಇಚ್ಛೆಗಳನ್ನೂ ಮನೋವಿಕಾರಗಳನ್ನೂ ಅದುಮಿಡುತ್ತಿರುವುದು ವಾಸ್ತವವಲ್ಲವೇ? ಲಕ್ಷಾಂತರ ರೂಪಾಯಿಗಳಿರುವ ಹಣದ ಪೆಟ್ಟಿಗೆ ತೆರೆದಿರಿಸಿರುವುದನ್ನು ಕಂಡರೂ ಅವರು ಆ ಅಂಗಡಿಯನ್ನು ಕೊಳ್ಳೆ ಹೊಡೆಯಲು ಹೋಗುವುದಿಲ್ಲ. ಕಾರಣವೇನೆಂದರೆ ಶಸ್ತ್ರಧಾರಿ ಕಾವಲುಗಾರರು ಸಮೀಪದಲ್ಲಿರುವುದನ್ನು ಅವರು ಕಾಣುತ್ತಾರೆ. ಆ ಕೊಳ್ಳೆಗಾರರು ಕಳ್ಳತನ, ಕೊಳ್ಳೆ, ಅಕ್ರಮ ಮೊದಲಾದ ಕೃತ್ಯಗಳಿಂದ ಅಗಲಿ ನಿಲ್ಲುವುದು ಯಾವುದಾದರೂ ಪಾಪ ವಿಮೋಚನ ಸಿದ್ಧಾಂತದ ಕಾರಣದಿಂದಾಗಲಿ ಶಿಲುಬೆಯ ಮೇಲಿನ ವಿಶ್ವಾಸದ ಕಾರಣದಿಂದಾಗಲಿ ಅಲ್ಲ. ಬದಲು, ಕಾವಲುಗಾರರನ್ನೂ ಅವರ ಆಯುಧಗಳನ್ನೂ ಕಣ್ಣ ಮುಂದೆ ಕಾಣುವುದರಿಂದ ಮಾತ್ರವಾಗಿದೆ. ತಮ್ಮ ಕುಕೃತ್ಯಗಳಿಂದಾಗಿ ಸೆರೆಮನೆಗೆ ಹೋಗಬೇಕಾದೀತೆಂಬ ಭಯ ಮತ್ತು ತಿಳುವಳಿಕೆಯ ಕಾರಣದಿಂದ ಅವರು ಆ ಅಪರಾಧಕ್ಕಿಳಿಯುವುದಿಲ್ಲ.

ಮನುಷ್ಯರು ಮಾತ್ರವಲ್ಲ, ಪ್ರಾಣಿಗಳು ಸಹ ಈ ವಿಚಾರದಲ್ಲಿ ಜಾಗ್ರತೆ ವಹಿಸುವುದನ್ನು ನಮಗೆ ಕಾಣಲು ಸಾಧ್ಯ. ಅಕ್ರಮಿಯಾದ ಸಿಂಹವೊಂದು ಜ್ವಲಿಸುತ್ತಿರುವ ಅಗ್ನಿಯಾಚೆ ತನ್ನ ಬೇಟೆಯಿದೆಯೆಂದು ತಿಳಿದರೆ ಅದು ಎಂದಿಗೂ ಆ ಅಗ್ನಿಯನ್ನು ದಾಟಿ ಹೋಗಲಾರದು. ಅದೇ ಪ್ರಕಾರ ಒಂದು ಆಡಿನ ಮರಿಯ ಹತ್ತಿರ ಅದರ ಯಜಮಾನ ತುಂಬಿಸಿದ ಕೋವಿ ಅಥವಾ ಹಿರಿದ ಖಡ್ಗ ಸಹಿತ ನಿಂತು ಕೊಂಡಿರುವುದನ್ನು ಕಾಣುವ ಒಂದು ತೋಳ ಆ ಆಡಿನ ಮರಿಯ ಮೇಲೆ ಆಕ್ರಮಣ ಮಾಡಲಾರದು.

ಆದುದರಿಂದ, ನನ್ನ ಪ್ರಿಯ ಜನರೇ, ಪಾಪವಿಮುಕ್ತಿಗೆ ದೈವಿಕ ಜ್ಞಾನ ಬಹಳ ಅವಶ್ಯವೆಂದು ಅನುಭವ ನಮಗೆ ಕಲಿಸಿದ ಸತ್ಯವಾಗಿದೆ. ಯಾವುದೇ ರೀತಿಯ ಪಾಪ ವಿಮೋಚನ ಸಿದ್ಧಾಂತದಿಂದಲೂ ಮನುಷ್ಯನನ್ನು ಪಾಪದಿಂದ ರಕ್ಷಿಸಲಿಕ್ಕೆ ಸಾಧ್ಯವಿಲ್ಲ." (ಲೆಕ್ಚರ್ ಲಾಹೋರ್)

★

## ಮಿರ್ಝಾ ವಸೀಮ್ ಅಹ್ಮದ್

### ನಾಝಿರೆ ಆಲಾ ಸದರ್ ಅಂಜುಮನ್ ಅಹ್ಮದಿಯಾ

(ಅಹ್ಮದಿಯಾ ಸಂಘಟನೆಯ ಭಾರತದ ಸರ್ವೋನ್ನತ ನಿರ್ದೇಶಕ)

**ಖಾದಿಯಾನ್**

# ಸಂದೇಶ

**ಮುಹಮ್ಮದ್ ಯೂಸುಫ್**

ಸಂಪಾದಕ "ಯುಗರಶ್ಮಿ"

ಮಂಗಳೂರು.

— ಅವರಿಗೆ

ಪ್ರಿಯ ಸಹೋದರ,

ಅಸ್ಸಲಾಮು ಅಲೈಕುಂ

"ಯುಗರಶ್ಮಿ" ಹಲವಾರು ಪರೀಕ್ಷೆಗಳನ್ನೂ ಸಂಕಟಮಯ ಪರಿಸ್ಥಿತಿಗಳನ್ನೂ ಸವಾಲುಗಳನ್ನೂ ಧೈರ್ಯದಿಂದ ಎದುರಿಸಿ ಪಾರಾಗಿ ಮುನ್ನಡೆಯುತ್ತಾ ದ್ವಿತೀಯ ದಶಕವನ್ನು ಪ್ರವೇಶಿಸಿರುವ ಪ್ರಥಮ ಇಸ್ಲಾಮೀ ಕನ್ನಡ ಮುಖವಾಣಿ ಆಗಿದೆಯೆಂಬುದನ್ನರಿತು ಬಹಳ ಸಂತೋಷವಾಯಿತು. ಅದಕ್ಕಾಗಿ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸ್ವೀಕರಿಸಿರಿ.

ಇದು ಅಲ್ಲಾಹನ ಅನುಗ್ರಹದಿಂದ ಮಾತ್ರ ಸಾಧ್ಯವಾಯಿತೆಂಬುದು ಸರಿಯಾದರೂ ನಿಮ್ಮ ಅವಿಶ್ರಾಂತ ಪರಿಶ್ರಮ ಮತ್ತು ನಿಸ್ವಾರ್ಥ, ಶ್ರದ್ಧಾಪೂರ್ಣವಾದ ಸ್ವಯಂಸೇವೆ ಅದನ್ನು ಈ ಮಟ್ಟಕ್ಕೇರಿಸಲು ಸಹಕಾರಿಯಾಯಿತೆಂಬುದು ನಿಸ್ಸಂದೇಹಕರವಾಗಿದೆ.

ಕಾಲದ ಪರಿವರ್ತನೆಯ ವೈಷಮ್ಯಗಳನ್ನು ಪರಿಗಣಿಸದೆ ನೀವು ಹೊಸ ದೃಢ ನಿರ್ಧಾರಗಳೊಂದಿಗೆಯೂ ನವ ಉತ್ಸಾಹದಿಂದಲೂ ಸದಾ ಮುನ್ನಡೆಯುವಿರೆಂದು ಆಶಿಸುತ್ತೇನೆ.

"ಯುಗರಶ್ಮಿ"ಯು ಆಧ್ಯಾತ್ಮಿಕ ಪ್ರಕಾಶವನ್ನು ಬೀರುವ ಮಾಧ್ಯಮವಾಗಲಿಯೆಂದೂ ಅದರ ಮೂಲಕ ಪರಿಶುದ್ಧವೂ ಪ್ರೇಮಪೂರ್ಣವೂ ಆದ ದೈವಿಕ ಸಂದೇಶಗಳಿಗೆ ಜನರು ಕಿವಿಗೊಡುವಂತಾಗಿ ಅವರು ಯಾತನೆಗಳಿಂದಲೂ ವಿನಾಶದ ಅಂಚಿನಿಂದಲೂ ರಕ್ಷಿಸಲ್ಪಡುವಂತಾಗಲಿಯೆಂದೂ ಪ್ರಾರ್ಥಿಸುತ್ತೇನೆ. ಅಲ್ಲಾಹನು ನಿಮಗೆ ಆಧ್ಯಾತ್ಮಿಕ ಹಾಗೂ ಭೌತಿಕ ಅಭಿವೃದ್ಧಿಯನ್ನು ದಯಪಾಲಿಸಲಿ.

**ಬಶೀರ್ ಅಹ್ಮದ್ ದೆಹ್ಲವಿ**

**ನಾಝಿರೆ ದಅ್‌ವತೋ ತಬ್ಲೀಗ್, ಸದರ್ ಅಂಜುಮನ್ ಅಹ್ಮದಿಯಾ**

(ಅಹ್ಮದಿಯಾ ಸಂಘಟನೆ ಪ್ರಚಾರ ನಿರ್ದೇಶಕ)

**ಖಾದಿಯಾನ್**


# ಸಂದೇಶ

"ಯುಗರಶ್ಮಿ"ಯ ಸನ್ಮಾನ್ಯ ಸಂಪಾದಕರಿಗೆ,

ಅಸ್ಸಲಾಮು ಅಲೈಕುಂ

"ಯುಗರಶ್ಮಿ" ಎಂಬ ಪತ್ರಿಕೆಯನ್ನು ನೀವು ಕನ್ನಡ ಭಾಷೆಯಲ್ಲಿ ಪ್ರಕಟಿಸುತ್ತಿರುವ ಮೂಲಕ ಒಂದು ದೊಡ್ಡ ಧಾರ್ಮಿಕ ಸೇವೆಯನ್ನು ಮಾಡುತ್ತಿರುವಿರಿ. ಈ ಪತ್ರಿಕೆ ತನ್ನ ಪ್ರಕಟನೆಯ ಹತ್ತು ವರ್ಷಗಳನ್ನು ಪೂರ್ಣಗೊಳಿಸಿದೆಯೆಂದು ತಿಳಿದು ತುಂಬಾ ಸಂತೋಷವಾಯಿತು. ಈ ಕಾಲದಲ್ಲಿ ದಿನ ಪತ್ರಿಕೆಗಳಿಗೂ ನಿಯತಕಾಲಿಕಗಳಿಗೂ ಬಹಳ ಪ್ರಾಧಾನ್ಯತೆ ಇದೆ. ಕನ್ನಡ ಭಾಷೆಯಲ್ಲಿ ಅಹ್ಮದಿಯಾ ಸಂಘಟನೆಯನ್ನು ಪರಿಚಯಗೊಳಿಸಲಿಕ್ಕಾಗಿ ಪ್ರಕಟವಾಗುತ್ತಿರುವ ಏಕಮಾತ್ರ ಪತ್ರಿಕೆಯಾದ ಇದು ತ್ರೈಮಾಸಿಕವಾಗಿ ಪ್ರಕಟಗೊಳ್ಳುತ್ತಿದೆ. ಇದು ಹತ್ತು ವರ್ಷ ಪೂರ್ತಿಗೊಳಿಸಿ ದ್ವಿತೀಯ ದಶಕವನ್ನು ಪ್ರವೇಶಿಸಿರುವುದರಿಂದ ನೀವು ವಿಶೇಷ ಸಂಚಿಕೆಯನ್ನು ಪ್ರಕಟಿಸುತ್ತಿರುವಿರಿ. ನನ್ನಿಂದ ಅಭಿನಂದನೆಗಳನ್ನು ಸ್ವೀಕರಿಸಿರಿ. ಈ ಪತ್ರಿಕೆ ದಿನಂಪ್ರತಿ ಅಭಿವೃದ್ಧಿಯನ್ನು ಹೊಂದಲಿಯೆಂದು ಪ್ರಾರ್ಥಿಸುತ್ತೇನೆ. ನಿಮ್ಮ ಪ್ರಯತ್ನಗಳನ್ನು ಅಲ್ಲಾಹನು ಸ್ವೀಕರಿಸಲಿ. ಈ ಪತ್ರಿಕೆ ಮೂರು ತಿಂಗಳಿಗೊಂದಾವರ್ತಿ ಪ್ರಕಟಗೊಳ್ಳುವ ಬದಲು ದ್ವೈಮಾಸಿಕವಾಗಿಯೋ ಮಾಸಿಕವಾಗಿಯೋ ಪ್ರಕಟಗೊಳ್ಳುವಂತಾಗಲಿ. ಅದರ ಮೂಲಕ ಆ ಭಾಗದ ಅಧಿಕಾಧಿಕ ಜನರಿಗೆ ಇಸ್ಲಾಂ ಮತ್ತು ಅಹ್ಮಯತಿನ ಸಂದೇಶ ತಲಪುವಂತಾಗಲಿ. ಧರ್ಮದಿಂದ ದೂರ ಹೋಗಿರುವ ಜನರು ಅದರ ಮೂಲಕ ಅಲ್ಲಾಹನ ಕಡೆಗೆ ತಿರುಗುವಂತಾಗಲಿ. ಈ ಕಾಲದಲ್ಲಿ ಅಲ್ಲಾಹನಿಂದ ನಿಯೋಜಿಸಲ್ಪಟ್ಟ ವಾಗ್ದತ್ತ ಮಸೀಹ್ ಹಾಗೂ ಮಹ್‌ದಿ ಆದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರ ಸಂಘಟನೆಯಲ್ಲಿ ಅವರು ಸೇರಿ ಮಾನಸಿಕ ಶಾಂತಿಯನ್ನು ಗಳಿಸುವಂತಾಗಲಿ.

# ಅಹ್ಮದಿಯತಿನ ನಿರ್ಮೂಲನ ಸಾಧ್ಯವೇ ?

★ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್
ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ

ಎಲೈ ಮುಸ್ಲಿಮರೇ, ನೀವು ಓರ್ವ ಅಹ್ಮದಿಯನ್ನು ರಕ್ತಸಾಕ್ಷಿಯನ್ನಾಗಿ ಮಾಡಬಲ್ಲಿರಿ, ಇಬ್ಬರನ್ನು ಮಾಡುವಿರಿ, ನಾಲ್ವರನ್ನು ಶಹೀದ್ ಮಾಡಬಹುದು ಅಥವಾ ಸಾವಿರ ಅಹ್ಮದೀಯರನ್ನೇ ಶಹೀದ್ ಮಾಡಬಲ್ಲಿರಿ! ಎಷ್ಟು ಬೇಕೋ ಅಷ್ಟು ಜನರನ್ನು ರಕ್ತಸಾಕ್ಷಿಯನ್ನಾಗಿ ಮಾಡಿಕೊಳ್ಳಿರಿ–ಮಾಡುತ್ತಲೇ ಇರಿ ! ಆದರೆ ಆ ರೀತಿ ವಿಶ್ವಾಸ ಸಂರಕ್ಷಣೆಗಾಗಿ ನಿಮ್ಮ ಕೈಯಿಂದ ಹುತಾತ್ಮರಾಗುವವರಿಗೆ ಅಲ್ಲಾಹನು ನಿಜವಾದ ಜೀವವನ್ನು ಕರುಣಿಸುತ್ತಾನೆಂಬುದು ನಮಗೆ ಚೆನ್ನಾಗಿ ತಿಳಿದಿದೆ. ಯಾರನ್ನು ಅಲ್ಲಾಹನು ಜೀವಂತರೆಂದು ತೀರ್ಮಾನಿಸಿರುವನೋ ಅಂಥವರನ್ನು ಕೊಂದು ಬಿಡಲು ನಿಮಗೆ ಭಾಗ್ಯ ಸಾಲದು. ಹೌದು, ಯಾರನ್ನು ಅಲ್ಲಾಹನು ಮರಣ ಹೊಂದಿದವರ ಸಾಲಿನಲ್ಲಿ ಸೇರಿಸಿರುವನೋ ಅಂತಹ ವ್ಯಕ್ತಿಯನ್ನು ಜೀವಂತ ಮಾಡಲು ನೀವು ಪರಿಶ್ರಮಿಸುತ್ತಿದ್ದೀರಿ. ಆದರಲ್ಲೂ ನೀವು ಪರಾಜಿತರು – ಇದರಲ್ಲೂ ನೀವು ಪರಾಜಿತರೇ ಆಗುತ್ತೀರಿ. ಹಝ್ರತ್ ಈಸಾ (ಅ)ರನ್ನು ಜೀವಂತ ಮಾಡಿ ತೋರಿಸಲು ನಿಮಗೆ ಎಂದೆಂದಿಗೂ ಸಾಧ್ಯವಿಲ್ಲ.

ಅಹ್ಮದಿಯಾ ಜಮಾಅತನ್ನು ನಿರ್ಮೂಲನ ಮಾಡಬೇಕೆಂದಿದ್ದರೆ, ಒಂದು ಅಥವಾ ಹತ್ತು ಅಥವಾ ನೂರು ಅಥವಾ ಸಾವಿರ ಜನರನ್ನು ಕೊಂದರೂ ಜಮಾಅತ್ ಮಡಿಯಲಾರದು. ಓರ್ವ ಮನುಷ್ಯನನ್ನು ಬದುಕಿಸಿ ತೋರಿಸಿರಿ. ಆಗ ಇಡೀ ಜಮಾಅತ್ ತನ್ನಷ್ಟಕ್ಕೆ ತಾನೇ ಮಡಿಯುವುದು. ಸಾಧ್ಯವಾಡರೆ ಪ್ರವಾದಿ ಈಸಾ (ಅ) ಜೀವಂತರೆಂದು ಸಾಬೀತು ಪಡಿಸಿರಿ !

ಇಷ್ಟೊಂದು ದೊಡ್ಡ ಕೋಲಾಹಲವುಂಟಾಯಿತು. ದೀರ್ಘವಾದ ಕಲಹವಾಯಿತು. ಪ್ರಪಂಚವು ಎಲ್ಲಿಂದ ಎಲ್ಲಿಗೋ ಬಂದು ತಲಪಿದೆ. ಇಂದಿನಿಂದ ಒಂದು ನೂರು ವರ್ಷಗಳ ಹಿಂದೆ, ಎಂದೇಕೆ ಅದಕ್ಕಿಂತ ಹಿಂದಿನಿಂದಲೂ ಮುಸ್ಲಿಂ ಸಮುದಾಯವು ಅಧಃಪತನಗೊಂಡಿದೆಯೆಂದೂ ಮುಸ್ಲಿಮರಲ್ಲಿ ಇಸ್ಲಾಮಿನ ಸಂಕೇತ ಕೂಡ ಬಾಕಿ ಉಳಿದಿಲ್ಲವೆಂದೂ ನಿಮ್ಮ ಪಂಡಿತರೂ ನೇತಾರರೂ ಹೇಳುತ್ತಾ ಬಂದಿದ್ದಾರೆ. ಈಸಾ ಅಲೈಹಿಸ್ಸಲಾಮರು ಆಕಾಶದಲ್ಲಿ ಕುಳಿತು ಏನು ಮಾಡುತ್ತಿದ್ದಾರೆ ? ಇಂತಹ ಪರಿಸ್ಥಿತಿಯಲ್ಲೂ ಇಳಿದು ಬರುವುದಿಲ್ಲವೇಕೆ ? ನೀವು ಅಹ್ಮದೀಯರನ್ನು ಕೊಲ್ಲುವ ಬದಲು ಆ ಒಬ್ಬನೇ ಒಬ್ಬ ಗತ ವ್ಯಕ್ತಿಯನ್ನು ಬದುಕಿಸಿ ತನ್ನಿರಿ. ನಾನು ಅಹ್ಮದಿಯಾ ಜಮಾಅತಿನ ಪರವಾಗಿ ಹೇಳುತ್ತೇನೆ–ನೀವು ಆ ರೀತಿ ಮಾಡಿದಲ್ಲಿ ಎಲ್ಲಾ ಕಲಹಗಳೂ ಭಿನ್ನತೆಗಳೂ ಮುಗಿಯುತ್ತವೆ. ಹಝ್ರತ್ ಈಸಾ ಪ್ರವಾದಿಯನ್ನು ನೀವು ಜೀವಂತ ಆಕಾಶದಿಂದ ಇಳಿಸಿ ತಂದರೆ, ಅಲ್ಲಾಹನಾಣೆಗೂ ನಾನು ಮತ್ತು ನನ್ನ ಜಮಾಅತಿನ ಎಲ್ಲಾ ಸದಸ್ಯರೂ ಮೊತ್ತ ಮೊದಲಾಗಿ ಅವರಿಗೆ ಬೈಅತ್ ಮಾಡಿ ಅವರನ್ನು ಅನುಸರಿಸುವೆವು. ನಾವು ಪಶ್ಚಾತ್ತಾಪಪಟ್ಟು ನಮ್ಮ ಪೂರ್ವ ವಿಶ್ವಾಸವನ್ನು ತ್ಯಜಿಸಿ ಬಿಡುವೆವು; ಹಾಗೂ ಈಸಾರವರ ಹಿಂದಿನಿಂದಲೂ ಮುಂದಿನಿಂದಲೂ ಎಡಭಾಗದಲ್ಲೂ ಬಲಭಾಗದಲ್ಲೂ ನಿಂತು ಹೋರಾಡುವೆವು. ಯಾಕೆಂದರೆ, ನಾವು ಸತ್ಯವಾದುದನ್ನು ಸ್ವೀಕರಿಸುವವರಾಗಿದ್ದೇವೆ. "ಆಮನ್ನಾ ವ ಸದ್ದಖ್‌ನಾ" ಎಂದು ಹೇಳುವವರ ಜತೆ ನಾವು ಈಗಾಗಲೇ ಸೇರಿಕೊಂಡಿದ್ದೇವೆ.

ಆದರೆ, ಈ ಒಂದು ಮಾತನ್ನು ಕೂಡ ನಾನು ನಿಮಗೆ ಹೇಳಬಯಸುತ್ತೇನೆ. ಅದೇನೆಂಪರೆ – ಆಕಾಶದಲ್ಲಿ ಶರೀರದೊಂದಿಗೆ ಜೀವಂತ ಇದ್ದಾರೆಂದು ನೀವು ಪ್ರತಿಪಾದಿಸುತ್ತಿರುವ ಆ ಈಸಾ ಪ್ರವಾದಿಯವರು ಒಂದು ವೇಳೆ ಆಕಾಶದಿಂದ ಇಳಿದು ಬಂದರೆ ಕೂಡ ಆಗಲೂ ನೀವು ವಿರೋಧವನ್ನೇ ತೋರಿಸುವಿರಿ. ಯಾಕೆಂದರೆ ನಿಮ್ಮ ಪಾಲಿಗೆ ವಿರೋಧದ ವಿಧಿಯನ್ನೇ ಬರೆಯಲಾಗಿದೆ.

ಈ ಭಿನ್ನಾಭಿಪ್ರಾಯವನ್ನು ಪ್ರಾರ್ಥನೆಯ ಮೂಲಕ ಪರಿಹರಿಸಲಿಕ್ಕಾದರೂ ನೀವು ಶ್ರಮಿಸುವುದಿಲ್ಲವೇಕೆ? ಅಲ್ಲಾಹನ ಸನ್ನಿಧಿಯಲ್ಲಿ ಸಾಷ್ಟಾಂಗವೆರಗಿ – "ಓ ದೇವಾ, ಇದೊಂದು ಭಾರಿ ಸಮಸ್ಯೆಯಾಗಿ ಬಿಟ್ಟಿದೆ. ಪ್ರಪಂಚದಲ್ಲಿ

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ದೈವ ಮಾರ್ಗದಲ್ಲಿ ವಿನಿಯೋಗಿಸುವ ಒಂದು ಪ್ರಭಾತವಾಗಲಿ ಒಂದು ಸಂಧ್ಯೆಯಾಗಲಿ ಒಂದು ಲೋಕ ಮತ್ತು ಅದರಲ್ಲಿರುವ ಎಲ್ಲದಕ್ಕಿಂತಲೂ ಬೆಲೆಯುಳ್ಳದ್ದಾಗಿದೆ.

2. ನಿಮ್ಮ ಮನೆಗಳನ್ನು ಪ್ರಾರ್ಥನೆಗಳಲ್ಲಿ ಒಂದು ಅಂಶವನ್ನು ಅಲ್ಲಿ ಅನುಷ್ಠಿಸಿಕೊಂಡು ಮೇಲೆತ್ತಿರಿ. ಅವುಗಳನ್ನು ಸ್ಮಶಾನಗಳಾಗಿ ಮಾರ್ಪಡಿಸಬೇಡಿರಿ.

3. ಅಲ್ಲಾಹನ ಸಂಪ್ರೀತಿಗೋಸ್ಕರ ಮಾಡಬೇಕಾದ ಕರ್ತವ್ಯಗಳ ಕುರಿತು ಪ್ರಜ್ಞಾವಂತರಾಗಿದ್ದುಕೊಂಡು ಜನರೆಡೆಯಲ್ಲಿ ಸಾಮರಸ್ಯವನ್ನು ಬೆಳೆಸಿರಿ; ನಿರ್ಣಾಯಕ ದಿನದಂದು ಅಲ್ಲಾಹನು ವಿಶ್ವಾಸಿಗಳೆಡೆಯಲ್ಲಿ ಸಾಮರಸ್ಯವನ್ನುಂಟು ಮಾಡುವನು.

4. ಪ್ರಯಾಣ ಮಾಡುವುದು ಆರೋಗ್ಯಕ್ಕೆ ಗುಣಕರ.

5. ಮೂವರು ಒಂದು ಯಾತ್ರೆಗೆ ಹೊರಡುವುದಾದರೆ ಅವರಲ್ಲೊಬ್ಬನನ್ನು ತಮ್ಮ ನಾಯಕನನ್ನಾಗಿ ಮಾಡಬೇಕು.

**(ಸರ್ ಮುಹಮ್ಮದ್ ಝುಫ್ರುಲ್ಲಾ ಖಾನ್ ಬರೆದ Wisdom of the Holy Prophet ಎಂಬ ಪುಸ್ತಕದಿಂದ ಆಯ್ದುದು)**

---

ಏನೇನೋ ಪರಿವರ್ತನೆಗಳು ಆಗಿಹೋದವು – ಓ ಅಲ್ಲಾಹನೇ, ಈಸಾ ಪ್ರವಾದಿಯನ್ನು ಆಕಾಶದಿಂದ ಇಳಿಸು!" ಎಂದು ಅವನೊಡನೆ ನೀವು ಮೊರೆಯಿಡುವುದಿಲ್ಲವೇಕೆ? ನಿಮಗಿಂತಲೂ ಈ ವಿಚಾರದಲ್ಲಿ ಯೆಹೂದ್ಯರೇ ಮೇಲು. ಅವರಾದರೆ ವಿಲಾಪಗೋಡೆಯ ಸಮೀಪ ಹೋಗಿ – "ದೇವಾ ನಮಗೆ ಆ ಮೆಸ್ಸೈಯರನ್ನು ಕಳುಹಿಸು. ಮೆಸ್ಸೈಯರಿಗೆ ಮೊದಲು ಬರಬೇಕಾದ ಇಲ್ಯಾಸ್ ಪ್ರವಾದಿಯನ್ನೂ ನಮ್ಮ ಬಳಿ ಕಳುಹಿಸು" ಎಂದು ಸದಾ ಆಲಾಪಿಸುತ್ತಾರೆ. ನಿಮಗೆ ಸ್ವಲ್ಪವಾದರೂ ವ್ಯಥೆಯಿಲ್ಲ. ಇಸ್ಲಾಂ ಧರ್ಮದ ಬದುಕಿನ ಕುರಿತು ನಿಮ್ಮ ಹೃದಯದಲ್ಲಿ ಸ್ವಲ್ಪವಾದರೂ ವೇದನೆಯಿಲ್ಲ. ನೀವು ಕೇವಲ ಊಹಾಪೋಹಗಳಲ್ಲೂ ಕಥೆ–ಕಲ್ಪನೆಗಳಲ್ಲೂ ಇದ್ದೀರಿ. ಸಂಗತಿಗಳ ನಿಜಸ್ಥಿತಿಗಳೊಂದಿಗೆ ನಿಮಗೆ ಯಾವ ಸಂಬಂಧವೂ ಬಾಕಿ ಉಳಿದಿಲ್ಲ. ನಿಮ್ಮ ಕುರಿತು ಕನಿಕರ ತೋರುತ್ತದೆ. ನಾವು ಆ ಕನಿಕರದಿಂದ ನಿಮಗಾಗಿ ಪ್ರಾರ್ಥಿಸುತ್ತಿದ್ದೇವೆ.

ಯಾವೊಬ್ಬನ ಕೈಯಲ್ಲಿ ನನ್ನ ಪ್ರಾಣವೂ ಎಲ್ಲಾ ಅಹ್ಮದೀಯರ ಪ್ರಾಣವೂ ಇರುವುದೋ ಆ ಅಲ್ಲಾಹನ ಅಭಿಮಾನ ಮತ್ತು ಪ್ರತಾಪವನ್ನು ನಾನು ಆಣೆ ಮಾಡಿ ಹೇಳುತ್ತೇನೆ – ನಿಜವಾಗಿಯೂ ಈಸಾ ಪ್ರವಾದಿಯವರು ಮರಣ ಹೊಂದದೆ ಶರೀರ ಸಹಿತ ಈಗಲೂ ಬದುಕಿರುವರೆಂದಾದರೆ ಹಾಗೂ ಈ ವಿಷಯದಲ್ಲಿ ನಾವು ತಪ್ಪಿತಸ್ಥರೆಂದಾದರೆ, ಅವನು ನಮ್ಮೆಲ್ಲರನ್ನೂ ನಿರ್ಮೂಲನ ಮಾಡಲಿ. ನಮ್ಮ ಹೇಳಹೆಸರಿಲ್ಲದಂತೆ ಸರ್ವನಾಶವಾಗಲಿ. ಆದರೆ, ಅಲ್ಲಾಹನಾಣೆಗೂ ಈಸಾ (ಅ) ಮರಣ ಹೊಂದಿದ್ದಾರೆ. ಹಾಗೂ ಇಸ್ಲಾಂ ಜೀವಂತ ಇದೆ. ಇಂದು ಇಸ್ಲಾಂ ಧರ್ಮವು ಬದುಕಿ ಉಳಿಯಬೇಕಾದರೆ ಅದು ನಿಮ್ಮಿಂದ ಒಂದು ಬಲಿದಾನವನ್ನು ಬಯಸುತ್ತದೆ. ಅದು ಯಾವುದು? ಅದುವೇ ಪ್ರವಾದಿ ಈಸಾ (ಅ)ರವರ ಮರಣ. ಆದ್ದರಿಂದ ಈಸಾನಬಿಯನ್ನು ಮಡಿಯಲು ಬಿಡಿರಿ, ಅದರಿಂದ ಇಸ್ಲಾಂ ಬದುಕಲಿ.

(ದಿನಾಂಕ 7–4–1985ರಂದು ಲಂಡನ್ ಜಮಾಅತ್ ಅಹ್ಮದಿಯಾದ ವಾರ್ಷಿಕ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾಡಿದ ಭಾಷಣದ ಒಂದು ಭಾಗ).

ಕನ್ನಡಕ್ಕೆ: MPI

# ಜಗದೊಡೆಯ

★ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ಪ್ರಪಂಚ ಸಕಲದ ಕೇಂದ್ರವಾಗಿರುವ ಒಬ್ಬ ಜಗದೊಡೆಯನಿದ್ದಾನೆಂದೂ ಅವನು ಏಕನೂ ನಿಸ್ತುಲನೂ ಆಗಿರುವನೆಂದೂ ಪವಿತ್ರ ಖುರ್‌ಆನಿನ 'ಇಖ್‌ಲಾಸ್' ಎಂಬ ಅಧ್ಯಾಯದಲ್ಲಿ ಸಂಕ್ಷಿಪ್ತವಾದ ವಚನಗಳಲ್ಲಿ ಘೋಷಿಸಲಾಗಿದೆ. ಪ್ರಪಂಚದ ಏಕ ಪ್ರಭವ ಸ್ಥಾನ ಸಹ ಪರಮಾತ್ಮನೇ, ಅವನ ಶಕ್ತಿ-ಸಾಮರ್ಥ್ಯಗಳಲ್ಲಾಗಲಿ ಪ್ರವರ್ತನೆಗಳಲ್ಲಾಗಲಿ ಅವನು ಬೇರೆ ಯಾರ ಸಹಾಯವನ್ನೂ ಆಶ್ರಯಿಸುವುದಿಲ್ಲ. ಅವನಿಗೆ ಪುತ್ರನಿಲ್ಲ. ಅವನು ಯಾರ ಪಿತನೂ ಅಲ್ಲ. ಅವನ ಶಕ್ತಿಗುಣಗಳಲ್ಲಿ ಪಾಲುದಾರನಾಗಲಿ ಅವನಿಗೆ ಸಮಾನನಾಗಿರುವ ಇನ್ನೊಬ್ಬನಾಗಲಿ ಅಸ್ತಿತ್ವದಲ್ಲಿಲ್ಲ. ಈ ಚಿಕ್ಕ ಅಧ್ಯಾಯದ ಸಂಕ್ಷಿಪ್ತ ವಚನಗಳ ಮೂಲಕ ಖುರ್‌ಆನ್ ದೇವರ ಕುರಿತು ಇತರ ಧರ್ಮಗಳು ಪ್ರತಿಪಾದಿಸುವ ಹಲವು ಅಸಂಬದ್ಧ ತತ್ವಗಳನ್ನು ಖಂಡಿಸಿ ದೇವೇಕತ್ವವನ್ನು ಸಾರುತ್ತದೆ.

ಕೆಲವು ಧರ್ಮಾನುಯಾಯಿಗಳು, ದೇವರು ಅವರೊಡನೆ ವಿಶೇಷವಾದ ಸಂಬಂಧವಿರಿಸಿದ್ದಾನೆಂದೂ ಆ ಸಂಬಂಧ ಇತರ ಮನುಷ್ಯರೊಡನಿಲ್ಲವೆಂದೂ ನಂಬಿಕೆಯುಳ್ಳವರಾಗಿದ್ದಾರೆ. ದೇವರೇ ಲೋಕವನ್ನಿಡೀ ಸೃಷ್ಟಿಸಿರುವನಾದರೂ ಒಂದು ನಿರ್ದಿಷ್ಟ ಜನತೆಯೊಡನೆ ಮಾತ್ರ ಅವನು ಸಂಬಂಧವಿರಿಸಿಕೊಂಡಿದ್ದಾನಂತೆ. ಇಸ್ರಾಯೀಲ್ಯರೂ ಹಿಂದೂಗಳೂ ಝೊರಾಸ್ಟ್ರಿಯನರೂ ಈ ಪ್ರಕಾರ ದೇವರು ತಮ್ಮೊಡನೆ ವಿಶಿಷ್ಟ ರೀತಿಯಲ್ಲಿ ಸಂಬಂಧವಿರಿಸಿದ್ದಾನೆಂದು ನಂಬುವವರು. ಖುರ್‌ಆನ್ ಈ ಸಿದ್ಧಾಂತವನ್ನು ಖಂಡಿಸಿ, ದೇವರು ಅವನ ಸ್ವಭಾವ ಗುಣಗಳಲ್ಲೂ ಸತ್ತೆಯಲ್ಲೂ ನಿಸ್ತುಲ್ಯನೆಂದೂ ಅವನು ಪ್ರಪಂಚ ಸಕಲದ ಉಗಮ ಕೇಂದ್ರವೆಂದೂ ಬೋಧಿಸುತ್ತದೆ. 'ಸೂರಃ ಇಖ್‌ಲಾಸ್'ನ ಪ್ರಥಮ ವಚನದಲ್ಲಿ ಪ್ರಯುಕ್ತವಾಗಿರುವ 'ಅಹದ್' ಎಂಬ ಪದಕ್ಕೆ ಏಕನೆಂದೂ ಸಂಖ್ಯಾತೀತವೂ ಎಲ್ಲಾ ಸಂಖ್ಯೆಗಳ ಪ್ರಭವ ಸ್ಥಾನವೂ ಆಗಿರುವ 'ಏಕತ್ವ' ಎಂದೂ ಅರ್ಥವಿದೆ. ದೇವರು ಮನುಷ್ಯ ವಂಶವನ್ನೆಲ್ಲಾ ಒಂದೇ ರೀತಿಯಲ್ಲಿ ಸನ್ಮಾರ್ಗಕ್ಕೆ ಕೊಂಡೊಯ್ಯುವವನಾಗಿದ್ದಾನೆ. ಅವನು ಯಾವುದಾದರೂ ಒಂದು ನಿರ್ದಿಷ್ಟ ಜನಾಂಗದೊಡನೆ ಯಾವುದೇ ವಿಶೇಷ ಸಂಬಂಧವನ್ನು ಬೆಳೆಸುವುದಿಲ್ಲ. ಅವನ ಸಾಮೀಪ್ಯ ಪ್ರಾಪ್ತಿಗಾಗಿ ಪರಿಶ್ರಮಿಸುವವನು ಯಾರೇ ಆಗಲಿ, ಆತನನ್ನು ಸನ್ಮಾರ್ಗದೆಡೆಗೆ ಕೊಂಡೊಯ್ಯುತ್ತಾನೆ. ಅವನ ದೃಷ್ಟಿಯಲ್ಲಿ ಅರಬಿಯರೂ ಯುಹೂದಿಯರೂ ಪಾರ್ಸಿಗಳೂ ಭಾರತೀಯರೂ ಚೀನೀಯರೂ ಗ್ರೀಕರೂ ಎಲ್ಲರೂ ತುಲ್ಯರು. ಏಕೆಂದರೆ ಅವರೆಲ್ಲರ ಸೃಷ್ಟಿಗೆ ಕಾರಣ ಕರ್ತ ಅವನೇ ಆಗಿದ್ದಾನೆ. ಪ್ರಪಂಚದ ಬಹುಳತ್ವಕ್ಕೆ ಮೂಲ ಕಾರಣ ಸಹ ಅವನೇ. ದೇವರು ಯಾರ ಪುತ್ರನೂ ಅಲ್ಲವೆಂದು ಅದು ಘೋಷಿಸುತ್ತದೆ. ಜನಿಸಲ್ಪಟ್ಟ ಓರ್ವನು ದೇವರಾಗಿರಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ಆಗ ಅವನು ತನ್ನ ಅಸ್ತಿತ್ವಕ್ಕೆ ಇನ್ನೊಬ್ಬನನ್ನು ಅವಲಂಬಿಸಿಕೊಂಡಿದ್ದಾನೆ ಎಂದಾಗುತ್ತದೆ. ಅವನಿಗೆ ಸಮಾನ ಯಾರೂ ಇಲ್ಲವೆಂದು ಸ್ಪಷ್ಟಪಡಿಸುತ್ತಾ, ಕೆಲವು ಧರ್ಮಗಳು ಪ್ರತಿಪಾದಿಸುವಂತೆ ಪ್ರಕಾಶವೂ ಅಂಧಕಾರವೂ ಎರಡು ಸಮಾನ ಶಕ್ತಿಗಳಾಗಿರುವುದರಿಂದ ಎರಡು ಸಮಾನ ದೈವಗಳು ಅಸ್ತಿತ್ವದಲ್ಲಿವೆ ಎಂಬ ನಂಬಿಕೆಯನ್ನು ಸಹ ಖುರ್‌ಆನ್ ಖಂಡಿಸಿದೆ.

ಎಲ್ಲಾ ಸೃಷ್ಟಿತ ವಸ್ತುಗಳ ಮೂಲಕಾರಣ ದೇವರೆಂದು ಖುರ್‌ಆನ್ ಹೇಳುತ್ತದೆ, ಅಂದರೆ ಪ್ರಪಂಚವಿಡೀ ದೇವರಿಂದ ಉದ್ಭವಿಸಿದೆ; ಅವನೆಡೆಗೆಯೇ ಅದು ಹಿಂತೆರಳುತ್ತದೆ. ಖುರ್‌ಆನ್ ಹೇಳುತ್ತದೆ: "ಅವನೇ ಆದಿಯು; ಅವನೇ ಅಂತ್ಯನು." (57:4). ಪ್ರಪಂಚದ ಸಕಲ ವಸ್ತುಗಳೂ ಅವುಗಳ ನೆಲೆನಿಲ್ಲುವಿಕೆಗೆ ದೇವರನ್ನು ಆಶ್ರಯಿಸಿಕೊಂಡಿರುತ್ತವೆ. ಅದೇ ಪ್ರಕಾರ ಎಲ್ಲಾ ವಸ್ತುಗಳ ವಿನಾಶ ಸಹ ದೈವಿಕ ನಿಯಮಾನುಸಾರ ನಡೆಯುತ್ತವೆ. ಈ ಪ್ರಪಂಚಕ್ಕೆ ದೇವರು ಅಸ್ತಿತ್ವವನ್ನು ಕೊಟ್ಟಿರದಿದ್ದರೆ ಅದು ಹುಟ್ಟುತ್ತಿರಲಿಲ್ಲ. ಅದರ ನಾಶಕ್ಕಿರುವ ನಿಯಮಗಳನ್ನು ದೇವರು

ಜಾರಿಗೊಳಿಸದಿದ್ದರೆ ಅದು ನಾಶಗೊಳ್ಳಲಾರದು. ಹೀಗೆ ಎಲ್ಲಾ ನಿರ್ಮಾಣಗಳೂ ನಶೀಕರಣಗಳೂ ದೈವಿಕ ನಿಯಮಾನುಸಾರ ನಿಯಂತ್ರಿಸಲ್ಪಡುತ್ತವೆ. ಪ್ರಪಂಚದ ವ್ಯವಸ್ಥೆಗಳನ್ನೆಲ್ಲಾ ಬುದ್ಧಿಶಾಲಿಯಾದ ಓರ್ವ ನಿಯಾಮಕನು ಕ್ರಮಬದ್ಧಗೊಳಿಸಿರುವನೆಂಬ ನಿಜಾಂಶವನ್ನು ಇದು ರುಜುಪಡಿಸುತ್ತದೆ. ಖುರ್‌ಆನ್ ಹೀಗೆ ಹೇಳುತ್ತದೆ :

"ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿದವನು. ಅವನಿಗೆ ಪತ್ನಿಯೇ ಇಲ್ಲದಿರುವಾಗ ಹೇಗೆ ಒಬ್ಬ ಪುತ್ರನು ಉಂಟಾಗುವನು ? ಅವನೇ ಸಕಲ ವಸ್ತುಗಳನ್ನೂ ಸೃಷ್ಟಿಸಿದ್ದಾನೆ. ಎಲ್ಲಾ ಕಾರ್ಯಗಳನ್ನೂ ಪೂರ್ಣವಾಗಿ ತಿಳಿಯುವವನಾಗಿದ್ದಾನೆ ಅವನು. ಅವನೇ ನಿಮ್ಮ ಒಡೆಯನಾದ ಅಲ್ಲಾಹು. ಅವನ ಹೊರತು ಬೇರೊಬ್ಬ ದೇವನಿಲ್ಲ. ಅವನು ಎಲ್ಲಾ ವಸ್ತುಗಳ ಸೃಷ್ಟಿಕರ್ತನಾಗಿದ್ದಾನೆ. ನೀವು ಅವನನ್ನೇ ಆರಾಧಿಸಿರಿ. ಅವನು ಎಲ್ಲಾ ವಸ್ತುಗಳ ರಕ್ಷಕನೂ ಮೇಲ್ನೋಟಗಾರನೂ ಆಗಿರುವನು." (6 : 102, 103)

ದೇವರು ಎಲ್ಲಾ ಸೃಷ್ಟಿತ ವಸ್ತುಗಳ ಉದ್ಭವ ಸ್ಥಾನವಾಗಿರುವುದರಿಂದ ಅವನಿಗೆ ಒಬ್ಬ ಪುತ್ರನ ಅವಶ್ಯವಿಲ್ಲವೆಂದು ಈ ವಾಕ್ಯಗಳು ಸ್ಪಷ್ಟಪಡಿಸಿ ಕೊಡುತ್ತವೆ. ಯಾದೃಚ್ಛಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ಸಂತಾನೋತ್ಪಾದನೆಯಾಗುತ್ತದೆ. ಓರ್ವ ಪುರುಷ ಮತ್ತು ಓರ್ವ ಸ್ತ್ರೀ ಪರಸ್ಪರ ಕೂಡಿಕೊಂಡಾಗ, ಅದು ಸಂತಾನವನ್ನು ಉದ್ದೇಶವಿಟ್ಟುಕೊಂಡು ಅಲ್ಲವಾದರೂ ಆ ಮೂಲಕ ಸಂತಾನೋತ್ಪಾದನೆ ಸಂಭವಿಸುವುದುಂಟು. ದೇವರಿಗೆ ಮಡದಿ ಇಲ್ಲವೆಂಬ ಸಂಗತಿಯನ್ನು ಎತ್ತಿಹೇಳಿ ಅವನಿಗೆ ಯಾದೃಚ್ಛಿಕವಾಗಿಯಾದರೂ ಒಬ್ಬ ಪುತ್ರನುಂಟಾಗಲಿಕ್ಕಿಲ್ಲವೆಂದು ಖುರ್‌ಆನ್ ಸ್ಪಷ್ಟಪಡಿಸಿದೆ. ಒಬ್ಬನನ್ನು ಸೃಷ್ಟಿಸಿ ಅವನನ್ನು ಸ್ವಪುತ್ರನನ್ನಾಗಿ ಮಾಡಲು ದೇವರಿಗೆ ಸಾಧ್ಯವಿದೆಯೆಂದು ಕೆಲವರು ಹೇಳುತ್ತಾರೆ. ಪಿತನನ್ನು ಆತನ ಪ್ರವೃತ್ತಿಗಳಲ್ಲಿ ಸಹಾಯ ಮಾಡಲಿಕ್ಕೆ ಹಾಗೂ ಆತನ ಹೆಸರನ್ನು ಬಾಕಿಯುಳಿಸಲಿಕ್ಕಾಗಿಯಷ್ಟೇ ಪುತ್ರನಿಗಾಗಿ ಇಚ್ಛಿಸುವುದು. ದೇವರು ಸರ್ವ ಚರಾಚರಗಳ ಸೃಷ್ಟಿಕರ್ತನೂ ಸರ್ವ ನಿಯಾಮಕನೂ ಆಗಿರುವುದರಿಂದ ಯಾರ ಸಹಾಯವೂ ಅವನಿಗೆ ಅವಶ್ಯವಿಲ್ಲವೆಂದೂ ಅವನು ನಿತ್ಯನಾಗಿರುವುದರಿಂದ ಅವನ ನಾಮ ಎಂದೆಂದಿಗೂ ಬಾಕಿಯುಳಿಯುವುದೆಂದೂ ಖುರ್‌ಆನ್ ಮನಗಾಣಿಸಿ ಕೊಡುತ್ತದೆ. ಒಟ್ಟಾರೆ, ಒಬ್ಬ ಮಗನನ್ನು ಸೃಷ್ಟಿಸುವ ಅಥವಾ ನಿಯಮಿಸುವ ಯಾವೊಂದು ಆವಶ್ಯಕತೆಯೂ ದೇವರಿಗುಂಟಾಗಲಿಕ್ಕೆ ನಿರ್ವಾಹವಿಲ್ಲ. ಅಜ್ಞಾತವಾದ ಸಂಭವಗಳನ್ನು ತಡೆಯಲಿಕ್ಕಾಗಿಯಷ್ಟೇ ಮನುಷ್ಯನು ಭವಿಷ್ಯತ್ತಿಗಾಗಿ ಕೆಲವು ಏರ್ಪಾಡುಗಳನ್ನು ಮುಂಚಿತವಾಗಿಯೇ ಮಾಡಿಡುವುದು. ದೇವರಿಗೆ ಎಲ್ಲಾ ಸಂಗತಿಗಳ ಕುರಿತು ಪರಿಪೂರ್ಣ ಜ್ಞಾನವಿರುವುದರಿಂದ ಅಜ್ಞಾತವಾದ ಸಂಭವಗಳಿಗಾಗಿ ಅವನು ಯಾವ ಏರ್ಪಾಡನ್ನೂ ಮೊದಲೇ ಮಾಡಿಡಬೇಕೆಂದಿಲ್ಲ. ಅವನಿಗೆ ಹಿಂದಿನ ಮುಂದಿನ ಎಲ್ಲಾ ಅರಿವು ಇದೆ. ಭಾವೀ ಕಾಲದ ಕುರಿತು ಯಾವ ಉತ್ಕಂಠತೆಯೂ ಅವನಿಗಿಲ್ಲ. ದೇವರು ಮನುಷ್ಯನನ್ನು ಸೃಷ್ಟಿಸುವುದು ಮಾತ್ರವಲ್ಲ, ದುರ್ಬಲಾವಸ್ಥೆಯಿಂದಲೂ ಕೀಳ್ಮಟ್ಟದಿಂದಲೂ ಅವನನ್ನು ಉದ್ಧರಿಸಿ ಶಕ್ತಿಯನ್ನು ನೀಡಿ ಉನ್ನತಿಗೇರಿಸುತ್ತಾನೆ. ಅವನ ಹೊರತು ಬೇರೆ ದೇವರಿಲ್ಲ. ಅವನೇ ಪ್ರಪಂಚ ಸಕಲವನ್ನೂ ಸೃಷ್ಟಿಸಿದವನು. ಪಾರ್ಸಿಯರಾಗಲಿ, ಅರಬಿಯರಾಗಲಿ, ಯಹೂದ್ಯರಾಗಲಿ, ಹಿಂದೂಗಳಾಗಲಿ, ಎಲ್ಲಾ ಮನುಷ್ಯರೂ ದೇವರ ದೃಷ್ಟಿಯಲ್ಲಿ ಸಮಾನರು. ಅವನು ಅವರನ್ನೆಲ್ಲಾ ಸೃಷ್ಟಿಸಿ ಅವರೆಲ್ಲರ ಅಭಿವೃದ್ಧಿಯ ಮಾರ್ಗಗಳನ್ನು ಸಿದ್ಧಪಡಿಸಿಟ್ಟಿದ್ದಾನೆ. ಒಟ್ಟಿನಲ್ಲಿ ಅವನನ್ನು ಮಾತ್ರ ಆರಾಧಿಸಬೇಕಾದುದು ಮನುಷ್ಯರೆಲ್ಲರ ಬಾಧ್ಯತೆಯಾಗಿದೆ. ಅವನು ಮಾತ್ರವೇ ಪ್ರಪಂಚವನ್ನು ನಿಯಂತ್ರಿಸಿ ಪಾಲಿಸಿಕೊಂಡು ಹೋಗುತ್ತಾನೆ. ಅವನೊಂದಿಗೆ ಸಂಬಂಧವನ್ನು ಬಲಪಡಿಸುವುದರಿಂದ ಮಾತ್ರವೇ ಮನುಷ್ಯನಿಗೆ ನಾಶವನ್ನು ಜಯಿಸಲು ಸಾಧ್ಯ. ಅವನಿಂದ ಅಗಲಿ ಶಾಂತಿಯನ್ನು ಗಳಿಸಲು ಮನುಷ್ಯನಿಗೆ ಎಂದಿಗೂ ಸಾಧ್ಯವಿಲ್ಲ.

ಪ್ರಪಂಚದ ಸಕಲ ವಸ್ತುಗಳಿಗೆ ಸಂಬಂಧಿಸಿ ಪೂರ್ಣಜ್ಞಾನ ದೇವರಿಗಿದೆಯೆಂದು ಖುರ್‌ಆನ್ ಹೇಳುತ್ತದೆ. ಅವನ ಅರಿವಿಗೆ ಒಳಪಡದ ಯಾವುದೇ ವಿಷಯವಿಲ್ಲ. ಖುರ್‌ಆನ್ ಹೀಗೆ ಹೇಳುತ್ತದೆ: "ಅವನ ಜ್ಞಾನ ಆಕಾಶಗಳಲ್ಲೂ ಭೂಮಿಯಲ್ಲೂ ವ್ಯಾಪಿಸಿಕೊಂಡಿದೆ." (2:256)

ಮತ್ತೂ ಖುರ್‌ಆನ್ ಹೀಗೆ ಹೇಳುತ್ತದೆ: "ನೀನು ಯಾವ ಅವಸ್ಥೆಯಲ್ಲಿರುವಾಗಲೂ ಖುರ್‌ಆನಿನ ಯಾವುದೇ ಭಾಗವನ್ನು ನೀನು ಓದಿಹೇಳುತ್ತಿರುವಾಗಲೂ, ನೀನು ಯಾವುದೇ ಕಾರ್ಯವನ್ನು ಮಾಡುತ್ತಿರುವಾಗಲೂ ನಾವು ನಿನ್ನನ್ನು ವೀಕ್ಷಿಸಿಕೊಂಡೇ ಇರುತ್ತೇವೆ. ಭೂಮಿಯಲ್ಲಾಗಲಿ

ಗಲಿ, ಆಕಾಶದಲ್ಲಾಗಲಿ ಅಣು ತೂಕವಾದರೂ ಅಥವಾ ಅದಕ್ಕಿಂತ ಚಿಕ್ಕದು ಯಾ ದೊಡ್ಡದು ನಿನ್ನ ಪ್ರಭುವಿನಿಂದ ಮರೆಯಾಗಿರುವುದಿಲ್ಲ—ಎಲ್ಲವೂ ಸ್ಪಷ್ಟವಾದ ಪುಸ್ತಕದಲ್ಲಿ ದಾಖಲಿಸಲ್ಪಡದ ವಿನಾ." (10:62)

ಮನುಷ್ಯನ ಮಾನಸಿಕವಾದ ಸ್ಥಿತಿಗಳೂ ಅವನು ಹೇಳುವುದು, ಮಾಡುವುದು ಎಲ್ಲವೂ ದೇವರ ಮುಂದೆ ಮರೆಯಿಲ್ಲದೆ ಪ್ರತ್ಯಕ್ಷವಾಗುತ್ತವೆ. ಪರಮಾಣುಗಳೂ ಅದಕ್ಕಿಂತ ಸೂಕ್ಷ್ಮವಾಗಿರುವ ವಸ್ತುಗಳು ಸಹ ಅವನ ದೃಷ್ಟಿಗೆ ಗೋಪ್ಯವಲ್ಲ. ಅತಿ ಸೂಕ್ಷ್ಮವಾದ ವಸ್ತುಗಳನ್ನೂ ಹಾಗೆಯೇ ಅತಿ ವಿಪುಲವಾದ ವಸ್ತುಗಳನ್ನೂ ಅವನು ಕಾಣುತ್ತಾನೆ. ಎಲ್ಲಾ ಸಂಗತಿಗಳೂ ಅವನ ತಿಳುವಳಿಕೆಗೆ ಒಳಪಡುತ್ತವೆ; ಮಾತ್ರವಲ್ಲ, ಮನುಷ್ಯನ ವರ್ತನೆಗಳೂ ಪ್ರಪಂಚದಲ್ಲಿ ಸಂಭವಿಸಿರುತ್ತಿರುವುದೆಲ್ಲಾ ಅದರದರ ಫಲಗಳು ನಿರ್ದಿಷ್ಟ ಸಮಯದಲ್ಲಿ ಪ್ರಕಟವಾಗುವ ವಿಧದಲ್ಲಿ ದಾಖಲಿಸಲ್ಪಡುತ್ತವೆ. ಇವೆಲ್ಲಾ ತೆರೆದ ಪುಸ್ತಕದಲ್ಲೆಂಬಂತೆ ನಮೂದಿಸಲ್ಪಡುತ್ತವೆ. ಈ ಲೋಕದಲ್ಲಿರುವ ರಿಕಾರ್ಡುಗಳು ಸಾಮಾನ್ಯ ಜನದೃಷ್ಟಿಗೆ ಗೋಪ್ಯವಾಗಿರುತ್ತದೆಯಷ್ಟೆ. ಕೆಲವೊಮ್ಮೆ ರಿಕಾರ್ಡುಗಳನ್ನು ಭದ್ರತೆಯಲ್ಲಿಡುವವನಿಗೆ ಸಹ ಅದು ಗುಪ್ತವಾಗಿದ್ದಿರಬಹುದು. ಆದರೆ ಎಲ್ಲಾ ಘಟನೆಗಳೂ ದಾಖಲಿಸಲ್ಪಟ್ಟ ದಿವ್ಯವಾದ ಆ ರಿಕಾರ್ಡು ಗ್ರಂಥ ತೆರೆದಿರಿಸಲ್ಪಟ್ಟದ್ದಾಗಿದೆ. ದೈವಿಕ ನಿಯಮ ಮತ್ತು ದೈವೇಚ್ಛೆಯನುಸಾರ ಎಲ್ಲಾ ಪ್ರವೃತ್ತಿಗಳು ಅದರದರ ಸರಿಯಾದ ಫಲವನ್ನು ಪಡೆಯುವುವೆಂದು ಸಾರಾಂಶ. ದೇವರು ಭೌತಿಕ ದೃಷ್ಟಿಗೆ ಅಗೋಚರನಾಗಿರುವುದರಿಂದ "ಕಣ್ಣುಗಳು ಅವನನ್ನು ತಲುಪಲಾರವು." (ಪವಿತ್ರ ಖುರ್‌ಆನ್ 6:104) ಎಂದರೆ, ಇತರ ಎಲ್ಲಾ ಭೌತಿಕ ವಸ್ತುಗಳಿಂದ ಭಿನ್ನವಾದ ಸ್ವಭಾವ ಗುಣಗಳಿಂದ ದೇವರು ಕೂಡಿದವನಾಗಿರುವುದರಿಂದ ಭೌತಿಕ ಇಂದ್ರಿಯಗಳ ಮೂಲಕ ಅವನನ್ನು ಕಾಣಲು ಸಾಧ್ಯವಿಲ್ಲ.

ದೇವರಿಗೆ ಅವನ ಎಲ್ಲಾ ಇಚ್ಛೆಗಳನ್ನು ಈಡೇರಿಸುವ ಪರಿಪೂರ್ಣ ಶಕ್ತಿಯಿದೆಯೆಂದು ಖುರ್‌ಆನ್ ಹೇಳುತ್ತದೆ. "ಅಲ್ಲಾಹನು ತಾನು ಇಚ್ಛಿಸುವುದನ್ನೆಲ್ಲಾ ಮಾಡಲು ಶಕ್ತನು" (2:110) ಎಂದು ಖುರ್‌ಆನ್ ಹೇಳುತ್ತದೆ. ದೇವರು ಏನು ಬೇಕಾದರೂ ಮಾಡಲು ಶಕ್ತನು ಎಂದಲ್ಲ ಖುರ್‌ಆನ್ ಈ ವಾಕ್ಯದಲ್ಲಿ ಹೇಳಿದ್ದೆಂಬುದು ಗಮನಾರ್ಹವಾಗಿದೆ. ಹಾಗೆ ಹೇಳುವಾಗ ಕೆಲವರಿಗೆ ಕೆಲವು ನಿರರ್ಥಕ ಪ್ರಶ್ನೆಗಳನ್ನು ಎತ್ತಲು ಸಂದರ್ಭ ಲಭಿಸಬಹುದು, ಉದಾಹರಣೆಗೆ, ದೇವರಿಗೆ ತನ್ನನ್ನು ನಾಶ ಮಾಡಲು ಶಕ್ತಿಯುಂಟೋ? ದೇವರಿಗೆ ಅವನ ತರ ಒಬ್ಬನನ್ನು ಸೃಷ್ಟಿಸಲಿಕ್ಕೆ ಶಕ್ತಿ ಇದೆಯೇ? ಎಂಬಿತ್ಯಾದಿಯಾಗಿ ಪ್ರಶ್ನಿಸಲಾಗುತ್ತದೆ. ಅಂತಹ ಪ್ರವೃತ್ತಿಗಳು ನಿರರ್ಥಕವೂ ವಿವೇಕರಹಿತವೂ ಎಂಬುದು ಸ್ಪಷ್ಟವಷ್ಟೆ. ನಿರರ್ಥಕವೂ ವಿವೇಕಶೂನ್ಯವೂ ಆದ ಕಾರ್ಯಗಳನ್ನು ಮಾಡುವುದು ದೇವರ ಮಹತ್ವಕ್ಕೂ ಪೂರ್ಣತೆಗೂ ಸರಿಹೊಂದುವುದಿಲ್ಲ. ಆದ್ದರಿಂದಲೇ ದೇವರಿಗೆ ಏನು ಬೇಕಾದರೂ ಮಾಡುವ ಶಕ್ತಿಯುಂಟೆಂದು ಹೇಳದೆ ದೇವರು ತಾನು ಇಚ್ಛಿಸುವುದೆಲ್ಲಾ ಮಾಡಲು ಶಕ್ತನೆಂದು ಖುರ್‌ಆನ್ ಪ್ರಸ್ತಾಪಿಸುತ್ತದೆ. ದೇವರು ಎಲ್ಲಾ ಬಗೆಯಲ್ಲೂ ಪರಿಪೂರ್ಣನಾಗಿರುವುದರಿಂದ, ಅವನು ಸರಿಯಾದುದನ್ನು ಮಾತ್ರವೇ ಮಾಡಲು ತೀರ್ಮಾನಿಸುವನು. ಆದ್ದರಿಂದ, ದೇವರನ್ನೇ ಇಲ್ಲದೆ ಮಾಡಲಿಕ್ಕಾಗಲಿ ಅವನಂತಹ ಇನ್ನೊಬ್ಬ ದೈವವನ್ನು ಸೃಷ್ಟಿಸಲಿಕ್ಕಾಗಲಿ ದೇವರು ಶಕ್ತನೇ ಎಂದು ಕೇಳುವುದು ಅತ್ಯಂತ ಮೂರ್ಖತನವಾಗಿದೆ.

★

"ಯುಗರಶ್ಮಿ"ಗೆ ಚಂದಾದಾರರಾಗಿರಿ

ವಾರ್ಷಿಕ ಚಂದಾ ದರ : ಅಂಚೆ ಮೂಲಕ ರೂ. 5-00

# ಯೇಸುಕ್ರಿಸ್ತರ ಪುನರಾಗಮನ

★ ಮುಹಮ್ಮದ್ ಉಮರ್ H. A.

ಕ್ರಿಸ್ತ ಶಕ ಇಪ್ಪತ್ತನೇ ಶತಮಾನದ ಆರಂಭ ಮೊದಲ್ಗೊಂಡು, ಬೈಬಲಿನಲ್ಲಿ ಹೇಳಲಾದ ಯೇಸುಕ್ರಿಸ್ತರ ಪುನರಾಗಮನದ ಕುರಿತು ಸೂಚನೆಗಳು ಗೋಚರಿಸುವುದರಿಂದ ಕ್ರೈಸ್ತ ಲೋಕವು, ಯೇಸು ಆಗಮಿಸಲಿಕ್ಕಾಯಿತು! ಬಹಳ ಸಮೀಪಕ್ಕೆ ತಲಪಿಯಾಯಿತು! ಇಗೋ ಆಗಮಿಸುತ್ತಿದ್ದಾರೆ! ಇತ್ಯಾದಿಯಾಗಿ ಬೊಬ್ಬಿರಿಯಲು ತೊಡಗಿದೆ. ಈ ಬೊಬ್ಬೆ ಪೌರ್ವಾತ್ಯ ಪಾಶ್ಚಾತ್ಯ ದೇಶಗಳಲ್ಲಿ ಇಂದು ಸಹ ಕೇಳಿಬರುತ್ತದೆ. 1981 ಜನವರಿ ತಿಂಗಳ "ನಿತ್ಯಜೀವನ್" ಎಂಬ ಕ್ರೈಸ್ತ ಮಾಸಪತ್ರಿಕೆಯಲ್ಲೂ ಅಮೇರಿಕದ ಟೆಕ್ಸಾಸ್‌ನ ಹೋಮರ್ ಡಂಕನ್ (Homer Duncan) ಎಂಬ ಹೆಸರಿನ ಕ್ರೈಸ್ತ ಸುವಾರ್ತಾ ಬೋಧಕ ಹಲವು ಆವೃತ್ತಿಗಳಲ್ಲಿ ಪ್ರಕಟಿಸುತ್ತಿರುವ "ದಿ ಕಿಂಗ್ ಈಸ್ ಕಮಿಂಗ್" (The King is Coming) ಎಂಬ ಗ್ರಂಥದಲ್ಲೂ ಈ ಬೊಬ್ಬೆ, ಪ್ರತ್ಯಾಶೆ ಮತ್ತು ನಿರೀಕ್ಷೆಗಳನ್ನು ಕಾಣಲು ಸಾಧ್ಯ. ಅರುವತ್ತು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿದೆಯೆಂದು ಹೇಳಲಾಗುವ ಆ ಗ್ರಂಥದಲ್ಲಿ ಯೇಸುಕ್ರಿಸ್ತರ ಪುನರಾಗಮನ ಸಮೀಪಿಸಿದೆ ಎಂಬುದಕ್ಕೆ ಬೈಬಲಿನ 97 ಸೂಚನೆಗಳನ್ನು ಉದ್ಧರಿಸಲಾಗಿದೆ. ಆ ಪುಸ್ತಕಕ್ಕೆ ನೀಡಲಾದ ಮತ್ತೊಂದು ಶೀರ್ಷಿಕೆ: Ninety seven Scriptual Signs that Indicate the Eminent Return of the Lord Jesus Christ ಎಂದು.

ಪ್ರಸ್ತುತ ಗ್ರಂಥದಲ್ಲಿ ಪ್ರಸ್ತಾಪಿಸಲಾದ ಸೂಚನೆಗಳನ್ನೂ ಅವು ಈಡೇರಿದುದನ್ನೂ ಕುರಿತು ತುಸು ಪ್ರತಿಪಾದಿಸುವುದಕ್ಕೆ ಮೊದಲು ಯೇಸುಕ್ರಿಸ್ತರ ಪುನರಾಗಮನದ ಬಗ್ಗೆ "ನಿತ್ಯಜೀವನ್"ಏನು ಹೇಳುತ್ತದೆಂದು ನೋಡೋಣ.

"ಬಿಸಿ ವಾರ್ತೆ! ಯೇಸು ಬರುತ್ತಾರೆ!!" ಎಂಬ ಶೀರ್ಷಿಕೆಯಲ್ಲಿ ಪಾಸ್ಟರ್ ತೋಮ್ಸನ್ ಕೆ. ಮಾಥ್ಯೂ, B.Sc., M. Div. S.T.M. ತನ್ನ ಲೇಖನದಲ್ಲಿ ಹೀಗೆ ಬರೆಯುತ್ತಾರೆ:

"ಭಯಾನಕ ವಾರ್ತೆಗಳಿಂದ ತುಂಬಿಕೊಂಡಿದೆ ಇಂದಿನ ವಾತಾವರಣ. ಪತ್ರಿಕೆಗಳೂ ರೇಡಿಯೋ, ಟೆಲಿವಿಶನ್ ಎಲ್ಲವೂ ದುಃಖವಾರ್ತೆಗಳನ್ನು ಸದಾ ಪ್ರಚಾರ ಪಡಿಸುತ್ತಿವೆ. ಇತ್ತೀಚೆಗೆ ಎಷ್ಟು ಭೀಕರ ವಾರ್ತೆಗಳನ್ನು ನಾವು ಕೇಳಿದೆವು! ಸಿರಿಯಾ ಮತ್ತು ಜೋರ್ಡಾನ್ ಪರಸ್ಪರ ಯುದ್ಧಕ್ಕೆ ಸನ್ನದ್ಧಗೊಳ್ಳುತ್ತಿವೆ. ಇರಾನ್–ಇರಾಕ್ ಯುದ್ಧ ಬಲಗೊಳ್ಳುತ್ತಿದೆ. ಲಕ್ಷಗಟ್ಟಲೆ ಜನರು ಭೂಕಂಪ ಕಾರಣದಿಂದ ಇಟೆಲಿಯಲ್ಲಿ ನಿರ್ವಸಿತರಾಗಿದ್ದಾರೆ. ಸಾವಿರಾರು ಜನರೂ ಅಲ್ಲಿ ಮೃತ್ಯುವಶರಾದರು. ಹೀಗೆ ಸಾಗುತ್ತದೆ ದುಃಖ ವಾರ್ತೆಯ ಪಟ್ಟಿ!

"ದುಃಖಭರಿತ ನಮ್ಮ ವಾತಾವರಣದಲ್ಲಿ ಸಾಂತ್ವನ ಪಡಿಸುವ ಒಂದು ಸುವಾರ್ತೆ ಇದೆ. ನಮ್ಮ ಕರ್ತ ಬರುತ್ತಾನೆಂಬುದಾಗಿದೆ ಆ ಮಹಾ ಸುವಾರ್ತೆ!

"ಯೇಸು ಪುನರಾಗಮಿಸುವರೆಂದು ನಾವು ಏಕೆ ನಂಬುತ್ತೇವೆ? ಸೂಚನೆಗಳೂ ಸೇರಿದಂತೆ ಅನೇಕ ಕಾರಣಗಳನ್ನು ವಿವರಿಸಿ ಹೇಳಬಹುದಾದರೂ ಯೇಸು ವಾಗ್ದಾನ ಮಾಡಿರುವುದರಿಂದ ಎಂದು ಹೇಳುವುದಾಗಿರಬಹುದು ಅತ್ಯಂತ ಸೂಕ್ತ. "ನಾನು ತಿರುಗಿ ಬರುವೆನು" (ಯೋಹಾನ 14:3) ಮತ್ತು "ನಾನು ನಿಮಗೆ ಪುನಃ ಕಾಣಿಸಿಕೊಳ್ಳುವೆನು" (ಯೋಹಾನ 14:22) ಹಾಗೂ "ಇಗೋ, ನಾನು ಬೇಗ ಬರುತ್ತೇನೆ" (ಪ್ರಕಟನೆ 22:12) ಎಂದು ಪ್ರಭು ವಾಗ್ದಾನ ಮಾಡಿದ್ದಾನೆ. ಆತನ ಮಾತಿಗೆ ಮಾರ್ಪಾಟಿಲ್ಲ, ಆತನು ಖಂಡಿತವಾಗಿಯೂ ಬರುವನು. ಸ್ವಾಮಿಯ ಆಗಮನ ಬಹಳ ಸಮೀಪಿಸಿದೆಯೆಂದು ಲೋಕದ ಸಂಭವಗಳು ಸಾರುತ್ತವೆ! ಜಗತ್ತಿನ ರಾಷ್ಟ್ರಗಳ ಯುದ್ಧಾಗಾರಗಳಲ್ಲಿ ಲೋಕವನ್ನು ಹಲವು ಸಲ ನಾಶಪಡಿಸುವಂತಹ ನಶೀಕರಣ ಸಾಮಾಗ್ರಿಗಳು ತುಂಬಿಕೊಂಡಿವೆಯೆಂಬುದು ಹಾಗೂ ರಾಷ್ಟ್ರಗಳ ನಾಯಕತ್ವದಲ್ಲಿ ಉಂಟಾಗುತ್ತಿರುವ ಅಸಾಧಾರಣ ಪರಿವರ್ತನೆಗಳನ್ನು ನೋಡುವಾಗ ಬಹಳ

ಬೇಗ ಪ್ರಭು ಬರದಿದ್ದರೆ, ಪ್ರಭುವಿಗೆ ಬಳಲಿಕ್ಕೆ ಒಂದು ಲೋಕ ಬಾಕಿಯುಳಿದಿರಬಹುದೇ ಎಂದು ಸಂಶಯಿಸಬೇಕಾಗಿದೆ.

"ಪ್ರಭು ಖಂಡಿತವಾಗಿಯೂ ಬೇಗನೆ ಬರುವರು. ಆತನ ಆಗಮನಕ್ಕೆ ಮೊದಲು ಮನುಷ್ಯನು ತನ್ನನ್ನೂ ಲೋಕವನ್ನೂ ನಾಶಪಡಿಸಲು ಆತನು ಸಮ್ಮತಿಸಲಿಕ್ಕಿಲ್ಲ...

"ಸಜ್ಜನರನ್ನು ಒಟ್ಟುಗೂಡಿಸಲು ಪ್ರಭು ಬರಲಿಕ್ಕಾಯಿತು. ಕಹಳೆ ಊದಲಿಕ್ಕಾಯಿತು. ಸಮಾಧಿ ತೆರೆಯಲಿಕ್ಕಾಯಿತು. ಸಜ್ಜನರು ರೂಪಾಂತರ ಪಡೆಯಲಿಕ್ಕಾಯಿತು. ನಾವು ಎಚ್ಚರಗೊಳ್ಳೋಣ! ಸಿದ್ಧರಾಗೋಣ!! ಈ ಬಿಸಿ ವಾರ್ತೆಯನ್ನು ಲೋಕದಲ್ಲೆಲ್ಲೂ ಮೊಳಗಿಸೋಣ! ಪರಿಶುದ್ಧ ಯೋಹಾನನಂತೆ ಪ್ರಾರ್ಥಿಸುತ್ತಾ ಇರೋಣ! ಆಮೆನ್! ಕರ್ತನಾದ ಯೇಸುವೇ! ಬೇಗನೇ ಬಾ!!" ('ನಿತ್ಯ ಜೀವನ್' ಜನವರಿ 1981).

ಸುದೀರ್ಘವಾದ ಈ ಉದ್ಧರಣದ ಕುರಿತು ಅವಲೋಕನ ಮಾಡುವ ಅವಶ್ಯವೇ ಇಲ್ಲ. ಇಂದಿನ ಲೋಕದ ಅತಿ ಭಯಂಕರವಾದ ದುಃಸ್ಥಿತಿಯೂ, ಈ ರೀತಿಯ ಭಯಾನಕ ಹಾಗೂ ಭೀತಿಭರಿತ ವಾತಾವರಣವೂ ಉಂಟಾಗುವಾಗ ಆವಿರ್ಭವಿಸುವ ಯೇಸುಕ್ರಿಸ್ತರ ಪುನರಾಗಮನದ ಕುರಿತು ಕ್ರೈಸ್ತ ಜನರು ದೃಢ ಚಿತ್ತರಾಗಿದ್ದಾರೆ. ಹಾಗೆ ತಮ್ಮ ಧರ್ಮಗ್ರಂಥಗಳಲ್ಲಿರುವ ಭವಿಷ್ಯ ನುಡಿ ಪ್ರಕಾರ ಆಗಮಿಸಬೇಕಾದ ಆ ವಾಗ್ದತ್ತ ಮಸ್ಸೆಯ (ಮಸೀಹ್)ರನ್ನು ನಿರೀಕ್ಷಿಸಿ ಸುಮಾರು ಒಂದು ನೂರು ವರ್ಷ ಕಾಲವನ್ನು ಅವರು ಕಳೆದರು. ಆದರೆ ಆಕಾಶದೆಡೆಗೆ ನೋಟವನ್ನಿಟ್ಟುಕೊಂಡ ಈ 'ಧರಣಿ ಮುಷ್ಕರ' ನಿರರ್ಥಕವೂ ನಿಷ್ಫಲವೂ ಎಂದು ನಾವು ಹೇಳಲು ತೊಡಗಿ ತುಂಬಾ ಕಾಲವಾಯಿತು. ಮುಂದಾಗಿ ಹೇಳಲ್ಪಟ್ಟ ಕಾಲದಲ್ಲೇ ಎಲ್ಲಾ ಸೂಚಕ ಕಾರ್ಯಗಳನ್ನು ಈಡೇರಿಸಿಕೊಂಡು ಆ ಸತ್ಯಾತ್ಮರು ಆವಿರ್ಭವಿಸಿ ತನ್ನ ಕರ್ತವ್ಯ ನಿರ್ವಹಣೆಯನ್ನು ಅತ್ಯಂತ ಸ್ತುತ್ಯರ್ಹವಾದ ರೀತಿಯಲ್ಲಿ ಪೂರೈಸಿ ಒಂದು ಹೊಸ ಆಕಾಶವನ್ನೂ ಒಂದು ಹೊಸ ಭೂಮಿಯನ್ನೂ ಆವಿಷ್ಕರಿಸಿ ಒಂದು ಆಧ್ಯಾತ್ಮಿಕ ಸಂಘಟನೆಗೆ ತಳಹದಿ ಹಾಕಿ ಅವರು ಇಹಲೋಕವನ್ನು ತ್ಯಜಿಸಿದರು.

ಆದರೆ ಕ್ರೈಸ್ತ ಜನರು ಸುಮಾರು ಒಂದು ನೂರು ವರ್ಷ ಕಾಲದಿಂದ ಯೇಸು ಇಗೋ ಬರುತ್ತಾರೆ! ಸಮೀಪಕ್ಕೆ ಬಂದು ತಲಪಿಬಿಟ್ಟರು ಎಂದೆಲ್ಲಾ ಬೊಬ್ಬಿಟ್ಟುಕೊಂಡು ಲೋಕವನ್ನು ಮಾತ್ರವಲ್ಲ ತಮ್ಮನ್ನೂ ಸಹ ವಂಚಿಸುತ್ತಿದ್ದಾರೆ. ವಾಗ್ದತ್ತ ಮಸ್ಸೆಯರ ದೈವಿಕ ಕಹಳೆಯನ್ನು ಶ್ರವಿಸುವರೆ ಇವರಿಗೆ ಭಾಗ್ಯ ಸಿಗಲಿಲ್ಲ. "ಸುಮ್ಮುಂ ಬುಕ್ಮುನ್ ಉಮ್ಯುನ್ ಫಹುವರ್ ಲಾ ಯುರ್‌ಜಿಊನ್" ಎಂದು ಪವಿತ್ರ ಖುರ್‌ಆನ್ ಹೇಳಿದಂತೆ ಅವರು ಕಿವುಡರೂ ಮೂಕರೂ ಅಂಧರೂ ಆದ ಸ್ಥಿತಿಯಲ್ಲೇ ಕಾಲ ಕಳೆಯುತ್ತಿದ್ದಾರೆ!

ಆದರೆ ಸಹೃದಯಿಗಳಾದ ಲಕ್ಷ ಗಟ್ಟಲೆ ಕ್ರೈಸ್ತರಿಗೆ ಈ ಯುಗಶಬ್ದವನ್ನು, ದೈವಿಕ ಕಹಳೆಯ ಶಬ್ದವನ್ನು ಕೇಳಿ ಅದನ್ನು ಸ್ವೀಕರಿಸುವ ಭಾಗ್ಯ ಲಭಿಸಿದೆಯೆಂಬ ವಾಸ್ತವಾಂಶವನ್ನೂ ಈ ಸಂದರ್ಭದಲ್ಲಿ ಸ್ಮರಿಸದಿರಲಿಕ್ಕೆ ಆಗದು.

ಇನ್ನು "ದಿ ಕಿಂಗ್ ಈಸ್ ಕಮಿಂಗ್" ಎಂಬ ಪುಸ್ತಕದ ಬಗ್ಗೆ ಸ್ವಲ್ಪ ಅವಲೋಕನ ಮಾಡಿ ನೋಡೋಣ.

ಯೇಸುಕ್ರಿಸ್ತರ ಪುನರಾಗಮನ ಕುರಿತು ಪ್ರಸ್ತಾವಿಸುತ್ತಾ ಬೈಬಲಿನ ಹಳೆಯ ಒಡಂಬಡಿಕೆಯಲ್ಲಿ 1845 ಮತ್ತು ಹೊಸ ಒಡಂಬಡಿಕೆಯಲ್ಲಿ 318 ಸೂಚನೆಗಳಿವೆಯೆಂದು ಪ್ರಸ್ತುತ ಗ್ರಂಥ ಹೇಳುತ್ತದೆ. (ಪುಟ 2, 3)

ಯೇಸುಕ್ರಿಸ್ತರ ಪುನರಾಗಮನ ಘಟಿಸದ ಪಕ್ಷದಲ್ಲಿ ಉಂಟಾಗುವ ಪರಿಣಾಮದ ಕುರಿತು ಅವರು ಹೀಗೆ ಹೇಳುತ್ತಾರೆ:

"ಯೇಸುವಿನ ಎರಡನೆ ಆಗಮನ ಸಂಭವಿಸದಿದ್ದರೆ ಇಸ್ರಾಯೆಲ್ ಸಮುದಾಯದೊಡನೆ ದೇವರು ಮಾಡಿದ ವಾಗ್ದಾನಗಳು ನೆರವೇರಲಿಲ್ಲವೆಂದು ಹೇಳಬೇಕಾದೀತು. ಮಾತ್ರವಲ್ಲ, ಲೋಕವು ನಿರಂತರವಾಗಿ ಪಾಪದಲ್ಲಿ ಮುಳುಗಿ ಲೋಕದಲ್ಲಿಡೀ ಶೈತಾನನ ಆಧಿಪತ್ಯ ಸ್ಥಾಪನೆಗೊಂಡು ಜಗತ್ತಿನಿಂದ ಶಾಂತಿ, ಸಮಾಧಾನ, ಒಳಿತೆಲ್ಲಾ ನಿರ್ನಾಮಗೊಳ್ಳುವುವು. ಏಕೆಂದರೆ ಆ ಪುಣ್ಯಾತ್ಮರು ಮಾತ್ರವೇ ಸಮಾಧಾನ ಪ್ರಭು! ಆದರೆ ಅಂತಹ ಶೋಚನೀಯ ಅವಸ್ಥೆ ಉಂಟಾಗಲಾರದೆಂಬುದಕ್ಕೆ ದೇವರಿಗೆ ಸ್ತುತಿ! ಕಾರಣವೇನೆಂದರೆ ಯೇಸುವಿನ ಪುನರಾಗಮನವನ್ನು ಬೈಬಲಿನ ಅಸಂಖ್ಯಾತ ಭವಿಷ್ಯವಾಣಿಗಳೂ ಸೂಚನೆಗಳೂ ಸಾರುತ್ತವೆ." (ಪುಟ 21)

ಅಂತ್ಯಕಾಲದಲ್ಲಿ ಆಗಮಿಸುವ ವಾಗ್ದತ್ತ ಮಸೀಹರ ಕುರಿತು ಪವಿತ್ರ ಖುರ್‌ಆನ್ ಮತ್ತು ಹದೀಸ್ ಮಹ

ಮ್ಮದ್ ಪೈಗಂಬರ್ (ಸ) ಹೇಳಿದ ಅನೇಕ ಭವಿಷ್ಯವಾಣಿಗಳೂ ಸೂಚನೆಗಳೂ ಈಡೇರಿವೆಯೆಂಬುದು ಇಂದು ಸುಸ್ಪಷ್ಟವಾಗಿ ರುಜುಗೊಂಡ ಯಾಥಾರ್ಥ್ಯಗಳಪ್ಪೆ. ಅದೇ ಪ್ರಕಾರ ಬೈಬಲ್ ಹೇಳಿ ಕೊಡುವ ಎಲ್ಲಾ ಕುರುಹುಗಳೂ ಸುಸ್ಪಷ್ಟವಾಗಿ ಗೋಚರಿಸುತ್ತವೆಯೆಂದು "ದಿ ಕಿಂಗ್ ಈಸ್ ಕಮಿಂಗ್" ಎಂಬ ಗ್ರಂಥದ ಕರ್ತೃ ಸಹ ಉಚ್ಛಸ್ವರದಲ್ಲಿ 60ಕ್ಕೂ ಮಿಕ್ಕಿದ ಭಾಷೆಗಳಲ್ಲಿ ಘೋಷಿಸುತ್ತಿದ್ದಾರೆ.

ಈ ಕಾಲದಲ್ಲಿ ಯಾವ ರೀತಿಯಲ್ಲಿ, ಯೇಸುಕ್ರಿಸ್ತರ ಪುನರಾಗಮನಕ್ಕೆ ಸಂಬಂಧಿಸಿದ ಭವಿಷ್ಯ ನುಡಿಗಳು ಈಡೇರುತ್ತಿವೆ ಹಾಗೂ ಕುರುಹುಗಳು ಗೋಚರಿಸುತ್ತಿವೆಯೆಂಬ ಗ್ರಂಥಕರ್ತನ ವಾದವನ್ನು ತುಸು ವೀಕ್ಷಿಸೋಣ. ಅವರು ಹೇಳುತ್ತಾರೆ:

"ಯೇಸು ಹೀಗೆ ನುಡಿದಿದ್ದಾರೆ: 'ಅನೇಕರು ಬಂದು ನನ್ನ ಹೆಸರನ್ನು ಎತ್ತಿಕೊಂಡು—ನಾನು ಕ್ರಿಸ್ತನು ಎಂದು ಹೇಳಿ ಎಷ್ಟೋ ಜನರನ್ನು ಮೋಸಗೊಳಿಸುವರು' (ಮತ್ತಾಯ 24:5). ಕಳೆದ 50 ವರ್ಷಗಳಲ್ಲಿ ಲೋಕದ ಹಲವು ಕಡೆಗಳಲ್ಲಿ, ಮುಖ್ಯವಾಗಿ ಆಫ್ರಿಕ, ಏಷ್ಯಾ, ಯುರೋಪ್ಯನ್ ರಾಜ್ಯಗಳಲ್ಲಿ ಮತ್ತು ಪೌರಸ್ತ್ಯ ದೇಶಗಳಲ್ಲಿ ಸಾವಿರದ ಒಂದು ನೂರಕ್ಕೆ ಮಿಕ್ಕಿದ ಜನರು ತಾವು ಕ್ರಿಸ್ತ ಎಂದು ವಾದಿಸಿದರು. ಹಿಟ್ಲರ್, ಮುಸ್ಸೊಲಿನಿ ಮುಂತಾದ ನೇತಾರರಿಗೆ ಜರ್ಮನಿ, ಇಟೆಲಿಯಲ್ಲಿರುವ ಜನರು ತಮ್ಮ ದೈವಗಳಂತೆ ವಿಧೇಯರಾಗಿದ್ದರು. ರಶ್ಯಾದಲ್ಲಿ ಲೆನಿನ್ ಮತ್ತು ಚೀನಾದಲ್ಲಿ ಮಾವೊತ್ಸೆತುಂಗ್ ಅವರಿಗೆ ಇದೇ ಸ್ಥಾನವನ್ನು ಆ ರಾಜ್ಯದ ಜನರು ಕೊಟ್ಟಿದ್ದರು. ಭಾರತದಿಂದ ಓರ್ವ ಕ್ರೈಸ್ತ ಮುಖಂಡ ನನಗೆ ಕಳುಹಿಸಿದ ಪತ್ರದಲ್ಲಿ, ಹೀಗೆ ಬರೆದಿದ್ದರು: 'ಚಂದ್ರನ ಮೇಲೆ ಮಾನುಷ್ಯನು ಪಾದಾರ್ಪಣ ಮಾಡಿದಾಗ ಕ್ರಿಸ್ತನು ಭೂಮಿಗಿಳಿದು ಬಂದು ನನ್ನ ಆತ್ಮದಲ್ಲಿ ಆವಹಿಸಿದ್ದಾನೆಂದೂ ಅಂದಿನಿಂದ ತಾನು ವಾಗ್ದತ್ತ ಮೆಸ್ಸೈಯ ಆಗಿರುವೆನೆಂದೂ ದಕ್ಷಿಣ ಭಾರತದಿಂದಲೂ ಓರ್ವ ವ್ಯಕ್ತಿ ವಾದಿಸಿದ್ದಾರೆ. ಜರ್ಮನಿ, ಅಮೇರಿಕ, ಯುರೋಪ್ಯನ್ ರಾಜ್ಯಗಳಿಂದ ಅನೇಕರು ತಿರುನಲ್ವೇಲಿಯಲ್ಲಿರುವ ಆ ವ್ಯಕ್ತಿಯ ವಸತಿಗೆ ಬರುತ್ತಿದ್ದಾರೆ. ಕೆಲವರು ತಮ್ಮ ಮನೆಮಾರುಗಳನ್ನೆಲ್ಲಾ ಮಾರಿ ಹಣವನ್ನು ಆತನಿಗೆ ಒಪ್ಪಿಸುತ್ತಿದ್ದಾರೆ'" (ಪುಟ 28)

ವಾಗ್ದತ್ತ ಮಸ್ಸೈಯರ ಆಗಮನಕ್ಕೆ ಮುಂಚೆ ಅನೇಕ ಕಪಟ ಕ್ರಿಸ್ತರು ಬರುವರೆಂಬ ಯೇಸುಕ್ರಿಸ್ತರ ಭವಿಷ್ಯನುಡಿ ಈಡೇರಿದೆಯೆಂದು ಗ್ರಂಥಕರ್ತ ಸಾರುತ್ತಾರೆ. ಆದರೆ ಈ ಮಿಥ್ಯಾ ಕ್ರಿಸ್ತರೆಲ್ಲರೂ ಪರಾಜಿತರಾಗಿ ನಾಶವಾದರು. ದೈವ ಕೋಪಕ್ಕೆ ಗುರಿಯಾದ ಅವರು ಮತ್ತು ಅವರ ಸಂಘಟನೆಗಳು ನಿರ್ನಾಮಗೊಂಡುದಾಗಿ ಸಹ ನಮಗೆ ಕಾಣಲು ಸಾಧ್ಯ. ಕಾರಣವೇನೆಂದರೆ ಮಿಥ್ಯಾವಾದಿಗಳು ನಾಶಗೊಳ್ಳುವರೆಂದು ಬೈಬಲೇ ಸ್ಪಷ್ಟಪಡಿಸಿದೆ. ಹೇಗೆಂದರೆ :

"ಯಾವ ಪ್ರವಾದಿ ನನ್ನಿಂದ ಅಧಿಕಾರ ಹೊಂದದೆ ನಾನು ಪ್ರೇರಣೆ ಮಾಡದ ಮಾತುಗಳನ್ನು ಯೆಹೋವನ ಮಾತೆಂದು ಹೇಳಿ ಜನರಿಗೆ ತಿಳಿಸುವನೋ ಇಲ್ಲವೇ ಇತರ ದೇವರುಗಳ ಹೆಸರಿನಲ್ಲಿ ಮಾತಾಡುವನೋ ಅವನಿಗೆ ಮರಣ ಶಿಕ್ಷೆಯಾಗಬೇಕು" (ಧರ್ಮೋಪದೇಶ ಕಾಂಡ 18 : 20).

ಪ್ರಸ್ತುತ ವಚನವನುಸಾರ ಕ್ರಿಸ್ತರೆಂದು ವಾದಿಸಿದ ಮಿಥ್ಯಾವಾದಿಗಳೆಲ್ಲರೂ ನಾಶಗೊಳ್ಳುತ್ತಿರುವುದಾಗಿ ನಮಗೆ ಕಾಣಲು ಸಾಧ್ಯ. ಕೆಲವು ವರ್ಷಗಳಿಗೆ ಮೊದಲು ತಿರುನಲ್ವೇಲಿಯಲ್ಲಿ ವಾಗ್ದತ್ತ ಮಸ್ಸೈಯ ಎಂದು ವಾದಿಸಿದ "ಲಾರಿ" ಎಂಬ "ಕಪಟ ಕ್ರಿಸ್ತ"ನನ್ನು ಕಂಡು ಮಾತಾಡಿದ ಸಂದರ್ಭ ನನಗೆ ಈಗಲೂ ನೆನಪಿದೆ. ಆದರೆ ಈಗ ಆ ಸ್ಥಳದಲ್ಲಿ ಆಶ್ರಮದ ನಾಮಫಲಕವಲ್ಲದೆ ಬೇರೇನೂ ಬಾಕಿಯಿಲ್ಲ.

ಗ್ರಂಥಕರ್ತ ಹೇಳುತ್ತಾರೆ: "'ಯುದ್ಧಗಳಾಗುವುದನ್ನೂ ಯುದ್ಧವಾಗುವ ಹಾಗಿದೆ ಎಂಬ ಸುದ್ದಿಗಳನ್ನೂ ನೀವು ಕೇಳಬೇಕಾಗುವುದು. ಕಳವಳ ಪಡದಂತೆ ನೋಡಿಕೊಳ್ಳಿರಿ; ಯಾಕೆಂದರೆ ಹಾಗಾಗುವುದು ಅಗತ್ಯ. ಆದರೂ ಇದು ಇನ್ನೂ ಅಂತ್ಯಕಾಲವಲ್ಲ' (ಮತ್ತಾಯ 24 : 6) ಎಂಬ ಯೇಸುವಿನ ಭವಿಷ್ಯದ್ವಚನವನುಸಾರ ಕಳೆದ ಒಂದು ಶತಾಬ್ದದಲ್ಲಿ ಯುರೋಪು ಖಂಡದಲ್ಲಿ ಮಾತ್ರ ಸಣ್ಣ ಹಾಗೂ ದೊಡ್ಡ 286 ಯುದ್ಧಗಳು ನಡೆದವು. ಎರಡು ಜಾಗತಿಕ ಮಹಾಯುದ್ಧಗಳಿಂದ ಸಹ ಉಂಟಾದ ನಾಶನಷ್ಟಗಳು ಈ ಭೂಮಿ ಸೃಷ್ಟಿಯಾದ ಮೊದಲ್ಗೊಂಡು ಉಂಟಾಗಿಲ್ಲವೆಂದು 1967ರಲ್ಲಿ ಪ್ರಕಟಿಸಲಾದ U. S. News and World Report ನಲ್ಲಿ ಬರೆಯಲಾಗಿದೆ. ಪ್ರಸ್ತುತ ಎರಡು ಜಾಗತಿಕ ಯುದ್ಧಗಳ ಬಳಿಕ ಸಹ ಕೊರಿಯಾ, ವಿಯೆಟ್ನಾಂ ಸಹಿತ ಜಗತ್ತಿನ ಹಲವೆಡೆಗಳ

ಲ್ಲಿ ಮುನ್ನೂರಕ್ಕೂ ಮಿಕ್ಕಿ ವಿಪ್ಲವಗಳೂ ದಂಗೆಗಳೂ ವ್ಯಾಪಕವಾಗಿ ನಡೆದಿವೆ. ಕಳೆದ ಎರಡು ಜಾಗತಿಕ ಮಹಾ ಯುದ್ಧಗಳಲ್ಲಿ ಉಂಟಾದ ನಾಶನಷ್ಟಗಳಿಗಿಂತ ಹೆಚ್ಚು, ಹೈಡ್ರೋಜನ್ ಬಾಂಬ್‌ಗಳಿಂದ ತುಂಬಿದ ಒಂದು ವಿಮಾನ ದಿಂದ ಸಾಧ್ಯವೆಂದು ವರದಿಯಾಗಿದೆ. ರಶ್ಯಾ ಈಗ ಬಾಹ್ಯಾ ಕಾಶದಲ್ಲಿ ಒಂದು ವ್ಯೋಮ ನಿಲ್ದಾಣವನ್ನು ನಿರ್ಮಿಸುವರೆ ಸಿದ್ಧತೆಗಳನ್ನು ಮಾಡುತ್ತಿದೆ. ಇದಕ್ಕೆ ಪ್ರಧಾನವಾಗಿ ಎರಡು ಉದ್ದೇಶಗಳಿವೆ. ಒಂದು, ಭೂಮಿಯಿಂದ 100 ಮೈಲು ಗಳಷ್ಟು ಎತ್ತರದಿಂದ ಭೂಮಿಯ ಯಾವ ಭಾಗದ ಚಿತ್ರ ವನ್ನು ಸಹ ಸ್ಪಷ್ಟವಾದ ರೀತಿಯಲ್ಲಿ ಹಿಡಿಯಲು ಸಾಧ್ಯ. ಮತ್ತೊಂದು, ಅಲ್ಲಿಂದ ಭೂಮಿಯಲ್ಲಿ ಅಮೇರಿಕಾ ಸಹಿತ ಯಾವ ಭಾಗದಲ್ಲೂ 10 ಲಕ್ಷ ಟನ್ ಶಕ್ತಿಯ ಹೈಡ್ರೋ ಜನ್ ಬಾಂಬಿನಿಂದ ಪ್ರಯಾಸವಿಲ್ಲದೆ ಆಕ್ರಮಣ ಮಾಡಲು ಸಾಧ್ಯ." (ಪುಟ 36)

ಹಾಗೆ ಯುದ್ಧಗಳಾಗುವುದನ್ನೂ, ಯುದ್ಧವಾಗುವ ಸಂಭವವಿದೆ ಎಂಬ ಸುದ್ದಿಗಳನ್ನೂ ಕೇಳುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಭವಿಷ್ಯ ನುಡಿಯ ಪ್ರಕಾರ ಯೇಸು ಕ್ರಿಸ್ತರ ಪುನರಾಗಮನ ಉಂಟಾಗಬೇಕಾಗಿದೆಯೆಂದು ಗ್ರಂಥಕರ್ತ ಸಮರ್ಥಿಸುತ್ತಾರೆ.

ಅವರು ಮುಂದುವರಿಯುತ್ತಾರೆ : "ತನ್ನ ಆಗಮನ ಕಾಲದಲ್ಲಿ ಅಲ್ಲಲ್ಲಿ ಬರಗಳು ಬರುವುವು(ಮತ್ತಾಯ 24:7) ಎಂದು ಯೇಸು ಹೇಳಿದ್ದಾರೆ. ಇಂದು ಲೋಕದಲ್ಲಿ 66 ಶೇಕಡಾ ಜನರು ರಾತ್ರಿಯೂಟವಿಲ್ಲದೆ ಉಪವಾಸ ಮಲಗು ತ್ತಾರೆ. ಲೋಕದಲ್ಲಿರುವ 70% ಮಕ್ಕಳು ತೀರಾ ಹೊಟ್ಟೆ ಗಿಲ್ಲದೆಯೂ ಪೋಷಕಾಹಾರದ ಅಭಾವದಿಂದಲೂ ರೋಗ ಪೀಡಿತರಾಗಿದ್ದಾರೆ. 50% ಜನರು ಹೊಟ್ಟೆತುಂಬ ಉಣ್ಣ ಲು ಸಾಧ್ಯವಿಲ್ಲದವರು. ಲೋಕದ ಜನಸಂಖ್ಯೆ ಪ್ರತಿವರ್ಷ 2% ವೃದ್ಧಿಗೊಳ್ಳುತ್ತಿದೆಯಾದರೂ ಆಹಾರೋತ್ಪಾದನೆ 1% ಮಾತ್ರ ವರ್ಧಿಸುತ್ತದೆ.

"ತನ್ನ ಪುನರಾಗಮನ ಕಾಲದಲ್ಲಿ ಹಲವು ಬಗೆಯ ರೋಗಗಳೂ ಸಾಂಕ್ರಾಮಿಕ ವ್ಯಾಧಿಗಳೂ ವ್ಯಾಪಕವಾಗಿ ಹರಡುವುವೆಂಬ ಯೇಸುವಿನ ಭವಿಷ್ಯನುಡಿ ನೆರವೇರುತ್ತಿರು ವುದಾಗಿ ನಾವು ಕಾಣುತ್ತೇವೆ. 'ಸಂಡೇ ಇವ್ನಿಂಗ್ ಪೋಸ್ಟ್' ಪ್ರಕಟಿಸಿದ ಒಂದು ವರದಿಯಲ್ಲಿ 1918-19 ವರ್ಷದಲ್ಲಿ ಉಂಟಾದ ಇನ್‌ಫ್ಲುಯೆನ್ಸರೋಗದಿಂದ 2,10,00,000 ಮಂದಿ ಮರಣಗೊಂಡರೆಂದೂ ಯುರೋಪಿನಲ್ಲಿ ಮಾತ್ರ 8,50,000 ಮಂದಿ ಮೃತ್ಯುವಶರಾದರೆಂದೂ ಹೇಳಲಾ ಗಿದೆ. ಜಗತ್ತಿನಲ್ಲಿರುವ 50 ಕೋಟಿ ಇಲಿಗಳು ಜನರಲ್ಲಿ ವಿವಿಧ ರೋಗಗಳನ್ನು ಹರಡುತ್ತಿವೆ. ರೋಗ ನಿವಾರಣೆ ಗಾಗಿ ಮಾತ್ರ ಅಮೇರಿಕ ಪ್ರತಿವರ್ಷ 518 ಕೋಟಿ ರೂಪಾಯಿಗಳನ್ನು ವ್ಯಯಿಸುತ್ತದೆ.

"ಹಾಗೆ ಲೋಕವು ಇದು ವರೆಗೆ ಕಂಡಿಲ್ಲದ ರೀತಿ ಯಲ್ಲಿ ಹಲವು ಬಗೆಯ ರೋಗಗಳು ಇಂದು ವಿಪುಲವಾಗಿ ಹರಡುತ್ತಿವೆ." (ಪುಟ 31, 32)

"ಯೇಸು ನೀಡಿದ ಮತ್ತೊಂದು ಭವಿಷ್ಯತ್ ಸೂಚನೆ– ಅಲ್ಲಲ್ಲಿ ಭೂಕಂಪಗಳು ಆಗುವುವು (ಮತ್ತಾಯ 24 : 7) ಎಂದು. ಪ್ರವಾದಿ ಯೆಶಾಯ ಸಹ ಹೀಗೆ ಭವಿಷ್ಯನುಡಿದಿ ದ್ದಾರೆ. 'ಸೇನಾಧೀಶ್ವರನಾದ ಯಹೋವನ ಕೋಪೋ ದ್ರೇಕವೂ, ತೀಕ್ಷ್ಣ ರೋಷವೂ ಮಸಗುತ್ತಿರುವ ದಿನದಲ್ಲಿ (ಯೆಹೋವನೆಂಬ) ನಾನು ಆಕಾಶ ಮಂಡಲವನ್ನು ನಡು ಗಿಸಿ ಭೂಲೋಕವನ್ನು ಸ್ಥಳದಿಂದ ಕದಲಿಸುವೆನು.'(ಯೆಶಾ ಯ 13:13)

"ಈ ಕಾಲದಲ್ಲಿ ಭೂಕಂಪಗಳು ಲೋಕದ ವಿವಿಧ ಕಡೆಗಳಲ್ಲಿ ಹೆಚ್ಚುತ್ತಲೇ ಹೋಗುತ್ತವೆ. ಒಂಭತ್ತನೇ ಶತ ಮಾನದಲ್ಲಿ ಒಂದು, ಹತ್ತನೇ ಶತಮಾನದಲ್ಲಿ ಎರಡು, ಹದಿ ಮೂರನೇ, ಶತಮಾನದಲ್ಲಿ ಮೂರು, 16ನೇ ಮತ್ತು 17 ನೇ ಶತಮಾನಗಳಲ್ಲಿ ಎರಡೆರಡು, 18ನೇ ಶತಮಾನದಲ್ಲಿ ಐದು, 19ನೇ ಶತಮಾನದಲ್ಲಿ ಒಂಭತ್ತು ದೊಡ್ಡ ಭೂಕಂ ಪಗಳೂ, 20ನೇ ಶತಮಾನದಲ್ಲಿ 40 ಅತಿ ಭೀಕರ ಭೂಕಂ ಪಗಳೂ ಸಂಭವಿಸಿವೆಯೆಂದು ದಾಖಲೆಯಿದೆ.

"1920ರಲ್ಲಿ ಚೀನಾದ ಕಾಂಡು (Kandu) ಎಂ ಬಲ್ಲಿ ನಡೆದ ಭೂಕಂಪದಲ್ಲಿ 1,80,000 ಮಂದಿ, 1923 ರಲ್ಲಿ ಜಪಾನಿನ ಟೋಕಿಯೋ ಮತ್ತು ಕೋಹಾಮಾ ಎಂಬೀ ಸ್ಥಳಗಳಲ್ಲಿ 1,43,000 ಮಂದಿ, 1962ರಲ್ಲಿ ಇರಾನಿನಲ್ಲಿ 12,000 ಮಂದಿ, 1968ರಲ್ಲಿ ಅಲ್ಲಿಯೇ 11,000 ಮಂದಿ, 1970ರಲ್ಲಿ ಪೆರುವಿನಲ್ಲಿ 50,000 ಮಂದಿ ಭೂ ಕಂಪದಿಂದ ಮಡಿದರು." (ಪುಟ 32, 33)

ಇದು ಗ್ರಂಥಕರ್ತರ 1970ರ ವರೆಗಿನ ಅಂಕಿ ಅಂಶ ಗಳಾಗಿವೆ. ಅದರ ನಂತರ ಕೂಡ ಲೋಕದ ವಿವಿಧ ಕಡೆಗಳ

ಲ್ಲಿ ನಡೆದ ಭೂಕಂಪಗಳಿಂದ ಲಕ್ಷಗಟ್ಟಲೆ ಜನರು ಮೃತ್ಯು ವಶರಾದರು.

ಈ ಬಗ್ಗೆ ಗ್ರಂಥಕರ್ತ ಹೇಳುವುದನ್ನು ನೋಡಿರಿ : "ಭೂಕಂಪಗಳ ಸಂಖ್ಯೆ ಇದೇ ತರದಲ್ಲಿ ಹೆಚ್ಚುತ್ತಲೇ ಹೋದರೆ ಈ ಕಾಲಘಟ್ಟದ ಅವಸಾನದೊಂದಿಗೆ ಈ ಭೂಮಿಯೇ ಸಂಪೂರ್ಣವಾಗಿ ನಾಶ ಹೊಂದಬಹುದು.

ತತ್ಸಂಬಂಧವಾಗಿ ಬೈಬಲ್ ಇನ್ನೊಂಡೆಡೆಯಲ್ಲಿ ಹೀಗೆ ಹೇಳುತ್ತದೆ: ಮಿಂಚುಗಳೂ ವಾಣಿಗಳೂ ಗುಡುಗುಗಳೂ ಉಂಟಾದವು; ಮನುಷ್ಯರು ಭೂಮಿಯ ಮೇಲೆ ಇದ್ದಂದಿನಿಂದ ಅಂಥ ದೊಡ್ಡ ಭೂಕಂಪವಾಗಲಿಲ್ಲ. ಮಹಾ ಪಟ್ಟಣ ಮೂರು ಭಾಗವಾಯಿತು, ಜನಾಂಗಗಳ ಪಟ್ಟಣಗಳು ಬಿದ್ದವು ... ... ದ್ವೀಪಗಳೆಲ್ಲಾ ಓಡಿಹೋದವು; ಬೆಟ್ಟಗಳು ಕಾಣದೆ ಹೋದವು ಮತ್ತು ಆಕಾಶದಿಂದ ಮನುಷ್ಯರ ಮೇಲೆ ದೊಡ್ಡ ಆಲಿಕಲ್ಲಿನ ಮಳೆ ಸುರಿಯಿತು. (ಪ್ರಕಟನೆ 16 : 18 - 20)"

(ದಿ ಕಿಂಗ್ ಈಸ್ ಕಮಿಂಗ್, ಪುಟ 32, 33)

ಹೀಗೆ, ಯೇಸುಕ್ರಿಸ್ತರು ತನ್ನ ಪುನರಾಗಮನದ ಕುರಿತು ನೀಡಿದ ಭವಿಷ್ಯತ್ ಸೂಚನೆಗಳು, ಅವುಗಳಲ್ಲಿ ಇಂದು ಕೈಗೂಡಿದವು ಹಾಗೂ ಕೈಗೂಡುತ್ತಿರುವುವುಗಳ ಪಟ್ಟಿಗಳನ್ನು ಪ್ರಸ್ತುತ ಗ್ರಂಥದ ಕರ್ತ ಹೋಮರ್ ಡಂಕನ್ ಜಗತ್ತಿನ ಮುಂದೆ ಬಿಡಿಸಿಟ್ಟಿದ್ದಾರೆ.

ಅವರು ಮುಂದುವರಿದು ಬರೆಯುತ್ತಾರೆ :

"ಯೇಸುವಿನ ಪುನರಾಗಮನ ಕಾಲದ ಸೂಚನೆಯಾಗಿ ಬೈಬಲಿನ ಹೊಸ ಒಡಂಬಡಿಕೆಯಲ್ಲಿ ಹೀಗೆ ಉಲ್ಲೇಖಿಸಲಾಗಿದೆ: ಯೇಸುವಿನ ಪುನರಾಗಮನದ ಕಾಲದಲ್ಲಿ 'ಅಧರ್ಮವು ಹೆಚ್ಚಾಗುವುದರಿಂದ ಬಹುಜನರ ಪ್ರೀತಿಯು ತಣ್ಣಗಾಗಿ ಹೋಗುವುದು' (ಮತ್ತಾಯ 24:12). ಹೌದು, ಇಂದು ಸೈತಾನ ನಮ್ಮನ್ನು ಅಕ್ರಮ ಮತ್ತು ಅನೀತಿಯ ಮುಂದೆ ದೂಡಿಬಿಟ್ಟಿದ್ದಾನೆ.

"ನ್ಯೂಯೋರ್ಕ್ ಟೈಮ್ಸ್ ಎಂಬ ಪತ್ರಿಕೆ ಇತ್ತೀಚೆಗೆ ನಿಯಮ ವಿರುದ್ಧವಾದ ನಡೆವಳಿಕೆಗಳು ಇಂದು ಸಾಂಕ್ರಮಿಕ ರೋಗದಂತೆ ಭೂಮಿಯಲ್ಲಿ ನಾಶವನ್ನು ಬಿತ್ತುತ್ತಿದೆಯೆಂದು ಪ್ರಸ್ತಾಪಿಸುತ್ತಾ 1966, 1970, 1975 ಎಂಬೀ ವರ್ಷಗಳಲ್ಲಿ ಅಮೇರಿಕದಲ್ಲಿ ವರ್ಧಿಸುತ್ತಿರುವ ಅಪರಾಧ ಕೃತ್ಯಗಳ ಒಂದು ಪಟ್ಟಿಯನ್ನೇ ಪ್ರಕಟಿಸಿದೆ. ಹೀಗೆ ಕ್ಷಣ ಕ್ಷಣವೂ ವೃದ್ಧಿಗೊಳ್ಳುತ್ತಿರುವ ಅಕ್ರಮವೂ ಕೊಲೆಯೂ ಸುಲಿಗೆಯೂ ದರೋಡೆಯೂ ಬಲಾತ್ಕಾರವೂ ಯೇಸುವಿನ ಆಗಮನವು ಸಮೀಪಿಸಿದೆಯೆಂದು ಸಾರುತ್ತವೆ" (ಪುಟ 36, 38).

ಹೀಗೆ ಇಂದು ಜಗತ್ತಿನಲ್ಲಿ ಕಾಣುವ ಅಧಾರ್ಮಿಕತೆ ವಾಗ್ದತ್ತ ಲೋಕೋದ್ಧಾರಕರ ಆಗಮನವು ಅತ್ಯಾವಶ್ಯಕವೆಂದೂ ಒಂದು ಆಧ್ಯಾತ್ಮಿಕ ಪರಿವರ್ತನೆ ಹೊರತು ಈ ಸ್ಥಿತಿ ಕೊನೆಗೊಳ್ಳಲು ಅಸಾಧ್ಯವೆಂದೂ ಸ್ಪಷ್ಟಪಡಿಸುತ್ತದೆ. ಈ ಪರಿಸ್ಥಿತಿಯನ್ನು ಬದಲಾಯಿಸಲು ರಾಜಕೀಯ, ಸಾಮುದಾಯಿಕ, ಸಾಂಸ್ಕರಿಕ ಸಂಘಟನೆಗಳಿಗಾಗಲಿ ಸರಕಾರಗಳಿಗಾಗಲಿ ಸಾಧ್ಯವಲ್ಲವೆಂದೂ ಭವಿಷ್ಯದ್ವಚನಗಳ ಪ್ರಕಾಶದಲ್ಲಿ ಆಗಮಿಸುವ ವಾಗ್ದತ್ತ ಮಸೀಹರಿಗೆ ಮಾತ್ರ ಇದು ಸಾಧ್ಯವಾಗುವುದೆಂದೂ ಮನಗಾಣಬಹುದು.

ಬೈಬಲ್ ಹೀಗೆ ಹೇಳುತ್ತದೆ :

"ನೋಹನ ದಿವಸಗಳು ಹೇಗಿದ್ದವೋ ಹಾಗೆಯೇ ಮನುಷ್ಯ ಕುಮಾರನ ಪ್ರತ್ಯಕ್ಷತೆಯೂ ಇರುವುದು. ಹೇಗೆಂದರೆ ಜಲಪ್ರಳಯಕ್ಕೆ ಮುಂಚಿನ ದಿನಗಳಲ್ಲಿ ನೋಹನ ನಾವೆಯಲ್ಲಿ ಸೇರಿದ ದಿನದ ತನಕ ಜನರು ಉಣ್ಣುತ್ತಾ ಕುಡಿಯುತ್ತಾ ಮದುವೆ ಮಾಡಿ ಕೊಳ್ಳುತ್ತಾ ಮಾಡಿಕೊಡುತ್ತಾ ಇದ್ದು ಪ್ರಳಯದ ನೀರು ಬಂದು ಎಲ್ಲರನ್ನು ಬಡುಕೊಂಡು ಹೋಗುವ ತನಕ ಏನೂ ತಿಳಿಯದೆ ಇದ್ದರಲ್ಲಾ. ಅದರಂತೆ ಮನುಷ್ಯ ಕುಮಾರನು ಪ್ರತ್ಯಕ್ಷನಾಗುವ ಕಾಲದಲ್ಲಿಯೂ ಇರುವುದು." (ಮತ್ತಾಯ 24 : 37-39).

ಮೇಲಿನ ವಚನದ ಈಡೇರಿಕೆಯ ಬಗ್ಗೆ "ದಿ ಕಿಂಗ್ ಈಸ್ ಕಮಿಂಗ್" ಎಂಬ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ:

"ನೋಹ ಪ್ರತ್ಯಕ್ಷನಾಗುವ ಕಾಲಕ್ಕೆ ಮುಂಚೆ ಇದ್ದ ಜನರ ಸ್ಥಿತಿಯೇ ಯೇಸು ಪ್ರತ್ಯಕ್ಷನಾಗುವ ಕಾಲದಲ್ಲೂ ಲೋಕದಲ್ಲಿ ಗೋಚರಿಸುವುದೆಂದು ಇದರಿಂದ ತಿಳಿದು ಬರುತ್ತದೆ.

"ಇಂದು ಜನರು ಮೊದಲೆಂದೂ ಇಲ್ಲದ ರೀತಿಯಲ್ಲಿ ತಿಂದೂ ಕುಡಿದೂ ಮತ್ತರಾಗಿಯೂ ಜೀವಿಸುತ್ತಿದ್ದಾರೆ. ಭಕ್ಷ್ಯ ಸಾಧನಗಳಿಂದ ತುಂಬಿದ ಗೋದಾಮುಗಳೂ ಸೂಪರ್ ಮಾರ್ಕೆಟುಗಳೂ ಭಕ್ಷ್ಯ ವಸ್ತುಗಳನ್ನು ಮಾರುವ ಅಂಗಡಿಗಳ ಮುಂದೆ ವೃದ್ಧಿಗೊಳ್ಳುತ್ತಿರುವ ಸರತಿ ಸಾಲುಗಳೂ ಇದಕ್ಕೆ ಸಾಕ್ಷಿಗಳಾಗಿವೆ.

"ಅಮೇರಿಕದಲ್ಲಿ ಧಾರಾಳ ಭಕ್ಷ್ಯ ವಸ್ತುಗಳು ನಾಶಗೊಳಿಸಲ್ಪಡುತ್ತವೆ ಹಾಗೂ ದುರುಪಯೋಗಗೊಳಿಸಲ್ಪಡುತ್ತವೆ. ಮದ್ಯಪಾನ ಇಂದು ಲೋಕದಲ್ಲಿ ಒಂದು ಮಹಾ ಸಮಸ್ಯೆಯಾಗಿದೆ. ವಿವಾಹ ಮಾಡಿ ಕೊಳ್ಳುವುದು ಸಮ್ಮತನೀಯವಾದುದು. ಆದರೆ ಇಂದು ವಿವಾಹ ಮಾಡಿ ಕೊಳ್ಳುವುದು ಮತ್ತು ವಿವಾಹ ವಿಚ್ಛೇದನ ಒಂದು ತಮಾಷೆಯಾಗಿ ಬಿಟ್ಟಿದೆ. ಹಿಂದಿನ ಕಾಲದಲ್ಲಿ ವಿವಾಹ ವಿಚ್ಛೇದನ ಮಾಡುವುದು ಲಜ್ಜಾಕರವೆಂದು ಗಣಿಸಲ್ಪಡುತ್ತಿತ್ತು. ಆದರೆ ಇಂದು ಅದೊಂದು ಫ್ಯಾಷನ್ ಆಗಿಬಿಟ್ಟಿದೆ. 1908 ರಿಂದ 1948ರ ವರೆಗೆ ವಿವಾಹ ವಿಚ್ಛೇದನ ಶೇಕಡ 1,400ಕ್ಕೆ ಏರಿದೆ. ಅಂದರೆ ಇಂದು ಅರ್ಧಾಂಶ ವಿವಾಹಗಳು ವಿಚ್ಛೇದನದಲ್ಲಿ ಕೊನೆಗಾಣುತ್ತವೆ.

"ನೋಹನ ಕಾಲದಲ್ಲುಂಟಾದ ಜಲ ಪ್ರಳಯಕ್ಕೆ ಮುಂಚಿನ ಜನರ ಸ್ಥಿತಿಯ ಬಗ್ಗೆ ಬೈಬಲ್ ಹೀಗೆ ಹೇಳುತ್ತದೆ: 'ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವುದನ್ನೂ ಅವರು ಹೃದಯದಲ್ಲಿ ಯೋಚಿಸುವುದೆಲ್ಲವು ಯಾವಾಗಲೂ ಬರೀ ಕೆಟ್ಟದ್ದಾಗಿರುವುದನ್ನೂ ಯೆಹೋವನು ಕಂಡನು' (ಆದಿಕಾಂಡ 6:5). 'ಒಳಗಿನಿಂದ ಅಂದರೆ ಮನುಷ್ಯರ ಮನಸ್ಸಿನೊಳಗಿಂದ ಸೂಳೆಗಾರಿಕೆ, ಕಳ್ಳತನ, ಕೊಲೆ, ಹಾದರ, ದ್ರವ್ಯಾಶೆ, ಕೆಡುಕುತನ, ಮೋಸ, ಬಂಡತನ, ಹೊಟ್ಟೆಕಿಚ್ಚು, ಬೈಗಳು, ಸೊಕ್ಕು, ಬುದ್ಧಿಗೇಡಿತನ ಇವೇ ಮೊದಲಾದುವುಗಳ ಕೆಟ್ಟ ಆಲೋಚನೆಗಳು ಹೊರಡುತ್ತವೆ.' (ಮಾರ್ಕ 7:21-22)

"ಬೈಬಲಿನ ಎರಡು ಒಡಂಬಡಿಕೆಗಳಲ್ಲೂ ವಿವರಿಸಲ್ಪಟ್ಟ ವಿಚಾರಗಳೆಲ್ಲಾ ನಾವು ಜೀವಿಸುತ್ತಿರುವ ಈ ಕಾಲದಲ್ಲಿ ನಾಗರಿಕ ಸಂಸ್ಕೃತಿಯೆಂಬಂತೆ ವ್ಯಾಪಿಸಿಕೊಂಡಿದೆ. ರೇಡಿಯೋ, ಟೆಲಿವಿಷನ್, ಸಿನೆಮಾ ಮುಂತಾದ ಮಾಧ್ಯಮಗಳು ಈ ಕೆಟ್ಟ ಪ್ರವಣತೆಗಳಿಗೆ ಶಕ್ತಿ ನೀಡುತ್ತಿವೆ.

"ಕಳೆದ ಐದು ವರ್ಷಗಳಲ್ಲಿ ಅಶ್ಲೀಲ ಸಾಹಿತ್ಯಗಳು ಮತ್ತು ಲೈಂಗಿಕ ಸಾಹಿತ್ಯಗಳ ಪ್ರಕಟನೆ ಶೇಕಡ 300ರಷ್ಟು ಹೆಚ್ಚಿದೆಯೆಂದು 'ಟೈಂ' ಮಾಸಪತ್ರಿಕೆ ವರದಿ ಮಾಡಿದೆ.

"ಮಾಧ್ಯಮ ವರ್ಗದ ಜನರೆಡೆಯಲ್ಲಿ ಈ ಅಶ್ಲೀಲ ಸಾಹಿತ್ಯಗಳು ಹೆಚ್ಚಾಗಿ ಮಾರಲ್ಪಡುತ್ತವೆ. ಒಂದು ವರ್ಷದಲ್ಲಿ 200 ಕೋಟಿ ಡಾಲರುಗಳ ಲೈಂಗಿಕ ಸಾಹಿತ್ಯಗಳು ಮಾರಲ್ಪಡುತ್ತವೆಯೆಂದು ಪೋಲೀಸು ಮೂಲಗಳು ಹೇಳುತ್ತವೆ. ಪ್ರತಿಯೊಂದು ವಾರದಲ್ಲೂ ಅಮೇರಿಕದಲ್ಲಿ 19ಮಿಲಿಯ ಇಂತಹ ನಿಯತಕಾಲಿಕಗಳು ಖರ್ಚಾಗುತ್ತವೆ.

"ಒಬ್ಬ ಗಂಡ ಮತ್ತು ಆತನ ಹೆಂಡತಿ ಸೇರಿ 350 ಡಾಲರ್ ಮಾತ್ರ ಭಂಡವಾಳ ಹಾಕಿ ಇಂತಹ ಒಂದು ಮಾಸಿಕದ ಪ್ರಕಟನೆ ಆರಂಭಿಸಿದರು. ಮೊದಲ ವರ್ಷದಲ್ಲೇ 6,50,000 ಡಾಲರ್ ಅವರಿಗೆ ಲಾಭ ಗಳಿಸಲಿಕ್ಕೆ ಸಾಧ್ಯವಾಯಿತೆಂಬುದರಿಂದ ಜನರ **ಸದಾಚಾರ** ಪ್ರಜ್ಞೆ ಎಷ್ಟರ ಮಟ್ಟಿಗೆ ಅಧಃಪತಿಸಿದೆಯೆಂದು ಮನಗಾಣಬಹುದು" (ಪುಟ 40–43)

"(ನೋಹನ ಕಾಲದಲ್ಲಿ) ಭೂಲೋಕದವರು ದೇವರ ದೃಷ್ಟಿಗೆ ಕೆಟ್ಟು ಹೋಗಿದ್ದರು; ಅನ್ಯಾಯವು ಲೋಕವನ್ನು ತುಂಬಿಕೊಂಡಿತ್ತು." (ಆದಿಕಾಂಡ 6:11)

"ಹೌದು ಇಂದು ನೋಹ ಪ್ರತ್ಯಕ್ಷಗೊಂಡ ಕಾಲಕ್ಕಿಂತ ಕೆಟ್ಟ ರೀತಿಯಲ್ಲಿ ಭೂಮಿ ಅನ್ಯಾಯದಿಂದ ತುಂಬಿಕೊಂಡಿದೆ. ಇಂದು ನಾವು ಓದುವ ದಿನಪತ್ರಿಕೆಗಳೂ ನಿಯತಕಾಲಿಕಗಳೂ ಟೆಲಿವಿಷನೂ ಎಲ್ಲವೂ ಈ ವಸ್ತುಸ್ಥಿತಿಯನು ಸಾರುತ್ತವೆ.

'ಜಾರರು, ವಿಗ್ರಹಾರಾಧಕರು, ವ್ಯಭಿಚಾರಿಗಳು, ವಿಟರು, ಪುರುಷಗಾಮಿಗಳು, ಕಳ್ಳರು, ಲೋಭಿಗಳು, ಕುಡಿಕರು, ಬೈಯುಕವರು, ಸುಲುಕೊಳ್ಳುವವರು ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲ.' (I ಕೊರಿಂಥದವರಿಗೆ 7:9, 10)

'ದುಷ್ಟತನವನ್ನು ನಡಿಸಿ ಸತ್ಯವನ್ನು ಅಣಗಿಸುವವರಾದ ಮನುಷ್ಯರ ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದುಷ್ಟತನದ ಮೇಲೆಯೂ ದೇವರ ಕೋಪವು ಪರಲೋಕದಿಂದ ತೋರಿಬರುತ್ತದೆ.' (ರೋಮಾಪುರದವರಿಗೆ 1:18)

"ಇವೆಲ್ಲ ಅಂತ್ಯಕಾಲದ ಸೂಚನೆಗಳೆಂದು ಬೈಬಲ್ ಹೇಳಿಕೊಡುವ ಭವಿಷ್ಯದ್ವಚನಗಳಾಗಿವೆ. ಮೇಲೆ ಪ್ರಸ್ತಾಪಿಸಲಾದ ವರ್ಗಕ್ಕೆ ಸೇರಿದ ಜನರ ಆಧಿಕ್ಯದಿಂದ ಭೂಮಿ ಇಂದು ತುಂಬಿಕೊಂಡಿದೆ. ಇಂದು ಅಮೇರಿಕದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳೂ ಅವಿವಾಹಿತ ಲೈಂಗಿಕ ಸಂಬಂಧಗಳ ಅತಿಪ್ರಸರಣದ ಕೇಂದ್ರಗಳಾಗಿವೆ. ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ಮುಖ್ಯಸ್ಥನು ಮಾಡಿದ ಒಂದು

ಪ್ರಸ್ತಾಪನೆಯಲ್ಲಿ ಕೆಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಸಾವಿರಕ್ಕಿಂತ ಮಿಕ್ಕಿ ಅವಿವಾಹಿತ ಜೋಡಿಗಳು ನೆಲೆಸುತ್ತಿವೆ ಯೆಂದು ಹೇಳಿದರು.

"ಅಮೇರಿಕದಲ್ಲಿ ಹುಟ್ಟುವ ಶೇಕಡ 21 ಮಕ್ಕಳು ಅನೈತಿಕ ಸಂಬಂಧದ ಫಲಗಳಾಗಿವೆ. ಅಲ್ಲಿಯ ಕೆಲವು ಸ್ಥಳಗಳಲ್ಲಿ 70% ಮಕ್ಕಳೂ ಜಾರ ಸಂತತಿಗಳಾಗಿವೆ. 14 ಮಿಲಿಯ (ಒಂದು ಕೋಟಿ ನಲ್ವತ್ತು ಲಕ್ಷ) ಅಮೆರಿಕನರು ವಿವಿಧ ಗುಹ್ಯರೋಗಗಳಿಂದ ಪೀಡಿತರಾಗಿದ್ದಾರೆ" (ಪುಟ 44, 45)

ಹಾಗೆ ಆಧುನಿಕ ಲೋಕದ ಧಾರ್ಮಿಕ ಅಧಃಪತನವು ಓರ್ವ ಆಧ್ಯಾತ್ಮಿಕ ಉದ್ಧಾರಕ (ವಾಗ್ದತ್ತ ಮಸೀಹ್)ರ ಆಗಮನವನ್ನು ಅವಶ್ಯಪಡುತ್ತಿದೆ. ಆದ್ದರಿಂದಲೇ ಯೇಸು ಕ್ರಿಸ್ತರ ಪುನರಾಗಮನದ ಕಾಲವು ಅತಿ ಸಮೀಪವಾಗಿದೆ ಯೆಂದು ಗ್ರಂಥಕರ್ತ ಒತ್ತಿ ಹೇಳುತ್ತಿರುವುದು.

ಬೈಬಲ್ ಒಂದೆಡೆ ಹೇಳುವುದನ್ನು ನೋಡಿರಿ :

"ಲೋಟನ ದಿವಸಗಳಲ್ಲಿ ನಡೆದ ಪ್ರಕಾರ ನಡೆಯುವುದು. ಅವರು ಊಟ ಮಾಡುತ್ತಿದ್ದರು, ಕುಡಿಯುತ್ತಿದ್ದರು, ಕೊಳ್ಳುತ್ತಿದ್ದರು, ಮಾರುತ್ತಿದ್ದರು, ನೆಡುತ್ತಿದ್ದರು, ಕಟ್ಟುತ್ತಿದ್ದರು. ಆದರೆ ಲೋಟನು ಸೊದೋಮ್ ಊರನ್ನು ಬಿಟ್ಟು ಹೋದ ದಿವಸದಲ್ಲಿ ಆಕಾಶದಿಂದ ಬೆಂಕಿಗಂಧಕಗಳು ಸುರಿದು ಅವರೆಲ್ಲರನ್ನು ನಾಶ ಮಾಡಿದವು. ಮನುಷ್ಯಕುಮಾರನು ಪ್ರತ್ಯಕ್ಷವಾಗುವ ದಿವಸದಲ್ಲಿ ಅದೇ ರೀತಿಯಾಗಿ ಇರುವುದು." (ಲೂಕ 17 : 28–30).

ಬೈಬಲಿನ ಮೇಲಿನ ವಾಕ್ಯವನ್ನು ಉದ್ಧರಿಸಿಕೊಂಡು ಗ್ರಂಥಕರ್ತರು ಲೂತ್ ಪ್ರವಾದಿಯ ಸಮುದಾಯದಲ್ಲಿ ಹಬ್ಬಿಕೊಂಡಿದ್ದ ಸಲಿಂಗರತಿಯೆಂಬ ನೀಚ ಕೃತ್ಯ ಈ ಕಾಲದಲ್ಲಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ರಾಜ್ಯಗಳಲ್ಲಿ ಎಷ್ಟು ವಿಪುಲವಾಗಿ ಹರಡಿಕೊಂಡಿದೆಯೆಂದು ಅಂಕಿ ಅಂಶಗಳ ಸಹಿತ ವಿವರಿಸಿದ್ದಾರೆ.

ಮಾತ್ರವಲ್ಲ, ಇಂದಿನ ಅಧಾರ್ಮಿಕಾವಸ್ಥೆಯ ಬಗ್ಗೆ ಹೇಳುತ್ತಾ ಅಪೊಸ್ತಲ ಪೌಲ ತಿಮೊಥೆಯನಿಗೆ ಬರೆದ ಎರಡನೆಯ ಪತ್ರಿಕೆಯನ್ನು ಹೊಸ ಒಡಂಬಡಿಕೆಯಿಂದ ಹೀಗೆ ಉದ್ಧರಿಸುತ್ತಾರೆ:

"ಕಡೇ ದಿವಸಗಳಲ್ಲಿ ಕಠಿನಕಾಲಗಳು ಬರುವುದೆಂಬುದನ್ನು ತಿಳಿದುಕೋ. ಮನುಷ್ಯರು ಸ್ವಾರ್ಥಚಿಂತಕರೂ ಹಣದಾಸೆಯವರೂ ಬಡಾಯಿ ಕೊಚ್ಚುವವರೂ, ಅಹಂಕಾರಿಗಳೂ ದೂಷಕರೂ ತಂದೆ ತಾಯಿಗಳಿಗೆ ಅವಿಧೇಯರೂ ಉಪಕಾರ ನೆನೆಸದವರೂ ದೇವಭಯವಿಲ್ಲದವರೂ ಮಮತೆಯಿಲ್ಲದವರೂ ಸಮಾಧಾನವಾಗದವರೂ ಚಾಡಿ ಹೇಳುವವರೂ ದಮೆಯಿಲ್ಲದವರೂ ಉಗ್ರತೆಯುಳ್ಳವರೂ ಒಳ್ಳೆಯದನ್ನು ಪ್ರೀತಿಸದವರೂ ದ್ರೋಹಿಗಳೂ ದುಡುಕಿನವರೂ ಉಬ್ಬಿಕೊಂಡವರೂ ದೇವರನ್ನು ಪ್ರೀತಿಸದೆ ಭೋಗಗಳನ್ನೇ ಪ್ರೀತಿಸುವವರೂ ಭಕ್ತಿಯ ವೇಷವಿದ್ದು ಅದರ ಬಲವನ್ನು ಬೇಡವೆನ್ನುವವರೂ ಆಗಿರುವರು." (2 ತಿಮೊಥೆಯನಿಗೆ 3 : 1–5).

ಮೇಲೆ ಹೇಳಿದ ಸೂಚನೆಗಳೆಲ್ಲ ಇಂದು ಕಂಡು ಬರುವುದರಿಂದ ಯೇಸು ಪುನರಾಗಮಿಸಬೇಕಾದ ಅಂತ್ಯಕಾಲ ಇದುವೇ ಎಂದು ಗ್ರಂಥಕರ್ತ ಉಚ್ಚ ಸ್ವರದಲ್ಲಿ ಘೋಷಿಸುತ್ತಾರೆ.

ಇನ್ನೊಂದೆಡೆಯಲ್ಲಿ ಬೈಬಲ್ ಹೀಗೆ ಹೇಳುತ್ತದೆ:

"ಅಂತ್ಯಕಾಲದಲ್ಲಿ ಬಹುಜನರು ಅತ್ತಿತ್ತ ತಿರುಗುವರು, ತಿಳುವಳಿಕೆಯು ಹೆಚ್ಚುವುದು" (ದಾನಿಯೇಲನು 12:4)

ಮೇಲೆ ಹೇಳಿದ ಎರಡು ಸೂಚನೆಗಳು ಈ ಕಾಲದಲ್ಲಿ ಎಷ್ಟು ಸ್ಪಷ್ಟವಾಗಿ ಗೋಚರಿಸುತ್ತಿವೆಯೆಂದು ಗ್ರಂಥಕರ್ತ ಈ ರೀತಿ ಸಮರ್ಥಿಸುತ್ತಾರೆ:

"ಜನ ನಿಬಿಡ ನಗರದ ರಸ್ತೆಬದಿಯಲ್ಲಿ ನಿಲ್ಲುವ ಯಾರಿಗೂ ಇಂದು ತ್ವರಿತಗತಿಯಲ್ಲಿ ಸಂಚರಿಸುವ ವಾಹನಗಳ ಸಾಲುಗಳನ್ನು ಕಾಣಲು ಸಾಧ್ಯ. ಅದೇ ಪ್ರಕಾರ ಯಾವಾಗಲೂ ಪ್ರಯಾಣಿಕರಿಂದ ತುಂಬಿದ ಅನೇಕ ವಿಮಾನಗಳನ್ನೂ ವಿಮಾನ ನಿಲ್ದಾಣದಲ್ಲಿ ಕಾಣಲು ಸಾಧ್ಯ. ಇಂದು ಇಲ್ಲೆಲ್ಲಾ ವಾಹನಗಳ ವೇಗಮಿತಿ ಗಂಟೆಗೆ 120 ಮೈಲು (192 ಕಿ. ಮೀ.) ಆಗಿದೆ. ಗಂಟೆಗೆ 600 ಮೈಲು ವೇಗದಲ್ಲಿ 343 ಪ್ರಯಾಣಿಕರನ್ನು ಹೊತ್ತುಕೊಂಡು ಹೋಗುವ ಜೆಟ್ ವಿಮಾನಗಳು ಇಲ್ಲಿ ಸಾಮಾನ್ಯ. ಬಾಹ್ಯಾಕಾಶ ಯಾನಿಗಳು ಕೇವಲ 80 ನಿಮಿಷಗಳಲ್ಲಿ ಒಂದು ಸರ್ತಿ ಈ ಭೂಮಿಯನ್ನು ಸುತ್ತುತ್ತಾರೆ. ಅಂದರೆ ಒಂಟೆ, ಕುದುರೆ ಇತ್ಯಾದಿಗಳನ್ನು ಬಿಟ್ಟು ನಾವು ಬಹಳ ಬಹಳ ಮುಂದೆ ಸಾಗಿದ್ದೇವೆ. ಆದ್ದರಿಂದ ನೀವು ನಿಮ್ಮ ಸೀಟು ಬೆಲ್ಟ್‌ಗಳನ್ನು ಬಿಗಿಯಾಗಿ ಕಟ್ಟಿರಿ, ಏಕೆಂದರೆ ಪ್ರಭು (ಯೇಸು) ಇಗೋ ಬರಲಿದ್ದಾರೆ" (ಪುಟ 73)

ಹೌದು, ಪವಿತ್ರ ಖುರ್‌ಆನ್ ಸಹ ಒಂಟೆ ಪರಿತ್ಯಜಿಸಲ್ಪಡುವುದು, ಅತಿವೇಗದ ವಾಹನಗಳು ನಿರ್ಮಿಸಲ್ಪಡುವುವು, ಮಾನವನು ಬಾಹ್ಯಾಕಾಶದಲ್ಲಿ ಸಂಚರಿಸುವನು ಎಂದೆಲ್ಲಾ ಅಂತ್ಯಕಾಲದ ಕುರುಹುಗಳಾಗಿ ವಿವರಿಸಿದೆ. (ಸೂರಃ ತಕ್‌ವೀರ್, ರಹ್ಮಾನ್)

ಅಂತ್ಯ ಕಾಲದಲ್ಲುಂಟಾಗುವ ವಿಜ್ಞಾನ ಪ್ರಗತಿಯ ಕುರಿತು ದಾನಿಯೇಲ್ ಪ್ರವಾದಿಯ ಭವಿಷ್ಯ ವಚನ ಹೇಗೆ ಈಡೇರಿದೆಯೆಂದು ಗ್ರಂಥಕರ್ತ ಹೀಗೆ ಹೇಳಿಕೊಡುತ್ತಾರೆ:

"ನೀವು ಆಧುನಿಕ ಯುಗದ ವಾರ್ತಾ ಮಾಧ್ಯಮಗಳ ಕುರಿತು ಚಿಂತಿಸಿ ನೋಡಿರಿ! ಪತ್ರಿಕೆಗಳು, ನಿಯತಕಾಲಿಕಗಳು, ರೇಡಿಯೋ, ಟೆಲಿವಿಷನ್ ಇತ್ಯಾದಿಗಳ ಆಧಿಕ್ಯ ಕಳೆದ 50 ವರ್ಷ ಕಾಲದ ಮಾನವ ಚರಿತ್ರೆಯಲ್ಲಿ ಕಾಣಲ ಸಾಧ್ಯವಾದ ರೀತಿಯಲ್ಲಿದೆ. ವಿದ್ಯಾಭ್ಯಾಸ ರಂಗದಲ್ಲೂ, ವೈಜ್ಞಾನಿಕ ರಂಗದಲ್ಲೂ ಉಂಟಾಗಿರುವ ಪ್ರಗತಿಯ ಬಗ್ಗೆ ಸಹ ತುಸು ಆಲೋಚಿಸಿ ನೋಡಿರಿ!

"ಎರಡನೆ ಜಾಗತಿಕ ಮಹಾಯುದ್ಧದ ಬಳಿಕ ವೈದ್ಯ ಶಾಸ್ತ್ರದಲ್ಲಿ ಉಂಟಾಗಿರುವ ಅಭಿವೃದ್ಧಿ 70%. ಎಂದರೆ ನಾವು ಇಂದು ಕಾಣುವ ಔಷಧಿಗಳಲ್ಲಿ ಶೇಕಡಾ 70ರಷ್ಟು ಎರಡನೆ ಮಹಾಯುದ್ಧದ ನಂತರ ಸಂಶೋಧಿಸಲ್ಪಟ್ಟಿದೆ.

"ಇಂದು 15,000 ವೈಜ್ಞಾನಿಕ ನಿಯತ ಕಾಲಿಕಗಳು ಲೋಕದಲ್ಲಿ ಪ್ರಕಟಿಸಲ್ಪಡುತ್ತವೆ. ಇಂದು ಕಾಲೇಜುಗಳಲ್ಲೂ ವಿಶ್ವವಿದ್ಯಾನಿಲಯಗಳಲ್ಲೂ ವಿದ್ಯೆ ಕಲಿಯುವವರ ಸಂಖ್ಯೆ ಕಳೆದ 10 ವರ್ಷಗಳಿಗಿಂತ ಇಮ್ಮಡಿಯಾಗಿದೆ.

"ಇಂದು ಕಂಪ್ಯೂಟರ್ ಲಕ್ಷಗಟ್ಟಲೆ ಜನರ ಕೆಲಸವನ್ನು ಕ್ಷಣ ಮಾತ್ರದಲ್ಲಿ ಮುಗಿಸುತ್ತದೆ." (ಪುಟ 74)

ಹಾಗೆ ಸಾಹಿತ್ಯಗಳು ವಿಪುಲವಾಗಿ ಪ್ರಚರಿಸಲ್ಪಡುವುವು ('ವ ಇದಸ್ಸುಹುಫು ನುಶಿರತ್') ಮತ್ತು ಜನರು ಒಂದುಗೂಡಿಸಲ್ಪಡುವರು ('ವ ಇದನ್ನುಫೂಸು ಸುವ್ವಿಜತ್') ಹಾಗೂ ತತ್ಸಂಬಂಧ ಇತರ ಖುರ್‌ಆನಿಕ ಭವಿಷ್ಯ ನುಡಿಗಳು ಈ ಕಾಲದಲ್ಲಿ ಕೈಗೂಡುತ್ತಿವೆಯೆಂದು ಬೈಬಲಿನ ಭವಿಷ್ಯ ನುಡಿಗಳ ಬೆಳಕಿನಲ್ಲಿ ಗ್ರಂಥಕರ್ತ ಸಮರ್ಥಿಸುತ್ತಾರೆ.

ಅಂತ್ಯಕಾಲದ ಕುರುಹುಗಳನ್ನು ವಿವರಿಸುತ್ತಾ ಬೈಬಲ್ ಹೀಗೆ ಹೇಳುತ್ತದೆ :

'ಸೂರ್ಯ ಚಂದ್ರ ನಕ್ಷತ್ರಗಳಲ್ಲಿ ಸೂಚನೆಗಳು ತೋರುವುವು. ಭೂಮಿಯ ಮೇಲೆ ಸಮುದ್ರದ ಮತ್ತು ತೆರೆಗಳ ಘೋಷದ ನಿಮಿತ್ತವಾಗಿ ಜನಗಳಿಗೆ ದಿಕ್ಕು ಕಾಣದೆ ಸಂಕಟವು ಉಂಟಾಗುವುದು." (ಲೂಕ 21:25)

ಮುಂದುವರಿಸಿ ಗ್ರಂಥಕರ್ತ ಹೇಳುತ್ತಾರೆ :

"ಇಂದು ಖಗೋಳ ಶಾಸ್ತ್ರದಲ್ಲುಂಟಾಗುತ್ತಿರುವ ಅಭೂತಪೂರ್ವ ಸಂಶೋಧನೆಗಳೂ ಪ್ರಗತಿಗಳೂ ಮೇಲಿನ ಭವಿಷ್ಯ ವಚನವನ್ನು ಸಮರ್ಥಿಸುತ್ತವೆ. 1968 ಜುಲಾಯಿ ಮಾಸದಲ್ಲಿ ಒಬ್ಬ ಬಾಹ್ಯಾಕಾಶಯಾನಿ ಚಂದ್ರನಲ್ಲಿ ಅಡಿಯಿಟ್ಟು ಒಂದು ಮಹಾದ್ಭುತವನ್ನು ಸೃಷ್ಟಿಸಿದನು.

"ಕೆಲಿಫೋರ್ನಿಯಾದಲ್ಲಿರುವ ಪಾಲೋಮರ್ ನಿರೀಕ್ಷಣಾಲಯವು ಪ್ರಕಟಿಸಿದ ಒಂದು ವರದಿಯಲ್ಲಿ ತಾವು ತೆಗೆದ ಕೆಲವು ಫೋಟೋಗ್ರಾಫ್‌ಗಳ ಬೆಳಕಿನಲ್ಲಿ 60 ಬಿಲ್ಯನ್ (6,000 ಕೋಟಿ) ಚದರ ಮೈಲು ವಿಸ್ತೀರ್ಣದಲ್ಲಿರುವ ನಕ್ಷತ್ರ ಪುಂಜಗಳು (galaxy) ಗಂಟೆಯೊಂದಕ್ಕೆ 20 ಬಿಲ್ಯನ್ (2,000 ಕೋಟಿ) ಮೈಲು ವೇಗದಲ್ಲಿ ಸಂಚರಿಸುತ್ತಿರುವುದನ್ನು ಕಾಣಲು ಸಾಧ್ಯವಾಯಿತೆಂದು ನಮೂದಿಸಲಾಗಿದೆ". (ಪುಟ 76)

ಪವಿತ್ರ ಖುರ್‌ಆನ್ ಸಹ ಅಂತ್ಯ ಕಾಲದ ಸೂಚನೆಗಳನ್ನು ವಿವರಿಸಿದ ಪೈಕಿಯಲ್ಲಿ ಪ್ರಸ್ತಾಪಿಸಲಾದ ಆಕಾಶದ ಪದರು ನೀಗಿಸಲ್ಪಡುವುದು ('ವ ಇದಸ್ಸಮಾಉ ಕುಶಿತತ್') ಎಂಬ ಭವಿಷ್ಯದ್ವಚನ ಕೂಡ ಇಂದಿನ ಖಗೋಳ ಶಾಸ್ತ್ರದ ಪ್ರಗತಿಯನ್ನು ಎತ್ತಿ ತೋರಿಸುತ್ತದೆ.

ವಾಗ್ದತ್ತ ಮಹ್‌ದೀ ಮಸೀಹರ ಕಾಲದಲ್ಲುಂಟಾಗುವ ಸೂರ್ಯ ಚಂದ್ರ ಗ್ರಹಣಗಳ ಕುರಿತಾದ ಅತಿ ಮಹತ್ತರ ಸೂಚನೆಯನ್ನು ಗ್ರಂಥಕರ್ತ ತಿಳಿಯದಿರಬಹುದು. ಪವಿತ್ರ ಖುರ್‌ಆನ್, ಹದೀಸ್ ಮತ್ತು ಬೈಬಲ್ ವಿವರಿಸಿಕೊಡುವ ಈ ಅತಿ ಮಹತ್ವದ ಭವಿಷ್ಯತ್ ಸೂಚನೆ 1894 ಎಪ್ರಿಲ್ ಮಾಸದಲ್ಲಿ ಭವಿಷ್ಯ ನುಡಿಗಳಲ್ಲಿ ಸೂಚಿಸಲಾದ ದಿನಗಳಲ್ಲೇ ಸೂರ್ಯ-ಚಂದ್ರ ಗ್ರಹಣಗಳು ಸಂಭವಿಸಿ ಪೂರ್ತಿಗೊಂಡಿದೆ.

ಗ್ರಂಥಕರ್ತ ಮುಂದುವರಿಸುತ್ತಾರೆ:

"ಅದೇ ಪ್ರಕಾರವೇ ಇತ್ತೀಚೆಗಿನ ಕಾಲದಲ್ಲುಂಟಾಗುತ್ತಿರುವ ಅಸಾಧಾರಣವೂ ಅತಿ ಭಯಂಕರವೂ ಆದ ಬಿರುಗಾಳಿಗಳೂ ಜಲಪ್ರಳಯಗಳೂ ಅವುಗಳಿಂದುಂಟಾದ ನಾಶ

ನಷ್ಟಗಳೂ ಲೋಕವನ್ನು ಭಯಚಕಿತಗೊಳಿಸುತ್ತಿವೆ. ಜಗತ್ತಿನ ನಾನಾ ಕಡೆಗಳಲ್ಲಿ ಅವಿಶ್ವಸನೀಯ ನಾಶ ನಷ್ಟಗಳು ಬಿರುಗಾಳಿಗಳಿಂದಲೂ ಸಮುದ್ರದಲ್ಲಿ ಉಂಟಾಗುವ ಬೋರ್ಗರೆತಗಳಿಂದಲೂ ಉಂಟಾಗುತ್ತಿವೆ. ಅಟ್ಲಾಂಟಿಕ್ ಸಮುದ್ರ ತೀರಗಳಲ್ಲೂ ಮೆಕ್ಸಿಕೋ ಸಮುದ್ರ ದಡಗಳಲ್ಲೂ ಸಂಭವಿಸಿರುವ ನಾಶನಷ್ಟಗಳಿಂದ ಕೋಟಿಗಟ್ಟಲೆ ಡಾಲರುಗಳ ನಷ್ಟ ಉಂಟಾಗಿದೆ.

"1970 ನವೆಂಬರ್‌ನಲ್ಲಿ ಪೂರ್ವ ಪಾಕಿಸ್ತಾನ (ಬಂಗ್ಲಾದೇಶ)ದಲ್ಲಿ ಬೀಸಿದ ಸುಂಟರ ಗಾಳಿಯಿಂದ ಎರಡು ಲಕ್ಷ ಮಂದಿ ನಾಶವಾದರು. 70 ಲಕ್ಷ ಜನರ ಸಾವಿಗೆ ಕಾರಣವಾದ 1887ರಲ್ಲಿ ಚೀನದಲ್ಲಿ ಸಂಭವಿಸಿದ yellow river flood ನ ಬಳಿಕ ಅತಿ ದೊಡ್ಡ ವಿಪತ್ತಾಗಿತ್ತು ಇದು. ಇವರ ನಂತರ ಸಹ ಈ ವಿಪತ್ತುಗಳ ಶೃಖಂಲೆ ಮುಂದುವರಿದುಕೊಂಡು ಬಂದಿದೆ." (ಪುಟ 77, 78)

ಹಾಗೆ ಯೇಸುಕ್ರಿಸ್ತರ ಪುನರಾಗಮನದ ಕುರಿತು ಬೈಬಲಿನ ಹಳೆಯ ಒಡಂಬಡಿಕೆಯಲ್ಲೂ ಹೊಸ ಒಡಂಬಡಿಕೆಯಲ್ಲೂ ಇರುವ ಭವಿಷ್ಯ ನುಡಿಗಳು ಈ ಕಾಲದಲ್ಲಿ ಸಂಪೂರ್ಣವಾಗಿ ಈಡೇರಿವೆಯೆಂದು ಗ್ರಂಥಕರ್ತ ಕಾರ್ಯಕಾರಣ ಸಹಿತ ನಂಬಲರ್ಹವಾದ ಪುರಾವೆಗಳನ್ನು ಉದ್ಧರಿಸುತ್ತಾ ಸಾಬೀತು ಪಡಿಸುವುದರೊಂದಿಗೆ ಆ ಮಹಾಪುರುಷನನ್ನು ಸ್ವಾಗತಿಸಲಿಕ್ಕೆ ಟೊಂಕಕಟ್ಟಿ ಸಿದ್ಧರಾಗಿ ನಿಲ್ಲಬೇಕೆಂದು ಕರೆಯಿತ್ತಿದ್ದಾರೆ.

ವಾಗ್ದತ್ತ ಮಸ್ಸೆಯರ ಪುನರಾಗಮನ ಕಾಲದ ಅತಿ ಮಹತ್ತರವಾದ ಸೂಚನೆಗಳನ್ನು ವಿವರಿಸುತ್ತಾ ಗ್ರಂಥಕರ್ತರು The Rise of Russia and the king of North ಎಂಬ ಶೀರ್ಷಿಕೆಯಲ್ಲಿ ಹೀಗೆ ಬರೆಯುತ್ತಾರೆ:

"ಆಕರ್ಷಕವಾದ ಪ್ರಸ್ತುತ ವಿಷಯದ ಬಗ್ಗೆ ವಿಶದವಾಗಿ ಪ್ರತಿಪಾದಿಸಲಿಕ್ಕೆ ಈ ಗ್ರಂಥದಲ್ಲಿ ಸ್ಥಳಾವಕಾಶವಿಲ್ಲ. ಹಳೆಯ ಒಡಂಬಡಿಕೆಯ ಯೆಹೆಜ್ಕೇಲ ಪ್ರವಾದಿಯ ಪುಸ್ತಕದ 38, 39 ಅಧ್ಯಾಯಗಳನ್ನೂ ದಾನಿಯೇಲ ಪ್ರವಾದಿಯ ಪುಸ್ತಕದ 11ನೇ ಅಧ್ಯಾಯವನ್ನೂ ಗಮನವಿಟ್ಟು ಓದುವವರಿಗೆ ತದ್ವಿಷಯದಲ್ಲಿ ಹಲವು ವಾಸ್ತವಾಂಶಗಳನ್ನು ಮನಗಾಣಲು ಸಾಧ್ಯ. ದಾನಿಯೇಲ 11ನೇ ಅಧ್ಯಾಯದಲ್ಲಿ ವಿವರಿಸಿರುವ ಉತ್ತರ ದಿಕ್ಕಿನ ರಾಜ ಎಂದರೆ ಸಿರಿಯಾ ಹಾಗೂ ದಕ್ಷಿಣ ದಿಕ್ಕಿನ ರಾಜ ಎಂದರೆ ಈಜಿಪ್ಟ್.

ಅದೇ ಪ್ರಕಾರ ಉತ್ತರರಾಜ ಎಂಬುದಕ್ಕೆ ರಶ್ಯನ್ ಶಕ್ತಿ ಹಾಗೂ ದಕ್ಷಿಣರಾಜ ಎಂಬುದಕ್ಕೆ ಅಮೇರಿಕನ್ ಬ್ಲೋಕ್ ಎಂದರ್ಥ.

"ಅದೇ ಪ್ರಕಾರವೇ ಯೆಹೆಜ್ಕೇಲ ಪುಸ್ತಕದ 39ನೇ ಅಧ್ಯಾಯದಲ್ಲಿ ಪ್ರತಿಪಾದಿಸಿರುವ ಗೋಗ್ ಎಂಬುದರ ಅರ್ಥ ರಶ್ಯಾ ಎಂಬುದಾಗಿ ಪ್ರವಾದನೆಗಳ ಕುರಿತು ಅಧ್ಯಯನ ಮಾಡುವವರ ಅಭಿಮತ. ಲೋಕದಲ್ಲಿ ರಶ್ಯಾದ ಹೆಸರು ಕೂಡ ಕೇಳಿರದ ಒಂದು ಕಾಲದಲ್ಲಿ ಪ್ರಸ್ತುತ ಪ್ರವಾದನೆ ಉಂಟಾಗಿತ್ತೆಂಬುದು ಇಲ್ಲಿ ಉಲ್ಲೇಖಾರ್ಹ.

"ಇಂದು ಲೋಕವು ಮೇಲೆ ಹೇಳಿದ ಎರಡು ಶಕ್ತಿಗಳ ಅಧೀನದಲ್ಲಿ ಎರಡು ಗುಂಪುಗಳಾಗಿ ವಿಭಾಗಿಸಲ್ಪಟ್ಟು ಆ ಎರಡು ಶಕ್ತಿಗಳ ಮಧ್ಯೆ ಶುಶಕ್ತವಾದ ಘರ್ಷಣೆಗಳು ಪ್ರತ್ಯಕ್ಷವಾಗಿ ಯಾ ಪರೋಕ್ಷವಾಗಿ ನಡೆಯುತ್ತಿರುವುದು ವಾಸ್ತವವಷ್ಟೆ. ಪುಣ್ಯ ಸ್ಥಳವಾದ ಪೆಲೆಸ್ತೀನದ ಮೇಲೆ ರಶ್ಯಾಕ್ಕೆ ಕಣ್ಣಿದೆ. ಇತ್ತೀಚೆಗಷ್ಟೆ ನಡೆದ ಯುದ್ಧದ ಬಳಿಕ ಪೆಲೆಸ್ತೀನನ್ನು ಕೈವಶ ಪಡಿಸಬೇಕೆಂಬ ಅತ್ಯಾಶೆ ರಶ್ಯಾಕ್ಕಿದೆ.

"ಯೆಹೆಜ್ಕೇಲ್ ಹೇಳುತ್ತಾರೆ: 'ನರಪುತ್ರನೇ, ನೀನು ಗೋಗನಿಗೆ ವಿರುದ್ಧವಾಗಿ ಈ ದೈವೋಕ್ತಿಯನ್ನು ನುಡಿ– ಕರ್ತನಾದ ಯೆಹೋವನು ಇಂತೆನ್ನುತ್ತಾನೆ– ರೋಷ್* ಮೆಷೆಕ್,* ತೂಬಲ್'* ಜನಾಂಗಗಳ ಪ್ರಭುವಾದ ಗೋಗನೇ, ಆಹಾ, ನಾನು ನಿನಗೆ ವಿರುದ್ಧವಾಗಿ ನಿನ್ನನ್ನು ತಿರುಗಿಸಿ ಮುಂದರಿಸಿ ಉತ್ತರ ದಿಕ್ಕಿನ ಕಟ್ಟಕಡೆಯಿಂದ ಬರಮಾಡಿ ಪರ್ವತಗಳ ಮೇಲೆ ನುಗ್ಗಿಸುವೆನು ............ ನೀನೂ ನಿನ್ನ ಎಲ್ಲಾ ಗುಮ್ಮಿಗಳೂ ನಿನ್ನೊಂದಿಗಿರುವ ಜನಾಂಗಗಳೂ ಇಸ್ರಾಯೇಲಿನ ಪರ್ವತಗಳಲ್ಲಿ ಬಿದ್ದು ಬಿಡುವಿರಿ ............ಆ ದಿನದಲ್ಲಿ ನಾನು ಇಸ್ರಾಯೇಲಿನೊಳಗೆ ............ಗೋಗನಿಗೆ ಹೂಳುವ ಸ್ಥಳವನ್ನಾಗಿ ಏರ್ಪಡಿಸುವೆನು' (ಯೆಹೆಜ್ಕೇಲನು 39: 1–11)

"ಯಾವುದೇ ವಿವರಣೆ ಅವಶ್ಯವಿಲ್ಲದ ರೀತಿಯಲ್ಲಿ ಮೇಲಿನ ಭವಿಷ್ಯ ನುಡಿಗಳು ನಿಜವಾದುದಾಗಿ ಜಗತ್ತಿನಲ್ಲಿ ನಡೆಯುತ್ತಿರುವ ಸಂಭವಗಳನ್ನು ವೀಕ್ಷಿಸುವ ಯಾರಿಗೂ ಮನಗಾಣಲು ಸಾಧ್ಯ." (ಪುಟ 91)

---

* ರೋಷ್ – ರಶ್ಯಾ, ಮೆಷೆಕ್ – ಮೋಸ್ಕೊ

ತೂಬಲ್ – ತುಬಲ್‌ಸ್ಕಿ (ರಶ್ಯಾದ ಒಂದು ಪಟ್ಟಣ.)

— ಲೇಖಕ.

ಗ್ರಂಥಕರ್ತ ರಶ್ಯಾ ಮತ್ತು ಅಮೇರಿಕಾದ ಆವಿರ್ಭಾವದ ಕುರಿತು ಹಾಗೂ ಪೆಲಸ್ತೀನ್ ಸಮಸ್ಯೆಯ ಬಗ್ಗೆ ವಿಶದವಾಗಿ ಹೇಳುತ್ತಾ ಪೆಲಸ್ತೀನ್ ಕೇಂದ್ರವಾಗಿ ಸಂಭವಿಸಲಿರುವ ಒಂದು ಮಹಾ ಯುದ್ಧದ ಕುರಿತು ಬೈಬಲ್ ವಚನಗಳನ್ನು ಉದ್ಧರಿಸಿ ಹೀಗೆ ಬರೆಯುತ್ತಾರೆ :

"ಬೈಬಲಿನಲ್ಲಿ ಹಲವೆಡೆಗಳಲ್ಲಿ ವಿವರಿಸಿದ ರೀತಿಯಲ್ಲಿ ಇಂದು ಅತಿ ಭಯಾನಕವಾದ ಒಂದು ಯುದ್ಧಕ್ಕೆ ರಂಗ ಸಜ್ಜೀಕರಿಸಲ್ಪಟ್ಟಿದೆ. ಇಂದು ಮನುಷ್ಯನು ಲೋಕಶಾಂತಿಯ ಕುರಿತು ಮಾತನಾಡುತ್ತಿರುವವನಾದರೂ ಅವನು ಒಂದು ಜಾಗತಿಕ ಯುದ್ಧದ ಸನ್ನಾಹಗಳಲ್ಲಿ ನಿರತನಾಗಿದ್ದಾನೆ.

"ಎಲ್ಲಾ ಜನಾಂಗಗಳನ್ನೂ ಯೆರೂಸಲೇಮಿಗೆ ವಿರುದ್ಧವಾಗಿ ತಾನು ಒಂದುಗೂಡಿಸುವೆನೆಂದು ಹೇಳುತ್ತಾ ಕರ್ತನಾದ ದೇವರು ಹೀಗೆ ನುಡಿಯುತ್ತಾನೆ: 'ನಾನು ಸಕಲ ಜನಾಂಗಗಳನ್ನು ಯೆರೂಸಲೇಮಿಗೆ ವಿರುದ್ಧವಾಗಿ ಕೂಡಿಸುವೆನು' (ಜೆಕರ್ಯ 14:2) ಹಾಗೂ 'ನಾನು ಯೆಹೂದದ ಮತ್ತು ಯೆರೂಸಲೇಮಿನ ದುರವಸ್ಥೆಯನ್ನು ತಪ್ಪಿಸುವ ಕಾಲದಲ್ಲಿ ನಾನು ಸಕಲ ಜನಾಂಗಗಳನ್ನು ಕೂಡಿಸಿ ಯೆಹೋಷಾಫಾಟಿನ ತಗ್ಗಿಗೆ ಬರಮಾಡಿ ಅಲ್ಲಿ ನನ್ನ ಜನರಿಗಾಗಿ, ನನ್ನ ಸ್ವಾಸ್ತ್ಯವಾದ ಇಸ್ರಾಯೇಲ್ ಪ್ರಜೆಗೋಸ್ಕರ ಅವುಗಳೊಂದಿಗೆ ವಿವಾದ ಮಾಡುವೆನು.' (ಯೋವೇಲ 3 : 1–2) ಎಂದು ದೇವರು ಮುಂತಿಳಿಸಿದ್ದಾನೆಂದು ಬೈಬಲ್ ಹೇಳುತ್ತದೆ. ಭೂಮಿಯಲ್ಲಿರುವ ರಾಷ್ಟ್ರ ನಾಯಕರು ದೇವರಿಗೂ ದೇವ ಪುತ್ರನಿಗೂ ವಿರುದ್ಧವಾಗಿ ಗೂಢಾಲೋಚನೆ ನಡೆಸುವರು. ಅವರು ತಮ್ಮ ಅಣ್ವಾಯುಧ ಮತ್ತು ರಾಕೇಟುಗಳ ಮೂಲಕ ದೇವರನ್ನೂ ದೇವ ಪುತ್ರನನ್ನೂ ಆಕಾಶದಲ್ಲೇ ನಿರ್ನಾಮ ಮಾಡಲು ಒಟ್ಟು ಸೇರಿ ಪ್ರಯತ್ನಿಸುವರು. ಇವರ ಈ ಕುಕೃತ್ಯಗಳನ್ನು ಕಂಡು ದೇವರು ಸ್ವರ್ಗದಿಂದ ಪರಿಹಾಸ್ಯದ್ಯೋತಕವಾಗಿ ನಗುತ್ತಿರಬಹುದು. (ಹೋ – ದೇವರ ಈ ನಗು ಎಷ್ಟು ಭಯಂಕರವಾಗಿರಬಹುದು !! )

"ದೇವರು ಹೇಳುತ್ತಾನೆ: 'ಯಹೋವನಿಗೂ ಆತನು ಅಭಿಷೇಕಿಸಿದವನಿಗೂ ಭೂಪತಿಗಳು ಸನ್ನದ್ಧರಾಗಿ ನಿಂತಿದ್ದಾರೆ, ಅಧಿಕಾರಿಗಳು ಒಟ್ಟಾಗಿ ಸೇರಿ ಆಲೋಚಿಸುತ್ತಿದ್ದಾರೆ. ನಮಗೆ ಅವರು ಹಾಕಿದ ಬಂಧನಗಳನ್ನು ಕಿತ್ತು ಬೇಡಿಗಳನ್ನು ಮುಂದು ಬಿಸಾಡೋಣ ಎಂದು ಮಾತಾಡಿಕೊಳ್ಳುತ್ತಿರಲ್ಲಾ. ಪರಲೋಕದಲ್ಲಿ ಆಸನಾರೂಢನಾಗಿರುವಾತನು ಅದಕ್ಕೆ ನಗುವನು; ಕರ್ತನು ಅವರನ್ನು ಪರಿಹಾಸ್ಯ ಮಾಡುವನು. ಅನಂತರ ಆತನು ಸಿಟ್ಟಾಗಿ – ನಾನು ನೇಮಿಸಿದ ಅರಸನನ್ನು ಚೀಯೋನೆಂಬ ನನ್ನ ಪರಿಶುದ್ಧ ಪರ್ವತದಲ್ಲಿಯೇ ಸ್ಥಾಪಿಸಿದ್ದಾಯಿತು ಎಂದು ಹೇಳಿ ಕೋಪಾವೇಶದಿಂದ ಅವರನ್ನು ಕಳವಳಗೊಳಿಸುವನು' (ಕೀರ್ತನೆಗಳು 2 : 2–6 )

"ಆಗ 'ನಿಮ್ಮನ್ನು ಸಂಕಟಪಡಿಸುವವರಿಗೆ ಪ್ರತಿಯಾಗಿ ಸಂಕಟವನ್ನೂ ಸಂಕಟಪಡುವವರಾದ ನಿಮಗೆ ನಮ್ಮೊಡನೆ ಉಪಶಮನವನ್ನೂ ಕೊಡುವುದು ದೇವರ ಎಣಿಕೆಯಲ್ಲಿ ನ್ಯಾಯವಾಗಿದೆಯಷ್ಟೆ. ಯಾವಾಗ ಕೊಡುವನೆಂದರೆ ಯೇಸು ಕರ್ತನು ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರಿಂದ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ ಅದನ್ನು ಕೊಡುವನು. ಆಗ ನಮ್ಮ ಕರ್ತನಾದ ಯೇಸುವು ದೇವರನ್ನರಿಯದವರಿಗೂ ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತೀಕಾರ ಸಲ್ಲಿಸುವನು' (2 ಥೆಲೊನೀಕದವರಿಗೆ 1 : 6–8). ಮೇಲಿನ ಭವಿಷ್ಯದ್ವಚನಗಳು ನಿಜವಾಗುವ ಮಾರ್ಗಗಳು ಇಂದು ಸಜ್ಜೀಕೃತವಾಗಿವೆ". (ಪುಟ 95, 96)

ಗ್ರಂಥಕರ್ತ ಮುಂದುವರಿಯುತ್ತಾರೆ :

"ಯೆಹೆಜ್ಕೇಲ 38, 39 ಅಧ್ಯಾಯಗಳಿಂದ ರಶ್ಯಾಕ್ಕೂ ಇಸ್ರಾಯೇಲಿಗೂ ಮಧ್ಯೆ ಒಂದು ಮಹಾಯುದ್ಧ ಸಂಭವಿಸುವುದೆಂದೂ ಅದರಲ್ಲಿ ಇಸ್ರಾಯೇಲಿಗೆ ರಶ್ಯಾದ ವಿರುದ್ಧ ಮಹಾವಿಜಯ ದೊರಕುವುದೆಂದೂ ಕಾಣುತ್ತದೆ. ರಶ್ಯಾ ದೇವರಿಗೆ ವಿರುದ್ಧವಾದ ಕಾರಣದಿಂದ ದೇವರು ಸಹ ರಶ್ಯಾಕ್ಕೆ ವಿರುದ್ಧವಾಗಿರಬಹುದು. (ಯೆಹೆಜ್ಕೇಲ 39 : 8–10 ನೋಡಿರಿ)."

ಇಂದಿನ ಯುದ್ಧ ಸನ್ನಾಹ ವಾತಾವರಣವನ್ನೂ ನ್ಯೂಕ್ಲಿಯರ್ ಆಯುಧ ಶೇಖರಣೆಯ ಪೈಪೋಟಿಗಳನ್ನೂ ವಿವರಿಸುತ್ತಾ ಗ್ರಂಥಕರ್ತ ಬೈಬಲಿನ ಹೊಸ ಒಡಂಬಡಿಕೆಯ ಒಂದು ಅಧ್ಯಾಯದ ಕಡೆಗೆ ಬೆಳಕು ಬೀರುತ್ತಾರೆ:

"ಅಪೋಸ್ತಲ ಪೇತ್ರ ತನ್ನ ಎರಡನೇ ಪತ್ರಿಕೆಯಲ್ಲಿ ಹೀಗೆ ಬರೆಯುತ್ತಾರೆ: 'ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ. ಆ ದಿನದಲ್ಲಿ ಆಕಾಶ ಮಂಡಲವು ಮಹಾ ಘೋಷದಿಂದ ಇಲ್ಲದೆ ಹೋಗುವುದು. ಸೂರ್ಯ ಚಂದ್ರ

ನಕ್ಷತ್ರಗಳು ಉರಿದು ಲಯವಾಗಿ ಹೋಗುವುವು. ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟುಹೋಗುವುವು. ಇವೆಲ್ಲವುಗಳು ಹೀಗೆ ಲಯವಾಗಿ ಹೋಗುವುದರಿಂದ ನೀವು ದೇವರ ದಿನದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ ಹಾರೈಸುತ್ತಾ ಎಷ್ಟೋ ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿರಬೇಕಲ್ಲಾ; ಆ ದಿನದಲ್ಲಿ ಆಕಾಶ ಮಂಡಲವು ಬೆಂಕಿ ಹತ್ತಿ ಲಯವಾಗಿ ಹೋಗುವುದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಕರಗಿ ಹೋಗುವುವು. ಆದರೆ ನಾವು ದೇವರ ವಾಗ್ದಾನವನ್ನು ನಂಬಿ ನೂತನಾಕಾಶ ಮಂಡಲವನ್ನೂ ನೂತನ ಭೂಮಂಡಲವನ್ನೂ ಎದುರು ನೋಡುತ್ತಾ ಇದ್ದೇವೆ.'

(2 ಪೇತ್ರನು 3 : 10–13)

"ಮೇಲಿನ ಭವಿಷ್ಯದ್ವಚನ ಬಹಳ ಸ್ಪಷ್ಟವಾಗಿ ಮಗದೊಮ್ಮೆ ನಿಜವಾಗಿದೆ. 1945 ಆಗಸ್ಟ್ 6ರಂದು ಜಪಾನಿನ ಹಿರೋಶಿಮಾದಲ್ಲಿ ಪ್ರಥಮವಾಗಿ ಅಣುಬಾಂಬ್ ಪ್ರಯೋಗಿಸಲ್ಪಟ್ಟಿತು. ಮೊದಲ ಸ್ಫೋಟದಿಂದಲೇ 80,000 ಮಂದಿ ಮೃತ್ಯುವಶರಾದರು. ನಂತರ ಹನ್ನೆರಡು ಮಾಸಗಳಲ್ಲಿ ಆ ಸ್ಫೋಟನದ ಪರಿಣಾಮವಾಗಿ 1,20,000 (ಒಟ್ಟು 2 ಲಕ್ಷ ಮಂದಿ) ಮೃತರಾದರು. ಆ ಬಳಿಕ ಅಲ್ಲಿ ಜನಿಸುವ ಐದು ಮಕ್ಕಳಲ್ಲಿ ಒಂದರಂತೆ ಹುಟ್ಟುವಾಗಲೇ ಸಾಯುತ್ತದೆ ಅಥವಾ ಅಂಗವಿಕಲತೆಯನ್ನು ಪಡೆಯುತ್ತದೆ. ಬಾಂಬ್ ಹಾಕಿದಾಗ ಹಿರೋಶಿಮಾ ಬಂದರಿನಲ್ಲಿದ್ದ 110 ಹಡುಗುಗಳು ನುಚ್ಚು ನೂರಾದುವು.

"ಇದರ ನಂತರ ನಶೀಕರಣಾಯುಧಗಳ ನಿರ್ಮಾಣದಲ್ಲಿ ಜಗತ್ತಿನ ರಾಷ್ಟ್ರಗಳು ಎಷ್ಟರ ಮಟ್ಟಿಗೆ ಪ್ರಗತಿ ಸಾಧಿಸಿವೆಯೆಂದು ತುಸು ಪರ್ಯಾಲೋಚಿಸೋಣ.

"ಹಿರೋಶಿಮಾವನ್ನು ನಾಶಪಡಿಸಿದ ಅಣುಬಾಂಬಿನ ಶಕ್ತಿ 25 K. T. ಆಗಿತ್ತು. ಒಂದು K. T. (ಕಿಲೋ ಟನ್) ಸಾವಿರ ಟನ್ ಶಕ್ತಿಯುಳ್ಳದ್ದಾಗಿದೆ. ಒಂದು ಮೆಗಾ ಟನ್ (M. T.) 10 ಲಕ್ಷ ಟನ್ ಶಕ್ತಿಯುಳ್ಳದ್ದು. 1960ರಲ್ಲಿ ರಶ್ಯಾ ಪರೀಕ್ಷಿಸಿದ ಹೈಡ್ರೋಜನ್ ಬಾಂಬಿನ ಶಕ್ತಿ 100 M. T. (ಹತ್ತು ಕೋಟಿ ಟನ್) ಆಗಿದೆ–ಹಿರೋಶಿಮಾದಲ್ಲಿ ಹಾಕಿದ ಬಾಂಬಿಗಿಂತ 5,000 ಪಾಲು ಶಕ್ತಿಯುಳ್ಳದ್ದು. ಇಂದಿನ ವಿಜ್ಞಾನಿಗಳು 10,000, 20,000 ಮಾತ್ರವಲ್ಲ ಹತ್ತು ಲಕ್ಷ M.T. ಶಕ್ತಿಯಿರುವ ಬಾಂಬುಗಳನ್ನು ನಿರ್ಮಿಸುವುದರ ಬಗ್ಗೆ ತೀವ್ರವಾಗಿ ಚಿಂತಿಸುತ್ತಿದ್ದಾರೆ. ಎರಡನೇ ಜಾಗತಿಕ ಮಹಾಯುದ್ಧದಲ್ಲಿ ಒಟ್ಟು ಉಪಯೋಗಿಸಲ್ಪಟ್ಟ ಸ್ಫೋಟಕಗಳ ಶಕ್ತಿ 3 M. T. ಮಾತ್ರವಾಗಿತ್ತು. 100 M. T. ಬಾಂಬಿನಲ್ಲಿರುವ ಸಿಡಿಮದ್ದಿ (Gunpowder) ನಿಂದ ಹಿರೋಶಿಮಾದಲ್ಲಿ ಹಾಕಿದ 25 K. T. ಬಾಂಬಿನಂತಹದು ಪ್ರತಿದಿನ ಒಂದೊಂದರಂತೆ ನಿರಂತರವಾಗಿ 13 ವರ್ಷಕಾಲ ಹಾಕಲು ಸಾಕಾಗುತ್ತದೆ.

"1945 ರಿಂದ 1970ರ ವರೆಗೆ ಇಂತಹ ಮಾರಕಾಯುಧಗಳ ಪರೀಕ್ಷಣೆಗಳನ್ನು ಅಮೇರಿಕ 515 ಸಲ, ರಶ್ಯಾ 210 ಸಲ, ಫ್ರಾನ್ಸ್ 46 ಸಲ, ಬ್ರಿಟನ್ 21 ಸಲ, ಚೀನಾ 11 ಸಲ ನಡೆಸಿವೆ.

"ಹೌದು ಬೈಬಲ್ ಭವಿಷ್ಯ ನುಡಿದಿದೆ: ಭೂಮಿಯು ಒಡೆದೇ ಇದೆ, ಬಿರಿದೇ ಬಿರಿದಿದೆ, ಕದಲಿಯೇ ಹೋಗಿದೆ." (ಯೆಶಾಯ 24 : 19)

"ಯೇಸು ಹೀಗೆ ಭವಿಷ್ಯ ನುಡಿದಿದ್ದಾರೆ: ಆ ದಿನಗಳಲ್ಲಿ ಸಂಕಟ ತೀರಿದ ಮೇಲೆ ಸೂರ್ಯನು ಕತ್ತಲಾಗಿ ಹೋಗುವನು; ಚಂದ್ರನು ಬೆಳಕು ಕೊಡದೆ ಇರುವನು; ನಕ್ಷತ್ರಗಳು ಆಕಾಶದಿಂದ ಉದುರುತ್ತಿರುವುವು; ಆಕಾಶದಲ್ಲಿರುವ ಶಕ್ತಿಗಳು ಕದಲುವುವು" (ಮಾರ್ಕ 13–24, 25).

"ಯೇಸು ಮತ್ತೂ ಹೇಳುತ್ತಾರೆ: 'ಇದೆಲ್ಲಾ ಆಗುವ ತನಕ ಈ ಸಂತತಿಯು ಅಳಿದು ಹೋಗುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಭೂಮ್ಯಾಕಾಶಗಳು ಅಳಿದು ಹೋಗುವುವು, ಆದರೆ ನನ್ನ ಈ ಮಾತುಗಳು ಅಳಿದು ಹೋಗುವುದೇ ಇಲ್ಲ.' (ಮತ್ತಾಯ 24 : 34, 35)" (ದಿ ಕಿಂಗ್ ಈಸ್ ಕಮಿಂಗ್; ಪುಟ 102–105).

ಹಾಗೆ ಗ್ರಂಥಕರ್ತರು ಯೇಸುಕ್ರಿಸ್ತರ ಪುನರಾಗಮನ ಕಾಲದಲ್ಲುಂಟಾಗುವುದೆಂದು ಮುಂತಿಳಿಸಿದ ಎಲ್ಲಾ ಸೂಚನೆಗಳೂ ನಿಜವಾಗಿವೆಯೆಂದು ಶಕ್ತಿಯುತವಾಗಿ ರುಜು ಗೊಳಿಸಿದ ಬಳಿಕ ನಮ್ಮೊಡನೆ ಕೇಳುತ್ತಾರೆ: ಎಲ್ಲಾ ಸೂಚನೆಗಳೂ ಕೈಗೂಡಿರುವಾಗ ಯೇಸು ಬರಬೇಕಾದುದು ಇನ್ನು ಯಾವಾಗ ?

ಮೇಲಿನ ಪ್ರಶ್ನೆಗೆ ಅವರೇ ಉತ್ತರ ಹೇಳುತ್ತಾರೆ: "ಖಂಡಿತವಾಗಿಯೂ ಬೇಗನೇ ಯಾವಾಗಲಾದರೂ ಬರು

ವರು. ಇದೋ ಮದುಮಗನು ಬರಲಿಕ್ಕಾಯಿತು. ಅವರನ್ನು ಸ್ವಾಗತಿಸಲಿಕ್ಕೆ ಸಿದ್ಧರಾಗಿರಿ." (ಪುಟ 106).

ಇಂತಹ ಸಿದ್ಧತೆಗಳು ಸುಮಾರು ಒಂದು ನೂರು ವರ್ಷ ಕಾಲದಿಂದ ಕ್ರೈಸ್ತ ನೇಪಥ್ಯದಲ್ಲಿ ನಡೆಯುತ್ತಿವೆ. ಆದರೆ ದೈವಿಕ ವಚನಗಳ ಬೆಳಕಿನಲ್ಲಿ ಆಗಮಿಸಬೇಕಾದ ವಾಗ್ದತ್ತ ಮಸೀಹ್ (ಮೆಸ್ಸೈಯಾ) ಬರಬೇಕಾದ ಕಾಲದಲ್ಲೇ ಬಂದಿರುವರು. ನೀತಿಯಿಂದ ಕೂಡಿರುವ ಹೊಸ ಆಕಾಶಕ್ಕೂ ಹೊಸ ಭೂಮಿಗೂ ಆ ಪುಣ್ಯ ಪುರುಷ ಬಂದು ನೆಲಗಟ್ಟು ರಚಿಸಿದ್ದಾರೆ. ಅವರೇ ಈ ಕಾಲದಲ್ಲಿ ತಾನು ವಾಗ್ದತ್ತ ಮಸೀಹ್ ಎಂದು ವಾದಿಸಿರುವ ಹಝ್ರತ್ ಅಹ್ಮದ್.

ಅವರು ತನ್ನ ವಾದದ ಕುರಿತು ಸರ್ವಶಕ್ತನಾದ ದೇವರ ನಾಮದಲ್ಲಿ ಆಣೆ ಹಾಕಿ ಹೀಗೆ ಹೇಳುತ್ತಾರೆ:

"ದೇವರ ಹೆಸರಿನಲ್ಲಿ ನಾನು ಆಣೆ ಹಾಕಿ ಹೇಳುತ್ತೇನೆ; ಅವನೇ ನನ್ನನ್ನು ವಾಗ್ದತ್ತ ಮಸೀಹಾಗಿ ನಿಯೋಜಿಸಿದ್ದು. ಅವನ ಹೆಸರಿನಲ್ಲಿ ಮಿಥ್ಯಾವಾದ ಮಾಡುವುದು ಶಾಪಗ್ರಸ್ತರ ಕೆಲಸವಾಗಿದೆ." (ಏಕ್ ಗಲ್ತಿ ಕಾ ಇಸಾಲಾ ಪುಟ 7, 8).

ಪುನಃ ಅವರು ಹೀಗೆ ಹೇಳುತ್ತಾರೆ:

"ನನ್ನ ಜೀವ ಯಾರ ಕೈಯಲ್ಲಿದೆಯೋ ಆ ಸರ್ವಶಕ್ತನಾದ ಅಲ್ಲಾಹನ ಪವಿತ್ರ ನಾಮದಲ್ಲಿ ನಾನು ಆಣೆ ಹಾಕಿ ಹೇಳುತ್ತೇನೆ: ಅವನೇ ನನ್ನನ್ನು ಪ್ರವಾದಿಯೆಂದೂ ವಾಗ್ದತ್ತ ಮಸೀಹ್ ಎಂದೂ ಹೆಸರಿಸಿದ್ದಾನೆ. ನನ್ನ ಸತ್ಯಕ್ಕೆ ಸಾಕ್ಷಿಗಳಾಗಿ ಮೂರು ಲಕ್ಷಕ್ಕೆ ಮಿಕ್ಕಿದ ಸೂಚನೆಗಳನ್ನು ತೋರಿಸಿ ಕೊಟ್ಟದ್ದೂ ಅವನೇ." (ತತಿಮ್ಮಾ ಹಕೀಕತುಲ್ ವಹೀ, ಪುಟ 68).

ಈ ಪುಣ್ಯ ಪುರುಷರನ್ನು ಅಂಗೀಕರಿಸುವುದರಲ್ಲಿ ತಡೆಯಾಗಿ ನಿಲ್ಲುವುದು ಯೇಸುಕ್ರಿಸ್ತರ ಪುನರಾಗಮನ ಆಕಾಶದಿಂದ ಉಂಟಾಗುವುದು ಎಂಬ ಮಿಥ್ಯಾ ವಿಶ್ವಾಸವಾಗಿದೆ.

ಯೇಸುಕ್ರಿಸ್ತರ ಮೊದಲ ಆಗಮನ ಕಾಲದಲ್ಲಿ ಯೆಹೂದ್ಯರಿಗೆ ತಡೆಯಾಗಿ ನಿಂತದ್ದೂ ಮಸ್ಸೈಯರ ಆಗಮನಕ್ಕಿಂತ ಮುಂಚೆ ಏಲಿಯಾ ಪ್ರವಾದಿ ಆಕಾಶದಿಂದ ಇಳಿದು ಬರುವರೆಂಬ ಮಿಥ್ಯಾ ವಿಶ್ವಾಸವಾಗಿತ್ತು. ಆದರೆ ಯೋಹಾನ ಪ್ರವಾದಿಯೇ ಆ ವಾಗ್ದತ್ತ ಏಲಿಯಾ ಎಂಬ ಯೇಸುಕ್ರಿಸ್ತರ ಅಧ್ಯಾಪನವನ್ನು ಅವರು ಸ್ವೀಕರಿಸಲಿಲ್ಲ. ಹಾಗೆ ಏಲಿಯಾ ಆಕಾಶದಿಂದ ಇಳಿದು ಬರುವರೆಂಬ ಹುಸಿ ನಂಬಿಕೆಯಲ್ಲಿರುವ ಯೆಹೂದರ ಪ್ರಕಾರವೇ, ಎಲ್ಲಾ ಸೂಚನೆಗಳೂ ಗೋಚರಿಸುತ್ತಿದ್ದರೂ ಇಂದು ಸಹ ಕ್ರೈಸ್ತ ಲೋಕ ಆಕಾಶದೆಡೆಗೆ ದೃಷ್ಟಿಯಿಟ್ಟು Waiting Roomನಲ್ಲಿ ಕಾಯುತ್ತಿದ್ದಾರೆ. ಆದ್ದರಿಂದ ಭವಿದ್ವಚನ ಪ್ರಕಾರ ಆಗಮಿಸಿರುವ ವಾಗ್ದತ್ತ ಮಸ್ಸೈಯರನ್ನೂ ಅವರ ಮೂಲಕ ಜಗತ್ತಿನಲ್ಲಿ ಉಂಟಾಗುತ್ತಿರುವ ಆಧ್ಯಾತ್ಮಿಕ ಕ್ರಾಂತಿಯನ್ನೂ ಅವರಿಗೆ ಕಾಣಲು ಸಾಧ್ಯವಾಗುವುದಿಲ್ಲ.

ಕೊನೆಯದಾಗಿ ಗ್ರಂಥಕರ್ತರ ಭಾಷೆಯಲ್ಲೇ ಬೋಧಿಸುತ್ತಾ ಈ ಲೇಖನವನ್ನು ಮುಕ್ತಾಯಗೊಳಿಸುತ್ತೇನೆ.

"If you are ready to meet Christ when he comes, you must repent and believe the gospel mark 1 . 15"

ಎಂದರೆ, ನೀವು ಆಗಮಿಸಲಿಕ್ಕಿರುವ (ಈಗಾಗಲೇ ಆಗಮಿಸಿರುವ – ಲೇಖಕ) ವಾಗ್ದತ್ತ ಮಸ್ಸೈಯರನ್ನು ಸ್ವಾಗತಿಸಲಿಕ್ಕೆ ಸಿದ್ಧರಾಗಿರಿ. ನೀವು ಪಶ್ಚಾತ್ತಾಪಪಟ್ಟು ಯೇಸುವಿನ ಈ ಸುವಾರ್ತೆಯನ್ನು ಪರಿಪೂರ್ಣವಾಗಿ ನಂಬಿರಿ —

"ಕಾಲ ಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ," (ಮಾರ್ಕ 1 : 15).

(ಪುಟ 110) ★

# ಗತ ಮಹಾತ್ಮರೊಡನೆ ಪ್ರಾರ್ಥಿಸಬಹುದೇ?

★ ಮೌಲಾನ ಬಿ. ಅಬ್ದುಲ್ಲಾ H. A.

ಸರ್ವಲೋಕ ಸೃಷ್ಟಿಕರ್ತನೂ ರಕ್ಷಕನೂ ಆದ ದೇವರೊಡನೆ ಹೊರತು ಸೃಷ್ಟಿಗಳಲ್ಲಿ ಯಾರೊಡನೆಯೂ ಎಂತಹ ಆಪತ್ತಿಗೆ ಸಿಲುಕಿದರೂ ಸತ್ಯವಿಶ್ವಾಸಿಗಳು ಸಹಾಯ ಬೇಡಬಾರದೆಂದೂ ಆ ಸರ್ವಶಕ್ತನ ಹೊರತು ಆಪತ್ಕಾಲದಲ್ಲಿ ನೆರವೀಯಲು ಸಾಧ್ಯವಿರುವ ಯಾವುದಾದರೂ ಶಕ್ತಿಯುಂಟೆಂದು ಭಾವಿಸಲೇ ಬಾರದೆಂದೂ ಪವಿತ್ರ ಖುರ್ ಆನ್ ಶಕ್ತಿಯುತವಾಗಿ ಬೋಧಿಸುತ್ತದೆ. ಈ ಪಾಠ ಖುರ್ ಆನಿನ ಪ್ರಥಮ ಅಧ್ಯಾಯದಲ್ಲಿ ಹಾಗೆಯೇ ಕೊನೆಯ ಅಧ್ಯಾಯದಲ್ಲೂ ಅಡಕವಾಗಿರುವುದನ್ನು ಕಾಣಬಹುದು. ಹೀಗೆ ದೇವೇತರರೊಡನೆ ಪ್ರಾರ್ಥಿಸ ಕೂಡದೆಂದು ಕಲಿಸಿರುವುದು ಮಾತ್ರವಲ್ಲ ಆ ಪವಿತ್ರ ಗ್ರಂಥ ಎಲ್ಲಿಯೂ ಗತ ಮಹಾತ್ಮರೊಡನೆ ಪ್ರಾರ್ಥಿಸಬಹುದೆಂಬುದಕ್ಕೆ ಯಾವುದೇ ಸೂಚನೆ ನೀಡಿದುದಾಗಿ ಕಾಣಲು ಸಾಧ್ಯವಿಲ್ಲ. ಏಕದೇವ ತತ್ವವನ್ನು ಪ್ರಬೋಧಿಸುವ ಧರ್ಮಗಳಲ್ಲಿ ಉತ್ಕೃಷ್ಟ ಸ್ಥಾನವು ಇಸ್ಲಾಮಿಗೆ ಸಲ್ಲುತ್ತದೆಂದು ಇತರ ಮತಸ್ಥರು ಕೂಡ ಒಪ್ಪುತ್ತಾರೆ. ಅವರು ಇಸ್ಲಾಂ ಧರ್ಮವನ್ನು ದ್ವೈತ ಮತವೆಂದು ಪರಿಗಣಿಸುತ್ತಾರೆ. ಅಂದರೆ ಜೀವಾತ್ಮ ಮತ್ತು ಪರಮಾತ್ಮ ಬೇರೆ ಬೇರೆಯಾಗಿರುವುದರಿಂದ ಮನುಷ್ಯನು ಎಷ್ಟು ಉನ್ನತಿ ಪಡೆದರೂ ದೈವ ಅಥವಾ ದೇವತುಲ್ಯ ಆಗಲಾರನೆಂದು ತಾತ್ಪರ್ಯ. ಪವಿತ್ರ ಖುರ್‌ಆನ್ ಏಕದೇವ ತತ್ವವನ್ನು ಸವಿಸ್ತಾರವಾಗಿಯೂ ಸುಸ್ಪಷ್ಟವಾಗಿಯೂ ಪ್ರತಿಪಾದಿಸಿದೆ. ತದ್ವಿಷಯಕ ವಚನಗಳನ್ನು ಸ್ಥಳಾಭಾವದಿಂದ ಇಲ್ಲಿ ಉದ್ಧರಿಸುವುದಿಲ್ಲ. ದೇವರನ್ನು ಹೊರತು ಇತರ ವಸ್ತುಗಳನ್ನು ಆರಾಧಿಸುವುದಾಗಲಿ, ಅವುಗಳಿಗೆ ಸ್ವಯಂ ಏನಾದರೂ ಸಹಾಯ ಮಾಡಲಿಕ್ಕೆ ಶಕ್ತಿ ಇದೆಯೆಂದು ನಂಬುವುದಾಗಲಿ, ಅವುಗಳೊಡನೆ ಪ್ರಾರ್ಥಿಸುವುದಾಗಲಿ ಮಾಡಬಾರದೆಂದು ಖುರ್‌ಆನ್ ನಮಗೆ ಕಲಿಸುತ್ತದೆ. ಇತರ ಮತಗಳಾದರೋ, ಸೃಷ್ಟಿಗಳಲ್ಲಿ ಕೆಲವರಿಗೆ ದೇವಗುಣಗಳನ್ನೂ ಮಹತ್ವಗಳನ್ನೂ ಕಲ್ಪಿಸಿ ಅವರನ್ನು ಆರಾಧ್ಯಸ್ಥಾನದಲ್ಲಿ ಪ್ರತಿಷ್ಠಾಪಿಸಿ ಅವರೊಡನೆ ಪ್ರಾರ್ಥಿಸಲಿಕ್ಕೆ ಪ್ರೇರಣೆ ನೀಡುತ್ತವೆ. ಆದರೆ ಇಸ್ಲಾಂ ಈ ರೀತಿಯ ವರ್ತನೆಯನ್ನು ಕಠಿಣವಾಗಿ ವಿರೋಧಿಸಿ ಅದನ್ನು ಸೃಷ್ಟಿಪೂಜೆಯೆಂದೂ ವಿಧಿಸಿ ನಿರುತ್ಸಾಹಗೊಳಿಸುತ್ತದೆ. ಗತ ಮಹಾತ್ಮರ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿ ಅವುಗಳಿಗೆ ದೇವತ್ವವನ್ನು ಕೊಟ್ಟು ಅವುಗಳೊಂದಿಗೆ ತಮ್ಮ ಕಷ್ಟಗಳನ್ನು ಹೇಳಿ ಸಹಾಯವನ್ನು ಯಾಚಿಸುತ್ತಿದ್ದ ಅರಬಿಯರ ಮಧ್ಯೆ ಜನ್ಮತಾಳಿದ ಮುಹಮ್ಮದ್ ಪೈಗಂಬರರು (ಸ) ಅವರನ್ನು ಆ ನಿಂದನೀಯ ಸೃಷ್ಟಿಪೂಜೆಯಿಂದ ತಡೆದು ಭಕ್ತಿ ಭಾವಗಳನ್ನು ಅರ್ಪಿಸಲು ಅರ್ಹನು ಏಕದೇವನು ಮಾತ್ರವೆಂದು ಅವರಿಗೆ ಪ್ರಬೋಧಿಸಿ "ಲಾ ಇಲಾಹ ಇಲ್ಲಲ್ಲಾಹ್" (ಅಲ್ಲಾಹನ ಹೊರತು ಆರಾಧ್ಯನಿಲ್ಲ) ಎಂಬ ಪವಿತ್ರ ವಚನವನ್ನು ಅವರಿಗೆ ಮೂಲಮಂತ್ರವನ್ನಾಗಿ ಕಾಣಿಕೆ ಇತ್ತರು. ಪೈಗಂಬರರ ಈ ಉಪದೇಶ ಅವರ ಬುದ್ಧಿಗೆ ಹಿಡಿಸದಿದ್ದ ಕಾರಣ ಅವರು ಪೈಗಂಬರರನ್ನು ವಿರೋಧಿಸಿ, ಅಪಹಾಸ್ಯಮಾಡಿ ಏಕದೇವ ಸಿದ್ಧಾಂತವನ್ನು ಹೀಗಳೆದರು. ಅವರು ಹೇಳಿದುದನ್ನು ಖುರ್‌ಆನ್ ಹೀಗೆ ಉದ್ಧರಿಸುತ್ತದೆ : "ಏನು ಈತನು ದೇವರುಗಳನ್ನೆಲ್ಲ ಏಕದೇವನನ್ನಾಗಿ ಮಾಡಿಬಿಟ್ಟನೆ ? ಇದು ವಿಚಿತ್ರವಾದೊಂದು ಸಂಗತಿಯಾಗಿದೆ." (38 : 6) ಏಕದೇವ ವಿಶ್ವಾಸವನ್ನು ಪ್ರಚುರಪಡಿಸಲು ಅತ್ಯಂತ ಪರಿಶ್ರಮಿಸಿದ ಪೈಗಂಬರರ ಅನುಯಾಯಿಗಳು ಪೂರ್ವಕಾಲದ ಅರಬಿಯರಂತೆ ಪ್ರತಿಮೆಗಳನ್ನಿಟ್ಟು ಆರಾಧಿಸುವುದಿಲ್ಲವಾದರೂ ನಿರ್ಭಾಗ್ಯವಶಾತ್ ಗತಿಸಿದವರ ಗೋರಿಗಳ ಮೇಲೆ ಮಂಟಪಗಳನ್ನು ನಿರ್ಮಿಸಿ, ಅವರ ಆತ್ಮಗಳು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಡುವುವೆಂಬ ನಂಬಿಕೆಯಿಂದ ಅವುಗಳೊಡನೆ ಪ್ರಾರ್ಥಿಸುತ್ತಾರೆ. ಮಾತ್ರವಲ್ಲ, ಈ ತರದ ದುರಾಚಾರಗಳು ಧರ್ಮವಿರುದ್ಧವೆಂದು ಹೇಳುವುದೇ ಅವರಿಗೆ ಕರ್ಣಕಠೋರವಾಗುತ್ತದೆ. ಮುಹ್ಯಿದ್ದೀನ್ ಶೈಖ್ (ರ) ಮುಂತಾದ ಮಹಾತ್ಮರಿಗೆ ಪ್ರಾರ್ಥಿಸುವವರ ಬೇಡಿಕೆ

ಗಳನ್ನು ಆಲಿಸಿ ಅವುಗಳನ್ನು ಈಡೇರಿಸಲು ಸಾಧ್ಯವಿಲ್ಲವೆಂದು ಹೇಳುವುದು ಇವರಿಗೆ ಆಶ್ಚರ್ಯಕರವಾಗಿ ತೋಚುತ್ತದೆ. ಹಾ! ಇವರು ಏಕದೇವ ತತ್ವ (ತೌಹೀದ್)ದಿಂದ ಎಷ್ಟು ಅಗಲಿ ಹೋಗಿದ್ದಾರೆ! ಮುಹಮ್ಮದ್ ಪೈಗಂಬರರು (ಸ) ತನ್ನ ಅನುಯಾಯಿಗಳನ್ನು ಯಾವ ಉತ್ಕೃಷ್ಟ ತತ್ವದೆಡೆಗೆ ಕೊಂಡೊಯ್ಯಲು ಪರಿಶ್ರಮಿಸುತ್ತಿದ್ದರೋ ಆ ತತ್ವದಿಂದ ಇವರು ಎಷ್ಟು ದೂರವಾಗಿ ಬಿಟ್ಟಿದ್ದಾರೆ! ಬಹುದೈವಾರಾಧಕರಾದ ಅರಬಿಯರನ್ನು ಏಕದೇವ ವಿಶ್ವಾಸಿಗಳನ್ನಾಗಿ ಮಾಡಿ ಶುದ್ಧೀಕರಿಸಿದ ಆ ಪ್ರವಾದಿಶ್ರೇಷ್ಠರ ಅನುಯಾಯಿಗಳಲ್ಲಿ ಒಂದು ವಿಭಾಗದವರು ಸೃಷ್ಟಿಪೂಜೆ ಮೂಲಕ ಧರ್ಮಪಥದಿಂದ ವಿಮುಖರಾಗಿ ಅಪಥಚಾರಿಗಳಾಗಿ ಬದಲಾವಣೆಗೊಂಡುದನ್ನು ನೋಡುವಾಗ ಯಾವ ಸತ್ಯವಿಶ್ವಾಸಿಯ ಹೃದಯ ನೋಯದಿದ್ದೀತು! ಬಹುದೈವ ವಿಶ್ವಾಸಿಗಳಾದ ಇತರ ಮತಸ್ಥರು ಕೂಡ ಏಕದೇವ ವಿಶ್ವಾಸ ಸಿದ್ಧಾಂತವನ್ನು ಸ್ವೀಕರಿಸುತ್ತಿರುವ ಕಾಲವಾಗಿದೆ ಇದು. ಅಸಂಖ್ಯಾತ ದೇವತೆಗಳನ್ನು ಪೂಜಿಸಲು ಕಲಿಸುವ ಹಿಂದೂ ಧರ್ಮದ ಅನುಯಾಯಿಗಳ ಮಧ್ಯೆ ಆರ್ಯ ಸಮಾಜ, ಬ್ರಹ್ಮಸಮಾಜ ಮುಂತಾದ ಏಕದೇವ ತತ್ವವಾದಿಗಳ ಸಂಘಗಳು ಹುಟ್ಟಿಕೊಂಡಿವೆ. ದೇವರು ಮೂವರೆಂಬ ಸಿದ್ಧಾಂತದವರಾದ ಕ್ರೈಸ್ತರಾದರೋ ಮೂರು ಅಂದರೆ ಒಂದೇ ಎಂದು ಒಪ್ಪಿಕೊಳ್ಳುತ್ತಾರೆ. ಮಾತ್ರವಲ್ಲ, ಯೇಸು ದೇವರಲ್ಲವೆಂದು ಅನೇಕ ಪಾಶ್ಚಾತ್ಯ ಪಂಡಿತರು ಹಾಗೂ ಕ್ರೈಸ್ತವೈದಿಕರು ಬಹಿರಂಗವಾಗಿ ವಾದಿಸುತ್ತಿದ್ದಾರೆ. ಹೀಗೆ ಬುದ್ಧಿಯೂ ಜ್ಞಾನವೂ ಹೆಚ್ಚುತ್ತಿದ್ದಂತೆಯೇ ಜನರು ಬಹುದೈವ ಸಿದ್ಧಾಂತಗಳನ್ನೂ ಸೃಷ್ಟಿಪೂಜೆಯಂತಹ ಆಚಾರಗಳನ್ನೂ ತ್ಯಜಿಸಿ ಏಕದೇವ ವಿಶ್ವಾಸವನ್ನು ಕೈಗೊಳ್ಳುತ್ತಿದ್ದಾರೆ. ಹಾಗಿರುವಾಗ, ಏಕದೇವ ವಿಶ್ವಾಸಿಗಳಾದ ಮುಸ್ಲಿಮರಲ್ಲಿ ಒಂದು ವಿಭಾಗದವರು ಸೃಷ್ಟಿಗಳಲ್ಲಿ ಕೆಲವರೊಡನೆ ತಮ್ಮ ಅಹವಾಲುಗಳನ್ನು ಹೇಳಿ ನೆರವನ್ನು ಯಾಚಿಸಿಕೊಂಡು ಸೃಷ್ಟಿಪೂಜಕರಾಗುವುದು ವ್ಯಸನಕರವಲ್ಲವೇ?

ಯಾರಾದರೂ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಡಲು ಶಕ್ತರೆಂದು ಭಾವಿಸಿ ಗತ ಮಹಾತ್ಮರಲ್ಲಿ ಯಾರೊಡನೆಯಾದರೂ ಪ್ರಾರ್ಥಿಸುವುದಾದರೆ, ಆ ಪುಣ್ಯ ಪುರುಷನಿಗೆ ದೇವತ್ವವುಂಟೆಂದು ಅವರ ನಡವಳಿಕೆ ಮೂಲಕ ಒಪ್ಪಿದಂತಾಗುತ್ತದೆ. ಆಗ ದೇವೇತರರೊಡನೆ ಮಾಡುವ ಪ್ರಾರ್ಥನೆ ಬಹುದೇವೋಪಾಸನೆ (ಶಿರ್ಕ್) ಆಗುತ್ತದೆ. ಈ ಪ್ರಾರ್ಥನೆ 'ಶಿರ್ಕ್' ಅಲ್ಲವಾದರೆ ಪೂರ್ವಕಾಲದ ಅರಬಿಯರ ಮೇಲೆ ಶಿರ್ಕ್ ಮಾಡಿದ ಅಪರಾಧವನ್ನು ಹೊರಿಸುವಂತಿಲ್ಲ. ಏಕೆಂದರೆ, ಸರ್ವಶಕ್ತನೂ ಲೋಕರಕ್ಷಕನೂ ಆಗಿರುವವನು ಅಲ್ಲಾಹನೆಂದೂ ಪ್ರಪಂಚದ ಸರ್ವಾಧಿಕಾರ ಯಥಾರ್ಥದಲ್ಲಿ ಅವನ ಕೈಯಲ್ಲಿದೆಯೆಂದೂ ಆದರೆ ಆ ಸರ್ವಶಕ್ತನು ಹಝ್ರತ್ ಮುಹ್ಯಿದ್ದೀನ್ ಜೈಲಾನಿ(ರ) ಮುಂತಾದ ಮಹಾತ್ಮರಿಗೆ ಪ್ರಾರ್ಥನೆಗಳನ್ನು ಆಲಿಸುವ ಶಕ್ತಿ ನೀಡಿರುವನೆಂದೂ ಆದ್ದರಿಂದ ಅವರು ಪ್ರಾರ್ಥನೆಗಳಿಗೆ ಉತ್ತರಿಸಲಿಕ್ಕೆ ಅಥವಾ ಅಲ್ಲಾಹನೊಡನೆ ಶಿಫಾರಸ್ಸು ಮಾಡಿ ಬೇಡಿಕೆಗಳನ್ನು ಈಡೇರಿಸಿಕೊಡಲಿಕ್ಕೆ ಶಕ್ತರೆಂದೂ ಇಂದಿನ ಕೆಲವು ಮುಸ್ಲಿಮರು ನಂಬುತ್ತಿದ್ದಂತೆಯೇ ಸೃಷ್ಟಿಕರ್ತ ಹಾಗೂ ರಕ್ಷಕ ಅಲ್ಲಾಹನೆಂದೂ ಯಥಾರ್ಥದಲ್ಲಿ ಸರ್ವಾಧಿಕಾರವು ಅವನಲ್ಲಿದೆಯೆಂದೂ ಆದರೆ ತಮ್ಮ ಮಹಾತ್ಮರಿಗೆ ಪ್ರಾರ್ಥನೆ ಕೇಳಿ ಉತ್ತರ ಕೊಡುವರೆ ಹಾಗೂ ಅಲ್ಲಾಹನೊಡನೆ ಶಿಫಾರಸ್ಸು ಮಾಡಿ ತಮ್ಮ ಆವಶ್ಯಕತೆಗಳನ್ನು ನೆರವೇರಿಸಿಕೊಡುವರೆ ಅಧಿಕಾರವಿದೆಯೆಂದೂ ಬಹುದೇವೋಪಾಸಕ (ಮುಶ್ರಿಕ್)ರಾದ ಅರಬಿಯರು ನಂಬುತ್ತಿದ್ದರು. ಆ ಅರಬಿಯರ ನಂಬಿಕೆ ಶಿರ್ಕ್ ಎಂದಾದರೆ ಈ ಮುಸ್ಲಿಮರ ನಂಬಿಕೆ ಶಿರ್ಕ್ ಆಗದಿರಲಿಕ್ಕೆ ನಿರ್ವಾಹವಿದೆಯೋ? ಅರಬಿಯರ, ಮೇಲೆ ಹೇಳಿದ ವಿಶ್ವಾಸ ಶಿರ್ಕ್ ಎಂದು ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಪ್ರಸ್ತಾಪಿಸಿರುವುದರಿಂದ ಆ ರೀತಿಯ ವಿಶ್ವಾಸ ಮತ್ತು ನಡವಳಿಕೆ ಯಾರು ಹೊಂದಿದ್ದರೂ ಅದನ್ನು ಶಿರ್ಕ್ ಎಂದೇ ಪರಿಗಣಿಸಬೇಕಾಗಿದೆ. ದೇವರ ಸೃಷ್ಟಿಕರ್ತೃತ್ವದ ಕುರಿತು ಅರಬಿಯರಿಗಿದ್ದ ನಂಬಿಕೆಯ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಆಕಾಶ ಮತ್ತು ಭೂಮಿಯನ್ನು ಸೃಷ್ಟಿಸಿದ್ದು ಯಾರೆಂದು ನೀನು ಅವರೊಡನೆ ಪ್ರಶ್ನಿಸುವುದಾದರೆ 'ಅಲ್ಲಾಹ್' ಎಂದು ಅವರು ಖಂಡಿತವಾಗಿಯೂ ಹೇಳುವರು. ಅವರೊಡನೆ ಕೇಳಿರಿ: 'ಅಲ್ಲಾಹನ ಹೊರತು ನೀವು ಕರೆದು ಪ್ರಾರ್ಥಿಸುವವರ ಬಗ್ಗೆ ನೀವು ಏನು ಭಾವಿಸುತ್ತೀರಿ? ಅಲ್ಲಾಹನು ನನ್ನನ್ನು ಪೀಡಿಸಲು ಬಯಸುವನಾದರೆ ಅವನ ಆ ಪೀಡನೆಯನ್ನು ಅವರು ಹೋಗಲಾಡಿಸುವರೇ? ಅಥವಾ ಅಲ್ಲಾಹನು ನನ್ನ ಮೇಲೆ ದಯೆದೋರಲು ಇಚ್ಛಿಸುವನಾದರೆ ಅವನ ಕೃಪೆಯನ್ನು ಅವರು

ತಡೆಯುವರೇ?' ಹೇಳಿರಿ: ನನಗೆ ಅಲ್ಲಾಹ್ ಸಾಕು; ಅವನನ್ನೇ ಯಥಾರ್ಥ ವಿಶ್ವಾಸಿಗಳು ಆಶ್ರಯಿಸುತ್ತಾರೆ" (39 : 39)

ಸರ್ವೈಕ ಸೃಷ್ಟಿಕರ್ತನೂ ಸರ್ವಾಧಿಕಾರಿಯೂ ಅಲ್ಲಾಹನು ಮಾತ್ರವೆಂದು ಅರೇಬಿಯಾದ ಮೂರ್ತಿಪೂಜಕರಿಗೆ ನಂಬಿಕೆಯಿತ್ತೆಂದು ಮೇಲಿನ ವಚನದಿಂದ ಸ್ಪಷ್ಟವಾಗುತ್ತದೆ. ಮಾತ್ರವಲ್ಲ, ಸರ್ವಶಕ್ತನಾದ ಅಲ್ಲಾಹನ ಹೊರತು ಪ್ರಾರ್ಥಿಸಲ್ಪಡುವ ಯಾರಿಗೂ ಒಳಿತು ಯಾ ಕೆಡುಕು ಮಾಡುವ ಶಕ್ತಿಯಿಲ್ಲವೆಂದೂ ಸತ್ಯವಿಶ್ವಾಸಿಗಳು ಅಲ್ಲಾಹನ ಹೊರತು ಬೇರೆ ಯಾರನ್ನಾಗಲೀ ಆಶ್ರಯಿಸಬಾರದೆಂದೂ ಅದರಿಂದ ಸ್ಪಷ್ಟವಾಗುತ್ತದೆ.

ಪುನಃ ಖುರ್‌ಆನ್ ಹೇಳುತ್ತದೆ: "ಭೂಮಿ ಮತ್ತು ಅದರಲ್ಲಿರುವುದೆಲ್ಲವೂ ಯಾರದೆಂದು ನಿಮಗೆ ಗೊತ್ತಿದೆಯೋ ಎಂದು ಅವರೊಡನೆ ಕೇಳಿರಿ; ಅಲ್ಲಾಹನದೆಂದು ಅವರು ಹೇಳುವರು"... ಏಳು ಆಕಾಶಗಳ ಹಾಗೂ ಮಹತ್ತರ ಸಿಂಹಾಸನದ ಅಧಿಪತಿ ಯಾರೆಂದು ಅವರೊಡನೆ ಕೇಳಿರಿ;(ಎಲ್ಲವೂ) ಅಲ್ಲಾಹನದೆಂದು ಅವರು ಹೇಳುವರು.... ಸರ್ವ ವಸ್ತುಗಳ ಮೇಲೆ ಪ್ರಭುತ್ವವಿರುವವನೂ ಅಭಯ ನೀಡುವವನೂ ಅವನ ಪ್ರತಿಯಾಗಿ ಅಭಯ ನೀಡಲು ಯಾರೂ ಇಲ್ಲದೆ ಏಕನಾಗಿರುವವನೂ ಯಾರೆಂದು ನಿಮಗೆ ಗೊತ್ತಿದೆಯೋ ಎಂದು ಕೇಳಿರಿ; (ಈ ಅರ್ಹತೆಗಳೆಲ್ಲವೂ) ಅಲ್ಲಾಹನಿಗಿರುವುದೆಂದು ಅವರು ಹೇಳುವರು" (23:85–90). "ಮೇಘಗಳಿಂದ ಮಳೆ ಸುರಿಸಿ ಆ ಮೂಲಕ ಒಣ ಭೂಮಿಯನ್ನು ಫಲವತ್ತನ್ನಾಗಿ ಮಾಡುವವನು ಯಾರೆಂದು ಅವರೊಡನೆ ಕೇಳಿದರೆ ಅದು ಅಲ್ಲಾಹನೆಂದು ಅವರು ಖಂಡಿತವಾಗಿಯೂ ಹೇಳುವರು" (29:64)

ಅಲ್ಲಾಹನು ಸೃಷ್ಟಿಕರ್ತನೂ ರಕ್ಷಕನೂ ಸರ್ವಶಕ್ತನೂ ಸರ್ವಾಧಿಪತಿಯೂ ಆಗಿದ್ದಾನೆಂದು ವಿಗ್ರಹಾರಾಧಕರಾದ ಅರಬಿಯರಿಗೂ ವಿಶ್ವಾಸವಿತ್ತೆಂದು ಮೇಲಿನ ಖುರ್‌ಆನ್ ವಚನಗಳಿಂದ ಸ್ಪಷ್ಟವಾಗುತ್ತದೆ. ಮಾತ್ರವಲ್ಲ, ಅವರು ಪೂಜಿಸುವ ಹಾಗೂ ಪ್ರಾರ್ಥಿಸುವ ದೇವತೆಗಳು ಅಲ್ಲಾಹನ ಸೃಷ್ಟಿಗಳೆಂದೇ ಅವರು ನಂಬುತ್ತಿದ್ದರು. ಈ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ : "ಅವರನ್ನು ಸೃಷ್ಟಿಸಿದ್ದು ಯಾರೆಂದು ಇವರೊಡನೆ ಕೇಳಿದರೆ, ಅಲ್ಲಾಹನು ಎಂದು ಇವರು ಖಂಡಿತವಾಗಿಯೂ ಹೇಳುವರು." (43:88)

ಹೀಗೆ ಈ ಪ್ರಪಂಚದ ಸರ್ವವಿಧ ಕರ್ತೃತ್ವವೂ ಅಲ್ಲಾಹನಿಗಿದೆಯೆಂದೇ ಆ ಅರಬಿಯರು ಸಹ ನಂಬಿದ್ದರು. ಮತ್ತೇಕೆ ಅವರನ್ನು ಬಹುದೇವೋಪಾಸಕರಾದ ಮುಶ್ರಿಕರುಗಳೆಂದು ಖುರ್‌ಆನ್ ವಿಧಿಸಿದ್ದು ಎಂದು ಚಿಂತಿಸುವುದಾದರೆ, ತಮ್ಮ ದೇವತೆಗಳಿಗೆ ಪ್ರಾರ್ಥನೆಗೆ ಉತ್ತರ ಕೊಡಲಿಕ್ಕೂ ಬೇಡಿಕೆಗಳನ್ನು ಈಡೇರಿಸಲಿಕ್ಕೂ ಸಾಮರ್ಥ್ಯವಿದೆಯೆಂದೂ ಅಲ್ಲಾಹನನ್ನು ಸಂಪ್ರೀತಿಗೊಳಿಸಲಿಕ್ಕೆ ಆ ದೇವತೆಗಳನ್ನು ಸಂತೃಪ್ತಗೊಳಿಸಬೇಕೆಂದು ಅವರು ನಂಬಿ ತದನುಸಾರ ಪ್ರಾರ್ಥನೆ ಮಾಡುತ್ತಿದ್ದುದರಿಂದ ಎಂದು ಮನದಟ್ಟಾಗುತ್ತದೆ. ಆಗ, ದೇವರೆಂದು ನಂಬುವುದಿಲ್ಲವಾದರೂ ಪ್ರಾರ್ಥನೆಗೆ ಉತ್ತರ ಕೊಡಲು ಶಕ್ತರೆಂದು ಯಾರ ಕುರಿತಾದರೂ ನಂಬುವುದಾದರೆ, ಅದು ಅವರಿಗೆ ದೇವತ್ವವನ್ನು ಬಗೆದಂತಾಯಿತೆಂದೂ ಆ ಮೂಲಕ ಆ ವಿಶ್ವಾಸ ಶಿರ್ಕ್ ಎಂದೂ ತಿಳಿಯಬೇಕಾಗಿದೆ. ಇಂದಿನ ಮುಸ್ಲಿಮರಲ್ಲಿ ಕೆಲವರೆಲ್ಲಾ ಗತ ಮಹಾತ್ಮರಿಗೆ ಇಂತಹ ಕೆಲವು ಶಕ್ತಿಗಳಿವೆಯೆಂಬ ವಿಶ್ವಾಸದಲ್ಲಿ ಅಲ್ಲವೇ ಅವರೊಡನೆ ಪ್ರಾರ್ಥಿಸುವುದು? ಹಾಗಿರುವಾಗ, ಯಾವ ಆಚಾರವು ಅರಬಿಯರನ್ನು ಬಹುದೇವೋಪಾಸಕರನ್ನಾಗಿ ಮಾಡಿತೋ, ಅದೇ ಆಚಾರವನ್ನು ಇಂದು ಕೆಲವು ಮುಸ್ಲಿಮರು ಸಹ ಕೈಗೊಂಡಿದ್ದಾರೆಂದು ವಿಶದವಾಯಿತು. ಒಟ್ಟಿನಲ್ಲಿ, ಮುಸ್ಲಿಮರ ಈ ನಡವಳಿಕೆ ಶಿರ್ಕ್ ಅಲ್ಲವೆಂದಾದರೆ ಆ ಅರಬಿಯರ ವಿಶ್ವಾಸವನ್ನು ಕೂಡಾ ಶಿರ್ಕ್ ಎಂದು ಬಗೆಯಬಾರದು.

ಗತ ಮಹಾಪುರುಷರೊಡನೆ ಪ್ರಾರ್ಥಿಸುವುದು ದೈವಹಿತಾನುಸಾರ ಮಾತ್ರವಲ್ಲ, ಹೆಚ್ಚು ಗುಣಕಾರಿಯೆಂದು ಕೆಲವು ಮುಸ್ಲಿಮರು ನಂಬುವಂತೆಯೇ ಪೂರ್ವಕಾಲದ ಅರಬಿಯರು ಸಹ ನಂಬುತ್ತಿದ್ದರೆಂದು ಕಾಣಬಹುದು. ಅವರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ : "ಅಲ್ಲಾಹನ ಹೊರತು ಇತರ ಸಹಾಯಕರನ್ನು ಅವಲಂಬಿಸಿರುವವರು ಹೇಳುತ್ತಾರೆ : ಅವರು ನಮ್ಮನ್ನು ಅಲ್ಲಾಹನಿಗೆ ನಿಕಟಗೊಳಿಸಲೆಂದೇ ಅವರನ್ನು ನಾವು ಆರಾಧಿಸುತ್ತಿರುವುದು" (39:4). ಈ ವಾಕ್ಯದಿಂದ ತಿಳಿಯುವುದೇನೆಂದರೆ, ಬಹುದೇವೋಪಾಸಕರಾದ ಅರಬಿಯರು ದೇವತೆಗಳನ್ನು ಆರಾಧಿಸುತ್ತಿದ್ದುದು ತಮಗೆ ಅಲ್ಲಾಹನ ಸಾಮೀಪ್ಯವನ್ನು ಗಳಿಸಲು ಅದೊಂದು ಸುಲಭ ದಾರಿಯೆಂದು ಭಾವಿಸಿಯಾಗಿತ್ತು. ಅವರ ಮುಖ್ಯವಾದ ಆರಾಧನಾಕರ್ಮ ವಿಗ್ರಹಗಳ ಮುಂದೆ ಪ್ರಾರ್ಥಿಸುವುದು, ಮೃಗಗಳನ್ನು

ಬಲಿಕೊಡುವುದು ಇತ್ಯಾದಿಯಾಗಿತ್ತೆಂದು ಪವಿತ್ರ ಖುರ್ಆನಿನಿಂದ ಗ್ರಹಿಸಬಹುದಾಗಿದೆ. ಅದೇ ಪ್ರಕಾರ ಮುಸ್ಲಿಮರು ಸಹ ಮಹಾಪುರುಷರೊಡನೆ ಪ್ರಾರ್ಥಿಸುತ್ತಲೂ ಅವರಿಗೆ ಆಡು, ಕೋಳಿ ಮುಂತಾದುವುಗಳನ್ನು ಬಲಿ ನೀಡುತ್ತಲೂ ಇರುವುದನ್ನು ಕಾಣಬಹುದು. ಅರಬಿಯರು ಮಾಡುವಾಗ ಶಿರ್ಕ್ ಆಗಿರುವ ಈ ಕರ್ಮವನ್ನು ಮುಸ್ಲಿಮರು ಮಾಡುವಾಗ ದೇವಹಿತಾನುಸಾರ ಆಗುವುದು ಹೇಗೆ ? ಅರಬಿಯರ ಆ ಕರ್ಮವು ಶಿರ್ಕ್ ಎಂದಾದರೆ ಅದು ಯಾರು ಮಾಡಿದರೂ ಶಿರ್ಕ್ ಆಗಬೇಕಾಗಿದೆ.

ಗತ ಮಹಾತ್ಮರೊಡನೆ ನಾವು ಪ್ರಾರ್ಥಿಸುವುದು, ಅವರು ನೇರವಾಗಿ ಏನಾದರೂ ಒಳಿತು ಮಾಡುವರೆಂದಲ್ಲ; ಅವರು ದೇವರೊಡನೆ ಶಿಫಾರಸ್ಸು ಮಾಡಿ ಬೇಡಿಕೆ ಈಡೇರಿಸಿ ಕೊಡಲಿಕ್ಕೆ ಅವರಿಗೆ ಸಾಮರ್ಥ್ಯವಿರುವುದರಿಂದ ಎಂದು ಕೆಲವು ಮುಸ್ಲಿಮರು ಹೇಳುತ್ತಾರೆ. ಇದು ಕೂಡ ಅರಬಿಯರಿಗಿದ್ದ ಒಂದು ನಂಬಿಕೆಯಾಗಿತ್ತು. ಅವರು ತಮ್ಮ ದೇವತೆಗಳ ಕುರಿತು "ಇವರು ಅಲ್ಲಾಹನ ಸನ್ನಿಧಿಯಲ್ಲಿ ನಮ್ಮ ಬಗ್ಗೆ ಶಿಫಾರಸ್ಸು ಮಾಡುವವರು" ಎಂದು ಹೇಳಿದುದಾಗಿ ಖುರ್ಆನ್ (10 : 19) ಪ್ರಸ್ತಾಪಿಸುತ್ತದೆ. ನ್ಯಾಯ ವಿಚಾರಣಾ ದಿನದಂದು ಆ ಬಹುದೇವೋಪಾಸಕರೊಡನೆ ಅಲ್ಲಾಹು ಹೀಗೆ ಪ್ರಶ್ನಿಸುವನೆಂದು ಖುರ್ಆನ್ ಹೇಳುತ್ತದೆ : "ನಿಮ್ಮ ಕಾರ್ಯದಲ್ಲಿ ನಮ್ಮ ಸಹಭಾಗಿಗಳೆಂದು ನೀವು ಹೇಳಿರುವ ನಿಮ್ಮ ಶಿಫಾರಸ್ಸುಗಾರರನ್ನು ನಿಮ್ಮ ಜೊತೆಯಲ್ಲಿ ಕಾಣುವುದಿಲ್ಲವಷ್ಟೇ ?" (6 : 95) ಈ ವಾಕ್ಯಗಳಿಂದ, ಅರಬಿಯರು ಅವರ ದೇವತೆಗಳನ್ನು ಪೂಜಿಸುತ್ತಿದ್ದುದು ಮತ್ತು ಪ್ರಾರ್ಥಿಸುತ್ತಿದ್ದುದು ಅವರು ದೇವರೆಂದಾಗಲಿ ದೇವಸಮಾನರೆಂದಾಗಲಿ ಭಾವಿಸಿಯಲ್ಲವೆಂದೂ ಆದರೆ ಅವರಿಗೆ ದೇವರ ಕೆಲವು ವಿಶಿಷ್ಟ ಅಧಿಕಾರಗಳು ಇರುವುದರಿಂದ ತಮ್ಮ ಅಭೀಷ್ಟಗಳನ್ನು ನೆರವೇರಿಸಿ ಕೊಡಲು ಅವರು ಶಕ್ತರೆಂಬ ಭಾವನೆಯಿಂದ ಆಗಿತ್ತೆಂದೂ ಸ್ಪಷ್ಟವಾಗುತ್ತದೆ. ಮಾತ್ರವಲ್ಲ, ತಾವು ಈ ದೇವತೆಗಳಿಗೆ ಈ ರೀತಿಯ ಶಕ್ತಿಗಳಿವೆಯೆಂದು ನಂಬಿ ಅವರೊಡನೆ ಪ್ರಾರ್ಥಿಸುತ್ತಿರುವುದೇ ದೈವೇಚ್ಛೆಯನುಸಾರವೆಂದೂ ದೇವರಿಗೆ ಅಪ್ರಿಯವೆಂದಾಗಿದ್ದರೆ ತಾವು ಈ ರೀತಿ ಮಾಡುತ್ತಿರಲಿಲ್ಲವೆಂದೂ ಅರಬಿಯರು ಹೇಳುತ್ತಿದ್ದರು. ಈ ಬಗ್ಗೆ ಪವಿತ್ರ ಖುರ್ಆನ್ ಹೀಗೆ ಹೇಳುತ್ತದೆ : "ಅಲ್ಲಾಹನು ಇಚ್ಛಿಸಿದ್ದರೆ ನಾವಾಗಲಿ ನಮ್ಮ ಪೂರ್ವಜರಾಗಲಿ ಬಹುದೇವೋಪಾಸನೆ ಮಾಡುತ್ತಿರಲಿಲ್ಲವೆಂದು ಮುಶ್ರಿಕ್‌ಗಳು ಹೇಳುತ್ತಾರೆ" (6 : 149). ಕರುಣಾನಿಧಿಯಾದ ದೇವರು ಇಚ್ಛಿಸಿದ್ದರೆ ನಾವು ಅವರನ್ನು (ದೇವತೆಗಳನ್ನು) ಆರಾಧಿಸುತ್ತಿರಲಿಲ್ಲವೆಂದು ಅವರು ಹೇಳಿದರು" (43:21). ಇಂದು ಮುಸ್ಲಿಮರಲ್ಲಿ ಕೆಲವರು ಗತಿಸಿದ ಕೆಲವು ಮಹಾತ್ಮರುಗಳಿಗೆ ನೀಡುವ ಸ್ಥಾನಕ್ಕೂ ಪೂರ್ವಕಾಲದ ಅರಬಿಯರು ಅವರ ಮಹಾತ್ಮರುಗಳಿಗೆ ನೀಡಿದ ಸ್ಥಾನಕ್ಕೂ ಮಧ್ಯೆ ಯಾವ ವ್ಯತ್ಯಾಸವಾಗಲಿ ಇಲ್ಲವೆಂದು ಮೇಲಿನ ಖುರ್ಆನ್ ವಚನಗಳಿಂದ ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ ಪವಿತ್ರ ಖುರ್ಆನ್ ಅರಬಿಯರ ವಿಚಾರದಲ್ಲಿ ನೀಡಿದ ವಿಧಿಗೆ ತಾವು ಸಹ ಪಾತ್ರವಾಗುವೆವೆಂದು ಮನಗಂಡು ಶಿರ್ಕ್‌ನಂತಹ ಈ ಬಗೆಯ ಅನಾಚಾರಗಳಿಂದ ಮುಸ್ಲಿಮರೆಲ್ಲರೂ ದೂರವಿರಬೇಕಾಗಿದೆ.

ಹಝ್ರತ್ ಶಾಹ್ ವಲಿಯುಲ್ಲಾಹ್ ಮುಹದ್ದಿಸ್ (ರ) ತನ್ನ "ಅಲ್ ಫೌಝುಲ್ ಕಬೀರ್ ಫೀ ಉಸೂಲಿ ತಫ್‌ಸೀರ್" ಎಂಬ ಗ್ರಂಥದಲ್ಲಿ ಪುರಾತನ ಅರಬಿಯರ ನಂಬಿಕೆ ಮತ್ತು ಆಚಾರಗಳನ್ನು ವಿವರಿಸುವಾಗ ಅವರ ಬಹುದೈವಾರಾಧನೆಯ ಕುರಿತು ಹೀಗೆ ಹೇಳಿರುತ್ತಾರೆ: "ಆ ಮುಶ್ರಿಕುಗಳು ಸೃಷ್ಟಿಕರ್ತೃತ್ವದಲ್ಲೂ ಇತರ ಮಹತ್ಕಾರ್ಯಗಳ ನಡೆಸುವಿಕೆಯಲ್ಲೂ ದೇವರಿಗೆ ಸಹಭಾಗಿಗಳಿದ್ದಾರೆಂದು ನಂಬುತ್ತಿರಲಿಲ್ಲ. ದೇವರು ಯಾವ ಕಾರ್ಯವನ್ನಾದರೂ ಮಾಡಲು ಉದ್ದೇಶಿಸಿದರೆ ಅದನ್ನು ತಡೆಯಲು ಯಾರಿಗೂ ಶಕ್ತಿಯಿಲ್ಲವೆಂದು ಅವರು ನಂಬುತ್ತಿದ್ದರು. ದೇವರು ತನ್ನ ಕೆಲವು ದಾಸರಿಗೆ ಕೆಲವು ಕಾರ್ಯಗಳಲ್ಲಿ ವಿಶೇಷಾಧಿಕಾರ ನೀಡಿರುವನೆಂಬ ವಿಶ್ವಾಸವಾಗಿದೆ ಅವರ ಶಿರ್ಕ್. 'ಒಬ್ಬ ಚಕ್ರವರ್ತಿ ತನ್ನ ಅಧೀನದಲ್ಲಿರುವ ರಾಜ್ಯಗಳಲ್ಲಿ ತಾನು ಆಯ್ದ ಕೆಲವರನ್ನು ವಿಶೇಷ ಅಧಿಕಾರದೊಂದಿಗೆ ಆಡಳಿತ ನಡೆಸಲು ಕಳುಹಿಸುತ್ತಾನೆ; ಎರಡನೆಯ ರಾಜಾಜ್ಞೆ ಹೊರಡುವ ತನಕ ಇವರು ತಮ್ಮ ವಲಯದೊಳಗೆ ಅಧಿಕಾರ ನಡೆಸಬಹುದಾಗಿದೆ; ತಮ್ಮ ಪ್ರದೇಶದೊಳಗೆ ವಾಸಿಸುವ ಯಾರ ಕುರಿತಾಗಲಿ ಇವರು ಚಕ್ರವರ್ತಿಯೊಡನೆ ಶಿಫಾರಸ್ಸು ಮಾಡುವುದಾದರೆ ಚಕ್ರವರ್ತಿ ಅದನ್ನು ಅಂಗೀಕರಿಸುತ್ತಾನೆ. ಇದೇ ಪ್ರಕಾರ, ರಾಜಾಧಿರಾಜನಾದ ದೇವರು ತನ್ನ ಕೆಲವು ದಾಸರಿಗೆ ದೇವತ್ವದ ಸ್ಥಾನವನ್ನು ನೀಡಿರುವನು; ಈ ಸ್ಥಾನವನ್ನು ಗಳಿಸಿದವರ ಇಷ್ಟಾನಿಷ್ಟಗಳು ಸಕಲ ಮನುಷ್ಯರಿಗೂ ಅನ್ವ

ಯಿಸುತ್ತದೆ. ಒಟ್ಟಿನಲ್ಲಿ ಅವರ ನಿಕಟತೆಯನ್ನು ಪಡೆಯುವುದೂ ದೇವರ ಸಂಪ್ರೀತಿಯನ್ನು ಗಳಿಸಲಿಕ್ಕೆ ಅತ್ಯಾವಶ್ಯಕವಾಗಿದೆ; ಜನರ ವಿಚಾರದಲ್ಲಿ ಅವರ ಶಿಫಾರಸ್ಸುಗಳನ್ನು ದೇವರು ಸ್ವೀಕರಿಸುವನು.' ಈ ಪ್ರಕಾರ ಅರಬಿಯರು ಅವರ ದೇವತೆಗಳ ಬಗ್ಗೆ ನಂಬುತ್ತಿದ್ದರು. ಆದ್ದರಿಂದ ಅವರು ದೇವತೆಗಳ ಮುಂದೆ ಪ್ರಣಾಮ ಮಾಡುತ್ತಲೂ ಬಲಿಗಳನ್ನರ್ಪಿಸುತ್ತಲೂ ಅವರ ನಾಮದಲ್ಲಿ ಆಣೆ ಹಾಕುತ್ತಲೂ ಬೇಡಿಕೆಗಳನ್ನು ಈಡೇರಿಸಲಿಕ್ಕೆ ಶಕ್ತರೆಂಬ ವಿಶ್ವಾಸದಿಂದ ಅವರೊಡನೆ ಸಹಾಯ ಯಾಚಿಸಬಹುದೆಂದು ನಿರ್ಧರಿಸಿದರು. ಅದಕ್ಕಾಗಿ ಅವರು ಕಲ್ಲು, ಹಿತ್ತಾಳೆ, ತಾಮ್ರ ಮುಂತಾದ ಲೋಹಗಳಿಂದ ತಮ್ಮ ಮಹಾತ್ಮರುಗಳ ಪ್ರತಿಮೆಗಳನ್ನು ನಿರ್ಮಿಸಿ, ಅವರನ್ನು ಧ್ಯಾನಿಸಲಿಕ್ಕಾಗಿ ಆ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿದರು. ಕಾಲಕ್ರಮೇಣ ಅಜ್ಞರು ಆತ್ಮಗಳನ್ನು ಮರೆತು ಕೇವಲ ವಿಗ್ರಹಗಳನ್ನು ಮಾತ್ರ ಆರಾಧನೆಗೆ ಪಾತ್ರ ಮಾಡಿದರು." (ಬಾಬ್ 1, ಫಸಲ್ 1).

ಈ ಕಾಲದಲ್ಲಿ ಮಹಾತ್ಮರನ್ನು ಕರೆದು ಪ್ರಾರ್ಥಿಸುವ ಮುಸ್ಲಿಮರಿಗೂ ಪೂರ್ವ ಕಾಲದ ಅರಬಿಯರಿಗೂ ಮಧ್ಯೆ ಕೆಲವು ಶಿಥಿಲ ವ್ಯತ್ಯಾಸಗಳು ಮಾತ್ರವೇ ಇವೆಯೆಂದು ಮೇಲಿನ ವಿಚಾರಗಳಿಂದ ವ್ಯಕ್ತವಾಗುತ್ತದೆ. ಅರಬಿಯರು ತಮ್ಮ ಮಹಾತ್ಮರುಗಳ ಪ್ರತಿಮೆಗಳನ್ನು ನಿರ್ಮಿಸಿ ಅವುಗಳಿಗೆ ಮಾಡುವ ಕರ್ಮಗಳನ್ನೇ ಮುಸ್ಲಿಮರು ಗತಿಸಿದ ಮಹಾತ್ಮರುಗಳ ಹೆಸರಿನಲ್ಲೂ ಅವರ ಗೋರಿಗಳು ಕಾಣಸಿಗುವುದಾದರೆ ಅಲ್ಲೂ ಮಾಡುತ್ತಿದ್ದಾರೆ. ಮಹಾಪುರುಷರಿಗೆ ದೇವರ ಕೆಲವು ವಿಶಿಷ್ಟ ಶಕ್ತಿಗಳಿವೆಯೆಂದು ಅರಬಿಯರು ಬಹಿರಂಗವಾಗಿ ಹೇಳುತ್ತಿದ್ದರು. ಮುಸ್ಲಿಮರು ಮಹಾಪುರುಷರನ್ನು ಇಲಾಹುಗಳೆಂದು ಹೇಳುವುದಿಲ್ಲವಾದರೂ ಅವರಿಗೆ ದೇವಶಕ್ತಿಗಳಿವೆಯೆಂದು ಒಪ್ಪುತ್ತಾರೆ. ತಾವು ಮಹಾತ್ಮರಿಗೆ ಇಬಾದತ್ (ಆರಾಧನೆ) ಸಲ್ಲಿಸುತ್ತಿರುವವರೆಂದು ಅರಬಿಯರು ಹೆಮ್ಮೆಪಟ್ಟುಕೊಳ್ಳುತ್ತಿದ್ದರೂ ಮುಸ್ಲಿಮರು ಹಾಗೆ ವಾಚಾ ಒಪ್ಪುವುದಿಲ್ಲ.

ಹೀಗೆ ಬಾಹ್ಯವಾದ ಕೆಲವು ವ್ಯತ್ಯಾಸಗಳಿದ್ದರೂ ವಾಸ್ತವದಲ್ಲಿ ಉಭಯ ಪಕ್ಷದವರಿಗೆ ಪರಸ್ಪರ ಅನೇಕ ಸಾಮ್ಯತೆಗಳಿವೆ. ಹೀಗೆ ಮುಸ್ಲಿಮರು ಹಿಂದಕ್ಕೆ ನಡೆದು ನಡೆದು ಪುರಾತನ ಅರಬಿಯರ ಅಧಮಾವಸ್ಥೆಯನ್ನು ತಲಪಿದ್ದಾರೆ! ಹಝ್ರತ್ ಶಾಹ್‌ವಲಿಯುಲ್ಲಾಹ್(ರ) ತನ್ನ ಕಾಲದ ಮುಸ್ಲಿಮರನ್ನು ಕುರಿತು ಮೇಲೆ ಹೇಳಿದ ಗ್ರಂಥದಲ್ಲೇ ಹೀಗೆ ಬರೆದಿದ್ದಾರೆ: "ಇವರು ಗೋರಿಗಳಲ್ಲೂ ಜಾರಗಳಲ್ಲೂ ಶಿರ್ಕ್‌ನಂತಹ ಹಲವು ಕರ್ಮಗಳನ್ನು ಮಾಡುತ್ತಿದ್ದಾರೆ. ಅರಬಿಯರ ಮಧ್ಯದಲ್ಲಿದ್ದಂತೆ ಇವರ ಮಧ್ಯದಲ್ಲೂ ಹಲವು ಮೂಢನಂಬಿಕೆಗಳೂ ಅನಾಚಾರಗಳೂ ಬಂದು ಸೇರಿವೆ. 'ನೀವು ನಿಮ್ಮ ಪೂರ್ವಜರ ಆಚಾರಗಳನ್ನು ಅನುಸರಿಸುವಿರಿ' ಎಂಬ ಪ್ರವಾದಿ ವಚನವನುಸಾರ ಇವರು ಅರಬಿಯರ ವಿಶ್ವಾಸಗಳಲ್ಲೂ ಆಚಾರಗಳಲ್ಲೂ ಯಾವುದನ್ನೂ ಬಿಡದೆ ಕೈಗೊಂಡಿದ್ದಾರೆ." ಈ ಪುಣ್ಯಪುರುಷರು ಮೇಲಿನಂತೆ ಪ್ರಸ್ತಾಪಿಸಿದ್ದು ಸುಮಾರು 250 ವರ್ಷಗಳ ಮುಂಚಿನ ಮುಸ್ಲಿಮರ ಸ್ಥಿತಿಯನ್ನಾಗಿದೆ. ಇಂದು ಅವರ ಅನುಗಾಮಿಗಳ ಸ್ಥಿತಿ ಅದರ ಪರಾಕಾಷ್ಠೆಗೆ ತಲಪಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಪ್ರಾರ್ಥಿಸುವವರ ಆಲಾಪವನ್ನು ಕೇಳಲಿಕ್ಕಾಗಲಿ ಅದಕ್ಕೆ ಉತ್ತರ ಕೊಡಲಿಕ್ಕಾಗಲಿ ಅವರ ಅಭೀಷ್ಟಗಳನ್ನು ಈಡೇರಿಸಿಕೊಡಲಿಕ್ಕಾಗಲಿ ಶಕ್ತರೆಂದು ಭಾವಿಸಿ ದೇವೇತರರೊಡನೆ ಪ್ರಾರ್ಥಿಸುವುದರ ಮೂಲಕ ಅವರಿಗೆ ದೇವೇತ್ವವನ್ನು ಕಲ್ಪಿಸುವುದರಿಂದ ಅದು ಕಟು ಶಿರ್ಕೆಂದು ಸಾಬೀತಾಗುತ್ತದೆ.

ಹಿಂದಿನ ಕಾಲದ ಅರಬಿಯರು ಪ್ರಾರ್ಥಿಸುತ್ತಿದ್ದುದು ದುಷ್ಟ ಶಕ್ತಿಗಳೊಡನೆ ಮತ್ತು ವಿಗ್ರಹಗಳೊಡನೆ ಆಗಿರುವುದರಿಂದ ಪವಿತ್ರ ಖುರ್‌ಆನ್ ಅವರ ಆ ಆಚಾರಗಳನ್ನು ಖಂಡಿಸಿ ನಿಷಿದ್ಧಾಚಾರಗಳೆಂದು ವಿಧಿಸಿದೆಯೆಂದೂ ಆದರೆ ತಾವು ಪ್ರಾರ್ಥಿಸುವುದು ಅಲ್ಲಾಹನ ಪ್ರೀತಿಗೆ ಪಾತ್ರರಾಗಿರುವ ಪುಣ್ಯಪುರುಷರೊಡನೆ ಆಗಿರುವುದರಿಂದ ದೇವೇತರರೊಡನೆ ಪ್ರಾರ್ಥಿಸಬಾರದೆಂಬ ನಿಷೇಧಾಜ್ಞೆ ತಮಗೆ ಅನ್ವಯಿಸುವುದಿಲ್ಲವೆಂಬ ಒಂದು ಕೃತ್ರಿಮ ಸಮಾಧಾನವು ಹಾಗೆ ಪ್ರಾರ್ಥಿಸುವ ಕೆಲವರಿಗೆ ತೋಚಬಹುದಾದುದರಿಂದ ಆ ಬಗ್ಗೆ ಇಲ್ಲಿ ಎರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಅರಬಿಯರು ಆರಾಧಿಸುತ್ತಲೂ ಪ್ರಾರ್ಥಿಸುತ್ತಲೂ ಇದ್ದ ಪ್ರಧಾನ ದೇವತೆಗಳು ಅವರಿಗೆ ಮುಂಚಿ ಗತಿಸಿದ ಮಹಾತ್ಮರಾಗಿದ್ದರು. ಆ ನಿಮಿತ್ತ, ಅವರ ಪ್ರಾರ್ಥನೆ ದುಷ್ಟ ಶಕ್ತಿಗಳೊಡನೆ ಆಗಿರುವುದರಿಂದ ಖುರ್‌ಆನ್ ಅದನ್ನು ಖಂಡಿಸಿತು ಎಂಬ ನ್ಯಾಯವನ್ನು ಹಿಡಿದು ಆ ಪವಿತ್ರ ಗ್ರಂಥದ ವಿಧಿಯಿಂದ ಇಂದು ಮಹಾತ್ಮರನ್ನು ಕರೆದು ಪ್ರಾರ್ಥಿಸುವ ಮುಸ್ಲಿಮರಿಗೆ ತಲೆ ತಪ್ಪಿಸಲು

ಸಾಧ್ಯವಿಲ್ಲ. ಒಂದು ವ್ಯತ್ಯಾಸವನ್ನು ಒಪ್ಪಬಹುದು. ಅದೇನೆಂದರೆ, ಪೂರ್ವಕಾಲದ ಅರಬಿಯರು ಗತಿಸಿದ ಮಹಾತ್ಮರುಗಳ ಪ್ರತಿಮೆಗಳನ್ನು ನಿರ್ಮಿಸಿ ಪ್ರಾರ್ಥನೆಗಳನ್ನು ಸಲ್ಲಿಸುತ್ತಿದ್ದರು. ಪವಿತ್ರ ಖುರ್‌ಆನ್ ಸೂರಃ ನೂಹ್‌ನಲ್ಲಿ ಪ್ರಸ್ತಾಪಿಸಿರುವ ವದ್ದ್, ಸುವಾಅ್, ಯಗೂಸ್ ಮುಂತಾದ ವಿಗ್ರಹಗಳು ಗತಿಸಿದ ಮಹಾತ್ಮರ ಪ್ರತಿಮೆಗಳಾಗಿದ್ದುವೆಂದು ಹೆಚ್ಚಿನ ಎಲ್ಲಾ ವ್ಯಾಖ್ಯಾನ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಈ ಬಗ್ಗೆ ಹಝ್ರತ್ ಇಬ್ನು ಅಬ್ಬಾಸ್ (ರ) ಹೇಳಿದುದಾಗಿ "ಬುಖಾರಿ"ಯಲ್ಲಿ ಹೀಗೆ ಉಲ್ಲೇಖವಿದೆ: "ಇವು ನೂಹ್ ಪ್ರವಾದಿಯ ಜನತೆಯ ಸುಕೃತರ ನಾಮಗಳಾಗಿವೆ. ಇವರ ಮರಣಾನಂತರ ಕೆಲವು ದುರಾತ್ಮರು, ಇವರು ಬಳಸಿದ ಸ್ಥಳಗಳಲ್ಲಿ ಇವರ ಪ್ರತಿಮೆಗಳನ್ನು ಸ್ಥಾಪಿಸಿ ಅವುಗಳನ್ನು ಇವರ ಹೆಸರುಗಳಿಂದ ಕರೆಯಬೇಕೆಂದು ಜನರಿಗೆ ಉಪದೇಶಿಸಿದರು. ಆ ಪ್ರಕಾರ ಆ ಜನರು ವರ್ತಿಸಿದರು. ಆದರೆ ಇವರು ಆರಾಧಿಸಲ್ಪಡಲಿಕ್ಕೆ ಆರಂಭವಾದುದು ಈ ಜನರು ಮೃತಪಟ್ಟು, ಆ ಬಳಿಕದ ಜನರಿಗೆ ಅಜ್ಞತೆ ಬಾಧಿಸಿದ ಬಳಿಕವಾಗಿದೆ." (ಕಿತಾಬು ತಫ್‌ಸೀರ್).

ಅರಬಿಯರ ಪ್ರಧಾನ ದೇವತೆಯಾದ 'ಲಾತ್', ಹಜ್ ಯಾತ್ರಿಕರ ಪರಿಚಾರ ಮಾಡುತ್ತಿದ್ದ ಒಬ್ಬ ವ್ಯಕ್ತಿಯಾಗಿದ್ದರೆಂದು ಹಝ್ರತ್ ಇಬ್ನು ಅಬ್ಬಾಸ್ (ರ) ಹೇಳಿದುದಾಗಿ 'ಬುಖಾರಿ'ಯಲ್ಲಿ ಉಲ್ಲೇಖನವಿದೆ. ಬೇರೆ ಕೆಲವು ವರದಿಗಳಿಂದ 'ಲಾತ್' ಮೃತಪಟ್ಟ ನಂತರ ಅರಬಿಯರು ಆತನ ಸಮಾಧಿಯನ್ನು ಪೂಜಿಸಲು ತೊಡಗಿದರೆಂದು ತಿಳಿದು ಬರುತ್ತದೆ. ('ದುರ್ರುಲ್ ಮನ್‌ಸೂರ್' ನೋಡಿರಿ). ಅರಬಿಯರ ದೇವತೆಗಳಲ್ಲಿ ಪ್ರವಾದಿ ಇಬ್ರಾಹೀಂ (ಅ) ಮತ್ತು ಪ್ರವಾದಿ ಇಸ್ಮಾಯೀಲ್ (ಅ) ಸಹ ಒಳಗೊಂಡಿದ್ದಾರೆಂದು ಸಹ 'ಬುಖಾರಿ'ಯಲ್ಲಿರುವ ನಿವೇದನದಲ್ಲಿ ಕಾಣಬಹುದು. ಹಝ್ರತ್ ಇಬ್ನು ಅಬ್ಬಾಸ್ (ರ) ಹೀಗೆ ಹೇಳುತ್ತಾರೆ: "ಪೈಗಂಬರರು (ಸ) ಮಕ್ಕಾಕ್ಕೆ ಹೋದಾಗ ಕಅಬದೊಳಗೆ ಪ್ರವೇಶಿಸಲಿಕ್ಕೆ ಸಮ್ಮತಿಸಲಿಲ್ಲ. ಅದರೊಳಗೆ ದೇವತೆಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಪೈಗಂಬರರ ಆದೇಶಾನುಸಾರ ಅವುಗಳನ್ನು ಹೊರತೆಗೆಯಲಾಯಿತು; ಪ್ರವಾದಿ ಇಬ್ರಾಹೀಂ ಮತ್ತು ಪ್ರವಾದಿ ಇಸ್ಮಾಯೀಲ್ ಅವರ ಪ್ರತಿಮೆಗಳನ್ನು ಸಹ ಹೊರತರಲಾಯಿತು." (ಬುಖಾರಿ–ಕಿತಾಬುಲ್ ಮಗಾಸಿ).

ಖುರ್‌ಆನಿನ 46ನೇ ಸೂರ, ರುಕೂ ಒಂದರಲ್ಲಿ "ಅಲ್ಲಾಹನನ್ನು ಬಿಟ್ಟು ಇತರರೊಡನೆ ಪ್ರಾರ್ಥಿಸುವವನಿಗಿಂತ ದಾರಿ ತಪ್ಪಿದವನು ಬೇರೆ ಯಾರು? ಅವರು ಪುನರುತ್ಥಾನ ದಿನದ ವರೆಗೆ ಅವನ ಕೋರಿಕೆಯನ್ನು ಈಡೇರಿಸಲಾರರು; ಅವರು ಅವನ ಪ್ರಾರ್ಥನೆಯ ಬಗ್ಗೆ ಅರಿವಿಲ್ಲದವರು. ಮನುಷ್ಯರು ಪುನರುತ್ಥಾನಗೊಳಿಸಲ್ಪಡುವ ದಿನ ಅವರು (ಪ್ರಾರ್ಥಿಸಲ್ಪಟ್ಟವರು) ಇವರ ವಿರೋಧಿಗಳಾಗುವರು ಹಾಗೂ ಇವರ ಆರಾಧನೆಯನ್ನು ಅಲ್ಲಗಳೆಯುವರು" ಎಂದು ಪ್ರಸ್ತಾಪಿಸಿರುವುದನ್ನು ವ್ಯಾಖ್ಯಾನಿಸುತ್ತಾ ಇಮಾಂ ರಾಸೀ (ರ) ಹೀಗೆ ಹೇಳುತ್ತಾರೆ: "ಈ ಪ್ರಾರ್ಥಿಸುವವರು ಮಲಕ್‌ಗಳನ್ನೂ (ದೇವದೂತರನ್ನೂ) ಪ್ರವಾದಿ ಈಸಾರನ್ನೂ ಆರಾಧಿಸುವವರಾಗಿದ್ದರು; ನ್ಯಾಯ ವಿಚಾರಣಾ ದಿನ ಅವರು (ಪ್ರಾರ್ಥಿತರು) ಈ ಪೂಜಕರೊಡನೆ ವಿರಸ ತೋರಿಸುವರು ಎಂದು ಕೆಲವರು ಮೇಲಿನ ವಾಕ್ಯದ ಅರ್ಥ ಹೇಳಿರುವರು...... ದೇವರನ್ನು ಬಿಟ್ಟು ಪ್ರಾರ್ಥಿಸಲ್ಪಡುವವರಲ್ಲಿ ದೇವದೂತರು, ಪ್ರವಾದಿ ಈಸಾ, ಪ್ರವಾದಿ ಉಸೈರ್ ಮತ್ತು ವಿಗ್ರಹಗಳು ಸೇರಬಹುದು." ಮತ್ತೂ ಅವರು ಹೀಗೆ ಹೇಳುತ್ತಾರೆ: "ದೇವರನ್ನು ಬಿಟ್ಟು ಪೂಜಿಸಲ್ಪಡುವವರಲ್ಲಿ ವಿಗ್ರಹಗಳೂ ಸೂರ್ಯಚಂದ್ರರೂ ಮನುಷ್ಯರೂ ಜಿನ್ನುಗಳೂ ಮಲಕ್‌ಗಳೂ ಸೇರುತ್ತವೆ" (ಕಬೀರ್, ಸಂಪುಟ 4, ಪುಟ 568). ಇನ್ನೊಂದು ಕಡೆಯಲ್ಲಿ ಅವರು ಹೀಗೆ ಬರೆದಿರುತ್ತಾರೆ: "ಅರಬಿಯರು ಈ ವಿಗ್ರಹಗಳನ್ನು ತಮ್ಮ ಪ್ರವಾದಿಯರ ಮತ್ತು ಮಹಾತ್ಮರುಗಳ ಆಕೃತಿಯಲ್ಲಿ ಪ್ರತಿಷ್ಠಾಪಿಸಿ, ಆ ಪ್ರತಿಮೆಗಳನ್ನು ಆರಾಧಿಸುವುದಾದರೆ ಅವುಗಳ ಆತ್ಮಗಳು ತಮಗೋಸ್ಕರ ದೇವ ಸನ್ನಿಧಿಯಲ್ಲಿ ಶಿಫಾರಸ್ಸು ಮಾಡುವುವೆಂದು ನಂಬುತ್ತಿದ್ದರು. ಅದೇ ಪ್ರಕಾರ ಈ ಕಾಲದ ಹೆಚ್ಚಿನ ಜನರು ಮಹಾತ್ಮರುಗಳ ಗೋರಿಗಳಿಗೆ ವಂದಿಸಿ ಈ ವಂದನೆ ಮೂಲಕ ಅವರು ದೇವಸನ್ನಿಧಿಯಲ್ಲಿ ತಮ್ಮ ಶಿಫಾರಸ್ಸು ಮಾಡುವರೆಂದು ನಂಬುತ್ತಾರೆ" (ಕಬೀರ್, ಸಂಪುಟ 4, ಪುಟ 556). ಇದರಿಂದ, ಅರಬಿಯರು ದೇವತೆಗಳೆಂದು ಆರಾಧಿಸುತ್ತಿದ್ದುದು ಪ್ರವಾದಿಯರನ್ನೂ ಮಹಾತ್ಮರುಗಳನ್ನೂ ಆಗಿತ್ತೆಂದು ಸಾಬೀತಾಗುವುದು ಮಾತ್ರ

ವಲ್ಲ. ಇಮಾಂ ರಾಸೀಯವರ ಕಾಲದ – 6ನೇ ಶತಮಾನದ – ಮುಸ್ಲಿಮರು ಕೂಡ ಪುರಾತನ ಅರಬಿಯರ ಮೂಢವಿಶ್ವಾಸಗಳನ್ನು ಕೈಗೊಂಡಿದ್ದರೆಂದು ಸಹ ರುಜುವಾಗುತ್ತದೆ. ಇದೇ ಸಂಗತಿಯನ್ನು ಹಝ್ರತ್ ಮುಹದ್ದಿಸ್ ದಹ್ಲವಿ (ರ) ತನ್ನ 'ಫೌಸುಲ್ ಕಬೀರ್'ನಲ್ಲಿ ಇನ್ನೂ ವರ್ಣಿಸಿದ್ದಾರೆ.

ಅರಬಿಯರು ದೇವತೆಗಳೆಂದು ನಂಬಿ ಪ್ರಾರ್ಥಿಸುತ್ತಿದ್ದುದು ಮನುಷ್ಯರನ್ನೂ ಮಲಕ್‌ಗಳನ್ನೂ ಆಗಿತ್ತೆಂದು ಪವಿತ್ರ ಖುರ್‌ಆನಿನಿಂದಲೂ ಗ್ರಹಿಸಬಹುದಾಗಿದೆ. ಖುರ್‌ಆನ್ ಹೀಗೆ ಹೇಳುತ್ತದೆ: "ಹೇಳಿರಿ: ಅಲ್ಲಾಹನನ್ನು ಬಿಟ್ಟು ನೀವು (ದೇವತೆಗಳೆಂದು) ನಂಬುವವರೊಡನೆ ಪ್ರಾರ್ಥಿಸಿ ನೋಡಿರಿ; ಅವರು ನಿಮ್ಮ ಸಂಕಷ್ಟಗಳನ್ನು ನಿವಾರಿಸಲಿಕ್ಕಾಗಲಿ ಬದಲಾಯಿಸಲಿಕ್ಕಾಗಲಿ ಶಕ್ತರಲ್ಲ. ಇವರು ಯಾರನ್ನು ಕರೆದು ಪ್ರಾರ್ಥಿಸುವರೋ ಅವರೇ ತಮ್ಮ ದೇವರ ಸಾಮಿಪ್ಯವನ್ನು ಕಾಂಕ್ಷಿಸುತ್ತಾರೆ" (17 : 57, 58).

ಖುರ್‌ಆನಿನ ವ್ಯಾಖ್ಯಾನಗಾರರಲ್ಲಿ ಹಲವರು ಈ ವಾಕ್ಯದ ವ್ಯಾಖ್ಯಾನ ಬರೆಯುವಾಗ, ಇದರಲ್ಲಿ 'ಅಲ್ಲಾಹನ ಹೊರತು ಆರಾಧಿಸಲ್ಪಡುವವರು' ಎಂಬುದರ ತಾತ್ಪರ್ಯ ಮಲಕ್‌ಗಳು, ಈಸಾನಬಿ, ಉಸ್ಸೈರ್‌ನಬಿ ಮೊದಲಾದವರೆಂದು ಪ್ರಸ್ತಾಪಿಸಿರುವರು. ಆ ಪ್ರಾರ್ಥಿಸಲ್ಪಡುವವರೇ ದೇವಸಾಮಿಪ್ಯವನ್ನು ಅರಸುವವರಾಗಿದ್ದಾರೆಂದು ಪ್ರಸ್ತಾಪಿಸಿರುವುದರಿಂದ ಇದರಲ್ಲಿ ದೇವೇತರರು ಎಂದು ಹೇಳಿದುದರ ತಾತ್ಪರ್ಯ ಮಹಾತ್ಮರುಗಳೂ ಮಲಕ್‌ಗಳೂ ಆಗಿದ್ದರೆಂದು ಒಪ್ಪದಿರಲಿಕ್ಕೆ ನಿರ್ವಾಹವಿಲ್ಲ.

ಅಲ್ಲಾಮಃ ಅಬುಸ್ಸಊದ್ ತನ್ನ ತಫ್ಸೀರ್‌ನಲ್ಲಿ, 'ದೇವರ ಹೊರತು ಪ್ರಾರ್ಥಿಸಲ್ಪಡುವವರು' ಎಂಬುದರ ತಾತ್ಪರ್ಯ ಮಲಕ್, ಈಸಾನಬಿ, ಉಸ್ಸೈರ್‌ನಬಿ ಮೊದಲಾದವರೆಂದೂ 'ವಸೀಲ' ಎಂದರೆ 'ದೇವಸಾಮಿಪ್ಯ'ವೆಂದೂ, ಆ ಪ್ರಾರ್ಥಿತರು ಭಕ್ತ್ಯಾರಾಧನ ರೂಪದಲ್ಲಿ ದೇವಸಾಮಿಪ್ಯವನ್ನು ಬಯಸಿದವರೆಂದೂ ಹೇಳಿದ್ದಾರೆ. ಇದೇ ಅರ್ಥವನ್ನು ಕೇರಳದ ಮುಸ್ಲಿಮರಿಗೆ ಸುಪರಿಚಿತ "ಜಲಾಲೈನ್" ಎಂಬ ತಫ್ಸೀರ್‌ನಲ್ಲೂ ಅದರ ಭಾಷ್ಯಗ್ರಂಥ "ಜಮಲ್"ನಲ್ಲೂ ಕಾಣಬಹುದು.

ಹಝ್ರತ್ ಇಬ್ನು ಅಬ್ಬಾಸ್ (ರ) ಹೇಳಿದುದು ಸಹ ಇದೇ ಅರ್ಥವನ್ನೆಂದು ಇಬ್ನು ಜರೀರ್ (ರ) ಮೊದಲಾದವರು ನಿವೇದಿಸಿದ್ದಾರೆ. ಸಂಕ್ಷೇಪವಾಗಿ ಹೇಳುವುದಾದರೆ, ಅರಬಿಯರು ಪ್ರಾರ್ಥಿಸುತ್ತಿದ್ದುದು ದುಷ್ಟ ಶಕ್ತಿಗಳೊಡನೆ ಮಾತ್ರವಲ್ಲ, ಪ್ರವಾದಿಗಳು, ಪುಣ್ಯ ಪುರುಷರು, ದೇವದೂತರು ಮೊದಲಾದವರೊಡನೆ ಸಹ ಆಗಿತ್ತೆಂದು ಬಹಳ ಸ್ಪಷ್ಟವಾಗಿರುತ್ತದೆ. ಆದರೆ ಖುರ್‌ಆನ್ ಎಲ್ಲಿಯೂ ಇಂತಹವರೊಡನೆ ಪ್ರಾರ್ಥಿಸಬಹುದೆಂಬುದಕ್ಕೆ ಯಾವ ಸೂಚನೆಯನ್ನಾಗಲಿ ನೀಡದೆ, ದೇವೇತರೊಡನೆ ಪ್ರಾರ್ಥಿಸಬಾರದೆಂದು ಖಡಾ ಖಂಡಿತ ವಿರೋಧಿಸಿ ಸಕಲ ಜೀವಾತ್ಮಗಳನ್ನು 'ದೇವೇತರರು' ಎಂಬ ವರ್ಗದಲ್ಲಿ ಸೇರಿಸಿದೆ. ಇದರಿಂದ ಮೃತರಾದ ಪುಣ್ಯವಂತರು ಪ್ರವಾದಿಯರಾದರೂ ಸರಿ, ಅವರೊಡನೆ ಪ್ರಾರ್ಥಿಸಬಾರದೆಂದೂ 'ದೇವೇತರರು' ಎಂಬುದರಲ್ಲಿ ಪ್ರವಾದಿಯರು ಸಹ ಸೇರುತ್ತಾರೆಂದೂ ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ, ತಾವು ಪ್ರಾರ್ಥಿಸುವ ಮಹಾತ್ಮರುಗಳು ದೇವರ ವರಪ್ರಸಾದ ಗಳಿಸಿದವರಾದ ಕಾರಣ ಅವರೊಡನೆ ಪ್ರಾರ್ಥಿಸಬಹುದೆಂದು ಮುಸ್ಲಿಮರಲ್ಲಿ ಯಾರಾದರೂ ವಾದಿಸುವುದಾದರೆ ಅದು ಪವಿತ್ರ ಖುರ್‌ಆನಿನ ಸಿದ್ಧಾಂತಗಳಿಗೆ ತೀರಾ ವಿರುದ್ಧವೂ ಅವರ ಆ ವರ್ತನೆಗಳು ಹಳೆಯ ಅರಬಿಯರ ನಡೆವಳಿಕೆಗಳಿಗೆ ಸರಿಹೊಂದುತ್ತವೆಯೆಂದೂ ಹೇಳಲೇ ಬೇಕಾಗುತ್ತದೆ.

ದೇವೇತರರೊಡನೆ ಪ್ರಾರ್ಥಿಸುವುದನ್ನು ಖುರ್‌ಆನ್ ವಿರೋಧಿಸಿದ ಸಂದರ್ಭಗಳಲ್ಲಿ 'ಪ್ರಾರ್ಥನೆ' ಎಂಬುದರ ತಾತ್ಪರ್ಯ 'ಆರಾಧನೆ' ಆಗಿದೆಯೆಂದೂ, ಆದ್ದರಿಂದ ದೇವೇತರರನ್ನು ಆರಾಧಿಸಬಾರದೆಂದು ಹೊರತು ಅವರೊಡನೆ ಪ್ರಾರ್ಥಿಸಕೂಡದೆಂದಾಗುವುದಿಲ್ಲವೆಂದು ಹೇಳುತ್ತಾ ಕೆಲವರು ತಮ್ಮ ಬಹುದೇವೋಪಾಸಕ ಕರ್ಮವನ್ನು ಸಮರ್ಥಿಸಲು ಶ್ರಮಿಸುತ್ತಾರೆ. ಇದೊಂದು ವೃಥಾಶ್ರಮವೆಂದು ಪವಿತ್ರ ಖುರ್‌ಆನನ್ನು ಅಧ್ಯಯನ ಮಾಡುವವರಿಗೆ ಮನವರಿಕೆಯಾಗಬಹುದು. ಒಂದನೆಯದಾಗಿ, 'ಪ್ರಾರ್ಥನೆ' ಮುಖ್ಯವಾದೊಂದು ಆರಾಧನಾ ಕರ್ಮವೆಂದು ಖುರ್‌ಆನ್‌ನಿಂದಲೂ ಪ್ರವಾದಿ ವಚನಗಳಿಂದಲೂ ಸಾಬೀತಾಗುವುದರಿಂದ 'ಪ್ರಾರ್ಥಿಸಬಾರದು' ಎಂಬುದಕ್ಕೆ 'ಆರಾಧಿಸಬಾರದು' ಎಂದು ಅರ್ಥೈಸುವುದಾದರೆ ಕೂಡ ದೇವೇತರರೊಡನೆ ಮಾಡುವ

ಪ್ರಾರ್ಥನೆ ಧರ್ಮಸಮ್ಮತವೆಂದು ಸಾಬೀತಾಗದು. ತದ್ವಿರುದ್ಧವಾಗಿ, ಪ್ರಾರ್ಥನೆಯು ಆರಾಧನೆಯ ಮುಖ್ಯಾಂಶವಾದುದರಿಂದ 'ಆರಾಧಿಸಬಾರದು' ಎಂಬುದರಿಂದಲೇ ದೇವೇತರರೊಡನೆ ಪ್ರಾರ್ಥಿಸಬಾರದು ಎಂದು ರುಜುವಾಗುತ್ತದೆ. ಒಟ್ಟಾರೆ, 'ಪ್ರಾರ್ಥಿಸಕೂಡದು' ಎಂಬುದಕ್ಕೆ 'ಆರಾಧಿಸಕೂಡದು' ಎಂದು ಅರ್ಥಕೊಟ್ಟು ದೇವೇತರರೊಡನೆ ಪ್ರಾರ್ಥಿಸಬಹುದೆಂದು ಭಾವಿಸುವುದು ಮಿಥ್ಯಾ ವಿಚಾರವಾಗಿದೆ. ಈ ರೀತಿಯ ಪ್ರಾರ್ಥನೆ ಧರ್ಮಾನುಸಾರವೆಂದು ಹೇಳುವುದಾದರೆ, ಪ್ರಾರ್ಥನೆ ಆರಾಧನೆಯ ಮುಖ್ಯಾಂಶವೆಂದು ಅರ್ಥ ಕೊಡುವ ಖುರ್‌ಆನ್ ವಾಕ್ಯಗಳನ್ನೂ ಪ್ರವಾದಿ ವಚನಗಳನ್ನೂ ತ್ಯಾಜ್ಯವೆಂದು ಪರಿಗಣಿಸಬೇಕಾದೀತು. ಅದಕ್ಕೆ ಸಿದ್ಧರಿಲ್ಲದವರೆಲ್ಲರೂ ಈ ಮಿಥ್ಯಾಕರ್ಮದಿಂದ ವಿರಮಿಸಬೇಕಾಗಿದೆ.

ಎರಡನೆಯದಾಗಿ, ದೇವೇತರರೊಡನೆ ಪ್ರಾರ್ಥಿಸಬಾರದೆಂದು ಪವಿತ್ರ ಖುರ್‌ಆನ್ ವಿರೋಧಿಸಿರುವಾಗ, ಪ್ರಾರ್ಥಿಸಬಾರದೆಂಬ ನಿರೋಧ ವಾಕ್ಯಗಳಿಗೆ ಆರಾಧಿಸಬಾರದೆಂದೇ ಅರ್ಥ ಕೊಡಬೇಕಾದ ಅಗತ್ಯವಿಲ್ಲ; ಹಾಗೆ ಅರ್ಥೈಸುವುದು ಯುಕ್ತವೂ ಅಲ್ಲ. ದೇವೇತರರೊಡನೆ ಮಾಡುವ ಪ್ರಾರ್ಥನೆಯನ್ನು ಪವಿತ್ರ ಖುರ್‌ಆನ್ ಹಲವೆಡೆಗಳಲ್ಲಿ ಖಂಡಿಸಿರುವಾಗ, ಅದರ ಉದ್ದೇಶಿತಾರ್ಥ 'ಆರಾಧಿಸಬಾರದು' ಎಂದು ಹೇಳುವುದು ಸರಿಯೆಂದಾದರೆ, ಆರಾಧನೆಯನ್ನು ವಿರೋಧಿಸಿರುವ ಕಡೆಗಳಲ್ಲೆಲ್ಲಾ ಪ್ರಾರ್ಥಿಸಬಾರದೆಂದು ಅರ್ಥೈಸಬಹುದಾಗಿದೆ. ಅಷ್ಟೇ ಅಲ್ಲ, ದೇವೇತರರೊಡನೆ ಪ್ರಾರ್ಥಿಸಬಹುದೆಂಬುದಕ್ಕೆ ಆಧಾರ ಸಿಗುವ ಪಕ್ಷದಲ್ಲಿ ಈ ನ್ಯಾಯಾನುಸಾರ ಅದರಲ್ಲಿನ ಪ್ರಾರ್ಥನೆಗೆ ಆರಾಧನೆ ಎಂದು ಅರ್ಥಮಾಡಬಹುದು. ಆ ಅರ್ಥವನ್ನು ಸ್ವೀಕರಿಸಿ ಯಾರಾದರೂ ದೇವೇತರರನ್ನು ಆರಾಧಿಸಲು ತೊಡಗುವುದಾದರೆ, ಪ್ರಾರ್ಥಿಸಬಾರದೆಂಬ ಅಂಶಕ್ಕೆ ಆರಾಧಿಸಬಾರದೆಂದು ಅರ್ಥ ಹೇಳುವವರ ಬಳಿ ಯಾವ ಎದುರು ನ್ಯಾಯವನ್ನಾಗಲಿ ಹೇಳಲಿಕ್ಕೆ ಇರಲಾರದು. ಹೀಗೆ, ದೇವೇತರರೊಡನೆ ಪ್ರಾರ್ಥಿಸಬಹುದೆಂದು ಯಾವ ಆಧಾರದಿಂದ ಸಿದ್ಧವಾಗುವುದೋ ಅದೇ ಆಧಾರ ಪ್ರಕಾರ ಅವರನ್ನು ಆರಾಧಿಸಬಹುದೆಂದು ಕೂಡ ಸಿದ್ಧವಾಗುವುದಷ್ಟೇ. ಆದರೆ, ಒಂದು ವಾಕ್ಯದ ಯಾವುದಾದರೊಂದು ಪದಕ್ಕೆ ಧಾತ್ವರ್ಥ ಕೊಡಬಾರದೆಂದು ಅದರ ಪೂರ್ವಾಪರ ಸಂಬಂಧದಿಂದ ಸಾಬೀತಾಗುವುದರ ಹೊರತು ಅದಕ್ಕೆ ಇಂಗಿತಾರ್ಥ ಕೊಡಬಾರದು. ಪ್ರಾರ್ಥನೆ ಎಂಬುದರ ಮೂಲಕ ಖುರ್‌ಆನ್ ಉದ್ದೇಶಿಸುವುದು 'ಆರಾಧನೆ'ಯನ್ನಾಗಿದೆಯೆಂದು ಹೇಳುವವರಿಗೆ ಒಂದು ಉತ್ತರವನ್ನು ತಫ್ಸೀರ್ ಕಬೀರ್‌ನಲ್ಲಿ ಹೀಗೆ ಕಾಣಬಹುದು: "ಪ್ರತ್ಯೇಕ ಸಾಕ್ಷ್ಯಹೊರತು ಬಾಹ್ಯಾರ್ಥವನ್ನು ಉಪೇಕ್ಷಿಸುವುದು ಸ್ವೀಕಾರಾರ್ಹವಲ್ಲ" (ಸಂಪುಟ 7, ಪುಟ 323). ಖುರ್‌ಆನಿನ ಹಲವು ಕಡೆಗಳಲ್ಲಿ ಪ್ರಯುಕ್ತವಾಗಿರುವ ಒಂದು ಪದಕ್ಕೆ ಧಾತ್ವರ್ಥ ಕೊಡಬಹುದೆಂದು ಕಂಡರೆ, ಪೂರ್ವಾಪರ ಸಂಬಂಧದಿಂದ ಯಾವ ಸೂಚನೆಯೂ ಲಭಿಸದೆ ಆ ಪದಕ್ಕೆ ಎಲ್ಲೆಡೆಯಲ್ಲೂ ಇಂಗಿತಾರ್ಥ ಕೊಡುವುದು ಎಂದಿಗೂ ಯುಕ್ತವಲ್ಲ.

ಮೂರನೆಯದಾಗಿ, ದೇವೇತರರೊಡನೆ ಪ್ರಾರ್ಥನೆಯನ್ನು ವಿರೋಧಿಸಿರುವ ಖುರ್‌ಆನಿನ ಹೆಚ್ಚಿನ ವಾಕ್ಯಗಳಿಗೆ ಆರಾಧಿಸಬಾರದೆಂಬ ಅರ್ಥ ಕೊಡಲಿಕ್ಕೆ ಪೌರ್ವಾಪರ್ಯ ಒಪ್ಪುವುದಿಲ್ಲ. ಇದಕ್ಕೆ 46ನೇ ಅಧ್ಯಾಯದ 6ನೇ ವಾಕ್ಯ, 35ನೇ ಅಧ್ಯಾಯದ 15ನೇ ವಾಕ್ಯ ಮತ್ತು 7ನೇ ಅಧ್ಯಾಯದ 195ನೇ ವಾಕ್ಯ ಉದಾಹರಣೆಗಳು. ಅವುಗಳಲ್ಲಿ ಪ್ರಯುಕ್ತವಾಗಿರುವ 'ಯದ್‌ಊ' 'ದುಆ' 'ತದ್‌ಊನ್' 'ತದ್‌ಊ', 'ಫದ್‌ಊ' ಎಂಬ ಪದಗಳು ಪ್ರಾರ್ಥನೆ ಹೊರತು ಆರಾಧನೆಯನ್ನು ಉದ್ದೇಶಿಸುವುದಿಲ್ಲವೆಂದು ಒಮ್ಮೆ ನೋಡಿದರೆ ಯಾರಿಗೂ ಮನವರಿಕೆಯಾಗಬಹುದು. ಇನ್ನೊಂದೆಡೆಯಲ್ಲಿ ಖುರ್‌ಆನ್ ಹೀಗೆ ಹೇಳುತ್ತದೆ : ಯಥಾರ್ಥ ಪ್ರಾರ್ಥನೆ ಅವನಿ (ಅಲ್ಲಾಹ) ಗಿರುವಂಥಾದ್ದು; ಅವನನ್ನು ಬಿಟ್ಟು ಯರೊಡನೆ ಇವರು ಪ್ರಾರ್ಥಿಸುವರೋ, ಅವರು ಇವರಿಗೆ ಯಾವ ಉತ್ತರವನ್ನೂ ಕೊಡಲಾರರು; (ಇವರಾದರೋ) ನೀರಿಗೆದುರಾಗಿ, ಅದು ತನ್ನ ಬಾಯಲ್ಲಿ ಬಂದು ಸೇರಲಿಕ್ಕಾಗಿ (ದೂರ ನಿಂತು) ಎರಡೂ ಕೈಗಳನ್ನು ಚಾಚಿದವನಂತೆ; ಆದರೆ ಅದು ಅವನ ಬಾಯನ್ನು ತಲಪಲಾರದು; ಅವಿಶ್ವಾಸಿಗಳ ಪ್ರಾರ್ಥನೆ ಅಪಥದಲ್ಲಿ" (13 : 15). ಈ ವಾಕ್ಯದಲ್ಲಿ ಪ್ರಯೋಗಿಸಲ್ಪಟ್ಟಿರುವ 'ದಅವತ್,' 'ಯದ್‌ಊನ್', 'ದುಆಅ್' ಎಂಬ ಪದಗಳಿಗೆ ಕೂಡ ಆರಾಧನೆ ಎಂಬ ಅರ್ಥವನ್ನು ಕೂಡಲು ಅದರ ಪೂರ್ವಾಪರಗಳು ಅವಕಾಶ ಕೊಡುವುದಿಲ್ಲವೆಂಬುದು ಸುಗ್ರಾಹ್ಯ. ಮಾತ್ರವಲ್ಲ, "ನೀವು ಅಲ್ಲಾಹನೊಡನೆ, ರಕ್ಷಾ ಶಿಕ್ಷಾ

ವಿಧಿ ಕರ್ತ ಅವನೆಂಬ ದೃಢ ವಿಶ್ವಾಸದಿಂದ ಪ್ರಾರ್ಥಿಸಿರಿ; ಅವಿಶ್ವಾಸಿಗಳಿಗೆ ಅದು ಅಪ್ರಿಯವಾದರೂ ಸರಿ" (40: 15) ಎಂಬಿತ್ಯಾದಿ ಖುರ್‌ಆನ್ ವಾಕ್ಯಗಳಲ್ಲಿ 'ಪ್ರಾರ್ಥಿಸಿರಿ' ಎಂದು ಹೇಳಿದುದರ ತಾತ್ಪರ್ಯ 'ಆರಾಧಿಸಿರಿ' ಎಂದಾಗಲಾರದೆಂದು ಖುರ್‌ಆನಿನ ಇತರ ವಾಕ್ಯಗಳಿಂದಲೂ ಸ್ಪಷ್ಟವಾಗುತ್ತದೆ. ಉದಾಹರಣೆಗೆ, ದೇವೇತರರೊಡನೆ ಪ್ರಾರ್ಥಿಸುವವರು ಆಪತ್ತಿಗೆ ಸಿಲುಕುವಾಗ ತೋರಿಸುವ ವರ್ತನೆಯ ಬಗ್ಗೆ ಖುರ್‌ಆನ್ ಹೀಗೆ ಹೇಳುತ್ತದೆ: "ಅವರು ಅಲ್ಲಾಹನೊಡನೆ, ರಕ್ಷಾಶಿಕ್ಷಾ ವಿಧಿಕರ್ತ ಅವನೆಂಬ ದೃಢ ವಿಶ್ವಾಸದಿಂದ, ಹೀಗೆ ಪ್ರಾರ್ಥಿಸುತ್ತಾರೆ: ನೀನು ನಮ್ಮನ್ನು ಇದರಿಂದ ರಕ್ಷಿಸುವುದಾದರೆ ಖಂಡಿತವಾಗಿಯೂ ನಾವು ಕೃತಜ್ಞರಾಗುವೆವು" (10: 23). ಈ ವಾಕ್ಯದಲ್ಲೂ ಪ್ರಾರ್ಥನೆ ಎಂಬುವುದಕ್ಕೆ ಆರಾಧನೆ ಎಂದು ಅರ್ಥ ಹೇಳುವುದು ತೀರಾ ಸರಿಹೊಂದುವುದಿಲ್ಲ. ಆಗ, 'ಘದ್‌ಉಲ್ಲಾಹ್' (ಅಲ್ಲಾಹನೊಡನೆ ಪ್ರಾರ್ಥಿಸಿರಿ) ಎಂಬೀ ಆದೇಶಗಳಿಗೆ "ಅಲ್ಲಾಹನನ್ನು ಆರಾಧಿಸಿರಿ" ಎಂದು ಅರ್ಥ ಕೊಡಬಾರದೆಂದು ಸಿದ್ಧವಾಗುತ್ತದೆ. "ದೇವರನ್ನು ಆರಾಧಿಸಿರಿ" ಎಂಬ ಆಜ್ಞೆ ಪವಿತ್ರ ಖುರ್‌ಆನಿನಲ್ಲಿ ಬೇರೆಯೇ ಕಾಣಬಹುದು. ಆದ್ದರಿಂದ, ದೇವೇತರರೊಡನೆ ಪ್ರಾರ್ಥಿಸಬಾರದೆಂದು ಅರ್ಥ ಕೊಡುವ ವಾಕ್ಯಗಳನ್ನು "ಅವರನ್ನು ಆರಾಧಿಸಬಾರದು" ಎಂದು ಅರ್ಥೈಸುವುದು ತೀರಾ ಅಯುಕ್ತವಾಗಿದೆ. ಒಟ್ಟಾರೆ ದೇವರನ್ನು ಬಿಟ್ಟು ಬೇರೆ ಯಾರೊಡನೆಯೂ ಪ್ರಾರ್ಥಿಸಬಾರದೆಂದು ಪವಿತ್ರ ಖುರ್‌ಆನ್ ಶಕ್ತಿಯುತವಾಗಿ ಪ್ರಬೋಧಿಸುತ್ತದೆಂದು ಇಷ್ಟರಿಂದಲೇ ಸ್ಪಷ್ಟವಾಗುತ್ತದೆ.

ಮೇಲಿನ ಖುರ್‌ಆನ್ ವಾಕ್ಯಗಳಿಂದಲೇ ಅಲ್ಲಾಹನನ್ನು ಬಿಟ್ಟು ಬೇರೆ ಯಾರೊಡನೆಯೂ ಪ್ರಾರ್ಥಿಸಬಾರದೆಂದು ಸ್ಪಷ್ಟವಾಗಿ ಸಾಬೀತಾಗಿರುತ್ತದೆ. ಇಸ್ಲಾಮಿನ ಮೂಲಾಧಾರವೂ ಸರ್ವಜ್ಞನಾದ ದೇವರ ವಚನವೂ ಆಗಿರುವ ಪವಿತ್ರ ಖುರ್‌ಆನಿನಿಂದ ಸ್ಪಷ್ಟವಾಗುವ ಯಾವ ವಿಚಾರವನ್ನೂ ಒಬ್ಬ ಮುಸ್ಲಿಮನಿಗೆ ಸಹರ್ಷ ಅಂಗೀಕರಿಸದೆ ನಿರ್ವಾಹವಿಲ್ಲ. ಗತ ಮಹಾತ್ಮರೊಡನೆ ಪ್ರಾರ್ಥಿಸಬಾರದೆಂಬುದಕ್ಕೆ ಸಾಕ್ಷ್ಯವಾಗಿ ಪವಿತ್ರ ಖುರ್‌ಆನಿನ ಒಂದೇ ಒಂದು ವಾಕ್ಯ ಸಾಕಾಗುವುದಾದರೂ ವಿಷಯವನ್ನು ಇನ್ನೂ ಹೆಚ್ಚು ವಿಶದ ಮಾಡಲಿಕ್ಕಾಗಿ ಕೆಲವು ಪ್ರವಾದಿ ವಚನಗಳನ್ನೂ ಇಲ್ಲಿ ಉದ್ಧರಿಸಬಹುದು.

ಮುಹಮ್ಮದ್ ಪೈಗಂಬರರು (ಸ) ನುಡಿದಿರುವುದಾಗಿ ಪರಿಚಾರಕ ಅನಸ್ (ರ) ಹೀಗೆ ತಿಳಿಸಿದ್ದಾರೆ: "ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಎಲ್ಲಾ ಆವಶ್ಯಕತೆಗಳಿಗೆ ದೇವರೊಡನೆ ಯಾಚಿಸಲಿ" (ಮಿಶ್ಕಾತ್).

ಪೈಗಂಬರರು (ಸ) ತನ್ನೊಡನೆ ಹೀಗೆ ನುಡಿದಿರುವರೆಂದು ಹಝ್ರತ್ ಅಬೂಹುರೈರ (ರ) ತಿಳಿಸಿರುವರು: "ನಿಮಗೆ ಗುಣಕರವಾದುದನ್ನು ನೀವು ಬಯಸುತ್ತಾ ಅಲ್ಲಾಹನಿಂದ ನೆರವು ಕೋರಿರಿ; ಅದರಲ್ಲಿ ದಣಿವು ತೋರ್ಪಡಿಸಬೇಡಿರಿ" (ಮಿಶ್ಕಾತ್).

ಪೈಗಂಬರರು (ಸ) ತನಗೆ ಹೀಗೆ ಉಪದೇಶವಿತ್ತಿರುವರೆಂದು ಹಝ್ರತ್ ಇಬ್ನು ಅಬ್ಬಾಸ್ (ರ) ನಿವೇದಿಸಿದ್ದಾರೆ: "ನೀವು ಯಾಚಿಸುವಾಗ ಅಲ್ಲಾಹನೊಡನೆ ಯಾಚಿಸಿರಿ, ಸಹಾಯ ಕೋರುವಾಗ ಅಲ್ಲಾಹನಿಂದ ಸಹಾಯ ಕೋರಿರಿ" (ಮಿಶ್ಕಾತ್).

ಸೂರಃ ಫಾತಿಹಾದ "ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್ತಈನ್" – "ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ; ನಿನ್ನೊಡನೆ ಮಾತ್ರ ಸಹಾಯವನ್ನು ಬೇಡುತ್ತೇವೆ" ಎಂಬ ವಚನದ ವ್ಯಾಖ್ಯಾನವೇ ಆಗಿದೆ ಪೈಗಂಬರರು ಮೇಲಿನ ನುಡಿಗಳಿಂದ ಪ್ರಬೋಧಿಸಿರುವುದು. ದೇವರೊಡನೆ ಹೊರತು ಬೇರೆ ಯಾರೊಡನೆಯೂ ಪ್ರಾರ್ಥಿಸಬಾರದೆಂದು ಮೇಲಿನ ಪ್ರವಾದಿ ವಚನಗಳಿಂದ ರುಜುವಾಗುತ್ತದೆಂದು ಪೂರ್ವಿಕ ಮಹಾತ್ಮರು ಸಹ ಒಪ್ಪಿಕೊಂಡಿದ್ದಾರೆ. ಉದಾಹರಣೆಗೆ, ಹಝ್ರತ್ ಇಬ್ನು ಅಬ್ಬಾಸ್‌ರಿಗೆ ಪೈಗಂಬರರು ಉಪದೇಶಿಸಿದ ಮೇಲಿನ ಹದೀಸಿನ ವ್ಯಾಖ್ಯಾನ ಮಾಡುತ್ತಾ 'ಮಿಶ್ಕಾತ್' ಎಂಬ ಹದೀಸ್ ಗ್ರಂಥದ ಭಾಷ್ಯವಾದ 'ಮಿರ್ಖಾತ್' ಎಂಬ ಗ್ರಂಥದಲ್ಲಿ ಈ ರೀತಿ ಬರೆಯಲಾಗಿದೆ: "ದೇವರೊಡನೆ ಯಾಚಿಸಿರಿ ಎಂಬ ವಚನದ ತಾತ್ಪರ್ಯ, ದೇವರೊಡನೆ ಮಾತ್ರ ಯಾಚಿಸಿರಿ ಎಂದಾಗಿದೆ. ಏಕೆಂದರೆ, ದಾನಗಳ ಭಂಡಾರಗಳು ಅವನ ಬಳಿಯಿವೆ; ಕೊಡುಗೆಗಳ ಖಜಾನೆ ಅವನ ಕೈಯಲ್ಲಿದೆ; ಐಹಿಕ–ಪಾರತ್ರಿಕ ಸಕಲ ಅನುಗ್ರಹಗಳೂ ದಂಡನೆಗಳೂ ಅವುಗಳ ಗುಣದೋಷ ಎಲ್ಲವೂ ಅವನೊಂದಿಗೆ ಸಂಬಂಧವಿರಿಸಿಕೊಂಡಿವೆ. ಸರ್ವದಾತನೂ ನಿರಾವಲಂಬಿಯೂ ಅವನೇ. ಒಟ್ಟಿನಲ್ಲಿ, ಅವನ ಅನುಗ್ರಹಗಳನ್ನು ಆಶಿಸುತ್ತಾ ದಂಡನೆಗಳಿಗೆ

ಭಯಪಡುತ್ತಾ ಸಕಲವನ್ನೂ ಅವನಿಂದ ಬೇಡಿಕೊಂಡು ಎಲ್ಲಕ್ಕೂ ಅವನನ್ನು ಮಾತ್ರ ಆಶ್ರಯಿಸಬೇಕಾಗಿದೆ. ದೇವೇತರರೊಡನೆ ಯಾಚಿಸಬಾರದು. ಕಾರಣವೇನೆಂದರೆ, ಅವರಿಗೆ ದಾನ ಮಾಡಲಿಕ್ಕಾಗಲಿ, ತಡೆಯಲಿಕ್ಕಾಗಲಿ, ದಂಡನೆಯಿಂದ ಮುಕ್ತಿಗೊಳಿಸಲಿಕ್ಕಾಗಲಿ ಗುಣ ಮಾಡಲಿಕ್ಕಾಗಲಿ ಸಾಧ್ಯವಿಲ್ಲ. ಗುಣ-ದೋಷ ಮಾಡಲು ಅವರು ಶಕ್ತರೇ ಅಲ್ಲ. ಮರಣವನ್ನಾಗಲಿ, ಜೀವಿತವನ್ನಾಗಲಿ, ಪುನರುತ್ಥಾನವನ್ನಾಗಲಿ ಸ್ವಾಧೀನಪಡಿಸಲಿಕ್ಕೆ ಅವರಿಂದ ಸಾಧ್ಯವೂ ಅಲ್ಲ."

ಹೀಗೆ, ದೇವರೊಡನೆ ಹೊರತು ಬೇರೆ ಯಾರೊಡನೆಯೂ ಸಹಾಯವನ್ನು ಕೋರುವುದಾಗಲಿ ಪ್ರಾರ್ಥಿಸುವುದಾಗಲಿ ಮಾಡಬಾರದೆಂದು ಖುರ್‌ಆನ್ ಮತ್ತು ಹದೀಸ್ ಸ್ಪಷ್ಟಪಡಿಸಿರುವಾಗ, ಗತಿಸಿದ ಮಹಾತ್ಮರೊಡನೆ ಸಹಾಯಕ್ಕಾಗಿ ಮೊರೆಯಿಡುವ ಮುಸ್ಲಿಂ ಸಹೋದರರು ಅವರನ್ನು ಆರಾಧಿಸಬಹುದೆಂದು ಕೂಡ ಹೇಳಬಹುದೇ ಎಂದು ಶಂಕಿಸಬೇಕಾಗಿದೆ. ಪವಿತ್ರ ಖುರ್‌ಆನ್ ಪ್ರಾರಂಭದಲ್ಲೇ ಕಲಿಸಿರುವುದು "ನಾವು ನಿನ್ನನ್ನು ಮಾತ್ರ ಆರಾಧಿಸುತ್ತಾ ನಿನ್ನಿಂದ ಮಾತ್ರ ನೆರವನ್ನು ಕೋರುತ್ತೇವೆ" ಎಂದು ಹೇಳಬೇಕೆಂದಲ್ಲವೇ. ಇದರ ತಾತ್ಪರ್ಯ, ದೇವರನ್ನು ಬಿಟ್ಟು ಯಾರನ್ನೂ ಆರಾಧಿಸುವುದಾಗಲಿ ಯಾರಿಂದಲೂ ಸಹಾಯ ಯಾಚಿಸುವುದಾಗಲಿ ಮಾಡಲಿಕ್ಕಿಲ್ಲ ಎಂದಲ್ಲವೇ ? ಇದುವೇ ಅದರ ವ್ಯಾಖ್ಯಾನವೆಂದು ಖುರ್‌ಆನಿನ ವ್ಯಾಖ್ಯಾನಗಾರರೂ ಒಪ್ಪಿದ್ದಾರೆ.

ಇಮಾಂ ರಾಸೀ (ರ) ಹೇಳಿರುವುದನ್ನು ನೋಡಿರಿ: "ನಾವು ನಿನ್ನಿಂದ ಮಾತ್ರ ಸಹಾಯ ಬೇಡುತ್ತೇವೆ ಎಂಬುದರ ತಾತ್ಪರ್ಯ, ನಿನ್ನಿಂದ ಹೊರತು ಬೇರೆ ಯಾರಿಂದಲೂ ನಾವು ಸಹಾಯವನ್ನು ಕೋರಲಿಕ್ಕಿಲ್ಲ ಎಂದಾಗಿದೆ."

ಹೀಗೆ ದೇವರೊಡನೆ ಮಾತ್ರ ಮಾಡುವಂತಹ ಪ್ರಾರ್ಥನೆಯನ್ನು ದೇವೇತರರೊಡನೆ ಸಹ ಮಾಡಬಹುದೆಂದು ಹೇಳುವವರು, "ನಿನ್ನನ್ನು ಮಾತ್ರ ನಾವು ಆರಾಧಿಸುತ್ತೇವೆ" ಎಂಬ ವಚನವನ್ನು ಉರುಹಾಕುತ್ತಿರುವಾಗ, ಗತಿಸಿದ ಮಹಾತ್ಮರನ್ನು ಆರಾಧಿಸಲಿಕ್ಕೆ ಕೂಡ ತೊಡಗುವರೇ ಎಂದು ಶಂಕಿಸಲೇ ಬೇಕಲ್ಲವೇ ?

ಪ್ರಿಯ ಸಹೋದರರೇ, ಪವಿತ್ರ ಖುರ್‌ಆನ್ ಪ್ರಾರಂಭದಲ್ಲೇ, ದೇವರನ್ನು ಬಿಟ್ಟು ಬೇರೆ ಯಾರನ್ನೂ ಆರಾಧಿಸುವುದಾಗಲಿ ಅವನೊಡನೆ ಹೊರತು ಬೇರೆ ಯಾರೊಡನೆ ಪ್ರಾರ್ಥಿಸುವುದಾಗಲಿ ಮಾಡಬಾರದೆಂದು ಉಪದೇಶಿಸಿರುವಾಗ, ಸೃಷ್ಟಿಗಳು ಮಾತ್ರವಾಗಿರುವ ಮಹಾತ್ಮರೊಡನೆ ಸಹ ನೀವು ಪ್ರಾರ್ಥಿಸುವುದನ್ನು ಕಾಣುವಾಗ, ಖುರ್‌ಆನಿನ ಉಪದೇಶಗಳು ನಿಮಗೆ ರುಚಿಸುವುದಿಲ್ಲವೆಂದಲ್ಲವೇ ಭಾವಿಸಬೇಕಾಗಿರುವುದು? ಖುರ್‌ಆನ್ ಅಪ್ಪಟ ದೈವಪ್ರೋಕ್ತವೆಂದು ನಂಬುವವರೇ ಅದರ ಉಪದೇಶಗಳನ್ನು ನಿರಾಕರಿಸುವುದು ಎಷ್ಟು ದುಃಖಕರ! "ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ; ನಿನ್ನಿಂದ ಮಾತ್ರ ನೆರವನ್ನು ಯಾಚಿಸುತ್ತೇವೆ" ಎಂದು ದಿನಂಪ್ರತಿ ಐದು ಹೊತ್ತು ಸೃಷ್ಟಿಕರ್ತನ ಸನ್ನಿಧಿಯಲ್ಲಿ ಹೇಳುತ್ತಾ, ಅದರಿಂದ ವಿರಮಿಸಿದ ಕೂಡಲೇ ಸಮಾಧಿಗಳಿಗೂ ದರ್ಗಾಗಳಿಗೂ ಹೋಗಿ ಈ ಪ್ರತಿಜ್ಞೆಗೆ ವಿರುದ್ಧವಾಗಿ ಮೃತರಾದವರೊಡನೆ ಪ್ರಾರ್ಥಿಸುವುದನ್ನು ಕಾಣುವಾಗ ಸೃಷ್ಟಿಕರ್ತನ ಮುಂದೆ ನೀವು ಹೇಳುವುದು ಬರೇ ಸುಳ್ಳುಯೆಂದಲ್ಲವೇ ಭಾವಿಸಬೇಕಾದುದು ? ಅಗತ್ಯ ಬರುವಾಗ ಗತಿಸಿದ ಮಹಾತ್ಮರುಗಳನ್ನು ಕರೆದು ಪ್ರಾರ್ಥಿಸುವ ನೀವು, "ನಾವು ನಿನ್ನಿಂದ ಮಾತ್ರ ಸಹಾಯ ಬೇಡುತ್ತೇವೆ" ಎಂದು ದೇವಸನ್ನಿಧಿಯಲ್ಲಿ ಹೇಳಲು ಧೈರ್ಯಪಡುವುದು, ನಿಮ್ಮ ಕಾಪಟ್ಯ ದೇವರಿಗೆ ತಿಳಿಯದೆಂಬ ಭಾವನೆಯಿಂದಲೋ ಅಥವಾ ನಿಮ್ಮ ಈ ವರ್ತನೆ ಕಪಟತನವೆಂದು ನಿಮಗೆಯೇ ತಿಳಿಯದಿರುವುದರಿಂದಲೋ ? ತನ್ನ ಸುಳ್ಳುತನ ಬಯಲಾಗುವುದೆಂದು ತೋರುವ ಪಕ್ಷದಲ್ಲಿ ಯಾರೂ ತನ್ನಂತಹವರೊಡನೆ ಕೂಡ ಸುಳ್ಳು ಹೇಳಲು ಸಂಕೋಚಪಡದಿರಲಾರರಷ್ಟೇ. ಈ ಸ್ಥಿತಿಯಲ್ಲಿ, ನೀವು ದೇವೇತರರೊಡನೆ ಸಹಾಯವನ್ನು ಕೋರುತ್ತಿರುವಾಗ, ಸರ್ವಜ್ಞನಾದ ದೇವರ ಮುಂದೆ, "ನಾವು ನಿನ್ನಿಂದ ಮಾತ್ರ ಸಹಾಯ ಬೇಡುತ್ತೇವೆ" ಎಂದು ದಿನಾಲೂ ಐದು ಹೊತ್ತು ಹೇಳುವುದನ್ನೂ ಕಾಣುವಾಗ ನಿಮಗೆ ನಿಮ್ಮಂತಹ ಮನುಷ್ಯರ ಕುರಿತಿರುವಷ್ಟು ಗೌರವ ಕೂಡ ದೇವರ ಕುರಿತು ಇಲ್ಲವೆಂದಲ್ಲವೇ ಭಾವಿಸಬೇಕಾದುದು! ದೇವರ ಬಗ್ಗೆ ಅಷ್ಟು ಮಾತ್ರವೇ ಗೌರವ ನಿಮಗಿರುವುದಾದರೆ, ನಿಮ್ಮ ಈ ಕಾಪಟ್ಯ ಅವನಿಗೆ ತಿಳಿಯುವುದಿಲ್ಲವೆಂದಾದರೆ, ಅಂತಹವನನ್ನು ಬಿಟ್ಟು ಗತಿಸಿದ ಮಹಾತ್ಮರೊಡನೆ ಸಹಾಯವನ್ನು ಬೇಡುವುದಾಗಿರಬಹುದು ಉಚಿತ! ಅಕಟಾ, ನಾನಿಷ್ಟು ಹೇಳಿಬಿಟ್ಟದ್ದು

ನಿಮ್ಮ ದೇವದೂಷಣಾ ದುರಾಚಾರ ಕಂಡು ಉಂಟಾದ ಮನೋವೇದನೆಯಿಂದಾಗಿದೆ. ಇದರಿಂದ ನೀವು ಬೇಸರಿಸದೆ, ಪವಿತ್ರ ಖುರ್‌ಆನಿನ ಸಿದ್ಧಾಂತಕ್ಕೆ ವಿರುದ್ಧವಾದ ಈ ದುರಾಚಾರದ ಭೀಕರತೆಯನ್ನು ಮನಗಂಡು ಅದರಿಂದ ವಿರಮಿಸಲು ನಾನು ಭ್ರಾತೃಭಾವದಲ್ಲಿ ನಿಮಗೆ ಉಪದೇಶಿಸುತ್ತೇನೆ.

ಇನ್ನು, ದೇವೇತರರೊಡನೆ ಪ್ರಾರ್ಥಿಸಬಾರದೆಂಬುದಕ್ಕೆ ಇನ್ನೊಂದು ಪುರಾವೆ ಮುಹಮ್ಮದ್ ಪೈಗಂಬರರ ಚರ್ಯೆಯಾಗಿದೆ. ಪೈಗಂಬರರು ತನ್ನ ದೌತ್ಯಕಾಲವಾದ ಇಪ್ಪತ್ತಮೂರು ವರ್ಷಗಳ ಜೀವನದಲ್ಲಿ ಅಹರ್ನಿಶಿ ದೇವರೊಡನೆ ಮಾತ್ರ ಪ್ರಾರ್ಥಿಸುತ್ತಾ, ಹಾಗೆ ಪ್ರಾರ್ಥಿಸಲಿಕ್ಕೆ ಅನುಚರರೊಡನೆ ಉಪದೇಶಿಸುತ್ತಿದ್ದರು. ಹಾಗಲ್ಲದೆ, ಪೈಗಂಬರರು ದೇವೇತರರೊಡನೆ ಪ್ರಾರ್ಥಿಸುವುದಾಗಲಿ, ಪ್ರಾರ್ಥಿಸಬಹುದೆಂದು ಸೂಚಿಸುವುದಾಗಲಿ ಮಾಡಿರಲಿಲ್ಲ. ಭೂಮುಖದಿಂದ ಮರೆಯಾಗಿದ್ದ ದೇವೇಕತ್ವ (ತೌಹೀದ್)ವನ್ನು ಆದರ ಪೂರ್ಣ ರೂಪದಲ್ಲಿ ಪುನಃ ಸ್ಥಾಪಿಸಲಿಕ್ಕೂ ದೇವೇತರರನ್ನು ಆಶ್ರಯಿಸಿ ಅವರಿಗೆ ಮೊರೆಯಿಡುವ ಜನರನ್ನು ಏಕದೇವಾವಲಂಬನಕ್ಕೆ ಆಹ್ವಾನಿಸಲು ಅವತೀರ್ಣರಾದ ಆ ಮಹಾ ಪುರುಷ ದೇವೇತರರೊಡನೆ ಯಾವಾಗಲಾದರೂ ಪ್ರಾರ್ಥಿಸಿರುವರು ಅಥವಾ ಪ್ರಾರ್ಥಿಸಲು ಸಮ್ಮತಿ ನೀಡಿರುವರೆಂದು ಬುದ್ಧಿಸ್ವಾಸ್ಥ್ಯವಿರುವ ಯಾರೂ ಒಪ್ಪಲಾರರು, ಒಪ್ಪಲು ಸಾಧ್ಯವೂ ಇಲ್ಲ. ಇಸ್ಲಾಂ ಧರ್ಮವು ಪ್ರಾರ್ಥನೆಗೆ ಕೊಟ್ಟಿರುವ ಸ್ಥಾನವನ್ನು ಬೇರಾವ ಧರ್ಮವಾಗಲಿ ಕೊಟ್ಟಿಲ್ಲವೆಂದು ಖಂಡಿತವಾಗಿಯೂ ಹೇಳಬಹುದು. ಓರ್ವ ಸತ್ಯವಿಶ್ವಾಸಿಗೆ ದೇವರಲ್ಲಿ ದೃಢವಿಶ್ವಾಸವೂ ಭಕ್ತಿಯೂ ಇರಬೇಕೆಂದು ಕಲಿಸುವ ಇಸ್ಲಾಂ ಸರ್ವಾಭೀಷ್ಟಸಿದ್ಧಿಗೂ ಅವನೊಡನೆ ಪ್ರಾರ್ಥಿಸಬೇಕೆಂದು ಸಹ ಬೋಧಿಸುತ್ತದೆ. ಪವಿತ್ರ ಖುರ್‌ಆನಿನಲ್ಲೇ ಅನೇಕ ಪ್ರಾರ್ಥನಾ ವಾಕ್ಯಗಳನ್ನು ಕಾಣಬಹುದು. ಅವುಗಳ ಪೈಕಿ ಒಂದಾದರೂ ದೇವೇತರರನ್ನು ಸಂಬೋಧಿಸಿರುವುದಾಗಿ ಕಾಣಲಸಾಧ್ಯ. ಪೈಗಂಬರರು ಹಲವು ಸಂದರ್ಭಗಳಲ್ಲಿ ಹಲವು ರೀತಿಯಲ್ಲಿ ಪ್ರಾರ್ಥಿಸಿ, ಹಾಗೆ ಪ್ರಾರ್ಥಿಸಲಿಕ್ಕೆ ಅನುಚರರಿಗೆ ಉಪದೇಶವಿತ್ತಿದ್ದಾರೆ. ಆ ಪ್ರಾರ್ಥನೆಗಳು ಹದೀಸ್ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ. ಅವು ದೇವರನ್ನು ಹೊರತು ಬೇರೆ ಯಾರನ್ನೇ ಕರೆದು ಬೇಡುವುದಾಗಿ ತೋರಿಸಿ ಕೊಡಲು ಯಾರಿಗೂ ಸಾಧ್ಯವಾಗಲಿಕ್ಕಿಲ್ಲ. ವಿವಾಹದ ಸಮಯದಲ್ಲಿ, ಪತಿ ಪತ್ನಿಯರ ಸಂಯೋಗ ಸಂದರ್ಭದಲ್ಲಿ, ಶಿಶು ಹುಟ್ಟುವಾಗ, ನಿದ್ರೆಯನ್ನಾರಂಭಿಸುವಾಗ, ನಿದ್ರೆಯಿಂದ ಎಚ್ಚರಗೊಳ್ಳುವಾಗ, ಯಾತ್ರೆಗೆ ಹೊರಡುವಾಗ, ಮಲ ವಿಸರ್ಜನೆಗೆ ಹೋಗುವಾಗ, ಅಲ್ಲಿಂದ ಹಿಂತಿರುಗುವಾಗ, ಮಸೀದಿಗೆ ಹೋಗುವಾಗ, ಅಲ್ಲಿಂದ ಹಿಂತೆರಳುವಾಗ, ಉಣ್ಣಲು ತೊಡಗುವಾಗ ಮತ್ತು ಮುಗಿಸುವಾಗ, ಹೆಚ್ಚೇಕೆ? ಒಬ್ಬನ ಜೀವನ ಯಾತ್ರೆಯ ಸಕಲ ಘಟ್ಟಗಳಲ್ಲೂ ಹೇಳಬೇಕಾದ ಪ್ರಾರ್ಥನೆಗಳನ್ನು ಪೈಗಂಬರರು ಕಲಿಸಿಕೊಟ್ಟಿದ್ದಾರೆ. ನಮಾಝ್ ಮುಂತಾದ ಆರಾಧನಾಕರ್ಮಗಳಲ್ಲೂ ಪ್ರಾರ್ಥನೆಗಳು ಒಳಗೊಂಡಿವೆ. ಈ ಪ್ರಾರ್ಥನೆಗಳಲ್ಲಿ ಯಾವುದೂ ಸಹ ದೇವರನ್ನಲ್ಲದೆ ಬೇರೆ ಯಾರನ್ನೂ ಕರೆದು ಬೇಡುವುದಾಗಿ ಕಾಣಲ್ಪಡಲಿಕ್ಕಿಲ್ಲ. ದೇವೇತರರನ್ನು ಕರೆದು ಪ್ರಾರ್ಥಿಸಬಹುದಾದರೆ, ಮೇಲಿನ ಪ್ರಾರ್ಥನೆಗಳಲ್ಲಿ ಯಾವುದರಲ್ಲಾದರೂ, ಗತಿಸಿದ ಯಾರಾದರೂ ಮಹಾ ವ್ಯಕ್ತಿಯನ್ನು ಸಂಬೋಧನೆ ಮಾಡುವುದಾಗಿ ಕಾಣಬಹುದಿತ್ತು. ಹೀಗೆ ಖುರ್‌ಆನ್ ಮತ್ತು ಹದೀಸ್‌ನಲ್ಲಿರುವ ಅನೇಕ ಪ್ರಾರ್ಥನೆಗಳಲ್ಲಿ ಯಾವುದು ಸಹ ದೇವೇತರರನ್ನು ಸಂಬೋಧಿಸಿ ಕಾಣುವುದಿಲ್ಲವೆಂಬ ವಾಸ್ತವಾಂಶ, ಪ್ರಾರ್ಥನೆಗೆ ಅರ್ಹನು ದೇವರು ಮಾತ್ರವೆಂಬುದಕ್ಕೆ ತಕ್ಕುದಾದ ಒಂದು ಸಾಕ್ಷ್ಯವಾಗಿದೆ.

ಮಾತ್ರವಲ್ಲದೆ, ಮುಹಮ್ಮದ್ ಪೈಗಂಬರರು (ಸ) ಕಲಿಸಿಕೊಟ್ಟಿರುವ ಕೆಲವು ಪ್ರಾರ್ಥನಾ ವಾಕ್ಯಗಳೇ ಪ್ರಾರ್ಥನೆಗೆ ಅರ್ಹನು ದೇವರು ಮಾತ್ರವೆಂದು ರುಜುಪಡಿಸುವ ರೀತಿಯಲ್ಲಿವೆ. ಉದಾಹರಣೆಗೆ, ನಮಾಝ್ ಮಾಡಿದ ಬಳಿಕ ಹೇಳಬೇಕಾದ ಪ್ರಾರ್ಥನೆಗಳಲ್ಲಿ ಒಂದು ಹೀಗಿದೆ: "ದೇವಾ, ನೀನು ನೀಡಿರುವುದನ್ನು ತಡೆಯಲಿಕ್ಕೆ ಯಾರೂ ಇಲ್ಲ; ನೀನು ತಡೆದುದನ್ನು ನೀಡಲಿಕ್ಕೆ ಯಾರೂ ಇಲ್ಲ. ಧನವಂತನಿಗೆ ತನ್ನ ಸಂಪತ್ತು ನಿನ್ನ ಶಿಕ್ಷೆಯಿಂದ ಪಾರುಮಾಡಲು ಉಪಯುಕ್ತವಾಗಲಾರದು" (ಬುಖಾರಿ). ನಿದ್ರಿಸಲು ತೊಡಗುವಾಗ ಹೇಳಲು ನಿರ್ದೇಶಿಸಲಾದ ಒಂದು ಪ್ರಾರ್ಥನೆ ಹೀಗಿದೆ: "ದೇವಾ, ನಾನು ನನ್ನನ್ನು ನಿನ್ನಲ್ಲಿ ಅರ್ಪಿಸಿ ನನ್ನ ಕಾರ್ಯವನ್ನು ನಿನ್ನ ಅಧೀನಪಡಿಸಿ ನಿನ್ನ ಮೇಲಿನ ಭಯ ಮತ್ತು ಪ್ರತ್ಯಾಶೆಯಿಂದ ನಿನ್ನ ಅಭಯವನ್ನು ಬಯಸುತ್ತೇನೆ.

## ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ-7

# ★ ತಾಯಿಫ್ ಗೆ ಯಾತ್ರೆ ★

ಮಕ್ಕಾ ನಿವಾಸಿಗಳು ತನ್ನ ಪ್ರಬೋಧನೆಗಳ ಕಡೆಗೆ ಏನೂ ಗಮನ ಹರಿಸುವುದಿಲ್ಲವೆಂಬುದನ್ನು ಕಂಡಾಗ ಪೈಗಂಬರರು ಅತ್ಯಂತ ಕಳವಳಕ್ಕೀಡಾದರು. ಪರಮಾತ್ಮನ ದಿವ್ಯ ಸಂದೇಶವನ್ನು ಜನರಿಗೆ ತಲಪಿಸಿಕೊಡುವ ಕಾರ್ಯಕ್ಕಾಗಿಯೇ ನಿಯೋಜಿಸಲ್ಪಡುವ ಪರಮಾತ್ಮನ ಸಂದೇಶವಾಹಕರಿಗೆ ಜನರು ತಮ್ಮೊಡನೆ ಮಾತನಾಡುವುದೇ ಇಲ್ಲವೆಂಬ ಪರಿಸ್ಥಿತಿಯನ್ನು ಸಹಿಸಿಕೊಂಡಿರಲು ಸಾಧ್ಯವೇ? ಆ ರೀತಿಯ ವ್ಯರ್ಥ ಜೀವನವು ಅವರಿಗೆ ಎಲ್ಲಕ್ಕಿಂತಲೂ ಕಷ್ಟದಾಯಕವಾಗಿತ್ತು. ಪರಮಾತ್ಮನು ವಹಿಸಿಕೊಟ್ಟಿರುವ ಸಂದೇಶವನ್ನು ಸಾರಲು ಮಕ್ಕಾದಿಂದ ಹೊರಗೆ ಮತ್ತೊಂದು ಸ್ಥಳವನ್ನು ಕಂಡುಕೊಳ್ಳಲು ಅವರು ನಿರ್ಬಂಧಿತರಾದರು. ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸುತ್ತಾ ವಿವಿಧ ಜನಸ್ತೋಮಗಳೆಡೆಯಲ್ಲಿ ದಿವ್ಯ ಬೋಧನೆ ಮಾಡುವುದು ದೈವ ನಿಯುಕ್ತ ಪ್ರವಾದಿಗಳ ವಿಧಿ ಲಿಖಿತವೆಂದು ಹೇಳಬೇಕು, ಪ್ರವಾದಿ ಮೂಸಾ (ಅ)ರವರಿಗೂ ಈಸಾ (ಅ)ರವರಿಗೂ ಇದೇ ರೀತಿ ವಿವಿಧ ಜನಾಂಗಗಳೆಡೆಯಲ್ಲಿ ಸಂಚರಿಸುತ್ತಾ ದಿವ್ಯ ಸಂದೇಶ ಪ್ರಚಾರವನ್ನು ನಡೆಸಬೇಕಾದ ಪ್ರಸಂಗ ಒದಗಿ ಬಂದಿತ್ತು. ಹಝ್ರತ್ ಮೂಸಾ (ಅ) ರವರು ಫಿರ್‌ಔನ್ ಮತ್ತು ಆತನ ಬಳಗದ ಬಳಿ ಸಾಗಿದ್ದರು: ಅಂತೆಯೇ ಅವರು ಬನೀ ಇಸ್ರಾಯೀಲ್ಯರಲ್ಲಿಯೂ ಮಿದ್‌ಯನ್ ಸಮುದಾಯದೆಡೆಯಲ್ಲೂ ಸತ್ಯ ಸಂದೇಶವನ್ನು ಸಾರಲು ಹೋಗಿದ್ದರು. ಹಝ್ರತ್ ಈಸಾ (ಅ)ರವರು ಕೂಡ ಗಲಿಲಾಯದಲ್ಲೂ ಜೆರೂಸಲೇಮಿನಲ್ಲೂ ಯೋರ್ದಾನ್ ನದಿ ತೀರದಲ್ಲೂ ಹಾಗೂ ಇತರ ಕಡೆಗಳಲ್ಲೂ ಸಂಚರಿಸಿ ತನ್ನ ಕರ್ತವ್ಯವನ್ನು ನಿರ್ವಹಿಸಬೇಕಾಯಿತು.

ಮಕ್ಕಾದ ಜನರು ಪೈಗಂಬರರ ಮಾತನ್ನು ನಿರ್ಲಕ್ಷ್ಯ ಮಾಡಲು ತೊಡಗಿದಾಗ ಅವರು ಮಕ್ಕಾದ ದಕ್ಷಿಣ ಪೂರ್ವಕ್ಕೆ ಸುಮಾರು 60 ಮೈಲುಗಳಷ್ಟು ದೂರದಲ್ಲಿ

---

( 28ನೇ ಪುಟದಿಂದ )

ನಿನ್ನ ಶಿಕ್ಷೆಯಿಂದ ಪಾರಾಗಲಿಕ್ಕೂ ವಿಮುಕ್ತಿ ಪಡೆಯಲಿಕ್ಕೂ ನಿನ್ನ ಸನ್ನಿಧಿಯಲ್ಲದೆ ಬೇರೆ ಸ್ಥಾನವಿಲ್ಲ" (ಬುಖಾರಿ). ವಿವೇಕವಿರುವ ಒಬ್ಬ ಮನುಷ್ಯನು ದೇವರ ಮೇಲಿನ ನಂಬಿಕೆಯಿಂದ ಈ ರೀತಿ ಪ್ರಾರ್ಥಿಸುವುದಾದರೆ ಆತನು ದೇವೇತರರೊಡನೆ ಎಂದಿಗೂ ಸಹಾಯ ಬೇಡಲು ಒಡಂಬಡಲಿಕ್ಕಿಲ್ಲ. ಏಕೆಂದರೆ ಈ ಪ್ರಾರ್ಥನೆಯ ವಚನಾಶೈಲಿಯೇ, ಶಿಕ್ಷಾರಕ್ಷೆಗಳ ಅಧಿಪತಿ ದೇವರು ಮಾತ್ರವೆಂದೂ, ಆದ್ದರಿಂದ ಅವನೊಡನೆ ಮಾತ್ರ ಪ್ರಾರ್ಥಿಸಬಹುದೆಂದೂ ಸ್ಪಷ್ಟಪಡಿಸುವ ರೀತಿಯಲ್ಲಿದೆ. ಇಂತಹ ಪ್ರಾರ್ಥನೆಗಳನ್ನು ಎಷ್ಟು ಬೇಕಾದರೂ ಕಾಣಬಹುದು. ಇಸ್ಲಾಂ ನಿರ್ದೇಶಿಸಿ ಕೊಟ್ಟಿರುವ ಈ ಪ್ರಾರ್ಥನೆಗಳೆಲ್ಲವೂ ಅಲ್ಲಾಹನನ್ನು ಮಾತ್ರ ಸಂಬೋಧಿಸುವಂಥಾದ್ದೆಂಬುದೇ, ಪ್ರಾರ್ಥನೆಗೆ ಅರ್ಹನು ಅವನು ಮಾತ್ರವೆಂಬುದಕ್ಕೆ ತಕ್ಕುದಾದ ಪುರಾವೆಯಾಗಿದೆ. ಅಷ್ಟೇ ಅಲ್ಲ, ಮೇಲೆ ಹೇಳಿದಂತಹ ಕೆಲವು ಪ್ರಾರ್ಥನೆಗಳು, ಶಿಕ್ಷಾರಕ್ಷಾ ಅಧಿಪತಿಯೂ ಪ್ರಾರ್ಥನೆಗೆ ಅರ್ಹನೂ ಅಲ್ಲಾಹ ಮಾತ್ರ ಎಂದು ಸಾಬೀತುಪಡಿಸುತ್ತವೆ ಕೂಡ. ಹಾಗಿದ್ದರೂ ಪ್ರಾರ್ಥನಾ ವಾಕ್ಯಗಳ ಅರ್ಥವನ್ನು ಬಲ್ಲ ಮುಸ್ಲಿಂ ಮತಪಂಡಿತರು ಸಹ ಗತ ಮಹಾತ್ಮರುಗಳೊಡನೆ ಪ್ರಾರ್ಥಿಸುತ್ತಲೂ ಹಾಗೆ ಮಾಡಲು ಇತರರನ್ನು ಪ್ರೇರೇಪಿಸುತ್ತಲೂ ಇರುವುದನ್ನು ಕಾಣುವಾಗ, ಪವಿತ್ರ ಖುರ್‌ಆನನ್ನೂ ಪೈಗಂಬರ (ಸ)ರ ನುಡಿಗಳನ್ನೂ ಚರ್ಯೆಯನ್ನೂ ಇವರು ಅವಗಣಿಸುತ್ತಾರಲ್ಲಾ ಎಂದು ವ್ಯಥೆ ಪಡುವುದರ ಹೊರತು ಇನ್ನೇನು ಮಾಡಬಹುದು!

—*—*—

ರುವ "ತಾಯಿಫ್" ಎಂಬಲ್ಲಿಗೆ ತೆರಳಿ ಸತ್ಯ ಸಂದೇಶ ಪ್ರಚಾರ ಕಾರ್ಯವನ್ನು ಅಲ್ಲಿ ಮುಂದುವರಿಸುವುದಾಗಿ ತೀರ್ಮಾನಿಸಿದರು. ಫಲವೃಕ್ಷಗಳಿಂದಲೂ ತೋಟಗಳಿಂದಲೂ ನಿಬಿಡವಾಗಿದ್ದ ತಾಯಿಫ್ ಒಂದು ಪ್ರಸಿದ್ಧ ವ್ಯವಸಾಯ ಪ್ರದೇಶವಾಗಿತ್ತು. ಮೂರ್ತಿಪೂಜೆ ಮತ್ತು ಬಹು ದೈವಾರಾಧನೆಯಲ್ಲಿ ಅಲ್ಲಿಯ ಜನರು ಮಕ್ಕಾದವರಿಗಿಂತ ಹಿಂದೆ ಬಿದ್ದಿರಲಿಲ್ಲ. ಮಕ್ಕಾದ ಕಅಬಾ ಮಂದಿರದಲ್ಲಿ ಪ್ರತಿಷ್ಠಾಪಿಸಲಾಗಿದ್ದ ವಿಗ್ರಹಗಳನ್ನಲ್ಲದೆ ಅರೇಬಿಯಾದ ಜನರು ಇನ್ನೂ ಅನೇಕ ಮೂರ್ತಿಗಳನ್ನು ಆರಾಧಿಸುತ್ತಿದ್ದರು. ಅವುಗಳಲ್ಲಿ ತಾಯಿಫ್‌ನಲ್ಲಿದ್ದ "ಲಾತ್" ಎಂಬ ವಿಗ್ರಹವು ಅತಿ ಪ್ರಧಾನವಾದುದು. ಈ ವಿಗ್ರಹದ ಸಂದರ್ಶನಕ್ಕಾಗಿ ಅರೇಬಿಯಾದ ದೂರ ದೂರದ ಕಡೆಗಳಿಂದಲೂ ಜನರು ತಾಯಿಫ್‌ಗೆ ಬರುತ್ತಿದ್ದರು. ಹೀಗೆ ತಾಯಿಫ್ ಒಂದು ತೀರ್ಥಾಟನ ಕೇಂದ್ರ ಕೂಡ ಆಗಿತ್ತು. ಮಕ್ಕಾ ಮತ್ತು ತಾಯಿಫ್‌ನ ಜನರು ಪರಸ್ಪರ ಕುಟುಂಬ ಸಂಬಂಧವಿರುವವರೂ ಆಗಿದ್ದರು. ತಾಯಿಫ್ ಮತ್ತು ಮಕ್ಕಾದ ಮಧ್ಯದಲ್ಲಿ ಕೆಲವು ತೋಟಗಳೂ ಕೃಷಿ ಭೂಮಿಗಳೂ ಮಕ್ಕಾದವರಿಗೆ ಇದ್ದುವು. ಹಝ್ರತ್ ಪೈಗಂಬರರು ತಾಯಿಫ್‌ಗೆ ಬಂದು ತಲಪಿದಾಗ ಅಲ್ಲಿನ ಅನೇಕ ಪ್ರಮುಖರೂ ಪ್ರಮಾಣಿಗಳೂ ಅವರನ್ನು ಕಾಣಲು ಬಂದರು. ಆದರೆ, ಯಾರೂ ಕೂಡ ಅವರ ದಿವ್ಯ ಸಂದೇಶವನ್ನು ಸ್ವೀಕರಿಸಲು ತಯಾರಾಗಲಿಲ್ಲ. ಜನಸಾಮಾನ್ಯರೂ ಕೂಡ ತಮ್ಮ ಮುಂದಾಳುಗಳನ್ನು ಅನುಸರಿಸುತ್ತಾ ಪೈಗಂಬರರು ಸಮರ್ಪಿಸಿದ ಸಂದೇಶವನ್ನು ತಿರಸ್ಕರಿಸಿದರು. ಇದರಲ್ಲಿ ಅಸಾಧಾರಣವಾಗಿ ಏನೂ ಇರಲಿಲ್ಲ. ಐಹಿಕ ಕಾರ್ಯಗಳಲ್ಲಿ ಮಗ್ನರಾದವರಿಗೆ ಇಂತಹ ಪಾರಮಾರ್ಥಿಕ ವಿಷಯಗಳು ಅಷ್ಟೊಂದು ರುಚಿಸಲಾರದು. ಜನರು ಅಂತಹ ದಿವ್ಯ ಸಂದೇಶದ ಕಡೆ ಗಮನ ಹರಿಸುವುದೇ ವಿರಳ. ಇದಕ್ಕೆ ಜನಬೆಂಬಲವಿಲ್ಲವೆಂದು ಅವರು ತಿಳಿಯುತ್ತಾರೆ. ಆಳೂ ಅರ್ಥವೂ ಏನೂ ಇಲ್ಲದೆ ನಿಸ್ಸಹಾಯಕರಾಗಿ ಜನ ಮಧ್ಯೆ ಅವತರಿಸುವ ದಿವ್ಯ ಸಂದೇಶವಾಹಕರನ್ನು ಜನರು ಸುಲಭದಲ್ಲಿ ತಳ್ಳಿ ಬಿಡುವುದು ಸಹಜ. ಪೈಗಂಬರರ ಕಥೆಯೂ ಇದಕ್ಕಿಂತ ಭಿನ್ನವಾಗಿರಲಿಲ್ಲ. ಮುಹಮ್ಮದರ ಕುರಿತು ತಾಯಿಫ್‌ನ ಜನರು ಮೊದಲೇ ಕೇಳಿದ್ದರು. ಈಗ ಅವರ ಊರಿಗೇ ಬಂದಿದ್ದಾರೆ. ಶಸ್ತ್ರ ಸಾಮಾಗ್ರಿಗಳಾಗಲಿ ಬೆಂಬಲಿಗರ ಗುಂಪಾಗಲಿ ಅವರ ಜತೆ ಇರಲಿಲ್ಲ. ಒಬ್ಬಂಟಿಗನಾದ ವ್ಯಕ್ತಿ. ಜತೆಯಲ್ಲಿ "ಝೈದ್" ಎಂಬ ಒಬ್ಬ ಸಂಗಡಿಗ ಮಾತ್ರ. ಪೈಗಂಬರೆರು ತಾಯಿಫ್ ನಗರದಲ್ಲಿ ಇಸ್ಲಾಮಿನ ಸಂದೇಶವನ್ನು ಸಾರುತ್ತಾ ಸಂಚರಿಸಿದಾಗ ಜನರು ಅದನ್ನು ಒಂದು ಉಪದ್ರವೆಂದು ತಿಳಿದರು. ದೇವರ ಸಂದೇಶ ವಾಹಕರನ್ನು ಒಬ್ಬ ತಲೆತಿರುಕನಂತೆ ಅವರು ಕಂಡರು. ಇದನ್ನು ಹೀಗೆಯೇ ಬಿಟ್ಟು ಬಿಡುವುದು ಸರಿಯಲ್ಲ. ನೇತಾರರು ಹೇಳುವಂತೆ ಮೊಳಕೆಯಲ್ಲೇ ಚಿವುಟಿ ಬಿಡಬೇಕು. ಈ ರೀತಿ ಯೋಚಿಸುತ್ತಾ ತಾಯಿಫ್‌ನ ಜನರು ಪೈಗಂಬರರನ್ನು ಹೊಡೆದೋಡಿಸಲು ತೀರ್ಮಾನಿಸಿದರು. ಒಂದು ದಿನ ಅವರು ಪೈಗಂಬರರನ್ನು ಪೀಡಿಸಲು ರೌಡಿಗಳನ್ನು ಕಳುಹಿಸಿದರು. ಬೀದಿ ಹುಡುಗರು ಅವರನ್ನು ಕೂಡಿಕೊಂಡು ಪೈಗಂಬರರ ಮೇಲೆ ಕಲ್ಲು ತೂರುತ್ತಾ ನಗರದಿಂದ ಹೊರಗೆ ಓಡಿಸಿದರು. ಝೈದ್ ತೀವ್ರವಾಗಿ ಗಾಯಗೊಂಡರು. ಪೈಗಂಬರರಿಗೂ ಗಾಯಗಳಾದವು. ದೇಹದಲ್ಲಿ ಕಲ್ಲೇಟಿನ ಗಾಯಗಳಿಂದ ರಕ್ತ ಸುರಿಯುತ್ತಿದ್ದಂತೆಯೇ ಆ ಶರಣಾರ್ಥಿಗಳು ಜೀವವನ್ನು ಕೈಯಲ್ಲಿ ಹಿಡಿದು ಓಡುತ್ತಿದ್ದರು. ಅಕ್ರಮಿಗಳು ಮತ್ತೂ ಅವರನ್ನು ಹಿಂಬಾಲಿಸಿದರು. ಝೈದ್ ಮತ್ತು ಪೈಗಂಬರರು ಈ ರೀತಿ ಓಡುತ್ತಾ ನಗರ ಬಿಟ್ಟು ಕೆಲವು ಮೈಲುಗಳಷ್ಟು ದೂರ ಹೋಗಿದ್ದರು. ಮೈಯಿಂದ ಬೆವರೂ ರಕ್ತವೂ ಸುರಿಯುತ್ತಿದ್ದು ಕಲ್ಲು ಮುಳ್ಳುಗಳಲ್ಲಿ ಓಡೋಡುತ್ತಾ ಇದ್ದ ಪೈಗಂಬರರ ಹೃದಯವು ಆಗಲೂ ಆ ಜನರ ಮೇಲೆ ಅನುಕಂಪದಿಂದ ತುಂಬಿತ್ತು. ದೇವರ ಭಯಾನಕವಾದ ಕೋಪಾಗ್ನಿಯು ಈ ಜನರನ್ನು ನಾಶಗೊಳಿಸಬಹುದೆಂಬ ಭಯದಿಂದ ಆ ಮಹಾನ್ ಪ್ರವಾದಿಯು ಆಗಾಗ ಆಕಾಶದೆಡೆ ನೋಡುತ್ತಾ ಈ ರೀತಿ ಪ್ರಾರ್ಥಿಸುತ್ತಿದ್ದರು: "ಪರಮಾತ್ಮಾ, ಈ ಜನರನ್ನು ನೀನು ಕ್ಷಮಿಸು! ಅವರು ಏನು ಮಾಡುತ್ತಾರೆಂಬ ಅರಿವು ಅವರಿಗಿಲ್ಲ."

ಬಳಲಿ ಬೆಂಡಾಗಿದ್ದ ಪೈಗಂಬರರು ಇನ್ನು ಯಾರೂ ಬೆನ್ನಟ್ಟಿ ಬರುತ್ತಿಲ್ಲವೆಂಬುದನ್ನು ಖಾತ್ರಿ ಪಡಿಸಿಕೊಂಡು ದಾರಿಯಲ್ಲಿದ್ದ ಒಂದು ದ್ರಾಕ್ಷೆಯ ತೋಟದಲ್ಲಿ ತಂಗಿದರು. ಅದು ಮಕ್ಕಾದ ಎರಡು ಪ್ರಧಾನ ವ್ಯಕ್ತಿಗಳ ತೋಟವಾಗಿತ್ತು. ತೋಟದ ಮಾಲೀಕರಾದ ಆ ಇಬ್ಬರೂ ಆಗ ತೋಟದಲ್ಲೇ ಇದ್ದರು. ಇಬ್ಬರೂ ಮಕ್ಕಾ

ದಲ್ಲಿ ಪ್ರವಾದಿಯನ್ನು ಬಹಳಷ್ಟು ಪೀಡಿಸಿದವರೇ. ಆದರೆ, ಆ ವೇಳೆ ಅವರಿಬ್ಬರಲ್ಲೂ ಪೈಗಂಬರರ ಮೇಲೆ ಅನುಕಂಪ ಉಕ್ಕಿ ಬಂತು. ಬಹುಶಃ ಓರ್ವ ಮಕ್ಕಾದ ಪ್ರಜೆಯನ್ನು ತಾಯಿಫ್‌ನವರು ಹೊಡೆದು ಗಾಯಗೊಳಿಸಿದ್ದನ್ನು ನೋಡಿ ಅವರಲ್ಲಿ ಈ ಅನುಕಂಪ ಹುಟ್ಟಿ ಬಂತೋ, ಅಥವಾ ಆ ವೇಳೆ ಅವರ ಹೃದಯದಲ್ಲಿ ಮಾನವ ಸ್ನೇಹದ ಒಂದು ಕಿರಣ ಹೊರಹೊಮ್ಮಿತೋ? ಏನೋ! ಅಂತೂ ಅವರು ಒಂದು ಗಂಗಳದಲ್ಲಿ ದ್ರಾಕ್ಷೆ ಹಣ್ಣುಗಳನ್ನಿರಿಸಿ ಒಬ್ಬ ಸೇವಕನನ್ನು ಕರೆದು "ಇದನ್ನು ಆ ಯಾತ್ರಿಕರಿಗೆ ನೀಡು" ಎಂದು ಹೇಳಿ ಕೊಟ್ಟು ಕಳುಹಿಸಿದರು. ಆ ಸೇವಕನ ಹೆಸರು ಅದ್ದಾಸ್ ಎಂದಾಗಿತ್ತು. ನಿನೇವ (Nineveh) ದವನಾದ ಒಬ್ಬ ಕ್ರೈಸ್ತ ವಿಶ್ವಾಸಿ. ಅದ್ದಾಸ್ ದ್ರಾಕ್ಷೆ ತುಂಬಿದ ಆ ಹರಿವಾಣವನ್ನು ಪೈಗಂಬರ್ ಮತ್ತು ಸಂಗಡಿಗನ ಮುಂದೆ ತಂದಿರಿಸಿದ. ಕುತೂಹಲದಿಂದ ಅದ್ದಾಸ್ ಆ ಇಬ್ಬರನ್ನೂ ನೋಡುತ್ತಿದ್ದಂತೆಯೇ "ಬಿಸ್‌ಮಿಲ್ಲಾಹಿರ್ರಹ್ಮಾನಿರ್ರಹೀಂ" (ಅಪರಿಮಿತ ಕರುಣಾಳುವೂ ಸತತ ದಯಾಳೂವೂ ಆದ ಅಲ್ಲಾಹನ ಹೆಸರಿನಲ್ಲಿ) ಎಂದು ಹೇಳುತ್ತಾ ಹಝ್ರತ್ ಮುಹಮ್ಮದ್ ಪೈಗಂಬರರು ಅದನ್ನು ಸ್ವೀಕರಿಸಿದರು. ಅದ್ದಾಸ್‌ನ ಕುತೂಹಲ ಮತ್ತಷ್ಟು ಕೆರಳಿತು. ಕ್ರೈಸ್ತ ಧರ್ಮೇತಿಹಾಸಗಳು ಆತನ ಸ್ಮೃತಿ ಪಟಲದಲ್ಲೊಮ್ಮೆ ಮಿಂಚಿತು. ತಾನು ಅಬ್ರಾಯ ಪ್ರವಾದಿಯೊಬ್ಬರ ಸನ್ನಿಧಿಯಲ್ಲಿ ನಿಂತಿರುವೆನೆಂಬುದಾಗಿ ಆತನಿಗೆ ಅನಿಸತೊಡಗಿತು.

"ಊರು ಯಾವುದು ?"

ಅದ್ದಾಸ್‌ನೊಡನೆ ಪೈಗಂಬರರ ಕುಶಲ ಪ್ರಶ್ನೆ.

"ನಿನೇವ" ಅದ್ದಾಸ್ ಉತ್ತರಿಸಿದನು.

ಪೈಗಂಬರರು ಹೇಳಿದರು: "ಅಮಿತ್ತಾಯನ ಮಗನಾಗಿದ್ದ ಮಹಾತ್ಮ ಯೋನಾ ಎಂಬವರು ಕೂಡ ನಿನೇವದವರಾಗಿದ್ದರು. ಅವರು ನನ್ನಂತಯೇ ಒಬ್ಬ ಸತ್ಯ ಸಂದೇಶವಾಹಕರಾಗಿದ್ದರು". ನಂತರ ಪೈಗಂಬರರು ಅದ್ದಾಸನಿಗೆ ತನ್ನ ದಿವ್ಯ ಸಂದೇಶದ ಸಾರವನ್ನು ವಿವರಿಸಿ ಹೇಳಿದರು. ಹಝ್ರತ್ ಮುಹಮ್ಮದ್ ಪೈಗಂಬರರ ವ್ಯಕ್ತಿತ್ವದಲ್ಲಿ ಅಷ್ಟರಲ್ಲೇ ಪ್ರಭಾವಿತನಾಗಿದ್ದ ಅದ್ದಾಸ್‌ನ ಕಣ್ಣುಗಳು ತುಂಬಿ ಬಂದವು. ಆತ ಪೈಗಂಬರರನ್ನು ತಬ್ಬಿಕೊಂಡು ಅವರ ಹಣೆ, ಕೈ, ಕಾಲುಗಳನ್ನು ಚುಂಬಿಸತೊಡಗಿದನು. ಮುಹಮ್ಮದ್ ಪೈಗಂಬರರ ದಿವ್ಯ ಸಂದೇಶದಲ್ಲಿ ವಿಶ್ವಾಸ ಹೊಂದಿದ ಒಬ್ಬ ಸತ್ಯವಿಶ್ವಾಸಿಯಾಗಿ ಅದ್ದಾಸ್ ಮಾರ್ಪಟ್ಟಿದ್ದರು.

ಈ ಘಟನೆಯ ಬಳಿಕ ಪೈಗಂಬರರು ಪರಮಾತ್ಮನನ್ನು ಸಂಬೋಧನೆ ಮಾಡಿ ಈ ರೀತಿ ಪ್ರಾರ್ಥಿಸಿದರು:

"ಹೇ ನನ್ನ ದೇವಾ, ನಾನಿದೋ ನಿನ್ನ ಸಮಕ್ಷಮದಲ್ಲಿ ನನ್ನ ದುಃಖವನ್ನು ತೋಡಿಕೊಳ್ಳುತ್ತೇನೆ. ನಾನು ನಿಸ್ಸಹಾಯಕನೂ ದುರ್ಬಲನೂ ಆಗಿರುವೆನು. ನನ್ನ ಜನರು ನನ್ನನ್ನು ಪರಿಹಾಸ್ಯ ಮಾಡಿ ತಿರಸ್ಕರಿಸಿ ಬಿಟ್ಟಿದ್ದಾರೆ. ನೀನು ದುರ್ಬಲರ ಮತ್ತು ದೀನ ದಲಿತರ ಸಂರಕ್ಷನಾಗಿರುವೆ. ನನ್ನ ರಕ್ಷಕನೂ ದೇವರೂ ನೀನೇ ಆಗಿರುವೆ. ನೀನು ಯಾರ ಮಧ್ಯದಲ್ಲಿ ನನ್ನನ್ನು ಬಿಡುವೆ ? ನನ್ನನ್ನು ಹೊಡೆದೋಡಿಸುವ ಅಪರಿಚಿತರೆಡೆಯಲ್ಲೋ? ಅಥವಾ ನನ್ನ ಸ್ವಂತ ಊರಿನಲ್ಲೇ ನನ್ನ ಮೇಲೆ ಆಕ್ರಮಣ ಮಾಡುವ ದುಷ್ಟ ಶತ್ರುಗಳ ಮಧ್ಯದಲ್ಲೋ? ಓ ದೇವಾ, ನೀನು ನನ್ನ ಮೇಲೆ ಕೋಪಿಷ್ಟನಾಗದೆ ಇದ್ದರೆ. ಈ ಶತ್ರುಗಳ ಬಗ್ಗೆ ನನಗೆ ಏನೇನೂ ಭಯವಿಲ್ಲ. ಯಾಕೆಂದರೆ ನಿನ್ನ ದಯಾ ವಾತ್ಸಲ್ಯ ನನ್ನ ಮೇಲಿರುತ್ತದೆ. ನಿನ್ನ ಪ್ರೋಜ್ವಲವಾದ ಮುಖಾರವಿಂದದಲ್ಲಿ ನಾನು ಆಸರೆ ಭಯಸುತ್ತೇನೆ. ಈ ಲೋಕದ ಅಂಧಕಾರವನ್ನು ನೀಗಿಸಿ ಎಲ್ಲರಿಗೂ ಈ ಲೋಕದಲ್ಲೂ ಪರಲೋಕದಲ್ಲೂ ಸುಖ ಶಾಂತಿಯನ್ನು ನೀಡಬಲ್ಲವನು ನೀನೇ ಆಗಿರುವೆ. ನಿನ್ನ ಕೋಪ ಮತ್ತು ಮುನಿಸಿನ ದೃಷ್ಟಿಯನ್ನು ನನ್ನ ಮೇಲೆ ಬೀರದಿರು. ನೀನು ಕೋಪಿಸಿದರೂ ಒಡನೆಯೇ ಪ್ರಸನ್ನನಾಗಿ ದಯೆ ತೋರುವವನೂ ಆಗಿರುವೆ. ನನ್ನ ದೇವಾ, ಯಥಾರ್ಥ ಶಕ್ತಿದಾತನೂ ನಿಜವಾದ ಆಶ್ರಯ ಸ್ಥಾನವೂ ನೀನೇ ಆಗಿರುವಿ. ನೀನಲ್ಲದೆ ಇನ್ನಾವನೇ ದೇವರೂ ಯಾರಿಗೂ ಎಲ್ಲಿಯೂ ಇರುವುದಿಲ್ಲ. ನನ್ನ ಮೇಲೆ ದಯೆ ತೋರುವವನಾಗು" (ಇಬ್ನು ಹಿಶಾಂ)

ಈ ಪ್ರಾರ್ಥನೆಯ ನಂತರ ಪೈಗಂಬರರು ಮಕ್ಕಾದ ಕಡೆ ತನ್ನ ಪ್ರಯಾಣವನ್ನು ಮುಂದುವರಿಸಿದರು. ದಾರಿ ಮಧ್ಯೆ "ನಖಲ" ಎಂಬಲ್ಲಿ ಕೆಲವು ದಿವಸ ತಂಗಿದರು. ಆ ನಂತರ ಅಲ್ಲಿಂದ ಹೊರಟು ಮಕ್ಕಾದ ಕಡೆ ನಡೆದರು. ಮಕ್ಕಾದ ರಿವಾಜಿನಂತೆ ಪೈಗಂಬರರು ಅಷ್ಟ

ರಲ್ಲೇ ಊರಿನ ಪೌರತ್ವವನು ಕಳೆದುಕೊಂಡಿದ್ದರು. ಅಲ್ಲಿನ ಜನರೊಡನೆ ವಿರಸದಿಂದ ಊರು ಬಿಟ್ಟು ಬೇರೆಡೆಗೆ ಹೋದವರನ್ನು ಪುನಃ ಊರಿನ ನಾಗರಿಕನಾಗಿ ಸ್ವೀಕರಿಸುವುದು ಯಾ ಬಿಡುವುದು ಮಕ್ಕಾದ ಮುಂದಾಳುಗಳ ತೀರ್ಮಾನಕ್ಕೆ ಬಿಟ್ಟ ಸಂಗತಿಯಾಗಿತ್ತು. ಆದುದರಿಂದ ಅವರ ಅನುಮತಿಯಿಲ್ಲದೆ ಪೈಗಂಬರರು ಮಕ್ಕಾದೊಳಗೆ ಪ್ರವೇಶಿಸುವಂತಿರಲಿಲ್ಲ. ಹಝ್ರತ್ ಪೈಗಂಬರರು ಮಕ್ಕಾದ ಒಬ್ಬ ಪ್ರಸಿದ್ಧ ನೇತಾರ "ಮುತಿಂ ಇಬ್ನು ಅದಿ" ಎಂಬವರ ಬಳಿ ಒಬ್ಬ ದೂತನನ್ನು ಕಳುಹಿಸಿ ತಾನು ಮಕ್ಕಾದೊಳಗೆ ಪುನಃ ಪ್ರವೇಶ ಬಯಸುವುದಾಗಿಯೂ ಊರ ನಿವಾಸಿಗಳು ತನಗೆ ಅನುಮತಿ ನೀಡುವರೇ ಎಂದೂ ತಿಳಿಯಬಯಸಿದರು. ಮಕ್ಕಾದ ಇತರ ನೇತಾರರಂತೆ ಮುತಿಂ ಕೂಡ ಹಝ್ರತ್ ಮುಹಮ್ಮದ್ ಪೈಗಂಬರರ ಕಠಿಣ ವಿರೋಧಿಯಾಗಿದ್ದರೂ ಅವರು ಒಬ್ಬ ಸಭ್ಯ ವ್ಯಕ್ತಿಯಾಗಿದ್ದರು. ಅವರು ಕೂಡಲೇ ತನ್ನ ಪುತ್ರರನ್ನೂ ಇತರ ಸಂಬಂಧಿಕರನ್ನೂ ಕರೆದು ಸೇರಿಸಿ ಅವರೆಲ್ಲರನ್ನೂ ಆಯುಧಧಾರಿಗಳನ್ನಾಗಿ ಮಾಡಿ ಕಅಬಾದ ಕಡೆ ಕರೆತಂದರು. ಮುತಿಂ ಮತ್ತು ಅವರ ಬಳಗವು ಕಅಬಾದ ಪ್ರವೇಶ ದ್ವಾರದ ಬಳಿ ನಿಂತುಕೊಂಡು ಮುಹಮ್ಮದ್ ಮತ್ತು ಸಂಗಡಿಗರಿಗೆ ಮಕ್ಕಾ ನಗರದೊಳಗೆ ವಾಪಸು ಬರಲು ತಾನು ಅನುಮತಿ ನೀಡಿರುವುದಾಗಿ ಘೋಷಿಸಿದರು. ಪೈಗಂಬರರು ಮಕ್ಕಾದೊಳಗೆ ಪ್ರವೇಶಿಸಿ ಮೊದಲಾಗಿ 'ಕಅಬಾ' ದೇವಾಲಯಕ್ಕೆ ಪ್ರದಕ್ಷಿಣೆ ಮಾಡಿದರು. ನಂತರ ಪೈಗಂಬರರನ್ನು ಶಸ್ತ್ರ ಸಜ್ಜಿತರಾದ ಮುತಿಂ ಮತ್ತು ಬಳಗವು ಅವರ ಮನೆಯ ವರೆಗೂ ಕರಕೊಂಡು ಹೋಗಿ ಬಿಟ್ಟರು. ಅರೇಬಿಯಾದ ಸಂಪ್ರದಾಯ ಪ್ರಕಾರ ಒಂದು ಪ್ರತಿಷ್ಠೆಯ ಸಂರಕ್ಷಣೆ! ಆದರೆ ಮುಹಮ್ಮದ್ ಪೈಗಂಬರರಿಗೆ ಮುತಿಂ ನೀಡಿದ ಈ ಔಪಚಾರಿಕ ಸಂರಕ್ಷಣೆಯು ಕೇವಲ ಅವರು ಮಕ್ಕಾವನ್ನು ಪ್ರವೇಶಿಸಲು ನೀಡಿದ ಅನುಮತಿ ಮಾತ್ರವಾಗಿತ್ತು. ಅದರ ನಂತರ ಮುಹಮ್ಮದ್ ಪೈಗಂಬರರು ಹಾಗೂ ಅವರ ಸಂಗಡಿಗರು ಎಷ್ಟೇ ದೌರ್ಜನ್ಯಕ್ಕೆ ಗುರಿಯಾಗಿದ್ದರೂ ಮುತಿಂ ಅವರ ರಕ್ಷಣೆಗೆ ಬಂದಿರಲಿಲ್ಲ.

ಹಝ್ರತ್ ಮುಹಮ್ಮದ್ ಪೈಗಂಬರರು ಈ ತಾಯಿಫ್ ಯಾತ್ರೆಯ ವೇಳೆಯಲ್ಲಿ ಕೈಗೊಂಡ ತ್ಯಾಗ ಮತ್ತು ಸಹನಶೀಲತೆಯು ಅವರ ವಿಮರ್ಶಕರಲ್ಲಿ ಕೂಡ ಅವರ ಕುರಿತು ಒಳ್ಳೆಯ ಅಭಿಪ್ರಾಯವನ್ನು ಉಂಟು ಮಾಡಿದೆ. ಪ್ರಸಿದ್ಧ ಆಂಗ್ಲ ವಿಮರ್ಶಕರಾದ ಸರ್ ವಿಲಿಯಂ ಮ್ಯೂರ್ ತನ್ನ "ಮುಹಮ್ಮದರ ಜೀವನ ಚರಿತ್ರೆ" ಎಂಬ ಗ್ರಂಥದಲ್ಲಿ ಈ ರೀತಿ ಬರೆದಿದ್ದಾರೆ:

**There is something lofty and heroic in this journey of Muhammad to At-Taif; a solitary man, despired and rejected by his own people, going boldly forth in the name of God, like Jonah to Nineveh, and summoming an idolatrous city to repent and support his mission. It sheds a strong light on the intensity of his belief in the divine origin of his calling.**

**(Life of Muhammad by Sir William Muir 1923 edition page 112 - 113)**

"ಮುಹಮ್ಮದರ ಈ ತಾಯಿಫ್ ಯಾತ್ರೆಯು ಅತಿ ಮಹತ್ವದ್ದೂ ವೀರೋಚಿತವೂ ಆಗಿತ್ತು. ತನ್ನ ಸ್ವಂತ ಜನತೆಯಿಂದ ಕಡೆಗಣಿಸಿ ತಿರಸ್ಕರಿಸಲ್ಪಟ್ಟ ಒಬ್ಬ ವಿಷಣ್ಣ ನಿಸ್ಸಹಾಯಕ ವ್ಯಕ್ತಿ, ಪರಮಾತ್ಮನಲ್ಲಿ ಮಾತ್ರ ಭರವಸೆಯರ್ಪಿಸಿಕೊಂಡು ಏಕಾಂಗಿಯಾಗಿ ನಿರ್ಭೀತಿಯಿಂದ ವಿಗ್ರಹಾರಾಧಕರ ಒಂದು ನಗರದೊಳಗೆ ನುಗ್ಗಿ ನಡೆಯುತ್ತಾರೆ. ಪಶ್ಚಾತ್ತಾಪಪಟ್ಟು ದೇವರ ಕಡೆ ತಿರುಗುವಂತೆಯೂ ತನ್ನ ಸಂದೇಶವನ್ನು ಸ್ವೀಕರಿಸುವಂತೆಯೂ ಜನರನ್ನು ಆಹ್ವಾನಿಸುತ್ತಾ, ಯೋನ ಪ್ರವಾದಿಯು ನಿನೇವದ ಜನರೆಡೆಯಲ್ಲಿ ಹೋದಂತೆ ಅವರು ತಾಯಿಫ್ ನಗರದಲ್ಲಿ ನಡೆಯುತ್ತಾರೆ! ತನ್ನ ದೌತ್ಯವು ಪರಮಾತ್ಮನ ದಿವ್ಯ ಸಂದೇಶವಾಗಿದೆ ಎಂಬುವುದರಲ್ಲಿ ಅವರಿಗಿದ್ದ ಅಚಲ ವಿಶ್ವಾಸದ ಪರಾಕಾಷ್ಠೆಗೆ ಇದು ಖಂಡಿತವಾಗಿಯೂ ಬೆಳಕು ಚೆಲ್ಲುತ್ತದೆ".

★

# ಪ್ರವಾದಿತ್ವ ಸಮಾಪ್ತಿ ಸಮಸ್ಯೆಗೆ ಪವಿತ್ರ ಖುರ್‌ಆನ್ ನೀಡುವ ಉತ್ತರ

ಉರ್ದು ಮೂಲ : ಮಿರ್ಝಾ ಬಶೀರ್ ಅಹ್ಮದ್ ಎಂ. ಎ.

ಅನುವಾದ : ಎಂ. ಉಬೈದುಲ್ಲಾ

## ಪವಿತ್ರ ಖುರ್‌ಆನಿನ ಪರಮಪಾವನ ಸಾಕ್ಷ್ಯ

ನಾನು ಈ ಮೊದಲು ವಿವರಿಸಿದಂತೆ ಪವಿತ್ರ ಖುರ್‌ಆನಿನ ಸ್ಥಾನ ಅತ್ಯುನ್ನತವಾಗಿದೆ. ಈ ಪವಿತ್ರ ಗ್ರಂಥದ ಸಾಕ್ಷ್ಯಾಧಾರಗಳ ಮೂಲಕ ನಾನು ಈ ಸಂಕ್ಷಿಪ್ತ ವಾದವನ್ನು ಆರಂಭಿಸುತ್ತೇನೆ. ಎಲ್ಲದಕಿಂತ ಮೊದಲು ಒಂದು ಸಂಗತಿಯನ್ನು ಮನದಟ್ಟು ಮಾಡಿಕೊಳ್ಳಬೇಕಾಗಿದೆ. ಅದೇನೆಂದರೆ, ಪವಿತ್ರ ಖುರ್‌ಆನಿನ ಯಾವುದೇ ಒಂದು ವಚನ ಅಥವಾ ವಚನದ ಒಂದು ಭಾಗ ಅಥವಾ ಅದರ ಯಾವುದೇ ಒಂದು ಶಬ್ದ ಸಹ ಮುಹಮ್ಮದ್ ಪೈಗಂಬರರ ನಂತರ ಪ್ರವಾದಿತ್ವದ ಬಾಗಿಲು ಮುಚ್ಚಿರುವುದನ್ನು ಸೂಚಿಸುವುದಿಲ್ಲ. ಪವಿತ್ರ ಖುರ್‌ಆನಿನ ಎಲ್ಲೆಡೆಯಲ್ಲೂ ದೇವರ ಅನುಗ್ರಹಗಳ ಮತ್ತು ಕಾಣಿಕೆಗಳ ಮಹಾ ನದಿಗಳೇ ಹರಿಯುತ್ತಿರುವುದಾಗಿ ಕಂಡು ಬರುತ್ತಿದೆ. ಪವಿತ್ರ ಖುರ್‌ಆನಿನ ಹಲವಾರು ವಿವರಣೆಗಳೂ ಸೂಚನೆಗಳೂ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ನಂತರ ದೇವರ ಅನುಗ್ರಹಗಳ ಒರತೆಗಳು ಹೆಚ್ಚಿನ ರಭಸದಿಂದ ಹರಿಯಲು ಪ್ರಾರಂಭಿಸಿರುವುದಾಗಿ ತಿಳಿಸುತ್ತವೆ. ಮುಹಮ್ಮದ್ ಪೈಗಂಬರರ ನಂತರ ಪ್ರವಾದಿತ್ವ ಕೊನೆಗೊಂಡಿತೆಂದು ನಂಬುವವರು ನೀಡುವ ಪವಿತ್ರ ಖುರ್‌ಆನಿನ ಏಕಮಾತ್ರ ವಚನ "ವಲಾಕಿನ್ ರಸೂಲಲ್ಲಾಹಿ ವ ಖಾತಮನ್ನಬಿಯ್ಯೀನ್" ಎಂಬುದಾಗಿದೆ. ಆದರೆ ಈ ವಚನವೇ ವಾದವಿವಾದಗಳಿಗೆ ಗುರಿಯಾಗಿದೆ. ಒಂದು ಸಂಗತಿಯ ಕುರಿತು ವಾದಿಸುವಾಗ ಒಂದು ವಿವಾದಕ್ಕೊಳಗಾದ ವಚನವನ್ನು ಮಾತ್ರ ಸೂಚಿಸುವುದು ಸಾಕಾಗಲಾರದು. ಇದೇ ಕಾರಣದಿಂದಾಗಿ, ಪವಿತ್ರ ಖುರ್‌ಆನ್ ಒಂದು ಪ್ರಧಾನ ಸತ್ಯ ಸಂಗತಿಯನ್ನು ವಿವರಿಸುವಾಗ ಕೇವಲ ಒಂದೇ ವಚನದಿಂದ ಆ ಸಂವಾದವನ್ನು ಪೂರ್ತಿಗೊಳಿಸುವುದಿಲ್ಲ. ಅದಕ್ಕೆ ಸಹಾಯಕವಾಗಿ ಬೇರೆ ಬೇರೆ ಸ್ಥಳಗಳಲ್ಲಿ ವಿವಿಧ ರೀತಿಗಳಲ್ಲಿ ಹಲವಾರು ವಚನಗಳಲ್ಲಿ ಅದನ್ನು ಸೂಚಿಸಿ ಆಧಾರಗಳ ಮತ್ತು ಸಾಕ್ಷ್ಯಗಳ ಸೂರ್ಯನನ್ನೇ ಉದಿಸುವಂತೆ ಮಾಡುತ್ತದೆ. ಪವಿತ್ರ ಖುರ್‌ಆನ್ ಆ ಕುರಿತು ಈ ರೀತಿ ಹೇಳುತ್ತದೆ :

ವ ಲಖದ್ ಸರ್ರಫ್‌ನಾ ಫೀ ಹಾದಲ್ ಖುರ್ ಆನಿ ಲಿ ಯುದ್ದಕ್ಕರೂ (17 : 42)

"ನಾವು ಖುರ್‌ಆನಿನಲ್ಲಿ ಒಂದು ಸಂಗತಿಯನ್ನು ಅನೇಕ ಸಾರಿ ವಿವಿಧ ರೂಪಗಳಲ್ಲಿ ಜನರು ಸರಿಯಾಗಿ ತಿಳಿಯುವಂತೆಯೂ ತಪ್ಪು ಮಾಡದಂತೆಯೂ ವಿವರಿಸಿರುವೆವು."

ಆದುದರಿಂದ ಪವಿತ್ರ ಖುರ್‌ಆನ್ ಪ್ರವಾದಿತ್ವ ಸಮಾಪ್ತಿಯನ್ನು ಪ್ರತಿಪಾದಿಸುವುದಾದರೆ ಕೇವಲ "ವ ಲಾಕಿನ್ ರಸೂಲಲ್ಲಾಹಿ ವ ಖಾತಮನ್ನಬಿಯ್ಯೀನ್" ಎಂಬ ವಚನ ಹೇಳಿ ಸುಮ್ಮನೆ ಇರುತ್ತಿರಲಿಲ್ಲ. ನಮ್ಮ ವಿರೋಧಿಗಳು ಈ ವಚನಕ್ಕೆ ನೀಡುವ ಅರ್ಥವು ಸರಿಯಾಗಿದ್ದರೆ ಪವಿತ್ರ ಖುರ್‌ಆನ್ ಅವರು ನೀಡುವ ಅರ್ಥಗಳಿಗೆ ಅನುಯೋಜ್ಯವಾದ ಇತರ ವಚನಗಳಲ್ಲಿ ಸಹ ಇದನ್ನು ವಿವರಿಸುತ್ತಿತ್ತು. ಕೇವಲ ಇದೊಂದೇ ವಚನದಲ್ಲಿ ಉದ್ದೇಶವನ್ನು ಪೂರ್ತಿಗೊಳಿಸಿ ಸುಮ್ಮನಾಗುತ್ತಿರಲಿಲ್ಲ. ಆದರೆ ಪವಿತ್ರ ಖುರ್‌ಆನ್‌ನಲ್ಲಿ ಹಲವಾರು ಸ್ಥಳಗಳಲ್ಲಿ ಪ್ರವಾದಿತ್ವ ಸಮಾಪ್ತಿಗೆ ವಿರುದ್ಧವಾದ ವಚನಗಳಿರುವುದು ಮತ್ತು ಮುಹಮ್ಮದ್ ಪೈಗಂಬರರ ಅನುಗ್ರಹಗಳು ಎಲ್ಲಾ ಇತರ ಪ್ರವಾದಿಗಳ ಅನುಗ್ರಹಗಳಿಗಿಂತ ವಿಶಾಲ

ವೂ ಶ್ರೇಷ್ಠವೂ ಉನ್ನತವೂ ಆಗಿರುವುದೆಂದು ವ್ಯಕ್ತಗೊಳಿಸಿರುವುದು–ಖಾತಮುನ್ನಬಿಯ್ಯೀನ್ ವಚನಕ್ಕೆ ನಮ್ಮ ದಾರಿ ತಪ್ಪಿದ ಮಿತ್ರರು ನೀಡುವ ಅರ್ಥ ಸರಿಯಲ್ಲವೆಂದೂ ಅವರು ನೀಡುವ ಅರ್ಥದ ಪ್ರಕಾರ ಅವರು ಮುಹಮ್ಮದ್ ಪೈಗಂಬರರ ಅನುಗ್ರಹಗಳನ್ನೂ ಆಶೀರ್ವಾದಗಳನ್ನೂ ಅವರ ನಂತರ ದೈವಿಕ ಅನುಗ್ರಹಗಳು ಸುರಿಯುವುದನ್ನೂ ಸೀಮಿತಗೊಳಿಸಿ ಅದನ್ನು ಸಂಕುಚಿತಗೊಳಿಸಲಿಚ್ಛಿಸುತ್ತಾರೆಂದೂ ಸೂಚಿಸುತ್ತದೆ.

## ಪವಿತ್ರ ಖುರ್‌ಆನಿನ ಯಾವುದೇ ವಚನ ಪ್ರವಾದಿತ್ವದ ಬಾಗಿಲನ್ನು ಮುಚ್ಚುವುದಿಲ್ಲ.

ಖಾತಮುನ್ನಬಿಯ್ಯೀನ್ ವಚನವು ವಿವಾದಾತ್ಮಕವಾಗಿದೆ. ನಮ್ಮ ವಿರೋಧಿಗಳು ಈ ವಚನಕ್ಕೆ ಕೊಡುವ ಅರ್ಥ ಸರಿಯಲ್ಲವೆಂದು ಸ್ಪಷ್ಟಪಡಿಸಬಹುದು. ವಿವಾದಕ್ಕೆ ಗುರಿಯಾದ ಈ ಒಂದು ವಚನದ ಹೊರತು ಪವಿತ್ರ ಖುರ್‌ಆನಿನಲ್ಲಿ ಬೇರೆ ಯಾವುದೇ ವಚನ ಅಥವಾ ಯಾವುದೇ ಒಂದು ಶಬ್ದ ಸಹ ಮುಹಮ್ಮದ್ ಮುಸ್ತಫಾ (ಸ)ರ ನಂತರ ಎಲ್ಲಾ ವಿಧದ ನುಬುವ್ವತ್ತಿನ ಬಾಗಿಲು ಮುಚ್ಚಲಾಗಿದೆಯೆಂಬುದನ್ನು ಸ್ಪಷ್ಟಗೊಳಿಸುವುದಿಲ್ಲ. ಇದಕ್ಕೆ ವಿರುದ್ಧವಾಗಿ ಸರ್ವಸೃಷ್ಟಿಗಳ ಸರದಾರರೂ ಸೃಷ್ಟಿಗಳ ಅಭಿಮಾನಕ್ಕೆ ಪಾತ್ರರೂ ಆದಮ್ ಸಂತತಿಗಳ ಯಜಮಾನರೂ ಆದ ಹಝ್ರತ್ ಖಾತಮುನ್ನಬಿಯ್ಯೀನ್ (ಸ)ರ ಆಗಮನದ ನಂತರ ದೇವರ ಅನುಗ್ರಹ, ವರದಾನ ಮತ್ತು ಆಶೀರ್ವಾದಗಳ ಬಾಗಿಲುಗಳು ಅವರ ಆಗಮನಕ್ಕೆ ಮುಂಚಿನ ಕಾಲಕ್ಕಿಂತಲೂ ಹೆಚ್ಚಿಗೆ ವಿಶಾಲವಾಗಿ ತೆರೆದಿದೆ ಎಂಬುದಾಗಿ ಪವಿತ್ರ ಖುರ್‌ಆನಿನಲ್ಲಿ ಅಲ್ಲಲ್ಲಿ ವಿವರಿಸಲಾಗಿದೆ.

ಖಾತಮುನ್ನಬಿಯ್ಯೀನ್ ವಚನದ ಕುರಿತು ನಮ್ಮ ವಿರೋಧಿಗಳು ನಿರಂತರವಾಗಿ ವ್ಯಕ್ತಗೊಳಿಸುವ ಅರ್ಥ ಖಂಡಿತವಾಗಿಯೂ ಸರಿಯಲ್ಲವೆಂಬುದನ್ನು ಸ್ಪಷ್ಟಗೊಳಿಸಬಹುದಾಗಿದೆ. ಈ ವಚನ ಸಹ ಪವಿತ್ರ ಖುರ್‌ಆನಿನ ಇತರ ಹಲವಾರು ವಚನಗಳಂತೆಯೇ ಪೈಗಂಬರರ ಅನುಪಮೇಯ ಅನುಗ್ರಹಗಳ ಒಂದು ವಿಶಾಲವಾದ ಬಾಗಿಲನ್ನು ತೆರೆದು ತೋರಿಸುತ್ತದೆ. ಆದರೆ ನಮ್ಮ ಸ್ನೇಹಿತರು ತಮ್ಮ ದೃಷ್ಟಿದೋಷದ ಕಾರಣದಿಂದ ನೋಡಲು ಮತ್ತು ತಿಳಿಯಲು ತಯಾರಾಗುವುದಿಲ್ಲ.

ಪವಿತ್ರ ಖುರ್‌ಆನನ್ನು ಆಧಾರಭೂತವಾಗಿಟ್ಟುಕೊಂಡು, ಪ್ರವಾದಿತ್ವ ಕೊನೆಗೊಂಡಿಲ್ಲವೆಂಬುದರ ಕುರಿತು ನಮ್ಮ ಪ್ರಥಮ ರುಜುವಾತು ಇದಾಗಿದೆ:– ಪವಿತ್ರ ಖುರ್‌ಆನಿನ ಯಾವುದೇ ಆಯತ್ ಪ್ರವಾದಿತ್ವದ ಬಾಗಿಲನ್ನು ಮುಚ್ಚುವುದಿಲ್ಲ ಮತ್ತು ನಮ್ಮ ವಿರೋಧಿಗಳು ಖಾತಮುನ್ನಬಿಯ್ಯೀನ್ ವಚನಕ್ಕೆ ನೀಡುವ ಅರ್ಥವನ್ನು ಸಮರ್ಥಿಸುವುದಿಲ್ಲ. ಖಾತಮುನ್ನಬಿಯ್ಯೀನ್ ವಚನಕ್ಕೆ ನಮ್ಮ ವಿರೋಧಿಗಳಾದ ಇಂದಿನ ಮೌಲವಿಗಳು ನೀಡುವ ಅರ್ಥ ಸರಿಯಾಗಿದ್ದರೆ ಪವಿತ್ರ ಖುರ್‌ಆನ್ ಸೂಚಿಸುವ ತತ್ವದ ಪ್ರಕಾರ ಅದು ಇನ್ನಿತರ ಹಲವಾರು ವಚನಗಳ ಮೂಲಕ ಈ ವಿಷಯವನ್ನು ವಿವಿಧ ರೂಪಗಳಲ್ಲಿ ಪುನರಾವರ್ತಿಸಿ ಇದರ ಕುರಿತು ಆಧಾರಗಳ ಮತ್ತು ಸಾಕ್ಷ್ಯಗಳ ಒಂದು ಸೂರ್ಯನನ್ನೇ ಉದಿಸುವಂತೆ ಮಾಡುತ್ತಿತ್ತು. ಆದರೆ ಸಂಗತಿ ಇದಕ್ಕೆ ವ್ಯತಿರಿಕ್ತವಾಗಿದೆ. ಪವಿತ್ರ ಖುರ್‌ಆನ್ ಕರೆದೂ ಕರೆದೂ ಸಾಕ್ಷಿ ಹೇಳುತ್ತಿದೆ. ನಮ್ಮ ಯಜಮಾನರಾದ ಮುಹಮ್ಮದ್ ಮುಸ್ತಫಾ (ಸ)ರ ನಂತರ ದೇವರ ಅನುಗ್ರಹ ಮತ್ತು ವರದಾನಗಳ ಬಾಗಿಲು ಬಹಳ ಹೆಚ್ಚು ವಿಶಾಲವಾಗಿದೆ. ನಮ್ಮ ಮುಸ್ಲಿಮ್ ಸಹೋದರರು ಈ ಅಂಶವನ್ನು ತಿಳಿದುಕೊಳ್ಳುತ್ತಿದ್ದರೆ ಎಷ್ಟು ಒಳ್ಳೆಯದಿತ್ತು!

## ಸೂರಃ ಫಾತಿಹದ ಬಲವತ್ತಾದ ಸಾಕ್ಷ್ಯ

ಪವಿತ್ರ ಖುರ್‌ಆನಿನ ಅತ್ಯಂತ ಶ್ರೇಷ್ಠ ಅಧ್ಯಾಯವಾದ ಸೂರತುಲ್ ಫಾತಿಹದಲ್ಲಿ ಅಲ್ಲಾಹು ನುಬುವ್ವತ್ ಕುರಿತು ವಿವರಿಸಿರುವ ವಚನವನ್ನು ನಾನು ವಿಶದೀಕರಿಸಲು ಇಚ್ಛಿಸುತ್ತೇನೆ. ಪವಿತ್ರ ಖುರ್‌ಆನ್ ತನ್ನ ಪ್ರಥಮ ಅಧ್ಯಾಯದಲ್ಲಿ ಈ ಮಹತ್ತಾದ ಪ್ರಾರ್ಥನೆಯನ್ನು ಕಲಿಸುತ್ತದೆ :

ಇಹ್‌ದಿನಸ್ಸಿರಾತಲ್ ಮುಸ್ತಖೀಮ್–ಸಿರಾತಲ್ಲದೀನ ಅನ್‌ಅಮ್‌ತ ಅಲೈಹಿಮ್. (ಸೂರಃ ಫಾತಿಹ ಆಯತ್ 6, 7).

(ನಮ್ಮ ಬಳಿಗೆ ಮುಹಮ್ಮದ್ ಪೈಗಂಬರರನ್ನು ನಿನ್ನ ದೂತನನ್ನಾಗಿ ಕಳುಹಿಸಿರುವ ಓ ದೇವಾ) ನೀನು ನಮ್ಮನ್ನು ನೇರವಾದ ಮಾರ್ಗದಲ್ಲಿ, ನಿನ್ನ ಅನುಗ್ರಹಗಳನ್ನು ಪಡೆದವರ ಮಾರ್ಗದಲ್ಲಿ ನಡೆಸು.

ಈ ವಚನ ಪವಿತ್ರ ಖುರ್‌ಆನಿನ ಆದ್ಯ ಭಾಗದಲ್ಲಿಯೇ ಇದ್ದು ಇದನ್ನು ಪ್ರತಿಯೊಬ್ಬ ನಿಷ್ಠಾವಂತ ಮುಸ್ಲಿಮನು ಪ್ರತಿದಿವಸ ಕಮ್ಮಿಯೆಂದರೆ ಮೂವತ್ತು ಸಾರಿ ಉಚ್ಚರಿಸುತ್ತಾನೆ. ಈ ವಚನ ಯಥಾರ್ಥವಾಗಿ ಪ್ರವಾದಿ ಮುಹಮ್ಮದ್ (ಸ)ರ ಅನುಯಾಯಿಗಳಿಗೆ ಒಂದು ಮಹತ್ತಾದ ಶುಭ ವಾರ್ತೆಯನ್ನು ನೀಡುತ್ತದೆ. ಈ ಆಯತಿನಲ್ಲಿ ದೇವರು ಮುಸಲ್ಮಾನರಿಗೆ ಈ ರೀತಿ ಪ್ರಾರ್ಥನೆಯನ್ನು ಕಲಿಸಿರುತ್ತಾನೆ; ನಾನು ಹಿಂದಿನ ಜನಾಂಗಗಳ ಅನುಗ್ರಹೀತ ಜನರಿಗೆ ನೀಡಿದ ಎಲ್ಲಾ ಅನುಗ್ರಹಗಳನ್ನೂ ನೀವು ಪ್ರಾರ್ಥಿಸಿ ಪಡೆಯಿರಿ.

ಈ ಪ್ರಾರ್ಥನೆಯ ಉದ್ದೇಶ ಕೇವಲ ದೈವಿಕ ಸನ್ಮಾರ್ಗ ಗಳಿಸುವಿಕೆ ಮಾತ್ರವಾಗಿರುವುದಿಲ್ಲ. ಇದು ಮಾತ್ರ ಉದ್ದೇಶವಾಗಿದ್ದರೆ "ಇಹ್ದಿನಸ್ಸಿರಾತಲ್ ಮುಸ್ತಖೀಮ್" ಎಂದು ಹೇಳುತ್ತಿದ್ದರೆ ಸಾಕಾಗುತ್ತಿತ್ತು. ಇದರ ನಂತರ "ಸಿರಾತಲ್ಲದೀನ ಅನ್‌ಅಮ್‌ತ ಅಲೈಹಿಂ" ಎಂಬ ವಿವರಣೆ ನೀಡುವ ಅಗತ್ಯವಿರಲಿಲ್ಲ. ಈ ವಿವರಣೆ ನೀಡಿ ಅಲ್ಲಾಹು ಉದ್ದೇಶಿಸಿರುವುದೇನೆಂದರೆ ಇಲ್ಲಿ ಕೇವಲ ಸನ್ಮಾರ್ಗ ಗಳಿಸುವ ಪ್ರಾರ್ಥನೆ ಮಾಡಲು ಮಾತ್ರವಲ್ಲ ಹಿಂದಿನ ಜನಾಂಗಗಳಲ್ಲಿ ದೇವರ ಅನುಗ್ರಹಗಳಿಗೆ ಪಾತ್ರರಾದವರ ಕುರಿತು ಮುಸ್ಲಿಮರ ಗಮನ ಹರಿಯುವಂತೆಯೂ ಮುಸಲ್ಮಾನರ ಹೃದಯಗಳಲ್ಲಿ ಆ ಅನುಗ್ರಹಗಳ ಆಸೆ ತಲೆದೋರುವಂತೆಯೂ ಅವುಗಳನ್ನು ಗಳಿಸುವ ಅತ್ಯಾಗ್ರಹ ಉಂಟಾಗುವಂತೆಯೂ ಮಾಡುವುದಾಗಿದೆ. ಮಾತ್ರವಲ್ಲ, ಪ್ರವಾದಿ ಮುಹಮ್ಮದ್ (ಸ)ರ ಅನುಯಾಯಿಗಳ ಸ್ಥಾನಮಾನಗಳನ್ನು ಉನ್ನತಗೊಳಿಸಿ ಹಿಂದಿನ ನಬಿಗಳ ಅನುಯಾಯಿಗಳಿಗೆ ವಿವಿಧ ರೀತಿಯಲ್ಲಿ ದೊರೆಯುತ್ತಿದ್ದ ಅನುಗ್ರಹಗಳು ನಿಮಗೆ ಪರಿಪೂರ್ಣವಾಗಿ ಒಟ್ಟುಗೂಡಿಸಿ ನೀಡಲಾಗುವುದೆಂದಾಗಿದೆ. ಇದರ ವ್ಯಾಖ್ಯಾನ ರೂಪದಲ್ಲಿ ಪವಿತ್ರ ಖುರ್‌ಆನ್ ಇನ್ನೊಂದು ಸ್ಥಳದಲ್ಲಿ ಈ ರೀತಿ ಹೇಳುತ್ತದೆ:

ವಮನ್ ಯ್ಯುತಿಯಿಲ್ಲಾಹ ವರ್ರಸೂಲ ಫಉಲಾಇಕ ಮಅಲ್ಲದೀನ ಅನ್‌ಅಮಲ್ಲಾಹು ಅಲೈಹಿಮ್ ಮಿನನ್ನಬಿಯ್ಯೀನ ವಸ್ಸಿದ್ದೀಖೀನ ವಶ್ಶುಹದಾಇ, ವಸ್ಸಾಲಿಹೀನ ವ ಹಸುನ ಉಲಾಇಕ ರಫೀಕ (4 : 70)

"ಅಲ್ಲಾಹನನ್ನೂ ಈ ಪ್ರವಾದಿಯನ್ನೂ ಸತ್ಯವಾಗಿ ಅನುಸರಿಸುವವರನ್ನು ಅಲ್ಲಾಹನು ತಾನು ಅನುಗ್ರಹಿಸಿದವರ ಜೊತೆಯಲ್ಲಿ ಸೇರಿಸುವನು. ಎಂದರೆ: ನಬಿ, ಸಿದ್ದೀಖ್, ಶಹೀದ್ ಮತ್ತು ಸಾಲಿಹ್‌ಗಳ ಜೊತೆ. ಈ ಎಲ್ಲಾ ಅನುಗ್ರಹೀತರು ಪರಸ್ಪರ ಸ್ನೇಹಿಸುವವರೂ ಉತ್ತಮ ಸಂಗಾತಿಗಳೂ ಆಗಿರುವರು."

## ದೇವರ ಅನುಗ್ರಹ ಗಳಿಸುವವರ ನಾಲ್ಕು ವಿಭಾಗಗಳು

ಈ ಆಯತಿನಲ್ಲಿ ಅಲ್ಲಾಹು ದೇವರ ಅನುಗ್ರಹಗಳನ್ನು ಗಳಿಸುವವರ ವಿವಿಧ ವರ್ಗಗಳನ್ನು ವಿವರಿಸಿರುವನು. ದೈವಿಕ ಮಾರ್ಗದಲ್ಲಿ ನಡೆದು ಅನುಗ್ರಹ ಗಳಿಸುವವರು ನಾಲ್ಕು ವಿಧದಲ್ಲಿರುವರೆಂದು ದೇವನು ಹೇಳಿರುತ್ತಾನೆ. ಮೊದಲನೆ ವರ್ಗ ನಬಿ, ಎರಡನೆಯದು ಸಿದ್ದೀಖ್, ಮೂರನೆಯದು ಶಹೀದ್, ನಾಲ್ಕನೆಯದು ಸಾಲಿಹ್. ಒಬ್ಬ ವ್ಯಕ್ತಿಗೆ ತನ್ನ ಯೋಗ್ಯತೆಯ ಕಾರಣದಿಂದಲೂ ತನ್ನ ಸದ್‌ವೃತ್ತಿಯ ಕಾರಣದಿಂದಲೂ ತನ್ನ ಕಾಲದ ಆವಶ್ಯಕತೆಗೆ ಅನುಸರಿಸಿ, ನುಬುವ್ವತ್ತಿನ (ಪ್ರವಾದಿತ್ವ) ಪದವಿ ಪ್ರಾಪ್ತಿಯಾಗುತ್ತದೆ. ಅವರು ದೇವರ ಜೊತೆ ಸಂಭಾಷಿಸುವ ಸೌಭಾಗ್ಯ ಗಳಿಸುವರಲ್ಲದೆ ಅದೃಶ್ಯ ಸಂಗತಿಗಳ ಕುರಿತು ಅತ್ಯಧಿಕ ಜ್ಞಾನಗಳಿಸಿ ದೈವ ನಿಯುಕ್ತರಾಗುತ್ತಾರೆ. ಇನ್ನೊಬ್ಬ ವ್ಯಕ್ತಿ ಸಿದ್ದೀಖ್ (ಸತ್ಯಸಂಧ) ಆಗಲು ಸಾಧ್ಯ., ಅವರ ನಂಬಿಕೆಗಳೂ ನಡೆವಳಿಕೆಗಳೂ ಸತ್ಯವೇ ಜೀವ ಪಡೆದಂತೆ ಇರುತ್ತವೆ. ಅವರ ಮಾತಿಗೂ ವರ್ತನೆಗೂ ಯಾವುದೇ ವೈರುಧ್ಯವಿರುವುದಿಲ್ಲ. ಮತ್ತೊಬ್ಬ ವ್ಯಕ್ತಿಗೆ ಶಹೀದ್ (ಹುತಾತ್ಮ) ಸ್ಥಾನ ಲಭಿಸುತ್ತದೆ. ಅವರ ಜೀವಿತವೂ ಮರಣವೂ ದೀನಿನ ಮಾರ್ಗದಲ್ಲಿ ಒಂದು ವಿಧದ ಶಹಾದತ್ (ರಕ್ತ ಸಾಕ್ಷಿತ್ವ) ಆಗುತ್ತದೆ. ನಾಲ್ಕನೆಯದಾಗಿ ಒಬ್ಬಾತ ಸಾಲಿಹ್ (ಸಜ್ಜನ) ಆಗುತ್ತಾರೆ. ಅವರ ನಡೆವಳಿಕೆಗಳು ಸನ್ಮಾರ್ಗವನ್ನವಲಂಬಿಸಿ ಆ ಮಾರ್ಗದಲ್ಲಿ ಸ್ಥಿರ ಪ್ರಯಾಣ ಮಾಡುತ್ತಾರೆ.

ಪ್ರಿಯ ಸಹೋದರರೇ, ನೀವು ನೋಡಿರಿ. ಸೂರತುಲ್ ಫಾತಿಹದಲ್ಲಿ ದೇವನು ನಮಗೆ ಕಲಿಸುವ ಪ್ರಾರ್ಥನೆ: "ಮುಸಲ್ಮಾನರೇ, ನೀವು ನಿಮಗೆ ಮೊದಲು ದೇವನ ಅನುಗ್ರಹಕ್ಕೆ ಪಾತ್ರರಾದವರ ಮಾರ್ಗವನ್ನು ಹುಡುಕಿರಿ

ಮತ್ತು ಅವರಿಗೆ ನೀಡಲಾದ ಅನುಗ್ರಹಗಳನ್ನು ಯಾಚಿಸಿರಿ" ಎಂದಾಗಿದೆ. ಅಲ್ಲದೆ "ಹಿಂದಿನ ಪ್ರವಾದಿಗಳ ಅನುಯಾಯಿಗಳಿಗೆ ಈ ಅನುಗ್ರಹ ವಿವಿಧ ರೀತಿಯಲ್ಲಿ ನೀಡಲಾಗಿದ್ದರೂ ನೀವು ಈ ಎಲ್ಲಾ ಅನುಗ್ರಹಗೆಳನ್ನು ಸಂಪೂರ್ಣವಾಗಿ ಗಳಿಸಲು ಯತ್ನಿಸಿರಿ" ಎಂದು ಈ ಪ್ರಾರ್ಥನೆಯು ಆಶಯವಾಗಿದೆ. "ದೇವರ ಬಹುಮಾನಗಳನ್ನು ಗಳಿಸುವವರು" ಎಂಬುದರ ಉದ್ದೇಶ ನಬಿ, ಸಿದ್ದೀಖ್, ಶಹೀದ್ ಮತ್ತು ಸಾಲಿಹ್ ಪದವಿಗಳನ್ನು ಪಡೆಯುವವರು ಎಂದು ಸ್ವತಃ ಅಲ್ಲಾಹನೇ ವಿವರಿಸಿರುವನು. ಮೇಲೆ ವಿವರಿಸಿದ ಎರಡು ಸುವ್ಯಕ್ತ ವಚನಗಳನ್ನು ಒಟ್ಟಿಗೆ ಪರಿಶೋಧಿಸಿದರೆ ಒಂದು ಸಂಗತಿ ಬೆಳ್ಳಂಬೆಳಗಿನಂತೆ ಸ್ಪಷ್ಟವಾಗುತ್ತದೆ. ಹಿಂದಿನ ಎಲ್ಲಾ ಪ್ರವಾದಿಗಳ ಅನುಯಾಯಿಗಳಿಗಿಂತ ದೈವಾನುಗ್ರಹದಿಂದ ಉನ್ನತ ಸ್ಥಾನದಲ್ಲಿರುವ ಪೈಗಂಬರರ ಅನುಯಾಯಿಗಳಿಗೆ ನುಬುವ್ವತ್ತಿನ ಬಾಗಿಲನ್ನು ದೇವರು ತೆರೆದಿಟ್ಟಿರುವನೆಂದು. ಒಂದು ಕಡೆ ಸೂರತುಲ್ ಫಾತಿಹದಲ್ಲಿ ಅಲ್ಲಾಹನು, "ದೇವಾ, ನಮ್ಮನ್ನು ನಿನ್ನ ಅನುಗ್ರಹ ಪಡೆದವರೊಂದಿಗೆ ಸೇರಿಸು" ಎಂಬ ಪ್ರಾರ್ಥನೆಯನ್ನು ಕಲಿಸಿ, ಮತ್ತೊಂದು ಕಡೆಯಲ್ಲಿ ಅನುಗ್ರಹ ಪಡೆದವರ ಕುರಿತು "ಅನುಗ್ರಹ ಪಡೆದವರೆಂದು ನಾವು ಉದ್ದೇಶಿಸುವುದು ನಬಿ, ಸಿದ್ದೀಖ್, ಶಹೀದ್ ಮತ್ತು ಸಾಲಿಹ್‌ರನ್ನು" ಎಂದು ಸ್ವಯಂ ವಿವರಣೆ ನೀಡಿ, ಅನಂತರ ತನಗೆ ಅತ್ಯಂತ ಪ್ರೀತಿಪಾತ್ರರಾದ ಪೈಗಂಬರರ ಅನುಯಾಯಿಗಳಿಗೆ ಈ ಅನುಗ್ರಹಗಳ ಬಾಗಿಲನ್ನು ಮುಚ್ಚುವುದು ಅತ್ಯಂತ ಅಸಂಭವನೀಯವಾಗಿದೆ.

ಪ್ರಿಯ ಬಂಧುಗಳೇ ಮತ್ತು ಸ್ನೇಹಿತರೇ, ನೀವು ನಿಮ್ಮ ಹೃದಯ ಮತ್ತು ಮಿದುಳಿನ ಕಿಟಿಕಿಗಳನ್ನು ತೆರೆದು ಆಲೋಚಿಸಿರಿ. ಒಂದು ಕಡೆಯಲ್ಲಿ ದೇವರು ನಮಗೆ ಕಲಿಸುವ ಪ್ರಾರ್ಥನೆ, ನಮ್ಮನ್ನು ನಿನ್ನ ಅನುಗ್ರಹಗಳನ್ನು ಪಡೆದವರೊಂದಿಗೆ ಸೇರಿಸು" ಎಂದಾಗಿದ್ದು ಇನ್ನೊಂದು ಕಡೆ ದೇವನ ಅನುಗ್ರಹ ಪಡೆದವರು ನಬಿ, ಸಿದ್ದೀಖ್, ಶಹೀದ್, ಸಾಲಿಹ್‌ಗಳೆಂದು ವಿವರಿಸುತ್ತಿರುವಾಗ ಈ ಎರಡು ವಚನಗಳನ್ನು ಜೊತೆಯಲ್ಲಿ ಅರ್ಥ ಮಾಡಿಕೊಳ್ಳಲು ಯತ್ನಿಸಿದರೆ ನಮಗೆ ಒಂದು ಸಂಗತಿ ಮನದಟ್ಟಾಗುತ್ತದೆ. ಏನೆಂದರೆ, ದೇವರ ಪ್ರವಾದಿಗಳ ಎಲ್ಲಾ ಅನುಯಾಯಿಗಳಿಗಿಂತ ಅತ್ಯಂತ ಉನ್ನತ ಸ್ಥಾನ ಪಡೆದಿರುವ ಮುಹಮ್ಮದ್ ಪೈಗಂಬರರ ಅನುಯಾಯಿಗಳಿಗೆ ಸಿದ್ದೀಖ್, ಶಹೀದ್, ಸಾಲಿಹ್ ಸ್ಥಾನಗಳೆಂಬ ಅನುಗ್ರಹಗಳು ತೆರೆದಿರುವಂತೆ ನುಬುವ್ವತ್ ಸ್ಥಾನವೆಂಬ ಬಹುಮಾನವೂ ಗಳಿಸಲು ಸಾಧ್ಯವಿದೆ. ಇದಕ್ಕೆ ವಿರುದ್ಧವಾಗಿ ಅರ್ಥ ಮಾಡಿದರೆ ನಮ್ಮ ಪರಮಪಾವನನಾದ ಅಲ್ಲಾಹನ ಮಹಿಮೆಗೆ ಕುಂದುಂಟಾಗುತ್ತದೆ. ಇದು ದೇವರು ಒಂದು ಕಡೆಯಲ್ಲಿ "ಇಂತಿಂತಹವನ್ನೆಲ್ಲಾ ನನ್ನಿಂದ ಯಾಚಿಸಿರಿ" ಎಂದು ನಮ್ಮೊಡನೆ ಹೇಳುತ್ತಾ ಇನ್ನೊಂದು ಕಡೆ ತನ್ನ ಕೈಯನ್ನು ಹಿಂತೆಗೆದುಕೊಂಡು "ನಾನು" ಈ ಅನುಗ್ರಹಗಳನ್ನು ನೀಡಲಾರೆ" ಎಂದು ಹೇಳಿದಂತೆ ಅಗುತ್ತದೆ. ಈ ರೀತಿ ಅರ್ಥ ಮಾಡುವುದರಿಂದ ಅಲ್ಲಾಹು ನಮಗೆ ಸಂರಕ್ಷಣೆ ನೀಡಲಿ. ಅಲ್ಲಾಹನು ಮಹೋನ್ನತಶಾಲಿಯಾಗಿರುವನು. ಅವನ ವರ್ತನೆಯ ಕುರಿತು ಈ ರೀತಿ ಮಕ್ಕಳಾಟದಂತೆ ತಿಳಿಯುವುದು ಪಾಪಕರವಲ್ಲವೆ?

## ಪೈಗಂಬರರ ಅನುಯಾಯಿಗಳಿಗೆ ದೈವಾನುಗ್ರಹಗಳ ಎಲ್ಲಾ ಮಾರ್ಗಗಳೂ ತೆರೆದಿರಿಸಲಾಗಿವೆ

ಮೇಲೆ ವಿವರಿಸಿದಂತೆ ಎರಡು ವಚನಗಳನ್ನು ಒಟ್ಟಿಗೆ ತೆಗೆದುಕೊಳ್ಳದೆ ಅವುಗಳನ್ನು ಬೇರೆ ಬೇರೆಯಾಗಿ ಪರಿಶೋಧಿಸಿದರೂ ಸಹ ಪ್ರಸ್ತುತ ಸೂರತುಲ್ ಫಾತಿಹದ ವಚನ ಮತ್ತು ಸೂರತುನ್ನಿಸಾದ ವಚನ ಪೈಗಂಬರರ ಅನುಯಾಯಿಗಳಿಗೆ ನುಬುವ್ವತ್ತಿನ ಬಾಗಿಲನ್ನು ತೆರೆದಿಟ್ಟಿರುವುದಾಗಿ ಬಹಳ ಸ್ಪಷ್ಟವಾಗಿ ಸೂಚಿಸಿರುವುದು ನಿಜವಾಗಿಯೂ ಪವಿತ್ರ ಖುರ್‌ಆನಿನ ವಚನಗಳ ಪರಿಪೂರ್ಣತೆಯನ್ನು ಪ್ರತಿಬಿಂಬಿಸುತ್ತದೆ. ಸೂರತುಲ್ ಫಾತಿಹದ ವಚನವನ್ನೇ ನೋಡಿರಿ:

ಇಹ್ದಿನಸ್ಸಿರಾತಲ್ ಮುಸ್ತಖೀಮ್ ಸಿರಾತಲ್ಲದೀನ ಅನ್‌ಅಮ್‌ತ ಅಲೈಹಿಂ. "ಓ ದೇವಾ, ನೀನು ನಮ್ಮನ್ನು ನೇರವಾದ ಮಾರ್ಗದಲ್ಲಿ, ನಿನ್ನ ಅನುಗ್ರಹವನ್ನು ಪಡೆದವರ ಮಾರ್ಗದಲ್ಲಿ ನಡೆಸು."

ಈ ವಚನದಿಂದ ವ್ಯಕ್ತವಾಗುವುದೇನೆಂದರೆ, ಮೇಲೆ ವಿವರಿಸಿದ ಸೂರತುನ್ನಿಸಾದ ಆಯತ್ ಇಲ್ಲದಿದ್ದರೂ ಸಹ ಸೂರತುಲ್ ಫಾತಿಹದ ಈ ಆಯತ್, ಹಿಂದಿನ ನಬಿಗಳ ಅನುಯಾಯಿಗಳಿಗೆ ವಿವಿಧ ರೂಪದಲ್ಲಿ ದೊರಕುತ್ತಿದ್ದ ಅನುಗ್ರಹಗಳು ಸಂಪೂರ್ಣವಾಗಿ ಮುಸಲ್ಮಾನರಿಗೆ ದೊರೆಯುವಂತಹ ಬಾಗಿಲನ್ನು

ತೆರೆದಿಡಲಾಗಿದೆಯೆಂದು ಸೂಚಿಸುತ್ತದೆ. ದೇವರು ಒಂದು ಪ್ರಾರ್ಥನೆಯನ್ನು ಕಲಿಸಿರುವಾಗ, ಆ ಪ್ರಾರ್ಥನೆಯಲ್ಲಿ ಅನುಗ್ರಹಗಳನ್ನು ಯಾವುದೇ ಶರತ್ತಿಗೊಳಪಡಿಸದೆ ಸೂಚಿಸಿರುವಾಗ. ಈ ಪ್ರಾರ್ಥನೆಯ ಉದ್ದೇಶ ಪ್ರಾರ್ಥಿಸುವವರಿಗೆ ಎಲ್ಲಾ ಅನುಗ್ರಹಗಳು ದೊರಕಬಹುದಾದ ಬಾಗಿಲು ತೆರೆದಿದೆ ಎಂದಾಗುತ್ತದೆ. ಈ ರೀತಿ ಆಗದಿದ್ದರೆ ಈ ಪ್ರಾರ್ಥನೆಯನ್ನು ಕಲಿಸುವುದು ನಿಷ್ಪ್ರಯೋಜಕವೂ ಅಪಹಾಸ್ಯಕರವೂ ಆಗುತ್ತದೆ. ಅನುಗ್ರಹಗಳನ್ನು ಪಡೆಯುವವರ ವಿವಿಧ ವರ್ಗಗಳನ್ನು ಸೂಚಿಸುವ ಸೂರತುನ್ನಿಸಾದ ಆಯತ್ ಇಲ್ಲದಿದ್ದರೂ ಸಹ ಸೂರತುಲ್ ಫಾತಿಹದಲ್ಲಿ ಅಲ್ಲಾಹನು ಮುಸಲ್ಮಾನರಿಗೆ ಕಲಿಸಿರುವ "ನೀನು ಹಿಂದಿನವರಿಗೆ ನೀಡಿದ ಅನುಗ್ರಹಗಳನ್ನು ನಮಗೂ ಕೊಡು" ಎಂಬ ಪ್ರಾರ್ಥನೆ ಪೈಗಂಬರರ ಅನುಯಾಯಿಗಳಿಗೆ ಹಿಂದಿನ ಪ್ರವಾದಿಗಳ ಅನುಯಾಯಿಗಳಿಗೆ ನೀಡಲಾದ ಎಲ್ಲಾ ಅನುಗ್ರಹಗಳ ಬಾಗಿಲು ತೆರೆದಿಡಲಾಗಿದೆಯೆಂಬುದಕ್ಕೆ ಬಲಯುತವೂ ಸಂಪೂರ್ಣವೂ ಆದ ಸಾಕ್ಷ್ಯವಾಗಿದೆ.

## ಮುಹಮ್ಮದ್ ರಸೂಲ್ (ಸ)ರ ನಂತರ ತಶ್‌ರೀಈ ಮತ್ತು ಮುಸ್ತಖಿಲ್ ನುಬುವ್ವತ್‌ಗಳ ಬಾಗಿಲು ಏಕೆ ಮುಚ್ಚಲಾಗಿದೆ?

ಈಗ ಈ ರೀತಿ ಒಂದು ಸಂಶಯ ತಲೆದೋರಬಹುದು: ಹಿಂದಿನ ನಬಿಗಳ ಅನುಯಾಯಿಗಳಿಗೆ ನೀಡಲಾದ ಅನುಗ್ರಹಗಳಲ್ಲಿ ತಶ್‌ರೀಈ (ಶರೀಅತ್ ಹೊಂದಿದ) ನುಬುವ್ವತ್*1 ಮತ್ತು ಮುಸ್ತಖಿಲ್ (ಸ್ವಯಂ ಸ್ಥಾನ ಪಡೆದ) ನುಬುವ್ವತ್*2 ಗಳು ಸಹ ಸೇರಿದ್ದುವು: ಆದರೆ ಈಗ ಆ ನುಬುವ್ವತ್‌ಗಳು ದೊರಕುವ ಬಾಗಿಲು ಮುಚ್ಚಲಾಗಿದೆಯೆಂದಾದರೆ ಹಿಂದಿನವರಿಗೆ ದೊರೆತ ಅನುಗ್ರಹಗಳು ನಮಗೆ ಸಹ ದೊರೆಯಲಿ ಎಂಬುದರ ಅರ್ಥವೇನು? ಇದರ ಉತ್ತರ ಈ ರೀತಿಯಾಗಿದೆ: ಇಲ್ಲಿ ಪ್ರಶ್ನೆ ಕೇವಲ ನುಬುವ್ವತ್ ಕುರಿತಾಗಿದೆ. ನುಬುವ್ವತ್ತಿನ ವಿಂಗಡನೆಯ ಕುರಿತಾಗಿರುವುದಿಲ್ಲ. ಒಂದು ಸಂಗತಿ ಸ್ಪಷ್ಟ– ಪ್ರವಾದಿತ್ವದ ಬಾಗಿಲು ತೆರೆದಿದೆ ಎಂಬುದು. ತಶ್‌ರೀಈ ನುಬುವ್ವತ್ ಮತ್ತು ಮುಸ್ತಖಿಲ್ ನುಬುವ್ವತ್ ಕುರಿತು ಹೇಳುವುದಾದರೆ, ನುಬುವ್ವತ್ ವರ್ಗೀಕರಣವು ಆಡಳಿತಾತ್ಮಕವಾದೊಂದು ಪ್ರಶ್ನೆಯಾಗಿದೆ. ಅದಕ್ಕೂ ಅನುಗ್ರಹ ದಾನಕ್ಕೂ ಯಾವುದೇ ಸಂಬಂಧವಿಲ್ಲ. ಮುಹಮ್ಮದ್ (ಸ) ರ ಆಗಮನಕ್ಕಿಂತ ಮುಂಚೆ ಪ್ರಪಂಚದ ವಿವಿಧ ಜನಾಂಗಗಳಿಗೆ ಅವರ ಸ್ಥಿತಿಗತಿಗಳಿಗನುಸರಿಸಿ ಬೇರೆ ಬೇರೆ ಶರೀಅತ್ (ಧರ್ಮಶಾಸ್ತ್ರ) ಗಳು ಆವಶ್ಯಕವಾಗಿದ್ದುವು. ಆದುದರಿಂದ ಅಲ್ಲಾಹನು ವಿವಿಧ ನಬಿಗಳಿಗೆ ವಿವಿಧ ಶರೀಅತುಗಳನ್ನು ಅವತೀರ್ಣಗೊಳಿಸಿದನು. ಆದರೆ ಪ್ರಪಂಚದ ಸ್ಥಿತಿ ಬಹಳ ವ್ಯತ್ಯಾಸಗೊಂಡಾಗ ಸರ್ವಸೃಷ್ಟಿಯ ನಾಯಕರಾದ ಹಝ್‌ರತ್ ಖಾತಮುನ್ನಬಿಯ್ಯೀನ್ ಮುಹಮ್ಮದ್ (ಸ)ರು ಆಗಮಿಸಿದಾಗ ಅವರ ಜೊತೆ ಎಲ್ಲಾ ಕಾಲಗಳಿಗೂ ಎಲ್ಲಾ ಜನಾಂಗಗಳಿಗೂ ಬೇಕಾಗಿ ಒಂದು ಕೊನೆಯ ಸಾರ್ವಲೌಕಿಕ ಶರೀಅತ್ ಅವತೀರ್ಣವಾಯಿತು. ಇದೇ ಕಾರಣದಿಂದ ಸ್ವಾಭಾವಿಕವಾಗಿ ಹೊಸ ಶರೀಅತ್ ಅವತೀರ್ಣವಾಗುವುದು ಕೊನೆಗೊಂಡಿತು. ನಮ್ಮ ಪೈಗಂಬರರಾದ ಮುಹಮ್ಮದ್ ಮುಸ್ತಫಾ (ಸ)ರು ಮಹೋನ್ನತರಾದ ಪ್ರವಾದಿಯೂ ಸರ್ವ ಸದ್ಗುಣ ಸಂಪನ್ನರೂ ಆಗಿದ್ದ ಕಾರಣ ಇತರರನ್ನು ಪರಿಶುದ್ಧಗೊಳಿಸುವ ಅವರ ಶಕ್ತಿ ಅತ್ಯುನ್ನತವಾಗಿದ್ದುದರಿಂದಲೂ ಅವರ ಶಕ್ತಿಯ ಅನುಗ್ರಹಗಳಿಂದಾಗಿ ನುಬುವ್ವತ್ತಿನ ಸ್ಥಾನ ಗಳಿಸಲು ಸಾಧ್ಯವಿತ್ತು. ಇದೇ ಕಾರಣದಿಂದ ಅವರ ಆಗಮನದ ನಂತರ ನೇರವಾಗಿ ನುಬುವ್ವತ್ ಪಡೆಯುವ ಎಂದರೆ ಮುಸ್ತಖಿಲ್ ನುಬುವ್ವತ್ ಪಡೆಯುವ ಬಾಗಿಲು ಸಹ ಮುಚಲ್ಪಟ್ಟಿತು. ಆದರೆ ಕೇವಲ ನುಬುವ್ವತ್ ಬಗ್ಗೆ ಹೇಳುವುದಾದರೆ ಪೈಗಂಬರರ ಆಗಮನದ ನಂತರ ಝಿಲ್ಲೀ ನುಬುವ್ವತ್ತಿನ ರೂಪದಲ್ಲಿ ಅದು ಬಾಕಿಯಾಗಿದೆ. ಆ ರೀತಿಯ ಪ್ರತಿಬಿಂಬ ರೂಪದ ನುಬುವ್ವತ್ತಿನ ಬಾಗಿಲು ಮುಚ್ಚಲಾಗಿಲ್ಲ. ಇಲ್ಲಿ ಪ್ರಶ್ನೆ ಇರುವುದು ಕೇವಲ ನುಬುವ್ವತ್ತಿನ ಕುರಿತಾಗಿದೆ. ನುಬುವ್ವತ್ತಿನ ವರ್ಗದ ಕುರಿತಲ್ಲ. ನುಬುವ್ವತ್ತಿನ ವರ್ಗದ ಪ್ರಶ್ನೆ ಒಂದು ಪ್ರತ್ಯೇಕ ಪ್ರಶ್ನೆಯಾಗಿದೆ. ಅದು ಕಾಲದ ಆವಶ್ಯಕತೆ ಹಾಗೂ ಪರಿಸ್ಥಿತಿಯ ಸಂಬಂಧವನ್ನು ಹೊಂದಿಕೊಂಡಿದೆ. ಮೇಲೆ ವಿವರಿಸಿದಂತೆ ಮುಹಮ್ಮದ್ ನಬಿ (ಸ)ರ ಆಗಮನದ ನಂತರ ತಶ್‌ರೀಈ ನುಬುವ್ವತ್ ಮತ್ತು ಮುಸ್ತಖಿಲ್ ನುಬುವ್ವತ್‌ಗಳ ಆವಶ್ಯಕತೆ ಇರುವುದಿಲ್ಲ. ಏಕೆಂದರೆ ಅವರ ಶರೀಅತ್ ಪರಿಪೂರ್ಣವೂ ಸಾರ್ವಕಾಲಿಕವೂ ಆಗಿರುತ್ತದೆ. ಅದರ ನಂತರ ಇನ್ನೊಂ

*1 *2 ಇವುಗಳಿಗೆ ವಿವರಣೆ ಹಿಂದಿನ ಅಧ್ಯಾಯದಲ್ಲಿದೆ.

ದು ಶರೀಅತಿನ ಆವಶ್ಯಕತೆ ಇರುವುದಿಲ್ಲ. ಅವರು ಪರಿಪೂರ್ಣರೂ ಅತ್ಯಂತ ಪರಿಶುದ್ಧ ಶಕ್ತಿಗಳನ್ನು ಹೊಂದಿರುವ ಪ್ರವಾದಿಯೂ ಆಗಿರುವರು. ಅವರ ನಂತರ ಮುಸ್ತಖಿಲ್ ನಬಿಗಳ ಪ್ರಶ್ನೆಯೇ ಏಳುವುದಿಲ್ಲ. ಒಟ್ಟಾರೆ ಹೇಳುವುದಾದರೆ ಇಲ್ಲಿ ಪ್ರಶ್ನೆ ಕೇವಲ ನುಬುವ್ವತಿನ ದಾಗಿರುತ್ತದೆ. ನುಬುವ್ವತಿನ ವರ್ಗೀಕರಣದ ಕುರಿತಲ್ಲ. ನುಬುವ್ವತ್ ಈಗಲೂ ಜಾರಿಯಲ್ಲಿದೆ. ಅದರ ಬಾಗಿಲನ್ನು ಮುಚ್ಚಲಾಗಿಲ್ಲ.

ಉದಾಹರಣೆಗೆ, ಒಂದು ಜಿಲ್ಲೆಯಲ್ಲಿ ಸರಕಾರಿ ಖಜಾನೆ ಇಲ್ಲದಿದ್ದರೆ ಅಲ್ಲಿ ಒಬ್ಬ ಇ. ಎ. ಸಿ. (ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರ್) ಖಜಾನೆಯ ಅಧಿಕಾರಿಯಾಗಿ ನೇಮಕಗೊಳ್ಳಲಿಕ್ಕಿಲ್ಲ. ಇದರ ಅರ್ಥ ಆ ಜಿಲ್ಲೆಯಲ್ಲಿ ಇ.ಎ.ಸಿ.ಯ ಉದ್ಯೋಗವೇ ರದ್ದುಗೊಳಿಸಲ್ಪಟ್ಟಿದೆ ಎಂದಾಗುವುದಿಲ್ಲ. ಏಕೆಂದರೆ ಆವಶ್ಯಕತೆಗೆ ಅನುಸಾರವಾಗಿ ಇ. ಎ. ಸಿ. ತನ್ನ ಕೆಲಸ ಮಾಡುತ್ತಾ ಇರುವರು. ಇದೊಂದು ಸ್ಪಷ್ಟ ಉದಾಹರಣೆಯಾಗಿದೆ. ಬುದ್ಧಿವಂತನಾದ ಮನುಷ್ಯನಿಗೆ ಇದು ತಿಳಿಯುವುದು ಕಷ್ಟಕರವಲ್ಲ.

## ಪೈಗಂಬರರ ಅನುಯಾಯಿಗಳಲ್ಲಿ ಪ್ರವಾದಿಗಳು ಕಮ್ಮಿಯಾಗಿದ್ದರೂ ಇತರ ಪ್ರವಾದಿಗಳ ಅನುಯಾಯಿಗಳಿಗಿಂತ ಶ್ರೇಷ್ಠರೆಂದು ಪರಿಗಣಿಸಲ್ಪಡಲು ಕಾರಣ?

ಇಲ್ಲಿ ಒಂದು ಪ್ರಶ್ನೆ ಉದಿಸುತ್ತದೆ. ಪವಿತ್ರ ಖುರ್‌ಆನಿನ ಪ್ರಕಾರ "ಕುನ್‌ತುಮ್ ಖೈರ ಉಮ್ಮತಿನ್ ಉಖ್ರಿಜತ್ ಲಿನ್ನಾಸ್" ಅಂದರೆ, ಪ್ರವಾದಿಗಳ ಅನುಯಾಯಿಗಳು ಸರ್ವಶ್ರೇಷ್ಠರು ಎಂದು ಅರ್ಥವಾಗುತ್ತಿರುವಾಗ ಹಝ್ರತ್ ಮೂಸಾ (ಅ) ರ ಉಮ್ಮತ್ (ಅನುಯಾಯಿಗಳ ಸಂಘ) ನಲ್ಲಿ ಹಝ್ರತ್ ದಾವೂದ್, ಹಝ್ರತ್ ಸುಲೈಮಾನ್, ಹಝ್ರತ್ ಝಕರಿಯ್ಯಾ, ಹಝ್‌ರತ್ ಯಹ್‌ಯಾ, ಹಝ್‌ರತ್ ಈಸಾ (ಅಲೈಹಿಮುಸ್ಸಲಾಂ) ಮೊದಲಾದ ಹಲವಾರು ನಬಿಗಳು ಬಂದಿದ್ದರೂ ಹಝ್ರತ್ ಮುಹಮ್ಮದ್ ಪೈಗಂಬರರ ಉಮ್ಮತಿನಲ್ಲಿ ಇಷ್ಟರ ವರೆಗೆ ಕೇವಲ ಒಬ್ಬ ಪ್ರವಾದಿ ಬರಲು ಕಾರಣವೇನು ? ನುಬುವ್ವತ್ ಒಂದು ಅನುಗ್ರಹವಾಗಿದ್ದರೆ, ಮತ್ತು ಮುಹಮ್ಮದ್ (ಸ)ರ ಉಮ್ಮತ್ ಯಥಾರ್ಥವಾಗಿ ಶ್ರೇಷ್ಠವಾಗಿದ್ದರೆ ಈ ಉಮ್ಮತಿನಲ್ಲಿ ಆ ಎಲ್ಲಾ ಉಮ್ಮತ್‌ಗಳಿಗಿಂತ ಹೆಚ್ಚು ನಬಿಗಳು ಬರಬೇಕಾಗಿತ್ತಲ್ಲವೇ ?

ಈ ಸಂಶಯದ ಉತ್ತರ ಈ ರೀತಿಯಾಗಿದೆ : ಹಝ್ರತ್ ಮೂಸಾ ನಬಿಯವರ ಉಮ್ಮತ್‌ನಲ್ಲಿ ಹಲವಾರು ನಬಿಗಳು ಬಂದಿದ್ದರು. ಆದರೆ ಆ ಪ್ರವಾದಿಗಳು ನುಬುವ್ವತ್ ಗಳಿಸಿದುದು ಹಝ್‌ರತ್ ಮೂಸಾನಬಿಯವರ ಅನುಸರಣೆಯ ಕಾರಣದಿಂದಲ್ಲ. ಅವರಿಗೆ ದೇವನು ನೇರವಾಗಿ ನುಬುವ್ವತ್ ನೀಡಿ ಅವರನ್ನು ಮೂಸಾನಬಿಯವರ ಶರೀಅತ್ ಮತ್ತು ಅನುಯಾಯಿಗಳ ಸೇವೆಗಾಗಿ ನೇಮಿಸಿದನು. ಆದುದರಿಂದ ಈ ನಬಿಗಳ ಆಗಮನ ಮೂಸಾನಬಿಯ ಉಮ್ಮತಿನ ಶ್ರೇಷ್ಠತೆಯ ಕುರುಹಾಗಿಲ್ಲ. ಆದರೆ ಹಝ್ರತ್ ಮುಹಮ್ಮದ್ ಮುಸ್ತಫಾ(ಸ)ರ ಅನುಯಾಯಿಗಳಲ್ಲಿ ಆಗಮಿಸಿದ ಪ್ರವಾದಿಯು ಪೈಗಂಬರರ ಪರಿಶುದ್ಧ ಭಕ್ತಿಯಿಂದ ಅವರ ಆಧ್ಯಾತ್ಮಿಕ ಪುತ್ರನ ರೀತಿಯಲ್ಲಿ ಜನಿಸಿದವರಾಗಿರುವರು. ಅವರು ಎಲ್ಲವನ್ನೂ ಪೈಗಂಬರರ ಶಿಷ್ಯತ್ವದಿಂದಲೂ ಸೇವಕನಾಗಿಯೂ ಗಳಿಸಿದರು. ಈ ರೀತಿ ಪ್ರವಾದಿಯಾಗಿ ಬಂದದ್ದು ಒಬ್ಬರೇ ಆದರೂ ಸಹ ಇದು ಮುಹಮ್ಮದ್ ನಬಿ(ಸ) ಶ್ರೇಷ್ಠತೆಗೆ ತಕ್ಕುದಾದ ಸಾಕ್ಷ್ಯವಾಗಿದೆ. ಇಂತಹ ಆಕ್ಷೇಪಗಳಿಗೆ ಉತ್ತರಿಸುತ್ತಾ ಅಹ್ಮದಿಯಾ ಜಮಾಅತಿನ ಸ್ಥಾಪಕರು ಎಷ್ಟು ಚೆನ್ನಾಗಿ ಹೇಳಿರುವರು ನೋಡಿರಿ :–

"ಇಲ್ಲಿ ಈ ಪ್ರಶ್ನೆ ಸ್ವಾಭಾವಿಕವಾಗಿ ತಲೆದೋರುತ್ತದೆ : ಹಝ್‌ರತ್ ಮೂಸಾ (ಅ) ರ ಉಮ್ಮತಿನಲ್ಲಿ ಬಹಳ ಪ್ರವಾದಿಗಳು ಬಂದಿದ್ದರು. [ಆದರೆ ಮುಹಮ್ಮದ್ (ಸ) ರ ಉಮ್ಮತಿನಲ್ಲಿ ಇಷ್ಟರ ವರೆಗೆ ಬಂದದ್ದು ಕೇವಲ ಒಬ್ಬ ಪ್ರವಾದಿ] ಇದರಿಂದ ಮೂಸಾನಬಿ ಶ್ರೇಷ್ಠರು ಎಂದಾಗುತ್ತದೆಯಲ್ಲವೇ? ಇದರ ಉತ್ತರ ಈ ರೀತಿಯಾಗಿದೆ : ಹಝ್ರತ್ ಮೂಸಾನಬಿಯವರ ಉಮ್ಮತಿನಲ್ಲಿ ಆಗಮಿಸಿದ ನಬಿಗಳನ್ನು ದೇವರು ನೇರವಾಗಿ ಆಯ್ಕೆ ಮಾಡಿದ್ದನು. ಇದರಲ್ಲಿ ಹಝ್ರತ್ ಮೂಸಾ ನಬಿಯವರಿಗೆ ಸಂಬಂಧವೇನೂ ಇರಲಿಲ್ಲ. ಆದರೆ ಮುಹಮ್ಮದ್ ಪೈಗಂಬರರನ್ನು ಅನುಸರಿಸಿದ ಕಾರಣ ಈ ಉಮ್ಮತಿನಲ್ಲಿ ಸಾವಿರಾರು ಜನರು ಅವ್‌ಲಿಯಾಗಳಾಗಿರುವರು. ಇವರ ಪೈಕಿ ಒಬ್ಬ ಉಮ್ಮತಿಯೂ ನಬಿಯೂ ಆಗಿರುವನು. ಈ ಮಹತ್ತಾದ ಅನುಗ್ರಹದಾನಗುಣ ಬೇರೆ ಯಾವ ನಬಿಯಲ್ಲಿಯೂ ಕಾಣಲು ಅಸಾಧ್ಯ. ಇಸ್ರಾಯೀಲ್

ಗೋತ್ರದಲ್ಲಿ ಜನಿಸಿದ ಆಯಾಯ ಕಾಲದ ನಬಿಗಳನ್ನು ಬೇರ್ಪಡಿಸಿದಲ್ಲಿ ಮೂಸಾ ನಬಿಯ ಅನುಯಾಯಿಗಳಲ್ಲಿ ಎಲ್ಲಾ ಜನರೂ ನ್ಯೂನತೆಯಿಂದ ಕೂಡಿದವರಾಗಿ ಹೆಚ್ಚಾಗಿ ಕಂಡು ಬರುತ್ತಾರೆ. ಮೂಸಾನಬಿಯ ಉಮ್ಮತ್ತಿನಲ್ಲಿ ಜನಿಸಿದ ನಬಿಗಳ ಕುರಿತು ಹೇಳುವುದಾದರೆ ಅವರೆಲ್ಲಾ ದೇವರಿಂದ ನೇರವಾಗಿ ಅನುಗ್ರಹ ಪಡೆದವರೇ ಹೊರತು ಮೂಸಾನಬಿಯವರಿಂದ ಏನನ್ನೂ ಪಡೆದವರಾಗಿರಲಿಲ್ಲ. ಆದರೆ ಮುಹಮ್ಮದ್ ಪೈಗಂಬರರ ಅನುಯಾಯಿಗಳಲ್ಲಿ ಹಲವಾರು ಜನರು ಕೇವಲ ಅನುಸರಣೆಯ ಕಾರಣದಿಂದ ವಲಿಗಳಾಗಿ ಮಾರ್ಪಟ್ಟರು. ಅವರ ಪೈಕಿ ಒಬ್ಬ ಉಮ್ಮತಿಯೂ ನಬಿಯೂ ಆದನು."

(ಹಖೀಖತುಲ್ ವಹೀ–ಹಾಶಿಯ ಪುಟ 28)

ಹಝ್ರತ್ ಮಸೀಹ್ ಮೌಊದರ ಈ ಜ್ಞಾನ ಪೂರ್ಣ ಉತ್ತರಕ್ಕೆ ಯಾವುದೇ ವಿವರಣೆ ನೀಡಬೇಕೆಂದಿಲ್ಲ.

## ಮುಹಮ್ಮದ್ ಪೈಗಂಬರರ ಅನುಯಾಯಿಗಳು ಎಲ್ಲಾ ಅನುಗ್ರಹಗಳ ವಾರಸುದಾರರು

ನಾನು ಇಷ್ಟರ ವರೆಗೆ ವಿವರಿಸಿದ ಪ್ರಕಾರ ಸೂರತುಲ್ ಫಾತಿಹದ ವಚನವನ್ನು ಮಾತ್ರ ತೆಗೆದುಕೊಂಡರೂ ಸಹ ಅದು ಹಝ್ರತ್ ಮುಹಮ್ಮದ್ (ಸ)ರ ಅನುಯಾಯಿಗಳಿಗೆ, ಹಿಂದಿನ ಎಲ್ಲಾ ನಬಿಗಳ ಅನುಯಾಯಿಗಳಿಗೆ ದೊರೆತ ಅನುಗ್ರಹಗಳ ಬಾಗಿಲನ್ನು ತೆರೆದು ಕೊಡುವುದಾಗಿ ತೋರಿಸುತ್ತದೆ. ಈಗ ನಾನು ಸೂರತುನ್ನಿಸಾದ ವಚನದ ಮೂಲಕ, ಅದು ಸಹ ಸ್ಪಷ್ಟವಾಗಿ ನುಬುವ್ವತ್ತಿನ ಬಾಗಿಲನ್ನು ತೆರೆದಿಡುತ್ತದೆಯೆಂದು ತೋರಿಸಲು ಇಚ್ಛಿಸುತ್ತೇನೆ.

ಮೇಲೆ ವಿವರಿಸಿದಂತೆ ಆ ಆಯತ್ ಈ ರೀತಿ ಇರುತ್ತದೆ:

> ವಮನ್ ಯ್ಯುತಿಯಿಲ್ಲಾಹ ವರ್‍ರಸೂಲ ಫಉಲಾಇಕ ಮಅಲ್ಲದೀನ ಅನ್‌ಅಮಲ್ಲಾಹು ಅಲೈಹಿಮ್ ಮಿನನ್ನಬಿಯ್ಯೀನ ವಸ್ಸಿದ್ದೀಖೀನ ವಶ್ಶುಹದಾಇ ವಸ್ಸಾಲಿಹೀನ ವಹಸುನ ಉಲಾಇಕ ರಫೀಕ. (4:70)

ಅಲ್ಲಾಹನನ್ನೂ ಈ ಪ್ರವಾದಿಯನ್ನೂ ಸತ್ಯವಾಗಿ ಅನುಸರಿಸುವವರನ್ನು ಅಲ್ಲಾಹನು ತಾನು ಅನುಗ್ರಹಿಸಿದವರ ಜೊತೆಯಲ್ಲಿ ಸೇರಿಸುವನು. ಎಂದರೆ ನಬಿ, ಸಿದ್ದೀಖ್, ಶಹೀದ್ ಮತ್ತು ಸಾಲಿಹ್‌ಗಳ ಜೊತೆ. ಈ ಎಲ್ಲಾ ಅನುಗ್ರಹೀತರು ಪರಸ್ಪರ ಸ್ನೇಹಿಸುವವರೂ ಉತ್ತಮ ಸಂಗಾತಿಗಳೂ ಆಗಿರುವರು.

ಈಗ ನೋಡಿರಿ, ಈ ಆಯತ್ ಎಷ್ಟು ಸ್ಪಷ್ಟವಾಗಿ ವಿವರಿಸುತ್ತದೆ: ಮುಹಮ್ಮದ್ (ಸ)ರ ಸತ್ಯ ನಿಷ್ಠರಾದ ಅನುಯಾಯಿಗಳಿಗೆ ದೇವರ ಎಲ್ಲಾ ಅನುಗ್ರಹಗಳ ಬಾಗಿಲುಗಳು ತೆರೆಯಲಾಗುವುದು ಎಂದು. ಪೈಗಂಬರರ ಅನುಯಾಯಿಗಳು ತಮ್ಮ ಯೋಗ್ಯತೆಗನುಸಾರವಾಗಿ ನಬಿಗಳೂ ಆಗಬಲ್ಲರು, ಸಿದ್ದೀಖ್‌ಗಳೂ ಆಗಬಲ್ಲರು, ಶಹೀದರೂ ಆಗಬಲ್ಲರು, ಸಾಲಿಹ್‌ಗಳೂ ಆಗಬಲ್ಲರು. ಈ ಎಲ್ಲಾ ವಿಭಾಗಗಳ ಜನರು ಪರಸ್ಪರ ಉತ್ತಮ ಸಂಗಾತಿಗಳೂ ಅನ್ಯೋನ್ಯ ಸ್ನೇಹಿಸುವವರೂ ಆಗುವರು. ಈ ಆಯತಿನ ಪ್ರಕಾರ ಮುಹಮ್ಮದ್ (ಸ) ರ ಸ್ಥಾನ ಎಷ್ಟು ಮಹೋನ್ನತವೆಂದರೆ ಅವರ ಅನುಸರಣೆಯಿಂದ ಮನುಷ್ಯನು ಅತ್ಯುನ್ನತ ಆಧ್ಯಾತ್ಮಿಕ ಪದವಿ ಗಳಿಸಲು ಸಾಧ್ಯವೆಂದು ಸೂಚಿಸುತ್ತದೆ. ಪೈಗಂಬರರ ಸತ್ಯವಂತರಾದ ಅನುಯಾಯಿಗಳು ಗಳಿಸಲು ಅಸಾಧ್ಯವಾದ ಯಾವ ಸ್ಥಾನವೂ ಇಲ್ಲವೆಂದು ಇದು ಸ್ಪಷ್ಟಗೊಳಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಅಲ್ಲಾಹು ಇತರ ನಬಿಗಳ ಅನುಯಾಯಿಗಳಿಗೆ ಅವರವರ ನಬಿಗಳನ್ನು ಅನುಸರಿಸುವುದರಿಂದ ದೊರಕಬಹುದಾದ ಅನುಗ್ರಹಗಳನ್ನು ವಿವರಿಸುತ್ತಾ ಅವರಿಗೆ ಸಿದ್ದೀಖ್ ಮತ್ತು ಶಹೀದ್ ಪದವಿ ಮಾತ್ರ ದೊರೆಯುತ್ತಿತ್ತೆಂದು ವಿವರಿಸಿರುವನು. ಸೂರತುಲ್‌ಹದೀದ್ 20ನೇ ಆಯತ್ ಈ ರೀತಿ ಇದೆ:

> ಅಲ್ಲದೀನ ಆಮನೂ ಬಿಲ್ಲಾಹಿ ವ ರುಸುಲಿಹೀ ಉಲಾಇಕ ಹುಮುಸ್ಸಿದ್ದೀಖೂನ ವಶ್ಶುಹದಾಉ ಇಂದ ರಬ್ಬಿಹಿಮ್ (57:20)

ಅಲ್ಲಾಹನಲ್ಲಿ ಮತ್ತು ನಬಿಗಳಲ್ಲಿ ಸತ್ಯವಾದ ವಿಶ್ವಾಸವಿರಿಸಿದವರು ಅಲ್ಲಾಹನ ಬಳಿ ಅವರವರ ಯೋಗ್ಯತೆಯನ್ನನುಸರಿಸಿ ಸಿದ್ದೀಖ್ ಮತ್ತು ಶಹೀದ್‌ರ ಸ್ಥಾನ ಪಡೆಯುತ್ತಾರೆ.

ಸೂರತುನ್ನಿಸಾ ಮತ್ತು ಸೂರತುಲ್ ಹದೀದ್‌ಗಳ ಈ ಎರಡು ಆಯತ್‌ಗಳಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಪ್ರತಿಯೊಬ್ಬ ಬುದ್ಧಿಶಾಲಿಯಾದ ಮನುಷ್ಯನು

ಅರ್ಥ ಮಾಡಿಕೊಳ್ಳಬಹುದಾದ ಒಂದು ಸಂಗತಿಯೇನೆಂದರೆ, ಹಿಂದಿನ ನಬಿಗಳ ಅನುಯಾಯಿಗಳಿಗೆ ಆ ನಬಿಗಳ ಅನುಸರಣೆಯು ಪರಿಣಾಮವಾಗಿ ಕೇವಲ ಸಿದ್ದೀಖ್ ಮತ್ತು ಶಹೀದ್ ಸ್ಥಾನದ ಬಾಗಿಲು ಮಾತ್ರ ತೆರೆದಿತ್ತು. ಅವರಿಗೆ ಆ ನಬಿಗಳ ಅನುಸರಣೆಯಿಂದ ನುಬುವ್ವತ್ತಿನ ಬಹುಮಾನ ಗಳಿಸಲು ಸಾಧ್ಯವಿರಲಿಲ್ಲ. ಆದರೆ ಮುಹಮ್ಮದ್ ಪೈಗಂಬರರ ಅನುಯಾಯಿಗಳಿಗೆ ಪೈಗಂಬರರನ್ನು ಸಂಪೂರ್ಣವಾಗಿ ಅನುಸರಿಸುವ ಪರಿಣಾಮವಾಗಿ ಯೋಗ್ಯತೆಗೆ ಅನುಸಾರವಾಗಿ ಸಿದ್ದೀಖ್, ಶಹೀದ್ ಸ್ಥಾನ ಮಾತ್ರವಲ್ಲ, ನುಬುವ್ವತ್ತಿನ ಸ್ಥಾನ ಸಹ ಗಳಿಸಲು ಸಾಧ್ಯವೆಂದು ವ್ಯಕ್ತವಾಗುತ್ತದೆ. (ವ ದಾಲಿಕ ಫಝ್ಲುಲ್ಲಾಹಿ ಯೂತೀಹಿ ಮನ್‌ಯಶಾವು ವಲ್ಲಾಹು ದುಲ್ ಫಝ್ಲಿಲ್ ಅಝೀಮ್ — ಅದು ಅಲ್ಲಾಹನ ಅನುಗ್ರಹವಾಗಿದೆ. ಅವನು ಇಚ್ಛಿಸುವವನಿಗೆ ಅದು ನೀಡಲ್ಪಡುತ್ತದೆ. ಅಲ್ಲಾಹು ಮಹತ್ತಾದ ಅನುಗ್ರಹ ನೀಡುವವನಾಗಿದ್ದಾನೆ.)

## "ಮಅ" ಎಂಬ ಶಬ್ದದ ಅರ್ಥ

ಸೂರತುಲ್ ನಿಸಾದಲ್ಲಿ "ಮಅ" ಎಂದರೆ ಜೊತೆ, ಒಟ್ಟಿಗೆ ಎಂಬರ್ಥದ ಶಬ್ದ ಪ್ರಯೋಗಿಸಲ್ಪಟ್ಟ ಕಾರಣ ಮುಹಮ್ಮದ್ ಪೈಗಂಬರರ ಅನುಯಾಯಿಗಳು ನಬಿಗಳಾಗಲಾರರೆಂದೂ ನಬಿಗಳ ಜೊತೆ ಇರುವರೆಂದೂ ಯಾರಾದರೂ ಅರ್ಥ ಮಾಡುವುದಾದರೆ ಅದು ಬಹಳ ಸಂಕುಚಿತ ದೃಷ್ಟಿಯ ಆಕ್ಷೇಪವಾಗುವುದು. ಏಕೆಂದರೆ ಇಲ್ಲಿ 'ಮಅ' ಎಂಬ ಶಬ್ದ ಕೇವಲ ನಬಿಗಳ ಜೊತೆ ಪ್ರಯೋಗಿಸಲ್ಪಟ್ಟಿಲ್ಲ. ಅದು ಅನ್‌ಅಮಲ್ಲಾಹಿ ಅಲೈಹಿಂ (ದೇವರಿಂದ ಅನುಗ್ರಹೀತರ) ಜೊತೆ ಉಪಯೋಗಿಸಲ್ಪಟ್ಟಿದೆ. ಇವರಲ್ಲಿ ನಬಿ, ಸಿದ್ದೀಖ್ ಶಹೀದ್ ಮತ್ತು ಸಾಲಿಹರು ಸೇರಿದ್ದಾರೆ. ಆದುದರಿಂದ "ಮಅ" (ಜೊತೆ) ಎಂಬ ಶಬ್ದದ ಅರ್ಥ ಪ್ರಕಾರ ಒಬ್ಬ ಮುಸಲ್ಮಾನ ಮುಹಮ್ಮದ್ ಪೈಗಂಬರರ ಅನುಸರಣೆಯಿಂದ ನಬಿಯಾಗಲು ಸಾಧ್ಯವಿಲ್ಲ, ಆದರೆ ನಬಿಗಳ ಜೊತೆ ಇರಬಹುದು ಎಂದು ಹೇಳುವುದಾದರೆ ಇದರ ಉದ್ದೇಶ ಮುಸಲ್ಮಾನರು ಯಾರೂ ದೇವರಿಂದ ಅನುಗ್ರಹೀತರ ಗುಂಪಿನಲ್ಲಿ ಸೇರಲು ಅಸಾಧ್ಯವೆಂದೇ ತಿಳಿಯಬೇಕಾಗುತ್ತದೆ. (ಈ ರೀತಿಯ ಅರ್ಥ ವಿವರಣೆಯಿಂದ ಅಲ್ಲಾಹು ನಮ್ಮನ್ನು ರಕ್ಷಿಸಲಿ). ಪೈಗಂಬರರ ಅನುಯಾಯಿಗಳು ನಬಿಗಳಾಗುವುದು ಒತ್ತೊಟ್ಟಿಗಿರಲಿ ಅವರು ಸಿದ್ದೀಖ್, ಶಹೀದ್, ಸಾಲಿಹ್ ಸಹ ಆಗಲು ಅಸಾಧ್ಯವೆಂದೇ ಇದರರ್ಥವಾಗುತ್ತದೆ. ಆದರೆ ಈ ಅರ್ಥ ಸರಿಯಲ್ಲವೆಂದು ಸ್ವಯಂ ಸ್ಪಷ್ಟವಾಗುತ್ತದೆ.

ಅರಬಿ ಭಾಷೆಯಲ್ಲಿ ಕೆಲವು ಸಾರಿ "ಮಅ" (ಜೊತೆ) ಎಂಬ ಶಬ್ದ "ಮಿನ್" (ಪೈಕಿ) ಎಂಬ ಅರ್ಥದಲ್ಲಿ ಪ್ರಯೋಗವಾಗುತ್ತದೆ. ಉದಾಹರಣೆಗೆ ಖುರ್‌ಆನಿನ ಈ ಕೆಳಗಿನ ಆಯತ್ ನೋಡಿರಿ :-

ರಬ್ಬನಾ ಫಗ್‌ಫಿರ್‌ಲನಾ ದುನೂಬನಾ ವ ಕಫ್ಫಿರ್‌ಅನ್ನಾ ಸಯ್ಯಿ ಆತಿನಾ ವತವಫ್ಫನಾ ಮಅಲ್ ಅಬ್‌ರಾರ್ (3 : 194)

"ನಮ್ಮ ಪ್ರಭೂ, ನಮ್ಮ ಪಾಪಗಳನ್ನು ಕ್ಷಮಿಸು; ನಮ್ಮ ನ್ಯೂನ್ಯತೆಗಳನ್ನು ದೂರೀಕರಿಸು; ನಮ್ಮನ್ನು ಒಳ್ಳೆಯವರ ಜೊತೆ (ಒಳ್ಳೆಯವರನ್ನಾಗಿ ಮಾಡಿ) ಮೃತಪಡಿಸು."

ಈ ಆಯತಿನಲ್ಲಿ "ಮಅಲ್‌ಅಬ್‌ರಾರ್" ಎಂದರೆ ಒಳ್ಳೆಯವರ ಜೊತೆ ಎಂಬ ಶಬ್ದ ಬರುತ್ತದೆ. ಇಲ್ಲಿ ಒಳ್ಳೆಯವರ ಜೊತೆ ಮೃತಪಡಿಸು ಎಂಬುದರ ಅರ್ಥ ಯಾರಾದರೊಬ್ಬ ಸಜ್ಜನ ಮೃತನಾಗುವಾಗ ನಮ್ಮನ್ನೂ ಮೃತ ಪಡಿಸು ಎಂದಲ್ಲ. ಇದರ ಅರ್ಥ ಅವರಂತೆಯೇ ಸಜ್ಜನರನ್ನಾಗಿ ಮಾಡಿ ಎಂದಾಗಿದೆ. ಆದುದರಿಂದ ಇಲ್ಲಿ "ಮಅ" ಶಬ್ದ "ಮಿನ್" ಎಂಬ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ ಎಂಬುದು ಸ್ಪಷ್ಟ. ಈ ಆಯತಿನ ಅರ್ಥ ನಮ್ಮನ್ನು ಉತ್ತಮರನ್ನಾಗಿ ಮಾಡಿ ಮೃತಪಡಿಸು ಎಂದೂ ಮೃತರಾಗುವಾಗ ನಾವು ಪಾಪಿಗಳ ಸ್ಥಿತಿಯಲ್ಲಿರದಂತೆ ಮಾಡು ಎಂದೂ ಆಗಿದೆ. ಇದೇ ಪ್ರಕಾರ ಇಬ್ಲೀಸ್ ಸುಜೂದ್ ಮಾಡದ ಸಂಗತಿಯ ಕುರಿತು ವಿವರಿಸುತ್ತಾ ಪವಿತ್ರ ಖುರ್‌ಆನ್ ಒಂದು ಕಡೆ "ಮಿನ್" ಶಬ್ದ ಪ್ರಯೋಗಿಸುತ್ತಾ ಈ ರೀತಿ ಹೇಳಿದೆ:

ಲಮ್ ಯಕುನ್ ಮ್ಮಿನಸ್ಸಾಜಿದೀನ್ (7:12)

ಅವನು (ಇಬ್ಲೀಸನು) ಸುಜೂದ್ ಮಾಡುವವರ ಪೈಕಿ ಇರಲಿಲ್ಲ

ಪವಿತ್ರ ಖುರ್‌ಆನ್ ಇನ್ನೊಂದು ಕಡೆಯಲ್ಲಿ ಇದೇ ಸಂದರ್ಭವನ್ನು ವಿವರಿಸುತ್ತಾ "ಮಅ" ಶಬ್ದವನ್ನು ಪ್ರಯೋಗಿಸಿದೆ:

"ಅಬಾ ಅನ್‌ಯ್ಯಕೂನ ಮಅಸ್ಸಾಜಿದೀನ್"
(15 : 32)

"ಅವನು (ಇಬ್ಲೀಸನು) ಸುಜೂದ್ ಮಾಡುವವರ ಜೊತೆ ಸೇರಲು ನಿರಾಕರಿಸಿದನು"

ಮೇಲಿನ ಉದಾಹರಣೆಗಳಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಏನೆಂದರೆ "ಮಅ" ಶಬ್ದ "ಮಿನ್" ಶಬ್ದದ ಅರ್ಥದಲ್ಲಿಯೂ ಪ್ರಯೋಗಿಸಲ್ಪಡುತ್ತದೆ.

ಒಟ್ಟಾರೆ ಹೇಳುವುದಾದರೆ "ಮಅ" ಎಂಬ ಶಬ್ದ "ಮಿನ್" ಎಂಬ ಶಬ್ದದ ಅರ್ಥದಲ್ಲಿ ಪ್ರಯೋಗಿಸಲ್ಪಡುವುದು ಸಾಮಾನ್ಯವಾಗಿದ್ದು ಅರಬಿ ಭಾಷೆಯ ಪ್ರಾಥಮಿಕ ಜ್ಞಾನ ಇರುವ ವ್ಯಕ್ತಿಗೆ ಸಹ ಇದನ್ನು ನಿರಾಕರಿಸಲು ಸಾಧ್ಯವಿಲ್ಲ. ಸತ್ಯವೇನೆಂದರ ಇಂತಹ ಪ್ರಯೋಗಗಳು ಎಲ್ಲಾ ಭಾಷೆಗಳಲ್ಲಿ ಸಹ ಇರುತ್ತವೆ. ಉದಾಹರಣೆಗೆ ಉರ್ದು ಭಾಷೆಯಲ್ಲಿ "ಫುಲಾನ್ ಶಖ್ಸ್ ಮುಸ್ಲಿಂಲೀಗ್ ಕೆ ಸಾಥ್ ಹೈ" ಎಂದರೆ "ಆ ವ್ಯಕ್ತಿ ಮುಸ್ಲಿಮ್ ಲೀಗಿನ ಜೊತೆ ಇದ್ದಾನೆ." ಹಾಗೆ ಹೇಳಿದರೆ ಅದರ ಅರ್ಥ ಅವನು ಮುಸ್ಲಿಮ್ ಲೀಗ್ ಸಂಸ್ಥೆಯ ಒಬ್ಬ ಮೆಂಬರನಾಗಿದ್ದಾನೆ ಎಂದಾಗಿದೆ. ಆದರೆ ಇಂದಿನ ಕಾಲದ ಮೌಲ್ವಿಗಳು ಪವಿತ್ರ ಖುರ್‌ಆನಿನ ಅಧ್ಯಯನ ಮಾಡುವುದನ್ನು ಬಿಟ್ಟುಬಿಟ್ಟಿರುವುದು ಅತ್ಯಂತ ಖೇದಕರವಾಗಿದೆ. ಅವರು ಕೇವಲ ಮೇಲಿಂದ ಮೇಲೆ ತಿಳಿಯಬಹುದಾದ ಅರ್ಥವನ್ನೂ ಕಥೆಗಳನ್ನೂ ಮಾತ್ರ ಅವಲಂಬಿಸಿಕೊಂಡಿದ್ದಾರೆ. ಅವರು ಚಿಂತಿಸುತ್ತಿದ್ದರೆ "ಮಅ" ಶಬ್ದದ ಕುರಿತು ಹಠಮಾರಿತನ ತೋರಿಸಿ ದಾರಿ ತಪ್ಪುವ ಅಗತ್ಯವಿರಲಿಲ್ಲ.

## ಮಅ ಶಬ್ದ ಪ್ರಯೋಗಿಸಿದುದರ ಔಚಿತ್ಯ

"ಮಿನ್" ಎಂಬ ಶಬ್ದವನ್ನು ಬಿಟ್ಟು "ಮಅ" ಶಬ್ದ ಪ್ರಯೋಗಿಸಿದುದರಲ್ಲಿ ಒಂದು ದೊಡ್ಡ ಜಾಣತನ ಇದೆ. ಅದೇನೆಂದರೆ ಪ್ರಸ್ತುತ ಆಯತಿನಲ್ಲಿ "ಮಅ" ಎಂಬ ಶಬ್ದದಿಂದ "ಮಿನ್" ಎಂಬ ಶಬ್ದದ ಅರ್ಥವೂ ಬರುವಂತೆ ಪ್ರಯೋಗಿಸಲಾಗಿದೆ. ಇದನ್ನು ಸರಿಯಾಗಿ ತಿಳಿಯಲು ಮುಹಮ್ಮದ್ ನಬಿ (ಸ)ರ ಒಂದು ಹದೀಸನ್ನು ಉದ್ಧರಿಸುವುದು ಅಗತ್ಯವಾಗಿದೆ. ಅದು ಈ ರೀತಿ ಇದೆ: "ಅಲ್ ಅರ್‌ವಾಹು ಜುನೂದುನ್ ಮುಜನ್ನದ" (ಆತ್ಮಗಳ ವಿವಿಧ ಗುಂಪುಗಳಿವೆ). ಒಂದು ವರ್ಗದ ಆತ್ಮಗಳು ಅದೇ ರೀತಿಯ ಬೇರೆ ಆತ್ಮಗಳ ಕಡೆ ಆಕರ್ಷಿಸಲ್ಪಟ್ಟು ಅವುಗಳ ಜೊತೆ ಸಂಬಂಧ ಮತ್ತು ಸಹವಾಸದಲ್ಲಿರುತ್ತವೆ. ಒಟ್ಟಾರೆ, ಅಲ್ಲಿ "ಮಿನ್" ಎಂಬ ಶಬ್ದವನ್ನು ಬಿಟ್ಟು "ಮಅ" ಶಬ್ದ ಪ್ರಯೋಗಿಸಿದುದರ ಉದ್ದೇಶ ಅನುಗ್ರಹ ಗಳಿಸಿದವರು ನಬಿಗಳು, ಸಿದ್ದೀಖ್‌ಗಳು, ಶಹೀದ್‌ಗಳು ಮತ್ತು ಸಾಲಿಹ್‌ಗಳಾಗುವುದು ಮಾತ್ರವಲ್ಲದೆ, ಅವರಲ್ಲಿ ಒಂದು ರೀತಿಯ ಸಹಜೀವನವೂ ನಡೆಯುತ್ತದೆ ಎಂದಾಗಿದೆ. ವಿವಿಧ ಗುಂಪುಗಳ ಜನರು ಪರಸ್ಪರ ಸ್ನೇಹದಿಂದ, ಐಕ್ಯದಿಂದ ಸಹಬಾಳ್ವೆ ಮಾಡುವರು. ಅವರು ಹದೀಸಿನಲ್ಲಿ ವಿವರಿಸಿದ "ಜುನೂದುನ್ ಮುಜನ್ನದ" ಎಂಬುದರ ಪ್ರತೀಕವಾಗಿ ಪರಿಣಮಿಸುವರು. ಇದೇ ವಿಷಯುವನ್ನು ವಿಶದೀಕರಿಸಲು ಪವಿತ್ರ ಖುರ್‌ಆನ್ ಆ ಆಯತಿನ ಕೊನೆಯಲ್ಲಿ "ಹಸುನ ಉಲಾಇಕ ರಫೀಕ" ಎಂಬ ಶಬ್ದಗಳನ್ನು ಪ್ರಯೋಗಿಸಿದೆ. ಈ ಪದಗಳು ಅನುಗ್ರಹ ಗಳಿಸಿದವರ ಸ್ನೇಹ ಜೀವನವನ್ನೂ ಅವರ ಸಂಬಂಧವನ್ನೂ ಐಕ್ಯತೆಯನ್ನೂ ಸೂಚಿಸುತ್ತವೆ. ಇವು ಪ್ರತಿಯೊಂದು ಅನುಗ್ರಹೀತ ಸಂಘದಲ್ಲಿ ಇರಬೇಕಾದ ಗುಣಗಳಾಗಿವೆ. ಇದೇ ತತ್ವವನ್ನು ಸರಿಸಿ ಮುಹಮ್ಮದ್ ಮುಸ್ತಫಾ (ಸ.)ರು ಈ ರೀತಿ ಹೇಳಿರುವರು :

"ಅಲ್ ಅಂಬಿಯಾಉ ಇಖ್‌ವತುನ್ ಮಿನ್ ಅಲ್ಲಾತಿ ಉಮ್ಮಹಾತಿಹಿಮ್ ಶತ್ತಾ ವ ದೀನು ಹುಮ್ ವಾಹಿದ್" (ಮುಸ್ಲಿಮ್: ಬಾಬ್ ಪರ್ಝಾಯಿಲೆ ಈಸಾ).

"ಎಲ್ಲಾ ನಬಿಗಳು ಪರಸ್ಪರ ಸಹೋದರರಂತಿರುವರು. ಅವರ ತಾಯಂದಿರು ಬೇರೆ ಬೇರೆಯಾಗಿದ್ದರೂ ಅವರ ತಂದೆ ಒಬ್ಬನೇ ಮತ್ತು ಅವರ ಧರ್ಮ ಒಂದೇ."

ಒಟ್ಟಿನಲ್ಲಿ, ಮೇಲೆ ವಿವರಿಸಿದ ಖುರ್‌ಆನ್ ಆಯತ್‌ನಲ್ಲಿ ಸಹ ಇದೇ ಆಧ್ಯಾತ್ಮಿಕ ಐಕ್ಯದ ಕುರಿತು ಸೂಚಿಸಲಿಕ್ಕಾಗಿ "ಮಅ" ಎಂಬ ಶಬ್ದವನ್ನು ಪ್ರಯೋಗಿಸಿ "ಮಅ" ಮತ್ತು "ಮಿನ್" ಎಂಬ ಎರಡೂ ಶಬ್ದಗಳ ಅರ್ಥ ಉಂಟಾಗುವಂತೆ ಮಾಡಲಾಗಿದೆ. ಆದರೆ ಈ ಕಾಲದ ಅಧಿಕ ಮೌಲ್ವಿಗಳು ಪವಿತ್ರ ಖುರ್‌ಆನಿನ ಅಗಾಧವಾದ ಅರ್ಥ ವ್ಯಾಪ್ತಿಯ ಕುರಿತು ಏನೂ ತಿಳಿಯದವ

ರಾಗಿರುವುದು ಅತ್ಯಂತ ವ್ಯಸನಕರವಾಗಿದೆ. ಆಳ ಸಮುದ್ರದಲ್ಲಿ ಮುಳುಗಿ ಅಮೂಲ್ಯವಾದ ಮುತ್ತುರತ್ನಗಳನ್ನು ಮೇಲೆ ತರಲು ಯತ್ನಿಸದೆ ಸಮುದ್ರದ ಮೇಲ್ಮೈಯಲ್ಲಿ ಅವರದೇ ದುಷ್ಕೃತ್ಯಗಳಿಂದುಟಾದ ಕಳೆಯನ್ನು ತಮ್ಮ ಹೃದಯಕ್ಕೊತ್ತಿಕೊಂಡಿರುವುದು ಇಂದಿನ ಮೌಲ್ವಿಗಳ ಸ್ಥಿತಿಯಾಗಿದೆ. ಅವರು ಚಿಂತಿಸುತ್ತಿದ್ದರೆ ಪವಿತ್ರ ಖುರ್ಆನಿನ ಪ್ರತಿಯೊಂದು ಶಬ್ದದಲ್ಲಿಯೂ ಬಹಳ ಆಳವೂ ವಿಶಾಲವೂ ಆದ ಅರ್ಥವನ್ನು ಕಂಡು ಹಿಡಿಯಲು ಸಾಧ್ಯವಾಗುತ್ತಿತ್ತು.

ಪವಿತ್ರ ಖುರ್ಆನ್ ಒಂದು ಸಾಧಾರಣ ಪದದ ಬದಲಿಗೆ ಬೇರೊಂದು ಪದವನ್ನು ಬಳಸಿದರೆ ಅದರ ಹಿಂದೆ ಬಹಳ ಹಿರಿದಾದ ಒಂದು ಉದ್ದೇಶ ರಹಸ್ಯವಾಗಿರುತ್ತದೆ. ಇದನ್ನೇ ಪವಿತ್ರ ಖುರ್ಆನ್ ಈ ರೀತಿ ವ್ಯಕ್ತಗೊಳಿಸಿದೆ:

"ವಮಾ ಯಃಅ್ಲಮು ತಅ್ವೀಲಹು ಇಲ್ಲಲ್ಲಾಹು ವರ್ರಾಸಿಖೂನ ಫಿಲ್ಇಲ್ಮಿ ವಲ್ಲದೀನ ಫೀ ಖುಲೂಬಿಹಿಮ್ ಝೈಗುನ್ ಫಯತ್ತಬಿಊನ ಮಾ ತಶಾಬಹ ಮಿನ್‌ಹು ಮಯಬ್‌ಗೂನಹಾ ಇವಜಾ."

(ಪವಿತ್ರ ಖುರ್ಆನಿನ) ವ್ಯಾಖ್ಯಾನ ಅಲ್ಲಾಹುವಿಗೆ ಮತ್ತು ಸಂಪೂರ್ಣ ಜ್ಞಾನ ಗಳಿಸಿದವರಿಗೆ ಮಾತ್ರ ಗೊತ್ತು. ಯಾರ ಹೃದಯದಲ್ಲಿ ಮಲೀನತೆಯಿದೆಯೋ ಅವರು ಅದರಲ್ಲಿ ಸಾದೃಶ್ಯವುಳ್ಳ ಸಂಗತಿಗಳನ್ನು ಹಿಂಬಾಲಿಸುತ್ತಾರೆ ಮತ್ತು ದಾರಿ ತಪ್ಪಿ ನಡೆಯುತ್ತಾರೆ.

(ಮುಂದುವರಿಯುವುದು)

**READ :**

**Khatme Nabuwat Ki Haqeeqath (Urdu)**

**Truth About Khatme Nabuwat (English)**

**Price : Rs. 2-50 for each book**

**Apply To :** Secretary for Mission Works
Sadr Anjuman Ahmadiyya
QADIAN - 143516 (Punjab)

**ಅಹ್ಮದಿಯಾ ಸಂದೇಶ**

ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ

ಗ್ರಂಥಕರ್ತ : ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್

ಪುಟ : 60 ಬೆಲೆ : ಒಂದು ರೂಪಾಯಿ ಅಂಚೆ ವೆಚ್ಚ : ಉಚಿತ

ಬರೆಯಿರಿ : Book Secretary, Ahmadiyya Muslim Mission,
10-23/1008, Ansari Road, Bunder, Mangalore-575 001.

# ಅಹ್ಮದೀ ಮುಸ್ಲಿಮರು ಮತ್ತು ಅಹ್ಮದಿಯೇತರ ಮುಸ್ಲಿಮರು

## ಯಾರ ವಿಶ್ವಾಸಗಳು ಯಥಾರ್ಥ ಇಸ್ಲಾಮಿಕ ?

★ ಮೌಲ್ವಿ ಮುಹಮ್ಮದ್ ಅಬುಲ್‌ವಫಾ

ಇಂದು ಮುಸ್ಲಿಮರಲ್ಲಿ ಹಲವಾರು ಪಂಥಗಳಿವೆಯಷ್ಟೆ. ಈ ಪಂಗಡಗಳು ಅಸಂದಿಗ್ಧ ಭಾಷೆಯಲ್ಲಿ ಅನ್ಯೋನ್ಯ ಕುಫ್ರ್‌ಫತ್ವ (ಮತಭ್ರಷ್ಟತೆಯ ವಿಧಿ)ಗಳನ್ನು ಹೊರಡಿಸುತ್ತವೆ. ಶಿಯಾ ಪಂಥದವರು ಕಾಫಿರ್ (ಮತಭ್ರಷ್ಟರು) ಎಂದು ಸುನ್ನೀ ಪಂಥದವರೂ ಸುನ್ನೀ ಪಂಥೀಯರು ಕಾಫಿರೆಂದು ಶಿಯಾ ಪಂಥೀಯರೂ ಪುರೋಗಾಮಿಗಳು ಕಾಫಿರೆಂದು ಯಥಾಸ್ಥಿತಿವಾದಿಗಳೂ ಯಥಾಸ್ಥಿತಿವಾದಿಗಳು ಕಾಫಿರೆಂದು ಪುರೋಗಾಮಿಗಳೂ ಬಹಳ ಸ್ಪಷ್ಟವಾಗಿ ವಿಧಿ ಹೇಳಿದ್ದಾರೆ. ಹಾಗಿದ್ದರೂ ಇಸ್ಲಾಮಿನ ಮೂಲಭೂತ ಸಿದ್ಧಾಂತಗಳಲ್ಲಿ ತಾವು ಮುಸ್ಲಿಂ ಎಂದು ವಾದಿಸುವ ಎಲ್ಲಾ ಪಂಗಡದವರು ಏಕಾಭಿಪ್ರಾಯವುಳ್ಳವರಾಗಿದ್ದಾರೆ. ಹಾಗೆ ವಾದಿಸುವುದು ಮಾತ್ರವಲ್ಲ, ಇಸ್ಲಾಮಿನ ಪ್ರಚಾರಕ್ಕಾಗಿ ಭಗೀರಥ ಪ್ರಯತ್ನ ಮಾಡುತ್ತಿರುವ ಒಂದು ಸಂಘಟನೆಯಾಗಿದೆ ಅಹ್ಮದಿಯಾ ಜಮಾಅತ್. ಒಟ್ಟಾರೆ, ಅವರಿಗೆ ಇತರ ಮುಸ್ಲಿಮರೊಂದಿಗೆ ಇಸ್ಲಾಮಿನ ಮೂಲ ತತ್ವಗಳಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಭಿನ್ನಾಭಿಪ್ರಾಯವಿರಲಿಕ್ಕೆ ಸಾಧ್ಯವೂ ಇಲ್ಲ. ಇಸ್ಲಾಮಿನ ಐದು ಪ್ರಧಾನ ಕರ್ಮಾನುಷ್ಠಾನಗಳಲ್ಲೂ ಈಮಾನಿನ ಆರು ಮೂಲ ಸಂಗತಿಗಳಲ್ಲೂ ಇತರ ಮುಸ್ಲಿಮರಂತೆಯೇ ಅಹ್ಮದೀ ಮುಸ್ಲಿಮರು ಸಹ ದೃಢವಾಗಿ ವಿಶ್ವಾಸವುಳ್ಳವರಾಗಿದ್ದಾರೆ. ಖುರ್‌ಆನ್ ಮತ್ತು ಸುನ್ನತ್ ಅಹ್ಮದೀಯರ ಕೂಡ ಪ್ರಧಾನ ಧರ್ಮಾಧಾರಗಳಾಗಿವೆ. ಈ ವಿಷಯದಲ್ಲಿ ಇತರ ಮುಸ್ಲಿಮರೊಡನೆ ಅಹ್ಮದೀ ಮುಸ್ಲಿಮರಿಗೆ ಭಿನ್ನಾಭಿಪ್ರಾಯವಿಲ್ಲ. ಆದರೂ ಶಾಖಾಪರವಾದ ಇತಠ ಕೆಲವು ಸಂಗತಿಗಳಲ್ಲಿ ಅಹ್ಮದೀ ಮುಸ್ಲಿಮರಿಗೂ ಅಹ್ಮದಿಯೇತರ ಮುಸ್ಲಿಮರಿಗೂ ಭಿನ್ನಾಭಿಪ್ರಾಯವಿದೆ. ಕೆಲವು ಖುರ್‌ಆನ್ ವಾಕ್ಯಗಳಿಗೂ ನಬಿವಚನಗಳಿಗೂ ನೀಡಲಾಗುವ ವ್ಯಾಖ್ಯಾನದಲ್ಲಿರುವ ವ್ಯತ್ಯಾಸವಾಗಿದೆ ಈ ಭಿನ್ನಾಭಿಪ್ರಾಯಕ್ಕೆ ಕಾರಣ.

ಅಹ್ಮದೀ ಮುಸ್ಲಿಮರಿಗೆ ಅಹ್ಮದಿಯೇತರ ಮುಸ್ಲಿಮರೊಡನೆ ಭಿನ್ನಾಭಿಪ್ರಾಯವಿರುವ ಸಂಗತಿಗಳಲ್ಲಿ ಈ ಕೆಳಗಿನವು ಪ್ರಧಾನವಾದುವು :

1. ಖುರ್‌ಆನಿನಲ್ಲಿ ಅಸಿಂಧು (ಮನ್‌ಸೂಖ್) ಆದ ಆಯತು ಒಂದಾದರೂ ಇಲ್ಲವೆಂದು ಅಹ್ಮದಿಯರು ದೃಢವಾಗಿ ನಂಬುತ್ತಾರೆ. ಆದರೆ, ಶಿಯಾ, ಸುನ್ನಿ, ಪುರೋಗಾಮಿ ಮೊದಲಾದ ಮುಸ್ಲಿಮರೆಲ್ಲರೂ ಖುರ್‌ಆನಿನ ಹಲವಾರು ಆಯತುಗಳು ಅಸಿಂಧುಗೊಂಡಿವೆಯೆಂದು ನಂಬುತ್ತಾರೆ. ಆ ವಾಕ್ಯಗಳನ್ನು ಪವಿತ್ರ ಖುರ್‌ಆನಿನಲ್ಲಿ ನಾವು ಕಂಡು ಓದುತ್ತಿರುವೆವಾದರೂ ಅವುಗಳಲ್ಲಿ ಹೇಳಲಾದ ನಿರ್ದೇಶಾನುಸಾರ ನಾವು ವರ್ತಿಸಬೇಕಾಗಿಲ್ಲವೆಂದು ಅವರು ನಂಬುತ್ತಾರೆ.

2. 'ಜಿಹಾದ್'ನ ಅರ್ಥ ಬಲ ಪ್ರಯೋಗಿಸಿ ಮುಸ್ಲಿಮೇತರರನ್ನು ಮುಸ್ಲಿಮರನ್ನಾಗಿ ಪರಿವರ್ತಿಸುವುದಾಗಲಿ ಅಮುಸ್ಲಿಂ ರಾಷ್ಟ್ರಗಳನ್ನು ಆಕ್ರಮಿಸಿ ಅಧೀನಗೊಳಿಸುವುದಾಗಲಿ ಮಾಡುವುದಲ್ಲವೆಂದೂ ಇಸ್ಲಾಮಿನ ಪ್ರಚಾರಕ್ಕೂ ಅಭ್ಯುದಯಕ್ಕೂ ಬೇಕಾಗಿ ನ್ಯಾಯವೂ ಸಂದರ್ಭೋಚಿತವೂ ಆದ ರೀತಿಯಲ್ಲಿ ಸರ್ವ ಶಕ್ತಿಯನ್ನು ಪ್ರಯೋಗಿಸಿ ಪರಿಶ್ರಮಿಸುವುದಾಗಿದೆ ಎಂದೂ ಅಹ್ಮದಿಯರು ನಂಬುತ್ತಾರೆ. ಇಸ್ಲಾಂ ಧರ್ಮಕ್ಕೋಸ್ಕರ ಆಯುಧಬಲದಿಂದ ಶತ್ರುಗಳೊಡನೆ ಹೋರಾಡು

ವುದಾಗಿದೆ ಜಿಹಾದ್ ಎಂದೂ ಶಕ್ತಿಪ್ರಯೋಗಿಸಿ ಇಸ್ಲಾಂ ಧರ್ಮವನ್ನು ಪ್ರಚಾರಗೊಳಿಸಿ ಸ್ಥಾಪಿಸಬಹುದೆಂದೂ ಸಾಮಾನ್ಯವಾಗಿ ಇತರ ಮುಸ್ಲಿಮರು ನಂಬುತ್ತಾರೆ.

3. ಮತತ್ಯಾಗ ಮರಣದಂಡನೆಗರ್ಹವಾದ ಒಂದು ಅಪರಾಧವಲ್ಲವೆಂದು ಅಹ್ಮದಿಯರ ವಿಶ್ವಾಸ. ಎಂದರೆ ಒಬ್ಬ ಮುಸ್ಲಿಮನಿಗೆ ಇಸ್ಲಾಂ ಧರ್ಮದ ಮೇಲಿನ ವಿಶ್ವಾಸ ನಷ್ಟವಾಗಿ ಬಿಡುವುದರಿಂದ ಆತನು ಆ ಧರ್ಮವನ್ನು ಪರಿತ್ಯಜಿಸುವುದಾದರೆ ಆ ಕಾರಣದಿಂದ ಮಾತ್ರ ಆತನಿಗೆ ಮರಣದಂಡನೆ ಹೋಗಲಿ ಬೇರೆ ಯಾವುದೇ ಶಿಕ್ಷೆಯನ್ನೂ ನೀಡಬಾರದಾಗಿದೆ. ಏಕೆಂದರೆ ಧರ್ಮ ಸ್ವಾತಂತ್ರ್ಯ, ವಿಶ್ವಾಸ ಸ್ವಾತಂತ್ರ್ಯ ಮತ್ತು ವಿಚಾರ ಸ್ವಾತಂತ್ರ್ಯ ಮನುಷ್ಯನ ಮೂಲಭೂತ ಹಕ್ಕುಗಳಾಗಿವೆ. ಒಟ್ಟಿನಲ್ಲಿ, ಬೆದರಿಸಿ ಮತ್ತು ಬಲಪ್ರಯೋಗಿಸಿ ಒಂದು ಧರ್ಮವನ್ನು ಸ್ವೀಕರಿಸುವಂತೆ ಮಾಡಬಾರದೆಂಬ ಪ್ರಕಾರವೇ ಬೆದರಿಸಿ, ಬಲವಂತಪಡಿಸಿ ಮತದಲ್ಲಿರುವಂತೆಯೂ ಮಾಡಬಾರದಾಗಿದೆ. ಆದರೆ, ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಬಳಿಕ ಅದನ್ನು ಪರಿತ್ಯಜಿಸುವವರನ್ನು ವಧಿಸಬೇಕೆಂದು ಅಹ್ಮದಿಯೇತರ ಮುಸ್ಲಿಮರ ಮತವಾಗಿದೆ.

4. ಮುಹಮ್ಮದ್ ಪೈಗಂಬರ (ಸ)ರು ಮತ್ತು ಇತರ ಪ್ರವಾದಿಗಳು ತಮ್ಮ ದೌತ್ಯಗಳನ್ನು ನಿರ್ವಹಿಸಿದ ನಂತರ ಯಾವ ರೀತಿ ಮೃತ್ಯುವಶರಾದರೋ ಅದೇ ಪ್ರಕಾರ ಈಸಾನಬಿ (ಅ) ಸಹ ಮೃತಪಟ್ಟಿರುವರೆಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಆದರೆ ಈಸಾನಬಿ (ಪ್ರವಾದಿ ಯೇಸು) ಮೃತಪಟ್ಟಿಲ್ಲವೆಂದೂ ಅವರು ಸ್ವಶರೀರ ಸಹಿತ ಆಕಾಶಕ್ಕೆ ಆರೋಹಿಸಲ್ಪಟ್ಟಿರುವರೆಂದೂ ಕಾಲಬೇಧಗಳ ಯಾವ ಬಾಧೆಯೂ ಇಲ್ಲದೆ ಮೊದಲಿನ ಸ್ಥಿತಿಯಲ್ಲೇ ಈಗಲೂ ಜೀವಂತವಾಗಿದ್ದಾರೆಂದೂ ಇತರ ಮುಸ್ಲಿಮರು ನಂಬುತ್ತಾರೆ.

5. ಮೃತರಾದವರು ಯಾರೂ ಈ ಲೋಕಕ್ಕೆ ಹಿಂತಿರುಗಿ ಬರಲಾರರೆಂದು ಅಹ್ಮದೀಯರು ನಂಬುತ್ತಾರೆ. ಆದರೆ ಕೆಲವು ಮಹಾತ್ಮರುಗಳು ಮೃತಪಟ್ಟವರನ್ನು ಬದುಕಿಸಿದ್ದಾರೆಂದು ಅಹ್ಮದಿಯೇತರರು ನಂಬುತ್ತಾರೆ.

6. ವಾಗ್ದತ್ತ ಮಸೀಹ್ ಮುಹಮ್ಮದ್ ಪೈಗಂಬರ (ಸ)ರ ಉಮ್ಮತಿಯಿಂದ ಬರಬೇಕೆಂದೂ ಆ ಮಹಾತ್ಮರು ಅಲ್ಲಾಹನಿಂದ ನಿಯುಕ್ತರಾಗಿದ್ದಾರೆಂದೂ ಅಹ್ಮದಿಯರು ನಂಬುತ್ತಾರೆ. ಇತರ ಮುಸ್ಲಿಮರಾದರೋ, ಎರಡು ಸಾವಿರ ವರ್ಷಗಳ ಹಿಂದೆ ಇಸ್ರಾಯಿಲ್ಯರಲ್ಲಿ ನಿಯೋಜಿಸಲ್ಪಟ್ಟಿದ್ದ ಇಸ್ರಾಯಿಲೀ ಮಸೀಹರೇ ಪುನಃ ಬರುವರೆಂದೂ ಆ ಮಹಾತ್ಮರು ಇಷ್ಟರ ವರೆಗೆ ಬಂದಿಲ್ಲವೆಂದೂ ನಂಬುತ್ತಾರೆ.

7. ಮುಹಮ್ಮದ್ ಪೈಗಂಬರರ ಉಮ್ಮತಿಯಲ್ಲಿ ಅಲ್ಲಾಹನು ತಾನು ಇಚ್ಛಿಸುವವರಿಗೆ ಪ್ರವಾದಿತ್ವ ಪದವಿಯನ್ನು ನೀಡುವನೆಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಆ ಸ್ಥಾನವನ್ನು ಪಡೆಯುವ ವ್ಯಕ್ತಿ ಮುಹಮ್ಮದ್ ಪೈಗಂಬರರ ಉಮ್ಮತಿಯೂ ಅನುಯಾಯಿಯೂ ಇಸ್ಲಾಮಿನ ಸೇವಕನೂ ಮಾತ್ರ ಆಗಿರುವರಲ್ಲದೆ ಹೊಸ ಧರ್ಮಶಾಸ್ತ್ರವನ್ನು ತರುವ ಅಥವಾ ಇಸ್ಲಾಮಿನ ಯಾವುದಾದರೊಂದು ಆಜ್ಞೆಯನ್ನು ಅಸಿಂಧುಗೊಳಿಸುವ ಅಥವಾ ಪೈಗಂಬರರ ಉಮ್ಮತಿಯಲ್ಲಿ ಸೇರದ ವ್ಯಕ್ತಿಯೋ ಆಗಿರಲಿಕ್ಕಿಲ್ಲ. ಆದರೆ, ಅಹ್ಮದಿಯೇತರರು, ಪೈಗಂಬರರ ಉಮ್ಮತಿಯಲ್ಲಿ ಯಾರಿಗೂ ಪ್ರವಾದಿತ್ವ ದೊರಕದೆಂದು ನಂಬುತ್ತಾರೆ. ಅದರ ಜೊತೆಯಲ್ಲೇ, ಪೈಗಂಬರರ ಉಮ್ಮತಿಯಾಗಿರದ ಇಸ್ರಾಯಿಲೀ ಪ್ರವಾದಿಯಾದ ಈಸಾನಬಿ (ಅ) ಪುನಃ ಆಗಮಿಸುವರೆಂದು ಸಹ ಅವರು ನಂಬುತ್ತಾರೆ.

8. ಅಲ್ಲಾಹನ ವರಿಷ್ಠ ದಾಸರಾದ ಮುಸ್ಲಿಮರಲ್ಲಿ ಅವನು ಇಚ್ಛಿಸುವ ಕೆಲವರನ್ನು ದಿವ್ಯದರ್ಶನ, ದೈವೀ ಪ್ರಕಾಶನ ಮತ್ತು 'ಇಲ್‌ಹಾಂ'ಗಳ ಮೂಲಕ ಅವನು ಅನುಗ್ರಹಿಸುತ್ತಾನೆಂದೂ ಹಾಗೆ ಅಲ್ಲಾಹನ ಮಧುರ ವಚನಗಳಿಂದ ಅನುಗ್ರಹೀತರಾದ ಪುಣ್ಯ ಪುರುಷರು 'ಉಮ್ಮತೆ ಮುಸ್ಲಿಮ'ದಲ್ಲಿ ಉಂಟಾಗುತ್ತಾ ಇದ್ದರೆಂದೂ ಇನ್ನೂ ಉಂಟಾಗುವರೆಂದೂ ಅಹ್ಮದಿಯರು ನಂಬುತ್ತಾರೆ. ಆದರೆ ಪೈಗಂಬರರ ಬಳಿಕ ಅಲ್ಲಾಹನು ಯಾರನ್ನೂ ತನ್ನ ದಿವ್ಯವಾಣಿಯಿಂದ ಅನುಗ್ರಹಿಸಲಾರನೆಂದೂ ದಿವ್ಯ ಪ್ರಕಟನೆಯ ಬಾಗಿಲು ಮುಚ್ಚಲ್ಪಟ್ಟಿದೆಯೆಂದೂ ಅಹ್ಮದಿಯೇತರರು ನಂಬುತ್ತಾರೆ.

9. ಈಸಾನಬಿ (ಅ) ಬಾಹ್ಯರೂಪದಲ್ಲಿ ಪಕ್ಷಿಯನ್ನು ಸೃಷ್ಟಿಸುವುದಾಗಲಿ ಮೃತರಾದವರನ್ನು ಬದುಕಿಸುವುದಾಗಲಿ ಮಾಡಲಿಲ್ಲವೆಂದೂ ಅವರು ರಹಸ್ಯ ಸಂಗತಿಗಳನ್ನು ತಿಳಿಯುವ ವ್ಯಕ್ತಿಯಾಗಿರಲಿಲ್ಲವೆಂದೂ ಅಹ್ಮದಿಯರು ನಂಬುತ್ತಾರೆ. ಆದರೆ, ಅಹ್ಮದಿಯೇತರರು, ಅವರು ಪಕ್ಷಿಗಳನ್ನು ಸೃಷ್ಟಿಸಿರುವರೆಂದೂ ಮೃತರಾದವರನ್ನು ಬದುಕಿಸಿದ್ದಾರೆಂದೂ ಅವರು ರಹಸ್ಯಗಳನ್ನು ಅರಿಯುವ ವ್ಯಕ್ತಿಯಾಗಿದ್ದರೆಂದೂ ನಂಬುತ್ತಾರೆ.

10. ಮುಹಮ್ಮದ್ ಪೈಗಂಬರರ 'ಮಿಅ್‌ರಾಜ್' (ಗಗನಾರೋಹಣ) ಸಶರೀರವಲ್ಲವೆಂದು ಅಹ್ಮದಿಯರು ನಂಬುತ್ತಾರೆ. 'ಮಿಅ್‌ರಾಜ್' ಅತಿ ಸೂಕ್ಷ್ಮವೂ ನಿರ್ಮಲವೂ ಆದ ಒಂದು ಆಧ್ಯಾತ್ಮಿಕ ದರ್ಶನ ಮಾತ್ರವಾಗಿತ್ತೆಂದು ಅವರು ನಂಬುತ್ತಾರೆ. ಆದರೆ ಇತರ ಮುಸ್ಲಿಮರು ಸಾಮಾನ್ಯವಾಗಿ ನಂಬುವುದು ಪೈಗಂಬರರು ಅಲ್ಲಾಹನನ್ನು ಕಾಣಲಿಕ್ಕಾಗಿ ಶರೀರ ಸಹಿತ ಆಕಾಶಕ್ಕೇರಿ ಹೋಗಿದ್ದರೆಂದು.

11. ಇಸ್ಲಾಮಿಯೇತರ ಸರಕಾರದ ಕೆಳಗೆ ಮುಸ್ಲಿಮನಿಗೆ ನಿಷ್ಕಪಟತೆಯಿಂದಲೂ ಪ್ರಾಮಾಣಿಕತೆಯಿಂದಲೂ ಯಥಾರ್ಥ ಮುಸ್ಲಿಮಾಗಿಯೇ ಜೀವಿಸಲು ಸಾಧ್ಯವೆಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಆದರೆ ಈ ವಿಷಯದಲ್ಲಿ ಇತರ ಮುಸ್ಲಿಮರು ಸಹಮತರಲ್ಲ. ಜಮಾತೆ ಇಸ್ಲಾಮಿ ಪಂಥದವರು 'ಹುಕೂಮತೆ ಇಲಾಹಿ' ಅಲ್ಲದ ಸರಕಾರಗಳೆಲ್ಲಾ ಪೈಶಾಚಿಕವೆಂದೂ ಅಂತಹ ಸರಕಾರಗಳ ಕೆಳಗೆ ಯಥಾರ್ಥ ಮುಸ್ಲಿಮಾಗಿ ಜೀವಿಸಲು ಸಾಧ್ಯವಿಲ್ಲವೆಂದೂ ಸ್ಪಷ್ಟವಾದ ಭಾಷೆಯಲ್ಲಿ ಸಾರುತ್ತಾರೆ.

12. ಯಾವ ಸರಕಾರದೊಂದಿಗೆ ಸಹ ಅದರ ಅಧೀನದಲ್ಲಿ ಜೀವಿಸುವಷ್ಟರ ಕಾಲ ಸಹಕರಿಸಬೇಕೆಂಬುದಾಗಿದೆ ಇಸ್ಲಾಮಿನ ಅಧ್ಯಾಪನವೆಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಆದರೆ ಇತರ ಮುಸ್ಲಿಮರ ಪೈಕಿ ಹಲವಾರು ಈ ಬಗ್ಗೆ ಅಹ್ಮದಿಯರೊಂದಿಗೆ ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ. ಭಾರತದಲ್ಲೂ ಪಾಕಿಸ್ತಾನದಲ್ಲೂ ಇರುವ ಜಮಾತೆ ಇಸ್ಲಾಮಿ ಪಂಗಡದವರು, ಮುಖ್ಯವಾಗಿ ಈ ಸಿದ್ಧಾಂತವನ್ನು ಕಠಿಣವಾಗಿ ವಿರೋಧಿಸುತ್ತಾರೆ.

ನಾನು ಮೇಲೆ ಸೂಚಿಸಿದಂತೆ ಈ ಭಿನ್ನಾಭಿಪ್ರಾಯಕ್ಕೆ ಪ್ರಧಾನ ಕಾರಣ ಖುರ್‌ಆನಿನ ವಾಕ್ಯಗಳಿಗೂ ಮುಹಮ್ಮದ್ ಪೈಗಂಬರರ ವಚನಗಳಿಗೂ ನೀಡಲಾಗುವ ವ್ಯಾಖ್ಯಾನದಲ್ಲಿರುವ ವ್ಯತ್ಯಾಸವಾಗಿದೆ. ಅಲ್ಲವಾದರೆ, ಒಂದೇ ಖುರ್‌ಆನಿನಲ್ಲಿ ನಂಬಿಕೆಯಿಟ್ಟಿರುವ ಮುಸ್ಲಿಮರೆಡೆಯಲ್ಲಿ ಇಂತಹ ಭಿನ್ನಾಭಿಪ್ರಾಯ ಉಂಟಾಗಲು ದಾರಿಯಿಲ್ಲ. ವ್ಯಾಖ್ಯಾನಗಳಲ್ಲುಂಟಾದ ವ್ಯತ್ಯಾಸಗಳಿಗೆ ಕಾರಣ, ಕಾಲಾನುರೂಪವಾದ ಚಿಂತಾಲಹರಿಗಳೂ ಕಾಲಕ್ರಮೇಣ ಉಂಟಾದ ಅಸಂಬದ್ಧ ವಿಶ್ವಾಸಗಳೂ ಎಂದು ಹೇಳಬಹುದು. ಮಾತ್ರವಲ್ಲ, ಆದ್ಯ ಕಾಲಗಳಲ್ಲಿ ಯಹೂದ್ಯರಿಂದಲೂ ಕ್ರೈಸ್ತರಿಂದಲೂ ಇಸ್ಲಾಂ ಧರ್ಮವನ್ನು ಪ್ರವೇಶಿಸಿದವರ ಮೂಲಕ ಮುಸ್ಲಿಮರಲ್ಲಿ ಬಂದು ಸೇರಿದ ಹಲವಾರು ತಪ್ಪು ತಿಳುವಳಿಕೆಗಳು ಸಹ ಇದಕ್ಕೆ ಕಾರಣ. ಅವರ ಆ ರೀತಿಯ ವಿಶ್ವಾಸಗಳು ಖುರ್‌ಆನಿನ ವ್ಯಾಖ್ಯಾನವನ್ನೇ ಬಾಧಿಸಿದೆಯೆಂಬುದು ತಫ್‌ಸೀರ್‌ಗಳಿಂದಲೇ ಮನಗಾಣಬಹುದಾಗಿದೆ. ಕೆಲವು ಖುರ್‌ಆನ್ ವಾಕ್ಯಗಳಿಗೆ ಮತ್ತು ಪ್ರವಾದಿ ವಚನಗಳಿಗೆ ಬಾಹ್ಯಾರ್ಥವನ್ನು ಕೊಟ್ಟುದು ಹಾಗೂ ಬಲಹೀನ ವರದಿಗಳನ್ನು ಮತಪ್ರಮಾಣಗಳೆಂಬಂತೆ ಅಂಗೀಕರಿಸಲ್ಪಟ್ಟುದು, ಮತಪರವಾದ ವಿಷಯಗಳಲ್ಲಿ ಭಿನ್ನಾಭಿಪ್ರಾಯವುಂಟಾಗುವರೆ ಇತರ ಕಾರಣಗಳಾಗಿವೆ.

ಆದರೆ, ಇಸ್ಲಾಮಿನ ಸತ್ಯತೆಯನ್ನೂ ಸುಂದರ ರೂಪವನ್ನೂ ಲೋಕಕ್ಕೆ ತೋರಿಸಿಕೊಡಲಿಕ್ಕೂ ಅದನ್ನು ಪುನರುತ್ಥಾನಗೊಳಿಸಲಿಕ್ಕೆ ತಳಪಾಯ ಹಾಕಲಿಕ್ಕೂ ಮಸೀಹ್ ಮತ್ತು ಮಹ್‌ದೀ ಆಗಿ ಅಲ್ಲಾಹನಿಂದ ನಿಯುಕ್ತರಾದವರೆಂದು ಅಹ್ಮದಿಯರು ನಂಬುವ ಹಝ್ರತ್ ಅಹ್ಮದ್(ಅ) ಅವರು ತನಗೆ ಅಲ್ಲಾಹನಿಂದ ದೊರೆತ ದಿವ್ಯಾರಿವು ಮತ್ತು ಪ್ರಚೋದನೆಗಳ ಮೂಲಕ ಮೇಲಿನ ಅಬದ್ಧ ನಂಬಿಕೆಗಳನ್ನೆಲ್ಲಾ ಆಧಾರಸಹಿತ ಖಂಡಿಸಿ ಪವಿತ್ರ ಖುರ್‌ಆನಿನ ಸ್ಪಷ್ಟವಾದ ಅಧ್ಯಾಪನಗಳ ಬೆಳಕಿನಲ್ಲಿ ಇಸ್ಲಾಮಿಕ ವಿಶ್ವಾಸಗಳನ್ನು ವಿವರಿಸಿ ಕೊಟ್ಟಿರುತ್ತಾರೆ. ಇಸ್ಲಾಂ ಧರ್ಮದ ಪುನರುದ್ಧಾರಕ್ಕಾಗಿ ನಿಯೋಜಿಸಲ್ಪಡುವ ಮಸೀಹ್ ಹಕಂ ಮತ್ತು ಅದಲ್, ಎಂದರೆ ವಿವಾದ ವಿಷಯಗಳಿಗೆ ನೀತಿಯುತ ವಿಧಿ ಹೇಳುವ ವ್ಯಕ್ತಿ ಆಗಿರಬಹುದೆಂದು ಮುಹಮ್ಮದ್ ಪೈಗಂಬರ್ (ಸ) ನುಡಿದಿ

ರುವರಷ್ಟೆ. ತದನುಸಾರ ಮೇಲಿನ ಸಂಗತಿಗಳ ಕುರಿತು ಪವಿತ್ರ ಖುರ್‌ಆನಿನ ಪ್ರಕಾಶದಲ್ಲಿ ಅವರು ನ್ಯಾಯಯುತವೂ ವಿವೇಕಪೂರ್ಣವೂ ಆದ ವಿಧಿ ಹೇಳಿದರು. ಅಹ್ಮದಿಯರು ತಮ್ಮ ನಂಬಿಕೆಗಳಿಗೆ ಆಧಾರವಾಗಿ ಎತ್ತಿ ತೋರಿಸುವ ಪುರಾವೆಗಳನ್ನು ಮನಗಂಡ ಪರಿಣಾಮವಾಗಿ ಇಂದು ಹಲವರು ಅಹ್ಮದೀ ಮುಸ್ಲಿಮರ ನಂಬಿಕೆಗಳಲ್ಲಿ ಕೆಲವನ್ನಾದರೂ ಅಂಗೀಕರಿಸಲು ಸಿದ್ಧರಾಗುತ್ತಿದ್ದಾರೆ. ಇದು ಶುಭದಾಯಕವಾಗಿದೆ. ಆದರೆ ಅಹ್ಮದಿಯತಿನ ಆವಿರ್ಭಾವ ಕಾಲದಲ್ಲಿ ಮುಸ್ಲಿಂ ಲೋಕ ಸಾಮಾನ್ಯವಾಗಿ ಮೇಲೆ ವಿವರಿಸಿದ ರೀತಿಯ ಅಸಂಬದ್ಧ ನಂಬಿಕೆಗಳು ಖುರ್‌ಆನ್ ಪ್ರಬೋಧಿಸುವಂತಹವುಗಳೆಂದೇ ದೃಢವಾಗಿ ನಂಬಿಕೊಂಡಿದ್ದರು. ಮಾತ್ರವಲ್ಲ, ಅವರ ಆ ವಿಶ್ವಾಸಗಳ ವಿರುದ್ಧವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸುವುದೇ ಒಬ್ಬನು ಕಾಫಿರಾಗಲಿಕ್ಕೆ ಅವರ ದೃಷ್ಟಿಯಲ್ಲಿ ಸಾಕಷ್ಟು ಕಾರಣವಾಗಿತ್ತು. ಹಲವೆಡೆಗಳಲ್ಲಿ ಅಹ್ಮದಿಯರನ್ನು ಸಮಾಜದಿಂದ ಬಹಿಷ್ಕರಿಸಿ ಅವರ ಬದುಕನ್ನು ದುರ್ಧರಮಯ ಮಾಡಿ ಅವರನ್ನು ಕಾಫಿರೆಂದು ವಿಧಿಸಿದ್ದು, ಪ್ರಧಾನವಾಗಿ ಈಸಾನಬಿ (ಅ) ಮೃತಪಟ್ಟಿರುವರೆಂಬ ಅವರ ನಂಬಿಕೆಯ ಕಾರಣದಿಂದಾಗಿತ್ತು.

ನಾನು ಮೇಲೆ ವಿವರಿಸಿದ ಅಹ್ಮದಿಯಾ ಜಮಾಅತಿನ ವಿಶ್ವಾಸಗಳು ಯಥಾರ್ಥ ಇಸ್ಲಾಮೀ ವಿಶ್ವಾಸಗಳೆಂದೂ ಅದಕ್ಕೆ ವಿರುದ್ಧವಾದ ನಂಬಿಕೆಗಳು ಪವಿತ್ರ ಖುರ್‌ಆನಿನ ಅಧ್ಯಾಪನಾನುಸಾರ ಯಥಾರ್ಥ ಇಸ್ಲಾಮೀ ನಂಬಿಕೆಗಳಲ್ಲವೆಂದೂ ಸಾಬೀತುಪಡಿಸಿ ವಿಶದೀಕರಿಸುವುದಲ್ಲ ಈ ಲೇಖನದ ಉದ್ದೇಶ. ಮೇಲೆ ತೋರಿಸಿದ ಅಹ್ಮದಿಯಾ ನಂಬಿಕೆಗಳು ಅಲ್ಲಾಹನ ಔನ್ನತ್ಯಕ್ಕೂ ಮುಹಮ್ಮದ್ ಪೈಗಂಬರರ ಮಹತ್ತಾದ ಸ್ಥಾನಕ್ಕೂ ಇಸ್ಲಾಮಿನ ಶ್ರೇಷ್ಠತೆಗೂ 'ಉಮ್ಮತೆ ಮುಹಮ್ಮದಿಯ್ಯ'ದ ಉತ್ಕೃಷ್ಟತೆಗೂ ಸರಿಹೊಂದುವ ವಿಶ್ವಾಸಗಳಾಗಿವೆಯೆಂದು ಬೊಟ್ಟು ಮಾಡಲಿಕ್ಕೆ ಮಾತ್ರವೇ ನಾನು ಉದ್ದೇಶಿಸಿದ್ದೇನೆ.

ಇನ್ನು ನಾನು ಪ್ರತಿಯೊಂದು ವಿಷಯದ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸುವೆನು.

### ಖುರ್‌ಆನಿನಲ್ಲಿ 'ಮನ್‌ಸೂಖ್' ಇಲ್ಲ

1. ಮುಸ್ಲಿಮರು ಸಾಮಾನ್ಯವಾಗಿ ನಂಬುವುದು ಖುರ್‌ಆನಿನಲ್ಲಿ ಅಸಿಂಧುಗೊಂಡ ವಚನಗಳು ಇವೆಯೆಂದಲ್ಲವೇ. ಪೂರ್ವಕಾಲದಲ್ಲಾದರೋ, ನೂರಾರು ಆಯತುಗಳು ಅಸಿಂಧುಗೊಂಡಿವೆಯೆಂದು ಮತಪಂಡಿತರು ಹೇಳಿದ್ದರು. ಅದು ಕಡಿಮೆಯಾಗಿ ಇಮಾಂ ಸುಯೂತಿಯ ಪ್ರಕಾರ 20 ಖುರ್‌ಆನ್ ವಾಕ್ಯಗಳು ಮಾತ್ರವೇ ಅಸಿಂಧು ಎಂದಾಯಿತು. ಹಝ್ರತ್ ಶಾಹ್ ವಲಿಯುಲ್ಲಾಹ್ ಮುಹದ್ದಿಸ್ ದಹ್ಲವಿಯ ಪ್ರಕಾರ ಅದು ಇನ್ನೂ ಕಮ್ಮಿಯಾಗಿ ಐದು ಮಾತ್ರವಾಯಿತು. ಹಝ್ರತ್ ಅಹ್ಮದ್ (ಅ) ಕಲಿಸಿದ್ದು ಖುರ್‌ಆನಿನಲ್ಲಿ ಒಂದೇ ಒಂದು ವಾಕ್ಯವಾದರೂ ಅಸಿಂಧುಗೊಂಡಿಲ್ಲವೆಂದೂ ಖುರ್‌ಆನಿನ ಉಪದೇಶಗಳೂ ಮಾರ್ಗದರ್ಶನಗಳೂ ಎಂದಿಗೂ ಅಸಿಂಧುಗೊಳ್ಳವೆಂದೂ ಅದು ಅಸಿಂಧುಗೊಳ್ಳಲು ಅಸಾಧ್ಯವಾದ ಪವಿತ್ರವೂ ಪರಿಪೂರ್ಣವೂ ಅಂತ್ಯವೂ ಆದ ನ್ಯಾಯಪ್ರಮಾಣ ಗ್ರಂಥವಾಗಿದೆಯೆಂದೂ ಆಗಿದೆ. ಪವಿತ್ರ ಖುರ್‌ಆನ್ ಅಂತ್ಯದಿನದವರೆಗೆ ಮನುಷ್ಯರಿಗೆ ಮಾರ್ಗದರ್ಶನ ನೀಡುತ್ತಾ ಬಾಕಿಯುಳಿಯಬೇಕಾದ ಸುರಕ್ಷಿತವಾದ ದಿವ್ಯಗ್ರಂಥವೆಂಬ ಅದರ ವಾದದೊಂದಿಗೆ ಯಾರ ನಂಬಿಕೆ ಸರಿಹೊಂದುತ್ತದೆಂದು ಮನಗಾಣಲು ಚಿಂತಕರಿಗೆ ಪ್ರಯಾಸವಾಗಲಿಕ್ಕಿಲ್ಲ. ಖುರ್‌ಆನ್‌ನಲ್ಲಿ ಅಪ್ರಾಯೋಗಿಕವಾದ ಹಲವು ಆಜ್ಞೆಗಳು ಅಡಕವಾಗಿವೆಯೆಂದು ಹೇಳುವುದು ಖುರ್‌ಆನಿನ ಮಹಾತ್ಮೆಗೆ ಸರಿಹೊಂದುವುದೇ ? ಖುರ್‌ಆನಿನಲ್ಲಿ ಅಸಿಂಧುಗೊಂಡ ಆಯತುಗಳಿವೆಯೆಂಬ ನಂಬಿಕೆ ನಿಮಿತ್ತ, ಕೆಲವು ಮತ ಪಂಡಿತರ ಅಭಿಪ್ರಾಯಕ್ಕೆ ವಿರುದ್ಧವಾಗಿ ಪವಿತ್ರ ಖುರ್‌ಆನ್‌ನಿಂದ ಆಧಾರಗಳನ್ನು ಎತ್ತಿ ತೋರಿಸುವಾಗ ಕೂಡಲೇ ಅದು 'ಮನ್‌ಸೂಖ್' (ಅಸಿಂಧು) ಎಂದು ಹೇಳಿ ತಳ್ಳಿಬಿಡಲು ಅವರು ಧೈರ್ಯಪಡುತ್ತಾರೆ. ಹಾಗೆ ಈ ವಿಶ್ವಾಸ ಕಾರಣ ಪವಿತ್ರ ಖುರ್‌ಆನಿನ ಪ್ರಾಮಾಣ್ಯಕ್ಕೂ ಅದರ ಉತ್ಕೃಷ್ಟತೆಗೂ ಹಾನಿಯುಂಟಾಗುವುದಾಗಿ ಕಾಣುತ್ತೇವೆ. ಪವಿತ್ರ ಖುರ್‌ಆನಿನಲ್ಲಿ ಪರಸ್ಪರ ವೈರುಧ್ಯವಿಲ್ಲವೆಂದೂ ಉಂಟಾಗಲಿಕ್ಕೆ ನಿರ್ವಾಹವಿಲ್ಲವೆಂದೂ ಆ ಪವಿತ್ರ ಗ್ರಂಥವೇ ಮನಗಾಣಿಸಿ ಕೊಡುತ್ತದೆ. ಕೆಲವು ಆಯತುಗಳಿಂದ ಬೇರೆ ಕೆಲವು ಆಯತುಗಳು ಅಸಿಂಧು

ಗೊಂಡುವೆಂದು ಹೇಳುವುದು ಒಂದು ರೀತಿಯಲ್ಲಿ ಪವಿತ್ರ ಖುರ್‌ಆನ್‌ನಲ್ಲಿ ಪರಸ್ಪರ ವೈರುದ್ಧ್ಯಗಳಿವೆಯೆಂದು ಒಪ್ಪುವುದಕ್ಕೆ ಸಮಾನವಾಗಿದೆ. ಇದರಿಂದ, ಪವಿತ್ರ ಖುರ್‌ಆನ್ ಖಂಡಿತವಾದ ಪ್ರಮಾಣ ಗಂಥವಲ್ಲವೆಂದಾಗುತ್ತದೆ. ಹೀಗೆ, ಖುರ್‌ಆನಿನಲ್ಲಿ ಮನ್‌ಸೂಖ್ ಆದ ಆಯತುಗಳಿವೆಯೆಂಬ ವಿಶ್ವಾಸ ಅಲ್ಲಾಹನ ಮಹಾತ್ಮೆಗೂ ಖುರ್‌ಆನಿನ ಪಾವಿತ್ರ್ಯಕ್ಕೂ ಹಾನಿಯುಂಟು ಮಾಡುತ್ತದೆ. ಅಹ್ಮದೀ ಮುಸ್ಲಿಮರ ವಿಶ್ವಾಸವಾದರೋ ಅಲ್ಲಾಹನ ಮಹಿತ ಸ್ಥಾನವನ್ನೂ ಖುರ್‌ಆನಿನ ಉತ್ಕೃಷ್ಟತೆಯನ್ನೂ ಎತ್ತಿ ತೋರಿಸುತ್ತದೆ. ಆದರೂ ಕೆಲವು ಮತಪಂಡಿತರು ಅಹ್ಮದಿಯರ ಈ ವಿಶ್ವಾಸದ ಕುರಿತು ಅದು ತೌರಾತಿನ ಕುರಿತು ಯಹೂದಿಯರಿಗಿರುವ ನಂಬಿಕೆಯಂತಿದೆಯೆಂದು ಆಕ್ಷೇಪಿಸಿ ಹೇಳಲು ಧೈರ್ಯ ಪಡುತ್ತಾರೆ.

### 'ಜಿಹಾದ್'ನ ಅರ್ಥ

2. ಜಿಹಾದಿನ ಬಗ್ಗೆ ಸಾಮಾನ್ಯವಾದ ನಂಬಿಕೆಯು ನೂರಾರು ವರ್ಷಗಳಿಂದ ಮುಸ್ಲಿಮೇತರರ ಕಠಿಣವಾದ ಟೀಕೆಗೂ ಆಕ್ಷೇಪಕ್ಕೂ ಅವಹೇಳನಕ್ಕೂ ಇಸ್ಲಾಮನ್ನು ಗುರಿಪಡಿಸಿದೆ. ಬಲ ಪ್ರಯೋಗಿಸಿ ಇತರರನ್ನು ಮುಸ್ಲಿಮರನ್ನಾಗಿ ಪರಿವರ್ತಿಸಬಹುದೆಂದು ಹೇಳುವುದರ ಅರ್ಥ ಇಸ್ಲಾಮಿನಲ್ಲಿ ಆಧಾರಗಳೂ ಪ್ರಮಾಣಗಳೂ ಏನೂ ಇಲ್ಲವೆಂದೂ ಅದು ಒಂದು ಬರ್ಬರಮತ ಮಾತ್ರವೆಂದೂ ಆಗುತ್ತದೆ. ಪವಿತ್ರ ಖುರ್‌ಆನ್ ಮತಸ್ವಾತಂತ್ರ್ಯದ ಕುರಿತು ಮತ್ತು ಯುದ್ಧ ನಿಯಮಗಳ ಬಗ್ಗೆ ನೀಡುವ ಸ್ಪಷ್ಟವಾದ ಅಧ್ಯಾಪನಗಳಿಗೆ ಸಹ ವಿರುದ್ಧವಾಗಿದೆ ಈ ವಿಶ್ವಾಸ. ಬಲ ಪ್ರಯೋಗಿಸಿಯೂ ಬೆದರಿಸಿಯೂ ಇಸ್ಲಾಮಿಗೆ ಪರಿವರ್ತಿಸಲ್ಪಡುವ ಒಬ್ಬ ವ್ಯಕ್ತಿ ಎಂದಿಗೂ ಯಥಾರ್ಥ ಮುಸ್ಲಿಂ ಆಗಿರಲಿಕ್ಕಿಲ್ಲ. ಅದು ನೀತಿಯುತವಾದ ಒಂದು ಕೃತ್ಯವೂ ಆಗಲಾರದು. ಆದರೆ ನ್ಯಾಯವಾದ ರೀತಿಯಲ್ಲಿ ಇಸ್ಲಾಂ ಧರ್ಮವನ್ನು ಪ್ರಚಾರಗೊಳಿಸುವುದು, ಅದರ ಅಭ್ಯುದಯಕ್ಕಾಗಿ ಪರಿಶ್ರಮಿಸುವುದು, ಅದನ್ನು ನಾಶಪಡಿಸಲು ಪ್ರಯತ್ನಿಸುವ ಶತ್ರುಗಳನ್ನು ಸಂದರ್ಭೋಚಿತ ವಿರೋಧಿಸುವುದು ಇತ್ಯಾದಿಗಳಾಗಿವೆ 'ಜಿಹಾದ್' ಎಂಬ ಅಹ್ಮದಿಯಾ ಸಿದ್ಧಾಂತವು ಇಸ್ಲಾಮಿನ ಸೌಂದರ್ಯವೂ ಉತ್ಕೃಷ್ಟತೆಯೂ ಪ್ರಕಾಶಿಸುವಂತೆ ಮಾಡುತ್ತದೆಂದೂ ಅದು ಲೋಕದಲ್ಲಿ ಶಾಂತಿ–ಸಮಾಧಾನವನ್ನು ಸೃಷ್ಟಿಸಲು ಪ್ರಯೋಜಕವಾದ ಅಧ್ಯಾಪನವೆಂದೂ ತಿಳಿದುಕೊಳ್ಳಲು ಪ್ರಯಾಸವಿಲ್ಲ. ಜಿಹಾದ್ ಕುರಿತು ಅಹ್ಮದಿಯಾ ವ್ಯಾಖ್ಯಾನವು ಅಂತಾರಾಷ್ಟ್ರೀಯ ನಿಯಮಗಳಿಗೆ ಅನುಯೋಜ್ಯವಾಗಿದೆಯೆಂದು ಪಾಕಿಸ್ತಾನದ ಅಹ್ಮದಿಯಾ ವಿರುದ್ಧ ಗಲಭೆ ವಿಚಾರಣಾ ನ್ಯಾಯಾಲಯವು ಅಭಿಪ್ರಾಯ ಸೂಚಿಸಿದ್ದು ಇಲ್ಲಿ ಸ್ಮರಣೀಯ.

### ಮತತ್ಯಾಗಿ ವಧಾರ್ಹನಲ್ಲ

3. 'ಮುರ್ತದ್ದ್' (ಮತತ್ಯಾಗಿ) ಕೊಲ್ಲಲ್ಪಡಬೇಕೆಂಬ ಸಿದ್ಧಾಂತ ಇಸ್ಲಾಮಿನ ಮುಖಕ್ಕೆ ಮಸಿಬಳಿಯುವಂತಹದು. ಇಸ್ಲಾಮ್ ಅದರ ಸುಂದರವೂ ಪಾವನವೂ ಆದ ಅಧ್ಯಾಪನಗಳ ಮೂಲಕ ಅದರ ಅನುಯಾಯಿಗಳನ್ನು ಆಕರ್ಷಿಸಿ ನಿಲ್ಲಿಸಲು ಶಕ್ತವಲ್ಲವಾದುದರಿಂದ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ನಂತರ ಅದನ್ನು ತ್ಯಜಿಸುವವರನ್ನು ಕೊಲ್ಲಲಾಗುವುದೆಂಬ ಒಂದು ಬೆದರಿಕೆ ಕೂಡ ಅವಶ್ಯವಿದೆ ಎಂದಾಗಿರಬಹುದು ಅದರ ಅರ್ಥ. ಇದು ಇಸ್ಲಾಂ ಉದ್ಘೋಷಿಸುವ ವಿಚಾರ ಸ್ವಾತಂತ್ರ್ಯಕ್ಕೂ ಮತಸ್ವಾತಂತ್ರ್ಯಕ್ಕೂ ಸರಿಹೊಂದಾಣಿಕೆ ಇಲ್ಲದ ಒಂದು ಸಿದ್ಧಾಂತವಾಗಿದೆ ಎಂದು ಪ್ರತ್ಯಕ್ಷದಲ್ಲೇ ಅರಿತುಕೊಳ್ಳಬಹುದು. ಒಬ್ಬ ಮುಸ್ಲಿಂ ಇಸ್ಲಾಂ ಧರ್ಮವನ್ನು ಪರಿತ್ಯಜಿಸುವ ಕಾರಣ ಒಂದು ಮುಸ್ಲಿಂ ಸರಕಾರ ಆತನನ್ನು ಕೊಲ್ಲಬಹುದಾದರೆ ಒಂದು ಮುಸ್ಲಿಮೇತರ ಸರಕಾರದ ಪ್ರಜೆಯಾಗಿರುವ ಒಬ್ಬ ಅಮುಸ್ಲಿಂ ಇಸ್ಲಾಂ ಧರ್ಮವನ್ನು ಸ್ವೀಕರಿಸುವುದಾದರೆ, ಆ ಸರಕಾರ ಅವನನ್ನೂ ಕೊಲ್ಲಬಹುದಲ್ಲವೇ? ನೀತಿನ್ಯಾಯಗಳನ್ನು ಮನ್ನಿಸುವ ಓರ್ವ ಮುಸಲ್ಮಾನನಿಗೆ ಅದು ತಪ್ಪೆಂದು ಹೇಳಲು ನಿರ್ವಾಹವಿರಲಿಕ್ಕಿಲ್ಲ. ಇಸ್ಲಾಂ ಧರ್ಮವನ್ನು ಅಂಗೀಕರಿಸುವ ಒಬ್ಬ ಅಮುಸ್ಲಿಮನನ್ನು ಒಂದು ಅಮುಸ್ಲಿಂ ಸರಕಾರ ವಧಿಸುವುದು ನೀತಿಯಲ್ಲವೆಂದು ಹೇಳುವವರಿಗೆ ಒಬ್ಬ ಮುಸ್ಲಿಂ ಇಸ್ಲಾಂ ಧರ್ಮವನ್ನು ಪರಿತ್ಯಜಿಸುವಾಗ ಇಸ್ಲಾಮಿ ಸರಕಾರ ಅವನನ್ನು ವಧಿಸಬೇಕೆಂದು ಹೇಗೆ ಹೇಳಲು ಸಾಧ್ಯ? ಒಟ್ಟಿನಲ್ಲಿ, 'ಮುರ್ತದ್ದ'ನ್ನು ಕೊಲ್ಲಬೇಕೆಂಬ ಸಿದ್ಧಾಂತವು ಸ್ವಚ್ಛವೂ ನಿರ್ಮಲವೂ ಆದ ಸಹಜ ಸ್ವಭಾವಕ್ಕೂ ಮನಸ್ಸಾಕ್ಷಿಗೂ ಅನುಯೋಜ್ಯವಲ್ಲವೆಂದಾಗುತ್ತದೆ ಇಸ್ಲಾಮಿನ ನಿಯಮಗಳು ಮತ್ತು ಅಧ್ಯಾಪನಗಳು ನೀತಿ

ಯುತವೂ ಸಾರ್ವತ್ರಿಕವೂ ಎಂದಾದರೆ ಮುರ್ತದ್ದ್ ಕೊಲ್ಲಲ್ಪಡಬೇಕೆಂಬ ನಂಬಿಕೆ ಇಸ್ಲಾಮಿಕವಾಗಿರಲು ನಿರ್ವಾಹವಿಲ್ಲ. ಮತತ್ಯಾಗಿಗೆ ಮರಣದಂಡನೆ ಶಿಕ್ಷೆ ಒತ್ತೊಟ್ಟಿಗಿರಲಿ, ಐಹಿಕವಾದ ಶಿಕ್ಷೆಯೇ ಇಲ್ಲವೆಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಈ ನಂಬಿಕೆಯೇ ಸರ್ವಾದರಣೀಯವೂ ಇಸ್ಲಾಮಿನ ಮಹತ್ವವನ್ನು ಪ್ರಕಟಪಡಿಸುವಂತಹದೂ ಯಥಾರ್ಥವೂ ಆದ ನಂಬಿಕೆ ಎಂದು ಅಲ್ಪಬುದ್ಧಿಯವರಿಗೆ ಸಹ ಮನಗಾಣಲು ಸಾಧ್ಯ.

## ಈಸಾನಬಿ (ಅ) ಮೃತಪಟ್ಟಿರುವರು

4. ಈಸಾನಬಿ (ಅ) ಮೃತಪಟ್ಟಿರುವರೆಂಬ ವಿಶ್ವಾಸ ಅಲ್ಲಾಹನ ತೌಹೀದಿ(ಏಕತ್ವ)ಗೂ ಈಸಾನಬಿಯ ಮಾನುಷಿಕತ್ವಕ್ಕೂ ಮುಹಮ್ಮದ್ ಪೈಗಂಬರ(ಸ)ರ ಅನುಪಮೇಯ ಮಹತ್ವಕ್ಕೂ ಸರಿಹೊಂದುತ್ತದೆ. ಒಂದು ಲಕ್ಷದ ಇಪ್ಪತ್ತು ಸಾವಿರ ಪ್ರವಾದಿಗಳು ತಮ್ಮ ದೌತ್ಯವನ್ನು ನಿರ್ವಹಿಸಿ ಮೃತಪಟ್ಟರು. ಸರ್ವಶ್ರೇಷ್ಠ ಪ್ರವಾದಿ ಮುಹಮ್ಮದ್ ಪೈಗಂಬರ್ (ಸ) ಸಹ ಮೃತರಾದರು. ಹಾಗಿರುವಾಗ ಈಸಾನಬಿ (ಅ) ಮಾತ್ರ ಮರಣಪಡದೆ ಶರೀರ ಸಹಿತ ಆಕಾಶಾರೋಹಣ ಮಾಡಿರುವರೆಂದೂ ಕಾಲಭೇದಗಳಿಗೂ ಮಾನುಷಿಕ ನಿಯಮಗಳಿಗೂ ಹೊರತಾದ ರೀತಿಯಲ್ಲಿ ಈಗಲೂ ಅಲ್ಲಿ ಜೀವಿಸುತ್ತಿದ್ದಾರೆಂದೂ ನಂಬುವುದು ಹೇಗೆ ಸರಿಯೆನಿಸೀತು? ಈ ನಂಬುಗೆ ನಿಮಿತ್ತ ಎಷ್ಟು ಮುಸ್ಲಿಮರು ಕ್ರೈಸ್ತ ಮತವನ್ನು ಸ್ವೀಕರಿಸಬೇಕಾಯಿತೆಂದೂ ಈ ವಿಶ್ವಾಸವು ಕ್ರೈಸ್ತರಿಗೆ ಇಸ್ಲಾಂ ಧರ್ಮದ ವಿರುದ್ಧ ಪ್ರಯೋಗಿಸುವರೆ ಎಷ್ಟು ಶಕ್ತಿಯುತವಾದ ಆಯುಧವಾಗಿದೆಯೆಂದೂ ಮುಸ್ಲಿಂ ಸಹೋದರರು ಆಕಟಾ, ಚಿಂತಿಸುವುದಿಲ್ಲ! ಅಲ್ಲಾಹನನ್ನು ಬಿಟ್ಟು ಆರಾಧಿಸಲ್ಪಡುವವರು ದೈವಗಳಲ್ಲವೆಂದೂ ಅವರು ಪ್ರಾರ್ಥಕರಿಗೆ ಉತ್ತರ ನೀಡಲಾರರೆಂಬುದಕ್ಕೂ ಖುರ್‌ಆನ್ ನೀಡುವ ಪುರಾವೆಗಳೇ ಅವರು ಜೀವವಿಲ್ಲದವರೆಂದೂ ಮೃತಪಟ್ಟವರೆಂದೂ ಆಗಿದೆ. ಅಲ್ಲಾಹನ ಹೊರತು ಆರಾಧಿಸಲ್ಪಡುವವರಲ್ಲಿ ಅಗ್ರಗಣ್ಯ ವ್ಯಕ್ತಿ ಈಸಾನಬಿ (ಯೇಸುಕ್ರಿಸ್ತ) ಎಂದಾಗುವಾಗ ಈಸಾನಬಿ (ಅ) ಬದುಕಿದ್ದರೆ ಖುರ್‌ಆನಿನ ಈ ನ್ಯಾಯವಾದ ಹೇಗೆ ಸಮರ್ಥನೀಯ ?

ಮುಹಮ್ಮದ್ ಪೈಗಂಬರರನ್ನು ಕೊಲ್ಲಲಿಕ್ಕೆ ವೈರಿಗಳು ಭೀಕರ ತಂತ್ರಗಳನ್ನು ಪ್ರಯೋಗಿಸಿದಶು. ಆ ಗೂಢಾತಂತ್ರಗಳ ಕಾರಣ ಬಹಳ ಕ್ಲೇಶಗಳನ್ನು ಸಹಿಸಿಕೊಂಡು ಆ ಮಹಾಪುರುಷರು ಪಾರಾಗಿ ಮದೀನ ತಲಪಿದರು. ಮದೀನದಲ್ಲಿ ಪೈಗಂಬರರು ಇಹಲೋಕ ತ್ಯಜಿಸಿ ಅಲ್ಲಿಯೇ ದಫನಮಾಡಲ್ಪಟ್ಟರು. ಆದರೆ ಈಸಾನಬಿಯ ಕುರಿತು ಮುಸ್ಲಿಮರು ನಂಬುವುದಾದರೋ, ಯಹೂದಿಗಳು ಅವರನ್ನು ಹಿಡಿಯಲಿಕ್ಕಾಗಿ ಅವರ ಮನೆಯನ್ನು ಸುತ್ತುವರಿದಾಗ ಅಲ್ಲಾಹನು ಅವರನ್ನು ಆಕಾಶಕ್ಕೆತ್ತಿಕೊಂಡನೆಂದೂ ಅಲ್ಲಿ ಅವರನ್ನು ಸುರಕ್ಷಿತವಾಗಿರಿಸಿದ್ದಾನೆಂದೂ ಆಗಿದೆ. ಎರಡು ಸಾವಿರ ವರ್ಷಗಳು ಗತಿಸಿದರೂ ಜರಾನರ ಬಾಧೆಯೇನೂ ತಟ್ಟದೆ, ಭಕ್ಷ್ಯಪೇಯಗಳೇನೂ ಸೇವಿಸದೆ ಅವರು ಅಲ್ಲಿ ಜೀವಿಸುತ್ತಿದ್ದಾರೆ! ಕೊನೆಗೆ, ಅಂತ್ಯಕಾಲದಲ್ಲಿ ದಜ್ಜಾಲ್‌ನಿಂದ ಲೋಕದಲ್ಲಿ ಭಯಂಕರ ವಿಪತ್ತುಗಳು ಸಂಭವಿಸುವಾಗ ದಜ್ಜಾಲನ್ನು ಕೊಂದು ಭೂಮಿಯಲ್ಲಿ ಶಾಂತಿಯನ್ನು ನೆಲೆಗೊಳಿಸಲಿಕ್ಕೂ ಇಸ್ಲಾಮಿಗೆ ವಿಜಯ ಗಳಿಸಿಕೊಡಲಿಕ್ಕೂ ಲೋಕವನ್ನಿಡೀ ಇಸ್ಲಾಮೀಕರಿಸಲಿಕ್ಕೂ ಅವರೇ ಆಕಾಶದಿಂದ ಇಳಿದುರುವರಂತೆ. ಈ ವಿಶ್ವಾಸ ಅಲ್ಲಾಹನ ತೌಹೀದಿಗೂ ಮುಹಮ್ಮದ್ ಪೈಗಂಬರರ ಶ್ರೇಷ್ಠತೆಗೂ ಖುರ್‌ಆನಿನ ಆಧ್ಯಾಪನಕ್ಕೂ ಅನುಯೋಜ್ಯವಲ್ಲವೆಂದು ಯಾರಿಗೆ ಮನಗಾಣಲು ಅಸಾಧ್ಯ ?

## ಮೃತರಾದವರು ಹಿಂತುರುಗಿ ಬರಲಾರರು

5. ಮೃತರಾದವರು ಹಿಂತುರುಗಿ ಬರಲಾರರೆಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಪವಿತ್ರ ಖುರ್‌ಆನ್ ಬಹಳ ಸ್ಪಷ್ಟವಾದ ಭಾಷೆಯಲ್ಲಿ ಹಾಗೆ ಕಲಿಸುತ್ತದೆ. ಈಸಾನಬಿ(ಅ) ಮೃತರಾದವರನ್ನು ಬದುಕಿಸಿದ್ದಾರೆಂದೂ ಕೆಲವು ಇಸ್ರಾಯಿಲ್ಯರು ಮರಣಾನಂತರ ಬದುಕಿದ್ದಾರೆಂದೂ ಇತರ ಮುಸ್ಲಿಮರು ನಂಬುತ್ತಾರೆ. ಖುರ್‌ಆನಿನ ಖಂಡಿತ ವಚನಗಳಿಗೆ ವಿರುದ್ಧವಾಗಿ ರೂಪಕ ವಾಕ್ಯಗಳಿಗೆ ಅರ್ಥಕೊಟ್ಟುದರ ಫಲವಾಗಿ ಈ ವಿಶ್ವಾಸ ಮುಸ್ಲಿಮರೆಡೆಯಲ್ಲಿ ಸೇರಿಕೊಂಡಿತು. ಕೆಲವು 'ವಲಿ'ಗಳು (ಸಂತರು) ಮೃತಪಟ್ಟವರನ್ನು ಬದುಕಿಸಿದ್ದಾರೆಂದು ಸುನ್ನೀ ಮುಸ್ಲಿಮರು ನಂಬುತ್ತಾರೆ. ಹಝ್ರತ್ ಸಯ್ಯದ್ ಅಬ್ದುಲ್ ಖಾದಿರ್ ಜೈಲಾನಿಯವರ ಕುರಿತು,

ಅವರು ಮೃತರಾದವರನ್ನು ಬದುಕಿಸಿದ್ದಾರೆಂದೂ ಕೋಳಿಯ ಎಲುಬಿನಿಂದ ಜೀವವಿರುವ ಒಂದು ಕೋಳಿಯನ್ನು ಸೃಷ್ಟಿಸಿದ್ದಾರೆಂದೂ ಸುನ್ನೀಯರು ನಂಬುವಾಗ ಅದು ಬರೇ 'ಶಿರ್ಕ್'ಂದು ಹೇಳಿ ಅದನ್ನು ಆಕ್ಷೇಪಿಸುವ ಪುರೋಗಾಮಿ ಮುಸ್ಲಿಮರೇ ಈಸಾನಬಿ (ಅ) ಮೃತರಾದವರನ್ನು ಬದುಕಿಸಿದ್ದಾರೆಂದೂ ಅದು ಅವರ 'ಮುಅ್‌ಜಿಸ' (ಪವಾಡ ಕೃತ್ಯ) ಎಂದೂ ನಂಬುತ್ತಾರೆ. ಮಾತ್ರವಲ್ಲ, ದಜ್ಜಾಲ್ ಬಂದರೆ ಮೃತಪಟ್ಟವರನ್ನು ಬದುಕಿಸುವನೆಂದೂ ಅದು ಬಾಹ್ಯಾರ್ಥದಲ್ಲೇ ಸಂಭವಿಸುವುದೆಂದೂ ಇವರೇ ನಂಬುತ್ತಾರೆ. ಪವಿತ್ರ ಖುರ್‌ಆನಿನ ಸ್ಪಷ್ಟವೂ ಖಂಡಿತವೂ ಆಗಿರುವ ಪ್ರಸ್ತಾಪನೆಗಳಿಗೆ ವಿರುದ್ಧವಾಗಿ ರೂಪಕ ವಾಕ್ಯಗಳಿಗೆ ಅರ್ಥಹೇಳಲು ಧೃಷ್ಟರಾದುದರ ಫಲವಾಗಿ ಇಂತಹ ವಿಶ್ವಾಸಗಳು ಮುಸ್ಲಿಂ ಹೃದಯಗಳಲ್ಲಿ ಬೇರೂರಿದುವು. ಈಸಾನಬಿ ಮತ್ತು ವಲಿಗಳು ತೋರಿಸಿದುದಾಗಿ ಹೇಳಲ್ಪಡುವ ಪವಾಡ ಕೃತ್ಯಗಳಲ್ಲಿ ಯಾವುದೂ ಮುಹಮ್ಮದ್ ಪೈಗಂಬರ್ (ಸ) ಮಾಡಿ ತೋರಿಸಿದುದಾಗಿ ಮುಸ್ಲಿಮರ್‍ಯಾರೂ ನಂಬುವುದಿಲ್ಲ. ಮುಹಮ್ಮದ್ ಪೈಗಂಬರ್ (ಸ) ರು ಮೃತಪಟ್ಟ ಯಾರನ್ನೂ ಬದುಕಿಸಿರುವರೆಂದು ಖುರ್‌ಆನಿನಲ್ಲಾಗಲಿ ವಿಶ್ವಾಸಾರ್ಹ ಹದೀಸು ಗ್ರಂಥಗಳಲ್ಲಾಗಲಿ ಉಲ್ಲೇಖಿಸಲ್ಪಟ್ಟಿಲ್ಲ. ಮುಹಮ್ಮದ್ ಪೈಗಂಬರರ ಕುರಿತು, ಬದುಕಿಸುವ ವ್ಯಕ್ತಿಯೆಂದು ಖುರ್‌ಆನಿನಲ್ಲಿ ಹೇಳಿದುದರ ಅರ್ಥ ಮೃತಪಟ್ಟವರನ್ನು ಬಾಹ್ಯಾರ್ಥದಲ್ಲಿ ಬದುಕಿಸುವ ವ್ಯಕ್ತಿ ಎಂದಾಗಿದೆಯೆಂದು ಯಾವುದೇ ಮುಸ್ಲಿಂ ಪಂಗಡ ಹೇಳುವುದಿಲ್ಲ. ಆದರೆ, ಈಸಾನಬಿ (ಅ) ಮೃತಪಟ್ಟವರಿಗೆ ಪುನರ್ಜೀವ ನೀಡಿರುವರೆಂಬ ಹೇಳಿಕೆಗೆ ಆಂತರಿಕವೂ ಆಲಂಕಾರಿಕವೂ ಆದ ಅರ್ಥವನ್ನು ಕಲ್ಪಿಸಲಿಕ್ಕೂ ಇವರು ಹಿಂಜರಿಯುತ್ತಾರೆ. ಅಲ್ಲಾಹನು ಮಾತ್ರ ಮಾಡಲು ಶಕ್ತನೆಂದು ಖುರ್‌ಆನ್ ಹೇಳಿರುವ ಹಾಗೂ ಪೈಗಂಬರ್ (ಸ) ಸಹ ಮಾಡಿ ತೋರಿಸದ ಒಂದು ಕೆಲಸವನ್ನು ಈಸಾನಬಿ (ಅ) ಮಾಡಿರುವರೆಂದು ನಂಬುತ್ತಾ ಅಲ್ಲಾಹನ ವಿಶಿಷ್ಟ ಗುಣದಲ್ಲಿ ಈಸಾನಬಿಗೂ ಸಹಭಾಗಿತ್ವವನ್ನು ಕಲ್ಪಿಸಿ, ಮುಹಮ್ಮದ್ ಪೈಗಂಬರರಿಗಿಂತ ಶ್ರೇಷ್ಠತೆ ಮತ್ತು ದೇವಸಾಮೀಪ್ಯ ಈಸಾನಬಿಗೆ ಇದೆಯೆಂದಲ್ಲವೇ ಇವರು ಹೇಳುತ್ತಿರುವುದು? ಒಟ್ಟಾರೆ, ಅಲ್ಲಾಹನ ಗುಣಗಳನ್ನೂ ಮುಹಮ್ಮದ್ ಪೈಗಂಬರರ ಮಹತ್ವವನ್ನೂ ಮುಂದಿಟ್ಟು ಚಿಂತಿಸುವುದಾದರೆ ಅಹ್ಮದೀ ಮುಸ್ಲಿಮರ ವಿಶ್ವಾಸವು ಯಥಾರ್ಥ ಇಸ್ಲಾಮೀ ವಿಶ್ವಾಸವೆಂದು ತಿಳಿದುಕೊಳ್ಳಬಹುದು.

## ಮಸೀಹರ ಆಗಮನ

6. ಮುಸ್ಲಿಮರು ಯಹೂದಿ ನಸಾರಾಗಳಂತೆ ಆಗುವರೆಂದೂ ಅವರನ್ನು ಉದ್ಧರಿಸಲಿಕ್ಕೆ ಮಸೀಹ್ ಬರುವರೆಂದೂ ಮುಹಮ್ಮದ್ ಪೈಗಂಬರ್ (ಸ) ಭವಿಷ್ಯ ನುಡಿದಿರುವರು. ಆದರೆ ಬರಬೇಕಾದ ಮಸೀಹ್ ಮುಸ್ಲಿಂ ಸಮುದಾಯದ ವ್ಯಕ್ತಿ ಆಗಿರಲಾರರೆಂದೂ ಎರಡು ಸಾವಿರ ವರ್ಷಗಳ ಮೊದಲು ಇಸ್ರಾಯೀಲ್ಯರಲ್ಲಿ ನಿಯೋಜಿಸಲ್ಪಟ್ಟಿದ್ದ ಈಸಾನಬಿಯೇ ಬರುವರೆಂದೂ ಅಹ್ಮದಿಯೇತರ ಮುಸ್ಲಿಮರು ನಂಬುತ್ತಾರೆ. ಮೂಸಾನಬಿ (ಪ್ರವಾದಿ ಮೋಶೆ)ಯ ಉಮ್ಮತ್ ಆದ ಯಹೂದರು ಅಧಃಪತಿಸಿದಾಗ ಅವರನ್ನು ಪುನರುದ್ಧಾರ ಮಾಡಲಿಕ್ಕಾಗಿ ಅವರಿಂದಲೇ ಅಲ್ಲಾಹನು ಮಹಾತ್ಮರುಗಳನ್ನು ನಿಯೋಜಿಸಿದನು. ಆದರೆ ಖೈರುಲ್ ಉಮ್ಮತ್ ಆದ ಮುಸ್ಲಿಮರು ಯಹೂದರಂತೆ ಆದಾಗ ಅವರನ್ನು ಉದ್ಧರಿಸಲಿಕ್ಕೆ ಪೈಗಂಬರರ ಉಮ್ಮತಿಗೆ ಸೇರಿದ ಒಬ್ಬ ವ್ಯಕ್ತಿಯಲ್ಲ. ಇಸ್ರಾಯೀಲ್ಯರೆಡೆಯಲ್ಲಿ ಬಂದ ಈಸಾನಬಿಯೇ ಪುನಃ ಬರಬೇಕಂತೆ. ಎಂದರೆ, ಅಧಃಪತಿಸಲಿಕ್ಕಿರುವ ಎಲ್ಲಾ ದುರ್ಗುಣಗಳು ಉಮ್ಮತೆ ಮುಹಮ್ಮದಿಯ್ಯಕ್ಕೆ ಉಂಟೆಂದೂ ಆದರೆ ಅವರನ್ನು ಉದ್ಧರಿಸುವ ಸಾಮರ್ಥ್ಯ ಇಸ್ರಾಯೀಲ್ ನಬಿಗೆ ಮಾತ್ರ ಇದೆಯೆಂದೂ ಸಾರಾಂಶ. ಈ ನಂಬಿಕೆ ಮುಹಮ್ಮದ್ ಪೈಗಂಬರರಿಗೂ ಪೈಗಂಬರರ ಈ ಶ್ರೇಷ್ಠ ಸಮುದಾಯಕ್ಕೂ ಎಷ್ಟರ ಮಟ್ಟಿಗೆ ಅಪಮಾನಕರವಾದುದೆಂದು ಅಕಟಾ, ಮುಸ್ಲಿಮರು ಯೋಚಿಸುವುದಿಲ್ಲ. ಇದಕ್ಕೆ ವಿರುದ್ಧವಾಗಿ ಅಹ್ಮದೀ ಮುಸ್ಲಿಮರ ವಿಶ್ವಾಸ ಹೀಗಿದೆ: ಈಸಾನಬಿ (ಅ) ಇಸ್ರಾಯೀಲ್ಯರೆಡೆಯಲ್ಲಿ ಮಾತ್ರ ಪ್ರಬೋಧಿಸಲಿಕ್ಕೆ ನಿಯುಕ್ತರಾದ ಒಬ್ಬ ಪ್ರವಾದಿಯಾಗಿದ್ದರು. ಅವರು ತನ್ನ ದೌತ್ಯ ನಿರ್ವಹಿಸಿದ ನಂತರ ಮೃತಪಟ್ಟರು. ಇನ್ನು ಅವರು ಈ ಲೋಕಕ್ಕೆ ಹಿಂತಿರುಗಿ ಬರಲಾರರು. ಮುಹಮ್ಮದ್ ಪೈಗಂಬರರ ಉಮ್ಮತಿಯನ್ನು ಉದ್ಧರಿಸಲಿಕ್ಕೂ ಇಸ್ಲಾಂ ಶರೀಅತನ್ನು ಪುನರುತ್ಥಾನಗೊಳಿಸಲಿಕ್ಕೂ ಆ ಮಹಾಪುರುಷರ ಉಮ್ಮತಿಗೆ ಸೇರಿದ ಓರ್ವ ಮುಹಮ್ಮದೀ ಮಸೀಹ್ ಆಗಮಿಸಬೇಕಾಗಿದೆ; ಇಸ್ರಾಯೀಲೀ

ಮಸೀಹ್ ಅಲ್ಲ. ಪೈಗಂಬರರ ಉಮ್ಮತಿಯನ್ನು ಉದ್ಧರಿಸಲಿಕ್ಕೆ ಹೊರಗಿನಿಂದ ಓರ್ವ ವ್ಯಕ್ತಿ ಬರುವುದು ಪೈಗಂಬರರಿಗೂ ಪೈಗಂಬರರ ಉಮ್ಮತಿಗೂ ಭೂಷಣವಲ್ಲ. ಪೈಗಂಬರರ ಉಮ್ಮತಿಯಲ್ಲಿ ಉಮ್ಮತನ್ನು ಉದ್ಧರಿಸಲಿಕ್ಕೆ ಅರ್ಹತೆಯುಳ್ಳ ಯಾರೂ ಇಲ್ಲವೆಂದಾಗಲಿ, ಅಂತಹ ಓರ್ವ ವ್ಯಕ್ತಿಯನ್ನು ಈ ಸಮುದಾಯದಿಂದ ನಿಯುಕ್ತಗೊಳಿಸಲು ಅಲ್ಲಾಹನಿಗೆ ಸಾಧ್ಯವಾಗಲಾರದೆಂದಾಗಲಿ ಆಗಿರಬಹುದು ಈ ನಂಬಿಕೆಯ ಅರ್ಥ. ಒಟ್ಟಿನಲ್ಲಿ, ಪೈಗಂಬರರಿಂವ ಭವಿಷ್ಯ ನುಡಿಯಲ್ಪಟ್ಟ ಮಸೀಹ್ ಮುಹಮ್ಮದೀ ಮಸೀಹ್ ಎಂದೂ ಇಸ್ರಾಯೀಲೀ ಮಸೀಹ್ ಅಲ್ಲವೆಂದೂ ಇರುವ ಅಹ್ಮದೀ ಮುಸ್ಲಿಮರ ವಿಶ್ವಾಸವು ಯಥಾರ್ಥ ಇಸ್ಲಾಮೀ ವಿಶ್ವಾಸವೆಂದು ಸಾಬೀತಾಗುತ್ತದೆ.

## ಪ್ರವಾದಿತ್ವ ಸ್ಥಗಿತಗೊಂಡಿಲ್ಲ

7. ಮುಹಮ್ಮದ್ ಪೈಗಂಬರರ ಉಮ್ಮತಿಯಲ್ಲಿ ಇಸ್ಲಾಮಿನ ಸೇವೆಗಾಗಿ ಅಲ್ಲಾಹನು ಇಚ್ಛಿಸುವವರಿಗೆ ನುಬುವ್ವತ್ ಪದವಿ ನೀಡುವನೆಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಇತರ ಮುಸ್ಲಿಮರು ಹಾಗೆ ನಂಬುವುದಿಲ್ಲ; ಅಷ್ಟೇ ಅಲ್ಲ. ಈ ವಿಶ್ವಾಸವನ್ನು ಕಠಿಣವಾಗಿ ವಿರೋಧಿಸುತ್ತಾ ಮುಹಮ್ಮದ್ ಪೈಗಂಬರರ ನಂತರ ಯಾವ ವರ್ಗದ ಪ್ರವಾದಿಯೂ ಬರಲಿಕ್ಕಿಲ್ಲವೆಂದು ತೀವ್ರವಾಗಿ ವಾದಿಸುತ್ತಾರೆ. ಮೂಸಾನಬಿಯ ನಂತರ ಅವರ ಶರೀಅತಿನಲ್ಲಿ ಇಸ್ರಾಯೀಲ್ಯರನ್ನು ಪುನಃ ನಡೆಸಲಿಕ್ಕಾಗಿ ಪ್ರವಾದಿಗಳು ಬರುತ್ತಿದ್ದರೆಂದು ಮುಸ್ಲಿಮರು ನಂಬುತ್ತಾರೆ. ಆ ಪ್ರವಾದಿಗಳು ಮೂಸಾನಬಿಯ ಉಮ್ಮತನ್ನು ಉದ್ಧರಿಸಲಿಕ್ಕಾಗಿಯೂ ಮೂಸಾನಬಿಯ ಶರೀಅತನ್ನು ಪುನರುತ್ಥಾನಗೊಳಿಸಲಿಕ್ಕಾಗಿಯೂ ಬಂದವರಾಗಿದ್ದರು. ತೌರಾತ್ ಅಸಿಂಧುಗೊಳ್ಳುವ ವರೆಗೆ ಆ ಪ್ರಕಾರ ತೌರಾತಿಗೆ ವಿಧೇಯರಾದ ಪ್ರವಾದಿಗಳು ಇಸ್ರಾಯೀಲ್ಯರೆಡೆಯಲ್ಲಿ ಆಗಮಿಸುತ್ತಿದ್ದರು. ಇದು ಮೂಸಾನಬಿಯ ಸ್ಥಾನಕ್ಕೂ ತೌರಾತಿನ ಉತ್ಕೃಷ್ಟತೆಗೂ ಹಾನಿಕರವಾಗಿರಲಿಲ್ಲ, ಬದಲು ಗುಣಕರವಾಗಿತ್ತು. ಪವಿತ್ರ ಖುರ್‌ಆನ್ ಅವತೀರ್ಣವಾಗಿ ತೌರಾತ್ ಅಸಿಂಧುಗೊಂಡಾಗ, ಮತ್ತೆ ಅದರೆಡೆಗೆ ಇಸ್ರಾಯೀಲ್ಯರನ್ನು ಆಮಂತ್ರಿಸಲಿಕ್ಕೆ ಪ್ರವಾದಿಗಳು ನಿಯುಕ್ತರಾಗಲಿಲ್ಲ. ಮುಹಮ್ಮದ್ ಪೈಗಂಬರರ ನಂತರ ಪೈಗಂಬರರ ಶರೀಅತನ್ನು ಪ್ರಬೋಧಿಸಲಿಕ್ಕೋಸ್ಕರ ಪೈಗಂಬರರ ಅನುಯಾಯಿಗಳಲ್ಲಿ ಅಲ್ಲಾಹನು ಇಚ್ಛಿಸುವವರಿಗೆ ಅವನು ಪ್ರವಾದಿತ್ವ ಪದವಿಯ ಅನುಗ್ರಹವನ್ನು ನೀಡುವನೆಂಬ ಅಹ್ಮದೀ ಮುಸ್ಲಿಮರ ನಂಬಿಕೆ ಮುಹಮ್ಮದ್ ಪೈಗಂಬರರ ಮತ್ತು ಇಸ್ಲಾಂ ಶರೀಅತಿನ ಸ್ಥಾನ ಮಹಾತ್ಮೆಗಳಿಗೆ ಗುಣಕರವಾಗಿದೆ. ಆದರೆ ಇತರ ಮುಸ್ಲಿಮರು ಈ ವಿಶ್ವಾಸವನ್ನು ಕಠಿಣವಾಗಿ ವಿರೋಧಿಸುತ್ತಾ ಈ ದೈವಿಕಾನುಗ್ರಹಕ್ಕೆ ಪೈಗಂಬರರ ಅನುಯಾಯಿಗಳಲ್ಲಿ ಯಾರೂ ಪಾತ್ರರಾಗಲಿಕ್ಕಿಲ್ಲವೆಂದು ನಂಬುತ್ತಾರೆ. ಆದರೆ, ಅದರ ಜೊತೆಯಲ್ಲೇ ಎರಡು ಸಾವಿರ ವರ್ಷಗಳ ಹಿಂದೆ ಇಸ್ರಾಯೀಲ್ಯರಿಗೆ ನಿಯೋಜಿಸಲ್ಪಟ್ಟಿದ್ದ ಈಸಾನಬಿ (ಅ) ಮುಸ್ಲಿಮರಿಗೆ ಪ್ರವಾದಿಯಾಗಿ ಪುನಃ ಅವತರಿಸುವರೆಂದೂ ಅವರು ನಂಬುತ್ತಾರೆ. ಬೇರೊಂದು ಸಮುದಾಯದಲ್ಲಿ ಬೇರೊಂದು ನಬಿಯ ಶರೀಅತನ್ನು ನಡೆಸಲಿಕ್ಕಾಗಿ ಆಗಮಿಸಿದ್ದ ಈಸಾನಬಿ (ಅ) ಮುಸ್ಲಿಂ ಸಮುದಾಯದಲ್ಲಿ ಪುನಃ ನಬಿಯಾಗಿ ಬರುವಾಗ ಮುಹಮ್ಮದ್ ಪೈಗಂಬರರಿಗೂ ಇಸ್ಲಾಂ ಶರೀಅತಿಗೂ ಯಾವುದೇ ಹಾನಿಯೂ ಕುಂದೂ ಉಂಟಾಗುವುದಿಲ್ಲವೆಂದು ಭಾವಿಸುವವರು ಉಮ್ಮತೆ ಮುಹಮ್ಮದಿಯ್ಯಕ್ಕೆ ಸೇರಿದ ಓರ್ವ ವ್ಯಕ್ತಿಯನ್ನು ಅಲ್ಲಾಹನು ಈ ಉಮ್ಮತಿಯ ಮಾರ್ಗದರ್ಶನಕ್ಕಾಗಿ ನಿಯೋಜಿಸುವುದು ಮುಹಮ್ಮದ್ ಪೈಗಂಬರರ ಮತ್ತು ಇಸ್ಲಾಂ ಶರೀಅತಿನ ಶ್ರೇಷ್ಠತೆಗೆ ಹಾನಿಕರವೆಂದು ನಂಬುವುದು ಹೇಗೆ ಸಮರ್ಥನೀಯ ?

## ದಿವ್ಯ ಪ್ರಕಟನೆಗಳು

8. ದೇವರ ವರಿಷ್ಠರಾದ ಮುಸ್ಲಿಂ ಪುಣ್ಯಪುರುಷರಲ್ಲಿ ಅಲ್ಲಾಹು ಇಚ್ಛಿಸುವವರನ್ನು ಅವನು ದಿವ್ಯ ವಾಣಿಗಳಿಂದಲೂ ಆಧ್ಯಾತ್ಮಿಕ ದರ್ಶನಗಳಿಂದಲೂ ಇಲ್‌ಹಾಮ್‌ಗಳಿಂದಲೂ ಅನುಗ್ರಹಿಸುವನೆಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಇದು ಇಸ್ಲಾಮಿನ ಶ್ರೇಷ್ಠತೆಗೆ ಅನುಗುಣವಾದ ವಿಶ್ವಾಸವೆಂದು ಮನಗಾಣಲು ಪ್ರಯಾಸವಿಲ್ಲ. ಆದರೆ ಮುಹಮ್ಮದ್ ಪೈಗಂಬರರ ನಂತರ ಅಲ್ಲಾಹು ಯಾರೊಡನೆಯೂ ಮಾತನಾಡಲಾರನೆಂದೂ ವಹ್ಯ್, ಇಲ್‌ಹಾಮ್‌ಗಳೆಲ್ಲಾ ಸ್ಥಗಿತಗೊಂಡಿವೆಯೆಂದೂ ಇತರ ಮುಸ್ಲಿಮರು ನಂಬುತ್ತಾರೆ. ಪ್ರವಾದಿಗಳಲ್ಲದ ಮಹಾ

ತ್ಮರೊಡನೆ ಮತ್ತು 'ವಲಿ'ಗಳೊಡನೆ ಪೈಗಂಬರರಿಗಿಂತ ಮೊದಲು ಅಲ್ಲಾಹನು ಮಾತನಾಡುತ್ತಿದ್ದನೆಂದು ಖುರ್‌ಆನ್ ತಿಳಿಸಿಕೊಡುತ್ತದೆ. ಇಸ್ರಾಯೀಲ್ಯರ ಪೈಕಿ ಪ್ರವಾದಿಗಳಲ್ಲದವರೊಡನೆ ಸಹ ಅಲ್ಲಾಹು ಮಾತಾಡುತ್ತಿದ್ದನೆಂದೂ ತನ್ನ ಉಮ್ಮತ್‌ನಲ್ಲಿ ಹಝ್ರತ್ ಉಮರ್ (ರ) ಅಂತಹ ಒಬ್ಬ ವ್ಯಕ್ತಿಯಾಗಿದ್ದರೆಂದೂ ಪೈಗಂಬರರೇ ನುಡಿದಿದ್ದರು. ಅಲ್ಲಾಹನ ಒಂದು ಗುಣ 'ಮುತಕಲ್ಲಿಂ' (ಮಾತನಾಡುವವನು) ಎಂಬುದಾಗಿ ಇತರ ಮುಸ್ಲಿಮರು ಸಹ ನಂಬುತ್ತಾರೆ. ಮನುಷ್ಯರೊಂದಿಗೆ ಅವನ ಸಂಬಂಧ ಮೊದಲಿನಂತೆಯೇ ಈಗಲೂ ಇದೆ. ಆ ಸಂಬಂಧಕ್ಕೆ ಯಾವ ಮಾರ್ಪಾಟೂ ಉಂಟಾಗಿಲ್ಲ. ಮುಹಮ್ಮದ್ ಪೈಗಂಬರರ ನಂತರ ಅಲ್ಲಾಹು ಯಾರೊಡನೆಯೂ ಮಾತನಾಡಲಿಲ್ಲವೆಂದೂ ಮಾತನಾಡಲಿಕ್ಕಿಲ್ಲವೆಂದೂ ಹೇಳುವುದರ ಅರ್ಥ ಒಂದೋ ಪೈಗಂಬರರ ಆವಿರ್ಭಾವದೊಂದಿಗೆ ಅಲ್ಲಾಹನ ಆ ಗುಣ ನಷ್ಟವಾಯಿತೆಂದಾಗಿರಬಹುದು: ಅಥವಾ. ಪೈಗಂಬರರ ಉಮ್ಮತ್‌ನಲ್ಲಿ ಅಲ್ಲಾಹನ ಮಧುರ ವಚನದಿಂದ ಅನುಗ್ರಹೀತರಾಗಲಿಕ್ಕೆ ಅರ್ಹತೆಯುಳ್ಳ ಯಾರೂ ಇಲ್ಲವೆಂದೂ ಉಂಟಾಗಲಿಕ್ಕಿಲ್ಲವೆಂದೂ ಆಗಿರಬಹುದು. ಒಂದನೆಯದು ಅಲ್ಲಾಹನ ಮಹಾತ್ಮೆಗೆ ವಿರುದ್ಧ. ಎರಡನೆಯದು ಮುಹಮ್ಮದ್ ಪೈಗಂಬರರ ಶ್ರೇಷ್ಠತೆಗೆ ಸರಿ ಹೊಂದುವುದಿಲ್ಲ. ಒಟ್ಟಾರೆ, ಇಸ್ಲಾಂ ಸಜೀವವೂ ಸತ್ಯವೂ ಆದ ಧರ್ಮವೆಂಬುದೂ ಉಮ್ಮತೆ ಮುಸ್ಲಿಮ ಉತ್ಕೃಷ್ಟ ಸಮುದಾಯವೆಂಬುದೂ ಸರಿಯೆಂದಾದರೆ, ಮುಸ್ಲಿಮರಲ್ಲಿ ಅಲ್ಲಾಹನ ಅಮೃತ ನುಡಿಗಳಿಂದ ಅನುಗ್ರಹೀತರಾದ ಪುಣ್ಯ ಪುರುಷರು ಉಂಟಾಗುವರೆಂಬ ಅಹ್ಮದಿಯೂ ವಿಶ್ವಾಸವೇ ಯಥಾರ್ಥ ಇಸ್ಲಾಮೀ ವಿಶ್ವಾಸವೆಂದು ಮನವರಿಯಬಹುದು.

### ಈಸಾನಬಿಯ ಪವಾಡಗಳು

9. ಈಸಾನಬಿ (ಅ) ಬಾಹ್ಯಾರ್ಥದಲ್ಲಿ ಪಕ್ಷಿಗಳನ್ನು ಸೃಷ್ಟಿಸುವುದಾಗಲಿ, ಮೃತರನ್ನು ಬದುಕಿಸುವುದಾಗಲಿ ಮಾಡಲಿಲ್ಲವೆಂದೂ ಅವರು ರಹಸ್ಯವನ್ನು ತಿಳಿಯುವ ವ್ಯಕ್ತಿಯಾಗಿರಲಿಲ್ಲವೆಂದೂ ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಸರ್ವ ಚರಾಚರಗಳನ್ನು ಸೃಷ್ಟಿಸಿದವನೂ ಸೃಷ್ಟಿಸುವವನೂ ಅಲ್ಲಾಹನು ಮಾತ್ರವೆಂದೂ ಅವನು ಮಾತ್ರ ಎಲ್ಲಾ ರಹಸ್ಯಗಳನ್ನು ಬಲ್ಲವನೆಂದೂ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ತಿಳಿಸಿಕೊಡುತ್ತದೆ. ಈ ಗುಣಗಳಲ್ಲಿ ಯಾವುದೂ ಸಹ ಪ್ರವಾದಿ ವರೇಣ್ಯರಾದ ಮುಹಮ್ಮದ್ ಮುಸ್ತಫಾ (ಸ) ರಿಗೆ ಇರಲಿಲ್ಲವೆಂದು ಕೂಡ ಖುರ್‌ಆನ್ ಸ್ಪಷ್ಟಪಡಿಸುತ್ತದೆ. ಈ ಗುಣಗಳು ಈಸಾನಬಿಗೆ ಇದ್ದುವೆಂದು ಹೇಳುವುದರ ಅರ್ಥ, ಅವರು ಮುಹಮ್ಮದ್ ಪೈಗಂಬರಗಿಂತ ಶ್ರೇಷ್ಠ ಹಾಗೂ ಅಲ್ಲಾಹನ ಗುಣಗಳನ್ನು ಹೊಂದಿದ ವ್ಯಕ್ತಿಎಂದಲ್ಲವೇ. ಪವಿತ್ರ ಖುರ್‌ಆನಿನಲ್ಲಿ ಪ್ರಯುಕ್ತವಾಗಿರುವ ಕೆಲವು ರೂಪಕ ವಾಕ್ಯಗಳಿಗೆ, ಖುರ್‌ಆನಿನ ಖಂಡಿತ ವಚನಗಳಿಗೆದುರಾಗಿ ಅರ್ಥಕೊಟ್ಟುದುದರಿಂದ ಈ ಪ್ರಕಾರ ನಂಬಲು ಹೇತುವಾಯಿತು. ಅಲ್ಲಾಹನ ವಿಶಿಷ್ಟ ಗುಣಗಳ ಕುರಿತುಳ್ಳ ಖುರ್‌ಆನಿನ ಖಂಡಿತ ವಚನಗಳನ್ನು ಹೆಚ್ಚು ಗಮನಿಸಿದ್ದರೆ ಈ ರೀತಿಯ ಅಸಂಬದ್ಧ ನಂಬಿಕೆಗಳು ಮುಸ್ಲಿಮರನ್ನು ಸ್ಪರ್ಶಿಸುತ್ತಲೇ ಇರಲಿಲ್ಲ.

### 'ಮಿಅ್‌ರಾಜ್'

10. ಮುಹಮ್ಮದ್ ಪೈಗಂಬರರ ಮಿಅ್‌ರಾಜ್ (ಗಗನಾರೋಹಣ) ಶರೀರ ಸಹಿತ ಒಂದು ಯಾತ್ರೆಯಾಗಿರಲಿಲ್ಲವೆಂದೂ ಅದು ಅತಿಸೂಕ್ಷ್ಮವಾದ ಒಂದು ಆಧ್ಯಾತ್ಮಿಕ ದರ್ಶನವಾಗಿತ್ತೆಂದೂ ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಅಲ್ಲಾಹನು ದೇಹಿಯಲ್ಲ. ಅವನಿಗೆ ಒಂದು ಪ್ರತ್ಯೇಕ ಆವಾಸಸ್ಥಾನವಿಲ್ಲ. ಒಟ್ಟಿನಲ್ಲಿ. ಅವನನ್ನು ದರ್ಶಿಸಲಿಕ್ಕೂ ಅವನ ಮಧುರ ಮಾತು ಶ್ರವಿಸಲಿಕ್ಕೂ ಶರೀರ ಸಹಿತ ಪೈಗಂಬರರು ಆಕಾಶಾರೋಹಣ ಮಾಡಿದರೆಂಬ ನಂಬಿಕೆ ಸಂಪೂರ್ಣ ಅಸಂಬದ್ಧ. ಪೈಗಂಬರರ ಮಿಅ್‌ರಾಜ್ ಭೌತಿಕ ಶರೀರ ಸಹಿತವಾಗಿತ್ತೆಂದು ಹೇಳುವಾಗ, ಅಲ್ಲಾಹನಿಗೆ ರೂಪವೂ ಸ್ಥಾನವೂ ಉಂಟೆಂದು ಒಪ್ಪಬೇಕಾಗುತ್ತದೆ. ಅಲ್ಲಾಹನು ಮಾಂಸಚಕ್ಷುಗಳಿಂದ ಕಾಣಲ್ಪಡುವವನಾಗಿದ್ದರೆ ಪೈಗಂಬರರು ತನ್ನ 23 ವರ್ಷಗಳ ದೌತ್ಯದ ಮಧ್ಯೆ ಒಮ್ಮೆ ಮಾತ್ರ ಅಲ್ಲಾಹನನ್ನು ಕಂಡಿದ್ದರೆಂದು ಸಹ ಹೇಳಬೇಕಾದೀತು. ಹಾಗೆ ಹೇಳುವುದು ಸರಿಯಲ್ಲವಷ್ಟೇ. ಅಲ್ಲಾಹನು ಅತ್ಯಧಿಕ ಪ್ರೀತಿಸಿದ ಹಾಗೂ ಅಲ್ಲಾಹನ ಅತ್ಯಧಿಕ ಸಾಮೀಪ್ಯ ಗಳಿಸಿದ ಮಹಾನ್ ವ್ಯಕ್ತಿಯಾದ ಪೈಗಂಬರ (ಸ) ರು ಒಮ್ಮೆ ಮಾತ್ರ ಅಲ್ಲಾಹನನ್ನು ಕಂಡಿದ್ದರೆಂದು ಹೇಗೆ ನಂಬಲು ಸಾಧ್ಯ ?

ಅಲ್ಲಾಹನೊಡನೆ ಮಾತುಕತೆ ನಡೆಸಲಿಕ್ಕಾಗಿ ಪೈಗಂಬರರು ಆಕಾಶಕ್ಕೇರಿ ಹೋದುದಾದರೆ, ಪೈಗಂಬರರು ತನ್ನ 23 ವರ್ಷ ದೌತ್ಯಕಾಲದ ಮಧ್ಯೆ ಮತ್ತೊಮ್ಮೆಯಾದರೂ ಅಲ್ಲಾಹನ ಸ್ವರವನ್ನು ನೇರವಾಗಿ ಕೇಳಲಿಲ್ಲವೆಂದೂ ಅವನ ಅಮೃತ ವಚನಗಳಿಂದ ಅನುಗ್ರಹಿಸಲ್ಪಡಲಿಲ್ಲವೆಂದೂ ಹೇಳಬೇಕಾದೀತು. ಆದರೆ ವಸ್ತುಸ್ಥಿತಿ ತದ್ವಿರುದ್ಧವಷ್ಟೇ. ಹಾಗಿರುವಾಗ ಅಲ್ಲಾಹನನ್ನು ಕಾಣಲಿಕ್ಕೂ ಅವನೊಡನೆ ಮಾತನಾಡಲಿಕ್ಕೂ ಪೈಗಂಬರ (ಸ) ರು ಭೌತಿಕ ದೇಹದೊಂದಿಗೆ ಆಕಾಶಾರೋಹಣ ಮಾಡಿದ್ದರೆಂಬ ನಂಬಿಕೆ ವಿವೇಕಶೂನ್ಯವೂ ಅಲ್ಲಾಹನ ಗುಣಗಳಿಗೂ ಪೈಗಂಬರರ ಸ್ಥಾನಮಹಾತ್ಮೆಗಳಿಗೆ ಸರಿಹೊಂದಿಕೆ ಇಲ್ಲದ್ದೆಂದೂ ಸಾಬೀತಾಗುತ್ತದೆ.

## ಇಸ್ಲಾಂ ಮತ್ತು ಮುಸ್ಲಿಮೇತರ ಸರಕಾರ

11. ಇಸ್ಲಾಂ ಪ್ರಯೋಗಿಕ ಧರ್ಮವೂ ಮಾನವ ಕುಲಕ್ಕೆಲ್ಲಾ ಜೀವಿತ ಕ್ರಮವೂ ಆಗಬೇಕಾದರೆ ಮುಸ್ಲಿಮರಿಗೆ ಮುಸ್ಲಿಮೇತರ ಸರಕಾರದ ಅಧೀನದಲ್ಲಿ ಸಹ ಯಥಾರ್ಥ ಮುಸ್ಲಿಮರಾಗಿಯೇ ಜೀವನ ನಡೆಸುವ ಸಾಧ್ಯತೆ ಇರಬೇಕು. ಒಬ್ಬ ಮುಸ್ಲಿಂ ಇಂಗ್ಲೆಂಡಿನಲ್ಲಾಗಲಿ ಅಮೇರಿಕದಲ್ಲಾಗಲಿ ಜಪಾನಿನಲ್ಲಾಗಲಿ ವಾಸಮಾಡುತ್ತಾನೆಂದು ಊಹಿಸಿರಿ. ಆ ಸರಕಾರದ ಅಧೀನದಲ್ಲಿ ಆ ಸರಕಾರದ ನಿಯಮಗಳನ್ನನುಸರಿಸಿ ಯಥಾರ್ಥ ಮುಸ್ಲಿಮಾಗಿ ಜೀವಿಸಲು ಸಾಧ್ಯವಿಲ್ಲವೆಂದು ಹೇಳುವುದರ ಅರ್ಥ ಇಸ್ಲಾಂ ಪ್ರಾಯೋಗಿಕ ಧರ್ಮವಲ್ಲವೆಂದೂ ಅದು ಎಲ್ಲಾ ಮಾನವರಿಗೋಸ್ಕರವಿರುವ ಜೀವಿತಕ್ರಮವಲ್ಲವೆಂದೂಆಗುತ್ತದೆ. ಓರ್ವ ಮುಸ್ಲಿಮನಿಗೆ ಹಾಗೆ ಸಾಧ್ಯವಲ್ಲವಾದರೆ ಒಬ್ಬ ಅಮುಸ್ಲಿಮನಿಗೆ ಮುಸ್ಲಿಂ ಸರಕಾರದ ಅಧೀನದಲ್ಲಿ ಯಥಾರ್ಥ ಕ್ರೈಸ್ತನೋ, ಯಹೂದನೋ ಹಿಂದುವೋ ಆಗಿ ಬದುಕಲು ಸಾಧ್ಯವಿಲ್ಲದಾಗಿ ತತ್ಫಲವಾಗಿ ಅವರು ಆರಾಷ್ಟ್ರದೊಡನೆ ನಿಜವಾದ ಬೆಂಬಲವಿಲ್ಲದವರಾಗುವರು. ಇಸ್ಲಾಂ ಸಾರ್ವತ್ರಿಕವೂ ಪ್ರಾಯೋಗಿಕವೂ ಆದ ಧರ್ಮವೆಂದಾದರೆ, ಯಾವುದೇ ಪರಿಸ್ಥಿತಿಯಲ್ಲೂ ಪ್ರಯೋಗಿಸಬಹುದಾದ ಸಿದ್ಧಾಂತಗಳು ಅದಕ್ಕಿದೆಯೆಂದಾದರೆ, ಮುಸ್ಲಿಂ ರಾಷ್ಟ್ರದಂತೆ ಅಮುಸ್ಲಿಂ ರಾಷ್ಟ್ರದಲ್ಲೂ ನಿಜವಾದ ಮುಸ್ಲಿಮಾಗಿಯೇ ಅವನಿಗೆ ಜೀವಿಸಲಿಕ್ಕೆ ಸಾಧ್ಯವಾಗಬೇಕಲ್ಲವೇ. ಇಸ್ಲಾಂ ಇದಕ್ಕೆದುರಾಗಿ ಆದೇಶಿಸುವುದಾದರೆ ಇಂದಿನ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ನಿಯಮಗಳಿಗೂ ಸದಾಚಾರಗಳಿಗೂ ಅನುಯೋಜ್ಯವಲ್ಲದ ಧರ್ಮವೆಂದು ಹೇಳಬೇಕಾದೀತು. ಇಸ್ಲಾಂ ಶಾಂತಿ – ಸಮಾಧಾನವನ್ನು ಪ್ರಬೋಧಿಸುವ ಹಾಗೂ ಸಂಕುಚಿತ ಭಾವನೆಗಳನ್ನೂ ಅಸಹಿಷ್ಣುತೆಯನ್ನೂ ದ್ವೇಷಿಸುವ ಲೋಕೈಕ ಧರ್ಮವೆಂದಾದರೆ, ಅದರ ನಿಯಮಾವಳಿ ಎಂದಿಗೂ ಈ ತರದಲ್ಲಿ ಇರಲಿಕ್ಕಿಲ್ಲ. ಮುಸ್ಲಿಮೇತರ ಸರಕಾರದ ಪ್ರಜೆಗಳಾಗಿ ಜೀವಿಸುವವರಿಗೆ ಯಥಾರ್ಥ ಮುಸ್ಲಿಮಾಗಿ ಬದುಕಲು ಸಾಧ್ಯವಿಲ್ಲವೆಂದಾಗುವುದಾದರೆ ಇಸ್ಲಾಮೀ ನಿಯಮ ಆ ರಾಜ್ಯಕ್ಕೆ ಸಂಬಂಧಿಸಿದ ಮಟ್ಟಿಗೆ ಅಪ್ರಾಯೋಗಿಕವಾಗುವುದಷ್ಟೇ. ಆಗ ಮುಹಮ್ಮದ್ ಪೈಗಂಬರ (ಸ) ರು ಸಾರ್ವಲೌಕಿಕ ದೌತ್ಯದೊಂದಿಗೆ ಅವತರಿಸಿದ ಪ್ರವಾದಿಯೆಂದೂ ಇಸ್ಲಾಂ ಧರ್ಮನಿಯಮ ಎಲ್ಲಾ ರಾಜ್ಯಗಳಿಗೂ ಎಲ್ಲಾ ಜನಾಂಗಗಳಿಗೂ ಎಲ್ಲಾ ವರ್ಗಗಳಿಗೂ ಅನ್ವಯಿಸುತ್ತದೆಂದೂ ಹೇಳುವುದು ಅರ್ಥಶೂನ್ಯವಾಗುವುದು.

## ಮುಸ್ಲಿಮರ ಸಹಕಾರ

12. ಮುಸ್ಲಿಮರು ಯಾವ ಸರಕಾರದ ಪ್ರಜೆಗಳಾಗಿ ಜೀವಿಸುತ್ತಾರೋ ಆ ಸರಕಾರದೊಂದಿಗೆ ಅದರ ಅಧೀನದಲ್ಲಿ ಜೀವಿಸುವ ಕಾಲದ ವರೆಗೆ ಸಹಕರಿಸುವವರಾಗಿರಬೇಕೆಂಬುದು ಇಸ್ಲಾಮಿನ ಆದೇಶವೆಂದು ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಈ ನಿರ್ದೇಶವನ್ನು ಇತರ ಮುಸ್ಲಿಮರು ಅನುಸರಿಸುವುದಿಲ್ಲ. ಮುಖ್ಯವಾಗಿ ಜಮಾತೆ ಇಸ್ಲಾಮೀ ಪಂಥದವರು. ಮುಸ್ಲಿಮೇತರ ಸರಕಾರದೊಂದಿಗೆ ಮುಸ್ಲಿಮರು ಸಹಕರಿಸಬೇಕೆಂದಿಲ್ಲವೆಂದಾದರೆ, ಮುಸ್ಲಿಂ ಸರಕಾರದೊಡನೆ ಮುಸ್ಲಿಮೇತರರು ಸಹಕರಿಸದಿರಬಹುದೆಂದು ಸಹ ಹೇಳಬಹುದಲ್ಲವೇ. ಈ ಪ್ರಪಂಚವು ದೇವರದ್ದೆಂದೂ ದೈವಿಕ ಸರಕಾರಕ್ಕೆ ತಲೆಬಾಗಬೇಕೆಂದೂ ಒಟ್ಟಾರೆ ಇಸ್ಲಾಮೀ ಸರಕಾರದ ಅಧೀನದಲ್ಲಿ ಎಲ್ಲರೂ ಸಹಕರಿಸಿ ಜೀವಿಸಬೇಕೆಂದೂ ಇರುವ ಜಮಾತೆ ಇಸ್ಲಾಮೀ ಪಂಥದ ಬೋಧನೆ ಅಮುಸ್ಲಿಮರ ದೃಷ್ಟಿಯಲ್ಲಿ ಸಂಪೂರ್ಣ ಅರ್ಥಶೂನ್ಯ ವಾದಗಳು ಮಾತ್ರವಾಗಿರಬಹುದು. ಮುಸ್ಲಿಮರು ಅಮುಸ್ಲಿಂ ಸರಕಾರದೊಂದಿಗೆ ಹಾಗೂ ಅಮುಸ್ಲಿಮರು ಮುಸ್ಲಿಂ ಸರಕಾರದೊಡನೆ ಸಹಕರಿಸಬಾರದೆಂದಾದರೆ ಎಲ್ಲಾ ದೇಶಗಳಲ್ಲೂ ಅಂತಚ್ಛಿದ್ರಗಳೂ ವಿಪ್ಲವಗಳೂ ರಕ್ತಪಾತಗಳೂ

# ಸರ್ ಮುಹಮ್ಮದ್ ಝುಫ್ರುಲ್ಲಾ ಖಾನ್ ನಿಧನ

★ ಎನ್. ಎ.



ಸರ್ ಮುಹಮ್ಮದ್ ಝುಫ್ರುಲ್ಲಾ ಖಾನ್ ಸಾಹೇಬರು ಕಳೆದ ಸಪ್ಟೆಂಬರ್ 1ರಂದು ತನ್ನ 93ನೇ ವಯಸ್ಸಿನಲ್ಲಿ ಲಾಹೋರಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್"). ಸಂಭವಬಹುಲವಾದ, ವರ್ಣಶಬಲವಾದ ಒಂದು ಮಹಜ್ಜೀವಿತಕ್ಕೆ ಎಂದೆಂದಿಗೂ ತೆರೆ ಬಿತ್ತು. ಅಹ್ಮದಿಯಾ ಜಮಾಅತಿಗೆ ಭಕ್ತೋತ್ತಮನಾದ ಓರ್ವ ಕರ್ಮಭಟನೂ, ಇಸ್ಲಾಮಿಗೂ ಮುಸ್ಲಿಂ ಸಮುದಾಯಕ್ಕೂ ಒಬ್ಬ ವೀರಸೇವಕನೂ, ಲೋಕಕ್ಕೆ ಮಹಾನಾದ ಒಬ್ಬ ಮನುಷ್ಯಸ್ನೇಹಿಯೂ ನಷ್ಟವಾದರು.

ಅಹ್ಮದಿಯಾ ಜಮಾಅತಿಗೆ ಸಂಬಂಧಿಸಿದಂತೆ ಝುಫ್ರುಲ್ಲಾ ಖಾನ್ ಸಾಹೇಬರ ನಿಧನ ತುಂಬಲಾರದ ನಷ್ಟವೇ ಆಗಿದೆ. ಅವರು ವಾಗ್ದತ್ತ ಮಸೀಹರ ಸತ್ಯತೆಗಿರುವ ಒಂದು ಜೀವಂತ ದೃಷ್ಟಾಂತವಾಗಿದ್ದರು. ಭೌತಿಕ ನೆಲೆಯಲ್ಲೂ ಆಧ್ಯಾತ್ಮಿಕ ನೆಲೆಯಲ್ಲೂ ಒಂದೇ ಸಂದರ್ಭದಲ್ಲಿ, ಮನುಷ್ಯನು ತಲಪಬಹುದಾದ ಅತ್ಯುನ್ನತ ಸ್ಥಾನಗಳಲ್ಲಿ ವಿಹರಿಸಲು ಸಾಧ್ಯವಾದ ಅವರಂಥ ಇನ್ನೋರ್ವ ವ್ಯಕ್ತಿಯನ್ನು ಬೆರಳೆತ್ತಿ ತೋರಿಸಲಿಕ್ಕಿಲ್ಲ. ವಾಗ್ದತ್ತ ಮಸೀಹನ್ನು ಬಾಲ್ಯಕಾಲದಲ್ಲಿ ಮುಖಾಮುಖಿ ಕಾಣಲು ಮಹಾಭಾಗ್ಯ ಸಿದ್ಧಿಸಿದ ವ್ಯಕ್ತಿಯೆಂಬ ನೆಲೆಯಲ್ಲಿ ಓರ್ವ ಸಹಾಬಿಯಾಗಿದ್ದರಲ್ಲದೆ, ನಾಲ್ಕು ಖಲೀಫರುಗಳಿಗೆ ಬೈಅತ್ ಮಾಡಲಿಕ್ಕೂ ಮುಕ್ಕಾಲು ಶತಮಾನ ಕಾಲ ಅಹ್ಮದಿಯಾ ಜಮಾಅತಿಗಾಗಿ ನಿರಂತರ ಸೇವೆಗೈಯ್ಯಲಿಕ್ಕೂ ಸಾಧ್ಯವಾದ ಆ ಮಹಾ ಪ್ರತಿಭಾಶಾಲಿಯ ಉದಾತ್ತವಾದ

---

( 52ನೇ ಪುಟದಿಂದ )

ಉಂಟಾಗುವುವೆಂದು ಯಾರಿಗೆ ತಿಳಿದುಕೊಳ್ಳಲು ಅಸಾಧ್ಯ? ಮುಸ್ಲಿಮೇತರ ಸರಕಾರದೊಡನೆ ಮುಸ್ಲಿಮರು ಸಹಕರಿಸಬಾರದೆಂಬ ಸಿದ್ಧಾಂತ ಹೇಗೆ ಸಮರ್ಥನೀಯ? ಇಸ್ಲಾಮಿನ ಧ್ಯೇಯ ಸಾರ್ವದೇಶೀಯ ಸಮಾಧಾನವೂ ಸಾರ್ವತ್ರಿಕ ಕ್ಷೇಮವೂ ಎಂದಾದರೆ, ಮುಸ್ಲಿಮರು ತಾವು ಯಾವ ದೇಶದ ಪ್ರಜೆಗಳಾಗಿದ್ದಾರೋ ಆ ರಾಷ್ಟ್ರದೊಂದಿಗೆ ಸಹಕಾರವುಳ್ಳವರಾಗಿರಬೇಕೆಂಬ ಅಹ್ಮದಿಯಾ ವಿಶ್ವಾಸವು ಯಥಾರ್ಥ ಇಸ್ಲಾಮಿ ವಿಶ್ವಾಸವೆಂದು ಮನಗಾಣಲು ಪ್ರಯಾಸವೇ ಇಲ್ಲ.

ಅಹ್ಮದೀ ಮುಸ್ಲಿಮರಿಗೂ ಅಹ್ಮದಿಯೇತರ ಮುಸ್ಲಿಮರಿಗೂ ಮಧ್ಯೆಯಿರುವ ವಿಶ್ವಾಸ ಭಿನ್ನತೆಗಳಲ್ಲಿ ಅತಿ ಪ್ರಧಾನವಾದ ಹನ್ನೆರಡು ಸಂಗತಿಗಳನ್ನು ನಾನು ಮೇಲೆ ವಿವರಿಸಿದ್ದೇನೆ. ಇಸ್ಲಾಮಿನ ಮಹತ್ವಕ್ಕೂ ಮುಹಮ್ಮದ್ ಪೈಗಂಬರ (ಸ)ರ ಶ್ರೇಷ್ಠತೆಗೂ ಸರಿಹೊಂದುವ ಯಥಾರ್ಥ ನಂಬಿಕೆಗಳು ಅಹ್ಮದೀ ಮುಸ್ಲಿಮರದ್ದೇ ಆಗಿವೆಯೆಂದು ನೀತಿಮತಿಗಳಿಗೂ ನಿಷ್ಪಕ್ಷ ಚಿಂತಕರಿಗೂ ಇದರಿಂದ ಅರಿತುಕೊಳ್ಳಲು ಪ್ರಯಾಸವಿಲ್ಲ.

—o—o—

ಕೆಲಸಗಳನ್ನು ಅಹ್ಮದಿಯಾ ಲೋಕವು ಕೃತಜ್ಞತೆಯಿಂದ ಸ್ಮರಿಸುತ್ತದೆ. ಕಳೆದ ಕಾಲು ಶತಮಾನಕಾಲ ಅಹ್ಮದಿಯಾ ಜಮಾಅತಿಗೆದುರಾಗಿ ಎದ್ದ ಕ್ಷೋಭೆಗಳ ಪ್ರಧಾನ ಗುರಿಗಳಲ್ಲಿ ಒಂದು ಝಫ್ರುಲ್ಲಾ ಖಾನ್ ಸಾಹೇಬರ ವ್ಯಕ್ತಿತ್ವವಾಗಿತ್ತೆಂಬುದು ಅವರ ಮಹತ್ವವನ್ನು ಸಾರುತ್ತದೆ.

ಹಝ್ರತ್ ಝಫ್ರುಲ್ಲಾ ಖಾನ್ ಸಾಹೇಬ್ ಜಾಗತಿಕ ನ್ಯಾಯಾಲಯದ ಜಡ್ಜ್ ಹಾಗೂ ಅದರ ಅಧ್ಯಕ್ಷರಾಗಿ ಸೇವೆಯರ್ಪಿಸಿದರು. ಅವರು ನೀತಿನ್ಯಾಯದ ಅಗ್ರಾಸನದಲ್ಲಿ ಉಪವಿಷ್ಟರಾದಂತೆ ತನ್ನ ಮಾತೃಶ್ರೀ ಕಂಡ ಒಂದು ದಿವ್ಯ ದರ್ಶನವು, ಈ ಲೋಕದಲ್ಲಿ ಒಬ್ಬ ವ್ಯಕ್ತಿಗೆ ದೊರೆಯ ಬಹುದಾದ ಅತ್ಯಂತ ಉನ್ನತವಾದ ನ್ಯಾಯ ಪೀಠದಲ್ಲಿ ಕುಳಿತುಕೊಂಡು ನಿಜವೆನಿಸಿತು. ಹೈಕೋರ್ಟ್ ಜಡ್ಜ್ ಆಗಿದ್ದಾಗಲೂ ಫೆಡರಲ್‌ಕೋರ್ಟ್ ಜಡ್ಜ್ ಆಗಿ ಸ್ಥಾನವಹಿಸಿದ್ದಾಗಲೂ ಈ ದರ್ಶನವು ನಿಜವಾಯಿತೆಂದು ವ್ಯಾಖ್ಯಾನಿಸಲ್ಪಟ್ಟರೂ ಜಾಗತಿಕ ನ್ಯಾಯಾಲಯದ ಅಧ್ಯಕ್ಷರಾಗಿ ವಿಪವಿಷ್ಟರಾದಾಗ ಪ್ರಸ್ತುತ ದರ್ಶನ ಸಂಪೂರ್ಣ ನಿಜವಾಯಿತು.

ಝಫ್ರುಲ್ಲಾ ಖಾನ್ ಯು. ಎನ್. ಓ. ಜನರಲ್ ಅಸೆಂಬ್ಲಿಯ ಅಧ್ಯಕ್ಷರಾಗಿಯೂ ಚುನಾಯಿತರಾಗಿದ್ದರು. ಜನರಲ್ ಅಸೆಂಬ್ಲಿ ಪ್ರೆಸಿಡೆಂಟ್ ಮತ್ತು ಜಾಗತಿಕ ನ್ಯಾಯಾಲಯದ ಪ್ರೆಸಿಡೆಂಟ್ ಆಗಿ ಸೇವೆಯರ್ಪಿಸಿದ ಏಕವ್ಯಕ್ತಿ ತಾನೆಂದು ಅವರೇ ಒಮ್ಮೆ ಹೇಳಿದ್ದರು. ಪ್ರಭಾವಶಾಲಿಯಾದ ನ್ಯಾಯ ತಜ್ಞನೆಂಬ ನೆಲೆಯಲ್ಲಿ ಉಪಜೀವನವನ್ನು ಆರಂಭಿಸಿದ ಝಫ್ರುಲ್ಲಾಖಾನ್ ನಂತರ ಜಡ್ಜ್, ಇಂಡಿಯಾ ವೈಸರಾಯಿಯ ಎಕ್ಸಿಕ್ಯೂಟಿವ್ ಕೌನ್ಸಿಲ್ ಸದಸ್ಯ ಮತ್ತು ಅದರ ಸೀನಿಯರ್‌ಮೋಸ್ಟ್ ಮೆಂಬರ್ ಆಗಿ ಶೋಭಿಸಿದರು. ಒಬ್ಬ ಆಡಾಳಿತಾಧಿಕಾರಿಯೆಂಬ ನೆಲೆಯಲ್ಲಿ ಅವರು ಸ್ಪರ್ಶಿಸಿರದ ಯಾವುದೇ ಇಲಾಖೆ ಬಾಕಿ ಇಲ್ಲ. ನಂತರ ಅವರು ಇಂಡಿಯನ್ ಫೆಡರಲ್ ಕೋರ್ಟ್ ಜಡ್ಜ್ ಆಗಿ ನೇಮಿಸಲ್ಪಟ್ಟರು.

ಇಂಡಿಯಾ ವಿಭಜನೆಯ ನಂತರ ಸಂಯುಕ್ತರಾಷ್ಟ್ರ ಸಂಘದಲ್ಲಿ ಪಾಕ್ ಪ್ರತಿನಿಧಿಯಾಗಿ ಪೆಲಸ್ತೀನ್ ಸಮಸ್ಯೆಯ ಕುರಿತು ಅರಬಿಯರಿಗಾಗಿ ಅವರು ನಡೆಸಿದ ಹೋರಾಟವು ಒಂದು ಇತಿಹಾಸವೇ ಆಗಿದೆ.. ಅವರು ಆ ಮೂಲಕ ಅರಬ್ ಲೋಕದ ಕಣ್ಮಣಿಯಾದರು. ಹೆಚ್ಚಿನ ಎಲ್ಲಾ ಅರಬ್ ದೇಶಗಳೂ ಆಯಾ ರಾಜ್ಯದ ಅತ್ಯಂತ ಉನ್ನತ ಪದವಿ ನೀಡಿ ಗೌರವಿಸಿದುವು. ಫೈಝಲ್ ರಾಜ, ಮೊರೊಕ್ಕೊದ ಹಸನ್ ರಾಜ, ಜೋರ್ಡಾನಿನ ಹುಸೈನ್ ರಾಜ ಅವರನ್ನು ವಿಶಿಷ್ಟವಾಗಿ ಬಹುಮಾನಿಸಿದರು. ಲಿಬಿಯಾ, ಮೊರೊಕ್ಕೊ ಮತ್ತು ಇತರ ಅರಬ್ ರಾಜ್ಯಗಳ ಸ್ವಾತಂತ್ರ್ಯಕ್ಕೋಸ್ಕರ ಅವರು ವಿಶ್ವ ಸಂಸ್ಥೆಯಲ್ಲಿ ನಡೆಸಿದ ಮುತ್ಸದ್ದಿ ಸಮರ ಅರಬಿಯರಿಗೆ ಎಂದಿಗೂ ಮರೆಯಲಸಾಧ್ಯ. ಪೆಲಸ್ತೀನದ ಕುರಿತು ಝಫ್ರುಲ್ಲಾ ಖಾನ್ ಎತ್ತಿದ ನಿಯಮ ಪ್ರಶ್ನೆಗಳೂ ವಾದಗತಿಗಳೂ ಅಮೇರಿಕನ್ ಪ್ರತಿನಿಧಿ ವಾರನ್ ಆಸ್ಟಿನನ್ನು ನಿರುತ್ತರನನ್ನಾಗಿ ಮಾಡಿತು. ಪೆಲಸ್ತೀನ್ ವಿವಾದದಲ್ಲಿ ಝಫ್ರುಲ್ಲಾ ಖಾನ್ ನಿರ್ಮಿಸಿದ ಪ್ರತಿಚ್ಛಾಯೆ ಅವರನ್ನು ಮುಸ್ಲಿಂ ಲೋಕದ ಅಭಿಮಾನಸ್ತಂಭ ಮಾಡಿತು. ಈ ಸಮರದ ಫಲಶ್ರುತಿಯಾಗಿಯೇ ಝಫ್ರುಲ್ಲಾರಿಗೆ ವಿರುದ್ಧವಾವ ಸಾಮ್ರಾಜ್ಯ ಗೂಢಾಲೋಚನೆ ರೂಪ ತಾಳಿದ್ದು ಮತ್ತು ಅನಂತರ ಪಾಕಿಸ್ತಾನದಲ್ಲಿ ಗಲಭೆ ಸ್ಫೋಟಿಸಿದ್ದು. ಜಿನ್ನಾ ಮೃತಪಡುವ ತನಕ ಝಫ್ರುಲ್ಲಾ ಖಾನರಿಗೆ ವಿರುದ್ಧವಾಗಿ ಅಲ್ಲಿ ಯಾರಿಗೂ ಸ್ವರವೆತ್ತಲು ಸಾಧ್ಯವಾಗಿರಲಿಲ್ಲ. ಪಾಕಿಸ್ತಾನದ ವಿದೇಶ ಸಚಿವರಾಗಿದ್ದ ಝಫ್ರುಲ್ಲಾ ಖಾನರೇ ಆ ಕಾಲದಲ್ಲಿ ಪಾಕಿಸ್ತಾನಕ್ಕೆ ಅಂತಾರಾಷ್ಟ್ರೀಯ ರಂಗದಲ್ಲಿ ಸ್ಥಾನವನ್ನು ಗಳಿಸಿ ಕೊಟ್ಟರು.

ಭಾರತದ ಸ್ವಾತಂತ್ರ್ಯಕ್ಕಾಗಿ ಸರ್ ಝಫ್ರುಲ್ಲಾ ಖಾನ್ ಔದ್ಯೋಗಿಕ ಸ್ಥಾನದಲ್ಲಿದ್ದುಕೊಂಡು ಗೈಯ್ದಿರುವ ಸೇವೆಗಳು ಹೆಚ್ಚಿನವರಿಗೆ ಗೊತ್ತಿರಲಿಕ್ಕಿಲ್ಲ. ಭಾರತೀಯರಿಗೆ ಆಡಳಿತಾರಂಗದಲ್ಲಿ ಹೆಚ್ಚೆಚ್ಚು ಹಕ್ಕುಗಳನ್ನು ಗಳಿಸಿಕೊಡುವ ಕಾರ್ಯದಲ್ಲಿ ಅವರು ವೈಸರಾಯಿಯ ಮುಂದೆ ಹೋರಾಟ ನಡೆಸುತ್ತಿದ್ದರು. ಆ ಮಹಾನ್ ವ್ಯಕ್ತಿಯ ಪ್ರಾಮಾಣಿಕತೆ, ಸತ್ಯಸಂಧತೆ ಮತ್ತು ನಿಸ್ವಾರ್ಥ ಗುಣಗಳಿಗೆ ಅಮಿತ ಆದರ ತೋರಿಸಿದ ವೈಸರಾಯಿಗಳು ಅವರ ಅಭಿಪ್ರಾಯಗಳಿಗೆ ಅತ್ಯಂತ ಮನ್ನಣೆ ಕೊಟ್ಟಿದ್ದರು. ಎಷ್ಟರ ವರೆಗೆ ಎಂದರೆ, ಇಂಡಿಯಾ ವೈಸರಾಯಿ ಆಗಿ ಯಾರನ್ನು ನೇಮಕ ಮಾಡಬೇಕೆಂಬ ವಿಚಾರದಲ್ಲಿ ಕೂಡ ಚರ್ಚಿಲ್ ಒಮ್ಮೆ ತನ್ನ ಅಭಿಪ್ರಾಯವನ್ನು ಕೇಳಿದ್ದರೆಂದು 'ತಹ್‌ದೀಸೆ ನಿಅ್‌ಮತ್' ಎಂಬ

ತನ್ನ ಆತ್ಮಕಥಾಗ್ರಂಥದಲ್ಲಿ ಝಫ್ರುಲ್ಲಾ ಖಾನ್ ಬರೆದಿದ್ದಾರೆ. ಲೋಕ ಮಹಾಯುದ್ಧ ಕಾಲದಲ್ಲಿ ಅತ್ಯಂತ ರಹಸ್ಯಕರವಾದ ದೌತ್ಯಗಳನ್ನು ಬ್ರಿಟಿಷ್ ಸರಕಾರ ಅವರಿಗೊಪ್ಪಿಸಿದ್ದರು. ಅವರು ಆ ಕಾಲದಲ್ಲಿ ಚೈನಾದಲ್ಲಿ ಇಂಡಿಯದ ಏಜಂಟ್ ಜನರಲ್ ಆಗಿ ದುಡಿದರು. ಯುದ್ಧ ಕಾಲದಲ್ಲಿ ಕಾಮನ್‌ವೆಲ್ತ್ ರಿಲೇಶನ್ಸ್ ಕಾನ್ಫರೆನ್ಸ್‌ನಲ್ಲಿ ಭಾರತಕ್ಕೆ ಸ್ವಾತಂತ್ರ್ಯ ನೀಡಲು ಆಗತ್ಯಪಡಿಸಿ ಝಫ್ರುಲ್ಲಾ ಖಾನ್ ಮಾಡಿದ ಭಾಷಣವು ಇಂಗ್ಲೆಂಡಿನಲ್ಲಿ ಕೋಲಾಹಲವನ್ನೇ ಸೃಷ್ಟಿಸಿತು. ರೇಡಿಯೊ ಮೂಲಕ ಭಾಷಣವನ್ನು ಆಲಿಸುತ್ತಿದ್ದ ಪಂಡಿತ್ ಜವಾಹರಲಾಲ್ ನೆಹರು "ನಾವೆಲ್ಲಾ ಜೈಲಿನಲ್ಲಿರುವಾಗ ಝಫ್ರುಲ್ಲಾ ಅಕೋ ಭಾರತಕ್ಕಾಗಿ ಹೋರಾಡುತ್ತಿದ್ದಾರೆ!" ಎಂದು ಆಸಫಲಿಯೊಡನೆ ಉತ್ಸಾಹದಿಂದ ಹೇಳಿದ್ದರು.

ಆಡಳಿತಾರಂಗಗಳಲ್ಲಿ, ರಾಜತಾಂತ್ರಿಕ ರಂಗಗಳಲ್ಲಿ, ನ್ಯಾಯ ಪೀಠಗಳಲ್ಲಿ, ನಿಯಮ ಮಂಡಲಗಳಲ್ಲಿ ಮಾತ್ರವಲ್ಲ ಆಧ್ಯಾತ್ಮಿಕ ರಂಗಗಳಲ್ಲಿ ಕೂಡ ಅದೇ ರೀತಿಯಲ್ಲಿ ಪ್ರಭಾವಶಾಲಿಯಾಗಿ ರಾರಾಜಿಸಿದ ಹಝ್ರತ್ ಝಫ್ರುಲ್ಲಾ ಖಾನ್ ಅಹ್ಮದಿಯಾ ಜಮಾಅತಿಗಾಗಿ ಸಲ್ಲಿಸಿರುವ ಸೇವೆ ಅವಿಸ್ಮರಣೀಯ. ಅಹ್ಮದಿಯಾ ಜಮಾಅತಿನ ಪ್ರಗತಿಯಲ್ಲಿ ಆ ಮಹಾನ್ ವ್ಯಕ್ತಿ ದೈವಿಕವಾದ ಒಂದು ಉಪಕರಣವಾಗಿದ್ದರು ಎಂದು ಹೇಳುವುದಾಗಿರಬಹುದು ಸರಿ. ಯಾವ ಸಂದರ್ಭದಲ್ಲೂ ಅಹ್ಮದಿಯಾ ಜಮಾಅತಿನ ಧರ್ಮಭಟನಾಗಿ ಅವರು ವರ್ತಿಸಿದರು. ಅಹ್ಮದಿಯಾ ಜಮಾಅತಿನ ಇಮಾಮರ ಮುಂದೆ ಜೀವಾರ್ಪಣ ಮಾಡಿದ ಧರ್ಮಭಟರ ಪಟ್ಟಿಯಲ್ಲಿ ಅವರು ಸಹ ಸೇರಿದ್ದಾರೆ. ಯಾವುದೇ ಉನ್ನತ ಸ್ಥಾನವನ್ನು ತನ್ನ ನಾಯಕನ ಆದೇಶಾನುಸಾರ ಪರಿತ್ಯಜಿಸಲಿಕ್ಕೆ ಸನ್ನದ್ಧರಾಗಿದ್ದ ಅವರು ಪಾಕಿಸ್ತಾನದ ವಿದೇಶ ಸಚಿವ ಸ್ಥಾನಕ್ಕೆ ರಾಜಿನಾಮೆಯನ್ನು ಖಾಜಾ ನಾಝಿಮುದ್ದೀನರಿಗೆ ಒಪ್ಪಿಸಲು ಒಂದಿಷ್ಟೂ ಹಿಂಜರಿಯಲಿಲ್ಲ. ಭೌತಿಕವಾದ ಎಲ್ಲಾ ಸ್ಥಾನಮಾನಗಳು ಅವರ ದೃಷ್ಟಿಯಲ್ಲಿ ತುಚ್ಛವಾಗಿದ್ದುವು. ಖಲೀಫರ ಅಪ್ಪಣೆಯ ಪ್ರಕಾರ ಯಾವ ಕೆಲಸ ಮಾಡಲಿಕ್ಕೂ ಅವರು ಸನ್ನದ್ಧರಾಗಿದ್ದರು. ಜಾಗತಿಕ ನ್ಯಾಯಾಲಯದ ಜಡ್ಜ್ ಪದವಿಯಿಂದ ನಿವೃತ್ತಿಗೊಂಡ ನಂತರ ವಿಶ್ರಮ ಜೀವನ ನಡೆಸುತ್ತಿದ್ದ ಅವರು ಖುರ್‌ಆನಿನ ಇಂಗ್ಲಿಷ್ ವ್ಯಾಖ್ಯಾನಾನುವಾದ ಮತ್ತು ಪೈಗಂಬರರ ಜೀವನ ಚರಿತ್ರೆಯನ್ನೂ ರಚಿಸಿದರು. ವಾಗ್ದತ್ತ ಮಸೀಹರ ಹಲವು ಗ್ರಂಥಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿದರು. ಹಾಗೆ ಆ ಮಹಾಪುರುಷರು ಅಹ್ಮದಿಯಾ ಜಮಾಅತಿಗೆ ಅಪರಿಮಿತ ಅನುಗ್ರಹಗಳಿಗೆ ಕಾರಣವಾದ ಮಹತ್ವಾದ ಸೇವೆಗಳನ್ನರ್ಪಿಸಿದರು.

ಝಫ್ರುಲ್ಲಾ ಖಾನ್ ಸಾಹೇಬರು ಮರಣಕ್ಕೆ ಹೇತುವಾದ ರೋಗದಲ್ಲಿ ಬೋಧರಹಿತರಾಗಿ ಮಲಗಿದ್ದಾಗ ಅವರ ಆರೋಗ್ಯದ ಕುರಿತು ವಿಚಾರಿಸಿ ಜೋರ್ಡಾನಿನ ಹುಸ್ಸೈನ್ ರಾಜ ಮತ್ತು ಮೊರೊಕ್ಕೊ ಸುಲ್ತಾನ್ ಸಂದೇಶಗಳನ್ನು ಕಳುಹಿಸಿದರು. ಸಿರಿಯಾದ ಅಧ್ಯಕ್ಷರು ರಾಯಭಾರಿಯನ್ನೇ ಕಳುಹಿಸಿ ನೇರವಾಗಿ ವಿವರಗಳನ್ನು ಅರಿತು ಕೊಂಡರು. ಪಾಕಿಸ್ತಾನದ ಅಧ್ಯಕ್ಷ ಝಿಯಾ ಉಲ್ ಹಕ್ ಸ್ವತಃ ಝಫ್ರುಲ್ಲಾಖಾನ್‌ರ ಮನೆಗೆ ಹೋಗಿ ಅವರನ್ನು ಕಂಡು ಒಂದು ಗಂಟೆ ಕಾಲ ಅಲ್ಲಿ ಕಳೆದರು. ಭಾರತದ ಪ್ರಧಾನ ಮಂತ್ರಿ ರಾಜೀವ ಗಾಂಧಿ ಸಹ ಝಫ್ರುಲ್ಲಾ ಖಾನ್ ಸಾಹೇಬರ ಆರೋಗ್ಯದ ಕುರಿತು ವಿಚಾರಿಸಿ ಸಂದೇಶ ಕಳುಹಿಸಿದ್ದರು. ಯು. ಎನ್. ಓ. ಸೆಕ್ರೆಟರಿ ಜನರಲ್, ಜಾಗತಿಕ ನ್ಯಾಯಾಲಯದ ನ್ಯಾಯಾಧೀಶರುಗಳು, ರಿಜಿಸ್ಟ್ರಾರ್ ಅಲ್ಲದೆ ಲೋಕದ ನಾನಾ ಕಡೆಗಳಿಂದ ಪ್ರಮುಖ ವ್ಯಕ್ತಿಗಳು ಅವರ ಅಸ್ವಸ್ಥತೆಯ ಬಗ್ಗೆ ವಿಚಾರಿಸಿ ಸಂದೇಶ ಕಳುಹಿಸಿದ್ದರು.

ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ ಸಾಹೇಬ್ ಅವರು ಮುಸ್ಲಿಮರಿಗೂ ಮುಸ್ಲಿಂ ಲೋಕಕ್ಕೂ ಅರಬಿಯರಿಗೂ ಏನೆಲ್ಲಾ ಸೇವೆಗಳನ್ನರ್ಪಿದ್ದರೆಂದು ಚರಿತ್ರೆಯಲ್ಲಿ ದಾಖಲಿಸಲ್ಪಟ್ಟಿವೆ. ಯಾರಿಂದಲೂ ಅಲ್ಲಗಳೆಯಲು ಅಸಾಧ್ಯವಾದ ತರದಲ್ಲಿ ಈ ದಾಖಲೆಗಳು ಸುರಕ್ಷಿತವಾಗಿವೆ. ಶತ್ರುತ್ವ ಮತ್ತು ವಿದ್ವೇಷದ ಅಂಧತೆ ನಿಮಿತ್ತ ಅವನ್ನೆಲ್ಲಾ ಕಾಣದಂತೆಯೂ ಮರೆಮಾಡಲಿಕ್ಕೂ ಎಷ್ಟು ಪ್ರಯತ್ನಿಸಿದರೂ ಯಾರಿಗೂ ಅದನ್ನು ಅಡಗಿಸಲಿಕ್ಕೆ ಸಾಧ್ಯವಿಲ್ಲ. ನಾಳಿನ ತಲೆಮಾರುಗಳು ಅದನ್ನು ಅರಿತುಕೊಳ್ಳುವರು. ಲೋಕ ಮುಸ್ಲಿಂ ಚರಿತ್ರೆಯಲ್ಲಿ ಸರ್ ಮುಹಮ್ಮದ್ ಝಫ್ರುಲ್ಲಾ ಖಾನರ ಸಂಸಿದ್ಧ ಸ್ಥಾನವನ್ನು ಯಾರಿಗೂ ಕಸಿದುಕೊಳ್ಳಲಿಕ್ಕಾಗಲಿ ನಿಷ್ಪ್ರಭಗೊಳಿಸಕ್ಕಾಗಲಿ ಸಾಧ್ಯವಿಲ್ಲ. ಪ್ರಪಂಚ ನಿಯಾಮಕನಾದ ಅಲ್ಲಾಹನ ಸಂರಕ್ಷಣೆಯಲ್ಲಿ ಆ ಮಹತ್ವಾದ ತ್ಯಾಗ, ಸೇವೆ, ಅಪದಾನಗಳ ವೀರಚರಿತ್ರೆ ಖಂಡಿತವಾಗಿಯೂ ಹೊಳೆದು ಪ್ರಕಾಶಿಸುವುದು.

# ಹಝ್ರತ್ ಝಫ್ರುಲ್ಲಾ ಖಾನ್

★ ಎ. ಆರ್.

ಹಝ್ರತ್ ಚೌಧರಿ ಮುಹಮ್ಮದ್ ಝಫ್ರುಲ್ಲಾ ಖಾನ್ ಸಾಹೇಬ್ 1985 ಸಪ್ಟೆಂಬರ್ 1ರಂದು ಆದಿತ್ಯವಾರ ಬೆಳಿಗ್ಗೆ 8–45ಕ್ಕೆ ಲಾಹೋರಿನಲ್ಲಿ ನಿಧನ ಹೊಂದಿದರು. ಜುಲಾಯಿ 20ರಂದು ಶ್ವಾಸಕೋಶ ವಿಷಮಜ್ವರ (Bronchial Pneumonia) ಅವರನ್ನು ಬಾಧಿಸಿತು. ಅವರು ಜುಲಾಯಿ 24ರಿಂದ ಅಬೋಧಾವಸ್ಥೆಯಲ್ಲಿದ್ದರು. ಕೆಲವೊಮ್ಮೆ ಪ್ರಜ್ಞೆ ಬಂದು ಮಾತನಾಡುತ್ತಿದ್ದರು. ಶನಿವಾರ ರಕ್ತದೊತ್ತಡ ಪಕ್ಕನೆ ಕಮ್ಮಿಯಾಯಿತೆಂದೂ ಮೂತ್ರಾಶಯ ನಿಷ್ಕ್ರಿಯೆ ಗೊಂಡಿತೆಂದೂ ಅವರ ಪ್ರೈವೇಟ್ ಸೆಕ್ರೆಟರಿ ಇಅ್‌ಜಾಸುಲ್ ಹಮೀದ್ ತಿಳಿಸಿದರು. ಡಾ। ವಸೀಂ ಅಹ್ಮದ್, ಡಾ। ಅಹ್ಮದುಲ್ ಹಸನ್, ಡಾ। ನೂರುಲ್ ಹಸನ್ ಎಂಬಿವರು ಅವರ ಚಿಕಿತ್ಸೆ ಮಾಡುತ್ತಿದ್ದರು. ಪುತ್ರಿ ಬೇಗಂ ಹಮೀದ್ ಝಫ್ರುಲ್ಲಾ ಖಾನರ ಜೊತೆಯಲ್ಲಿ ವಾಸಮಾಡುತ್ತಿದ್ದರು.

ನಿಧನವಾರ್ತೆ ತಿಳಿದ ಕೂಡಲೇ ಸಾವಿರಗಟ್ಟಲೆ ಜನರು ಖುರ್ಷಿದ್ ಆಲಂ ರೋಡಿನಲ್ಲಿರುವ ಅವರ ಪುತ್ರಿಯ ವಸತಿಗೆ ಧಾವಿಸಿ ಬಂದರು.

ಸಪ್ಟೆಂಬರ್ 3ರಂದು ಸಂಜೆ ಸಹಸ್ರಾರು ಜನರ ಸಾನ್ನಿಧ್ಯದಲ್ಲಿ ಅವರ ಮೃತಶರೀರ 140 ಕಿಲೋ ಮೀಟರ್ ದೂರವಿರುವ ಅಹ್ಮದಿಯಾ ಕೇಂದ್ರವಾದ ರಬ್ವಾದಲ್ಲಿ ಧಫನ ಮಾಡಲ್ಪಟ್ಟಿತು. ರಬ್ವಾದಲ್ಲಿ ನಾಲ್ಕು ತಾಸುಗಳ ಕಾಲ ಪಾರ್ಥಿವ ಶರೀರವನ್ನು ಜನರ ಕೊನೆಯ ದರ್ಶನಕ್ಕಾಗಿ ಇರಿಸಲಾಗಿತ್ತು. ಲಾಹೋರಿನ ಖುರ್ಷಿದ್ ಆಲಂ ರಸ್ತೆಯಲ್ಲಿರುವ ವಾಸಸ್ಥಳದಲ್ಲಿ ಜನಾಝಾ ಪ್ರಾರ್ಥನೆ ಮಾಡಲು ನಿಶ್ಚಯಿಸಲಾಗಿತ್ತು. ಜನಬಾಹುಲ್ಯ ಕಾರಣ ಜನಾಝಾ ಪ್ರಾರ್ಥನೆಯನ್ನು ಪೋಲೋ ಗ್ರೌಂಡಿನಲ್ಲಿ ನಿರ್ವಹಿಸಲು ಲಾಹೋರ್ ಕಂಟೋನ್ಮೆಂಟಿನ ಕೋರ್ ಕಮಾಂಡರ್ ಮತ್ತು ಪಂಜಾಬ್ ಗವರ್ನರ್ ಲೆ। ಜನರಲ್ ಗುಲಾಂ ಜೀಲಾನಿ ಖಾನ್ ವಿಶೇಷ ಸಮ್ಮತಿ ನೀಡಿದರು. ಜನಾಝಾ ಪ್ರಾರ್ಥನೆಯಲ್ಲಿ ಒಂದು ಲಕ್ಷ ಮಂದಿ ಭಾಗವಹಿಸಿದರೆಂದು "ಡಾನ್" ವರದಿ ಮಾಡಿದೆ. ಸಾವಿರಾರು ಮೈಲು ದೂರದಿಂದ ಬಂದವರು ಅವರ ಪೈಕಿ ಅನೇಕರಿದ್ದರು. ಅಮೇರಿಕ, ಬ್ರಿಟನ್, ಪಶ್ಚಿಮ ಜರ್ಮನಿ, ಬಂಗ್ಲಾದೇಶ ಎಂಬೀ ಕಡೆಗಳಿಂದಲೂ ಆಫ್ರಿಕನ್ ರಾಜ್ಯಗಳಿಂದಲೂ ಬಂದ ಜನರು ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡರು. ಝಫ್ರುಲ್ಲಾ ಖಾನರ ಜಾಮಾತೃ ಹಾಗೂ ಲಾಹೋರ್ ಜಿಲ್ಲಾ ಅಹ್ಮದಿಯಾ ಅಮೀರ್ ಹಮೀದ್ ನಸ್ರುಲ್ಲಾ ಸಾಹೇಬರು ಜನಾಝಾ ಪ್ರಾರ್ಥನೆಗೆ ನೇತೃತ್ವ ವಹಿಸಿದರು. (ಜನಾಝಾ ಪ್ರಾರ್ಥನೆಯ ಫೋಟೋ 'ಡಾನ್', 'ಜಂಗ್' ಎಂಬೀ ಪತ್ರಿಕೆಗಳು ಪ್ರಕಟಿಸಿವೆ.)

ಜೋರ್ಡಾನಿನ ಹುಸೈನ್ ರಾಜ ಪಾಕಿಸ್ತಾನದ ರಾಯಭಾರಿ ಹಜ್ಜ್ ಹಸನ್ ಮೂಲಕ ಶೋಕ ಸಂದೇಶವನ್ನು ಕಳುಹಿಸಿದರು. ಅವರು ಸರ್ ಝಫ್ರುಲ್ಲಾ ಖಾನರ ವಸತಿಯನ್ನು ಸಂದರ್ಶಿಸಿದರು. ಸಂತಾಪ ಸೂಚಕ ಪುಸ್ತಕದಲ್ಲಿ ಅವರು ಹೀಗೆ ಬರೆದರು :

**I am directed by King Hussain to represent him and his Government in the last rituals of Sir Zafrulla Khan who was a great man. His services for the Arab people particularly the Palestians and Jordanians are unforgettable.**

"ಮಹಾನ್ ವ್ಯಕ್ತಿಯಾದ ಝಫ್ರುಲ್ಲಾ ಖಾನ್ ಅವರ ಅಂತ್ಯ ಸಂಸ್ಕಾರದಲ್ಲಿ ತನ್ನ ಹಾಗೂ ತನ್ನ ಸರಕಾರದ ಪ್ರತಿನಿಧಿಯಾಗಿ ಭಾಗವಹಿಸಲು ಹುಸೈನ್ ರಾಜ ನನಗೆ ಆದೇಶವಿತ್ತಿದ್ದಾರೆ. ಅರಬಿಯರಿಗೋಸ್ಕರ, ವಿಶೇಷವಾಗಿ ಪೆಲೆಸ್ತೀನಿಯರಿಗೂ ಜೋರ್ಡಾನಿನವರಿಗೂ ಅವರು ಗೈಯ್ದಿರುವ ಸೇವೆಗಳು ಎಂದಿಗೂ ಮರೆಯಲು ಅಸಾಧ್ಯ."

---

( 55ನೇ ಪುಟದಿಂದ )

ಹಝ್ರತ್ ಝಫ್ರುಲ್ಲಾ ಖಾನರ ಪಾರ್ಥಿವ ಶರೀರ ಸಪ್ಟೆಂಬರ್ 3ರಂದು ರಬ್ವಾದಲ್ಲಿ ಧಫನ ಮಾಡಲ್ಪಟ್ಟಿತು. ಅತ್ಯುನ್ನತವಾದ ಆಧ್ಯಾತ್ಮಿಕ ಸೌಭಾಗ್ಯಗಳೂ ಸ್ವರ್ಗೀಯ ಅನುಗ್ರಹಗಳೂ ಅವರ ಆತ್ಮಕ್ಕೆ ಪದೇ ಪದೇ ಲಭಿಸುತ್ತಲೇ ಇರಲಿ ಎಂದು ನಾವು ಪ್ರಾರ್ಥಿಸುತ್ತೇವೆ. ●

ಪಾಕಿಸ್ತಾನ್ ಪೀಪಲ್ಸ್ ಪಾರ್ಟಿಯ ಪಂಜಾಬ್ ಸಂಸ್ಥಾನ ಅಧ್ಯಕ್ಷ ಮಿ। ಜಹಾಂಗೀರ್ ಬದರ್ ಅವರು ತಮ್ಮ ಪಕ್ಷದ ಸಂತಾಪವನ್ನೂ ಆದರಾಂಜಲಿಯನ್ನೂ ಸೂಚಿಸಿದರು. ಅವರು ಹೀಗೆ ಹೇಳಿದರು : "ಝುಫ್ರುಲ್ಲಾ ಖಾನ್ ಮುಸ್ಲಿಂ ಲೀಗಿನ ಅಖಿಲ ಭಾರತ ಅಧ್ಯಕ್ಷರುಗಳಲ್ಲಿ ಒಬ್ಬರಾಗಿದ್ದರು. ಅವರು ತನ್ನ ದೇಶಕ್ಕೂ ಜನತೆಗೂ ಬೇಕಾಗಿ ಉತ್ತಮ ಸೇವೆಗಳನ್ನು ಸಲ್ಲಿಸಿದ ವ್ಯಕ್ತಿಯಾಗಿದ್ದರು."

ಪಾಕಿಸ್ತಾನ್ ಮುಸಾವಾತ್ ಪಕ್ಷದ ಅಧ್ಯಕ್ಷ ಹನೀಫ್ ರಾಮೆ ಝುಫ್ರುಲ್ಲಾ ಖಾನರ ಕುರಿತು, ಅವರು ಖಾಯಿದೆ ಆಝುಮರ ನಿಕಟ ಸಹವರ್ತಿ ಹಾಗೂ ವಿಶ್ವಸ್ತರಾಗಿದ್ದರೆಂದು ಪ್ರಸ್ತಾಪಿಸಿದರು.

ಚೌಧರಿ ಝುಫ್ರುಲ್ಲಾ ಖಾನ್ ಅವರ ಮರಣ ಪಾಕಿಸ್ತಾನಕ್ಕೆ ತುಂಬಲಾರದ ನಷ್ಟವೆಂದು ಬೇಗಂ ರಿಆನಾ ಲಿಯಾಖತ್ ಹೇಳಿದರು. ಅವರು ಮುಂದುವರಿಸಿ ನುಡಿದರು: "ಝುಫ್ರುಲ್ಲಾರಂತಹ ಓರ್ವ ವ್ಯಕ್ತಿಯನ್ನು ನಮಗೆ ಕಾಣ ಸಿಗಲಿಕ್ಕೆ ಬಹಳ ಪ್ರಯಾಸವಿದೆ. ಅನೇಕ ಮಹದ್ಗುಣಗಳು ಅವರಿಗಿದ್ದುವು. ಪಾಕಿಸ್ತಾನಕ್ಕೂ ತನ್ನ ಧರ್ಮಕ್ಕೂ ಸಮುದಾಯಕ್ಕೂ ಬೇಕಾಗಿ ಅವರು ಮಹಾ ಸೇವೆಗಳನ್ನು ಅರ್ಪಿಸಿದ್ದಾರೆ. ಅವರ ಗುಣ ಮಹಿಮೆಗಳನ್ನು ಕಂಡರಿತು ಖಾಯಿದೆ ಆಝುಂ ಅವರನ್ನು ಪಾಕಿಸ್ತಾನದ ಪ್ರಥಮ ವಿದೇಶ ಮಂತ್ರಿಯನ್ನಾಗಿ ನೇಮಿಸಿದರು. ಅವರು ಎರಡು ಸಲ ಹೇಗಿನ ಜಾಗತಿಕ ನ್ಯಾಯಾಲಯದ ನ್ಯಾಯಾಧಿಪತಿಯಾಗಿ ಚುನಾಯಿತರಾಗಿ ಹತ್ತು ವರ್ಷಕಾಲ ಸೇವೆ ಸಲ್ಲಿಸಿದರೆಂಬುದು ಅವರ ಅಪಾರ ಸಾಮರ್ಥ್ಯ ಮತ್ತು ನಿಯಮ ಪಾಡಿತ್ಯದ ಘೋಷಣೆಯಾಗಿದೆ.

"ಅವರ ವಿನಯಭಾವ, ದಯಾದ್ರತೆ, ನಮ್ರನುಡಿ, ಬುದ್ಧಿಕೌಶಲ್ಯ ಮತ್ತು ಕ್ರಾಂತದೃಷ್ಟಿ ನನ್ನನ್ನು ಚಕಿತಗೊಳಿಸಿವೆ. ಪಾಕಿಸ್ತಾನದ ಇತಿಹಾಸದಲ್ಲಿ ಅವರಿಗೆ ಆದರಣೀಯ ಸ್ಥಾನವಿರುವುದು. ಒಳಿತು, ನೀತಿ, ಪ್ರಾಮಾಣಿಕತೆಗಳಿಗೆ ಬೆಲೆ ಕೊಡುವವರು ಮಹತ್ವದ ಉತ್ತಮ ಆದರ್ಶ ಪುರುಷನನ್ನಾಗಿ ಅವರನ್ನು ಎಲ್ಲಾಕಾಲಗಳಲ್ಲೂ ಸ್ಮರಿಸುವರು. ಅವರ ಆತ್ಮಕ್ಕೆ ನಿತ್ಯಶಾಂತಿ ದೊರೆಯಲಿ."

ಸಂದೇಶಗಳನ್ನು ಕಳುಹಿಸಿದವರ ಪೈಕಿ ಪಾಕಿಸ್ತಾನದ ಅಧ್ಯಕ್ಷ ಜನರಲ್ ಝಿಯಾಉಲ್ ಹಕ್ ಮತ್ತು ಪ್ರಧಾನ ಮಂತ್ರಿ ಮುಹಮ್ಮದ್ ಖಾನ್ ಜುನೆಜೊ ಸಹ ಸೇರುತ್ತಾರೆ. ಪಾಕ್ ಪಂಜಾಬ್ ಗವರ್ನರ್ ಸಂತಾಪ ಸೂಚಿಸಿದರು. ಅಸಾಮಾನ್ಯ ನ್ಯಾಯ ತಜ್ಞ ಹಾಗೂ ಲೋಕ ಪ್ರಸಿದ್ಧ ರಾಜತಾಂತ್ರಿಕ ಮುತ್ಸದ್ದಿ ನಷ್ಟವಾದರೆಂದು ಗವರ್ನರ್ ಲೆ। ಜನರಲ್ ಗುಲಾಂ ಜೀಲಾನಿ ಖಾನ್ ಸಂದೇಶದಲ್ಲಿ ಹೇಳಿದರು.

1911ರಲ್ಲಿ ಲಾಹೋರ್ ಗವರ್ನ್‌ಮೆಂಟ್ ಕಾಲೇಜ್‌ನಿಂದ ಝುಫ್ರುಲ್ಲಾ ಖಾನ್ ಬಿರುದು ಪಡೆದರು. ಲಂಡನ್ ಕಿಂಗ್ಸ್ ಕಾಲೇಜ್‌ನಲ್ಲಿ ಎಲ್. ಎಲ್. ಬಿ. ಮತ್ತು ಲಿಂಕನ್ಸ್ ಕಾಲೇಜಿನಲ್ಲಿ ಬಾರ್ ಅಟ್ ಲಾ ಮಾಡಿದರು. 1926 ರಿಂದ 35ರ ವರೆಗೆ ಪಂಜಾಬ್ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಸದಸ್ಯರಾಗಿದ್ದರು. 1935 ರಿಂದ 41ರ ವರೆಗೆ ಗವರ್ನರ್ ಜನರಲರ ಎಕ್ಸಿಕ್ಯೂಟಿವ್ ಕೌನ್ಸಿಲಿನಲ್ಲಿ ಸೇವೆ ಸಲ್ಲಿಸಿದರು. 1941 ರಿಂದ 1947ರ ವರೆಗೆ ಇಂಡಿಯಾದ ಫೆಡರಲ್ ಕೋರ್ಟ್ ನ್ಯಾಯಾಧೀಶರಾಗಿದ್ದರು. 1947 ರಲ್ಲಿ ಇಂಡಿಯಾ ಪಾಕಿಸ್ತಾನ್ ಬೌಂಡರಿ ಕಮೀಷನಿನಲ್ಲಿ ಪಾಕಿಸ್ತಾನದ ಪ್ರತಿನಿಧಿಯಾಗಿ ವಾದಿಸಿದರು. 1947ರಲ್ಲಿ ಪಾಕಿಸ್ತಾನದ ಪ್ರಥಮ ವಿದೇಶ ಸಚಿವರನ್ನಾಗಿ ಅವರನ್ನು ಖಾಯದೆ ಆಝುಂ ಮುಹಮ್ಮದಾಲಿ ಜಿನ್ನಾ ನೇಮಿಸಿದರು. 1954ರ ವರೆಗೆ ಆ ಸ್ಥಾನದಲ್ಲಿ ಅವರು ಮುಂದುವರಿದರು. 1954ರಿಂದ 1961ರ ವರೆಗೆ ಜಾಗತಿಕ ನ್ಯಾಯಾಲಯದ ನ್ಯಾಯಾಧಿಪತಿಯಾದರು. 1958ರಿಂದ 1961ರ ವರೆಗೆ ಅದರ ಉಪಾಧ್ಯಕ್ಷರಾಗಿ ದುಡಿದರು. 1961ರಲ್ಲಿ ಯು. ಎನ್. ಓ. ಜನರಲ್ ಅಸೆಂಬ್ಲಿಯ ಅಧ್ಯಕ್ಷರಾಗಿ ಚುನಾಯಿತರಾಗಿ 1963ರ ವರೆಗೆ ಆ ಸ್ಥಾನದಲ್ಲಿ ಮುಂದುವರಿದರು. 1964ರಿಂದ 1973ರ ವರೆಗೆ ಜಾಗತಿಕ ನ್ಯಾಯಾಲಯದಲ್ಲಿ ಪುನಃ ನ್ಯಾಯಾಧಿಪತಿಯಾದರು. 1970 ರಿಂದ 1973ರ ವರೆಗೆ ಅದರ ಅಧ್ಯಕ್ಷರಾಗಿ ವರ್ತಿಸಿದರು. ಯು. ಎನ್. ಓ. ಜನರಲ್ ಅಸೆಂಬ್ಲಿಯ ಚುನಾಯಿತ ಅಧ್ಯಕ್ಷ ಹಾಗೂ ಜಾಗತಿಕ ನ್ಯಾಯಾಲಯದ ಚುನಾಯಿತ ಅಧ್ಯಕ್ಷ ಆಗಿರುವ ಏಕವ್ಯಕ್ತಿ ಝುಫ್ರುಲ್ಲಾ ಖಾನ್ ಮಾತ್ರ. ಮುಸ್ಲಿಂ ಲೀಗಿನ ಒಬ್ಬ ಪ್ರಾಥಮಿಕ ಸದಸ್ಯರಾಗಿದ್ದ ಅವರು 1931ರಲ್ಲಿ ಅದರ ಅಖಿಲ ಭಾರತ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಪಾಕಿಸ್ತಾನದ ನಿರ್ಮಾಣದಲ್ಲಿ ಅವರು ಖಾಯಿದೆ ಆಝುಮರ ಬಲಗೈಯಂತಿದ್ದರು. ಖಾಯಿದೆ

ಅಝುಮರೇ ಅವರನ್ನು ವಿಶ್ವ ಸಂಸ್ಥೆಯಲ್ಲಿ ಪಾಕಿಸ್ತಾನದ ಪ್ರತಿನಿಧಿಯಾಗಿ ನೇಮಕ ಮಾಡಿದ್ದು. ಪೆಲಸ್ತೀನ್ ಸಮಸ್ಯೆಯಲ್ಲಿ ಅವರು ಅರಬಿಯರಿಗೋಸ್ಕರ ಹೋರಾಡಿದರು. ಅರಬಿಯರಿಗಾಗಿ, 'ವಿಶಿಷ್ಟವಾಗಿ ಜೋರ್ಡಾನಿಗಾಗಿ ಅವರು ಗೈಯ್ದಿರುವ ಸೇವೆಗಳನ್ನು ಗೌರವಿಸಿ ಹುಸೈನ್‌ರಾಜ ಅವರಿಗೆ ಜೋರ್ಡಾನಿನ ಅತ್ಯುಚ್ಛ ಗೌರವ ಸ್ಥಾನವಾದ "ಸ್ಟಾರ್ ಓಫ್ ಜೋರ್ಡಾನ್" (**Star of Jordan**) ಎಂಬ ಪದವಿಯನ್ನು ಅರ್ಪಿಸಿದರು. ಟ್ಯುನಿಶಿಯಾ ಮತ್ತು ಮೊರೊಕ್ಕೊ ಅಲ್ಲಿನ ಅತ್ಯುನ್ನತ ಸಿವಿಲ್ ಅವಾರ್ಡ್‌ಗಳನ್ನು ಅವರಿಗೆ ನೀಡಿದರು. ಅಲ್ಜೀರಿಯಾ, ಲಿಬಿಯೊ, ಸಿರಿಯಾ ಎಂಬೀ ಅರಬಿ ರಾಜ್ಯಗಳು ಸಹ ಅಂತಹದೇ ಪದವಿಗಳನ್ನು ನೀಡಿ ಗೌರವಿಸಿದುವು. ಅವರು ಒಬ್ಬಂಟಿಗರಾಗಿ ವಿಶ್ವಸಂಸ್ಥೆಯಲ್ಲಿ ನಡೆಸಿದ ಪ್ರಯತ್ನಗಳು ಲಿಬಿಯಾ, ಅಲ್ಜಿರಿಯಾ ಮತ್ತು ಟ್ಯೂನಿಶಿಯಾ ದೇಶಗಳ ಸ್ವಾತಂತ್ರ್ಯಕ್ಕೆ ದಾರಿಮಾಡಿ ಕೊಟ್ಟಿತು. ಪೆಲಸ್ತೀನ್ ಸಮಸ್ಯೆಯು ಬಗ್ಗೆ ಹಾಗೂ ಆಪ್ರಿಕ, ಮಧ್ಯಪೂರ್ವ ದೇಶಗಳು ಮತ್ತು ಮುಸ್ಲಿಂ ರಾಜ್ಯಗಳ ಸ್ವಾತಂತ್ರ್ಯಕ್ಕೋಸ್ಕರ ಅವರು ನಡೆಸಿದ ನಿಸ್ತುಲ್ಯ ಶ್ರಮವನ್ನು ಮುಸ್ಲಿಂ ಪಂಡಿತರುಗಳು ಸಾಮಾನ್ಯವಾಗಿ ಹಾಗೂ ಮಧ್ಯಪೂರ್ವ ದೇಶಗಳ ಪಂಡಿತರುಗಳು ಮತ್ತು ರಾಜತಂತ್ರಜ್ಞರುಗಳು ಪದೇ ಪದೇ ಮುಕ್ತಕಂಠ ಶ್ಲಾಘಿಸಿದ್ದಾರೆ.

ವಿವಿಧ ವಿಷಯುಗಳ ಕುರಿತು 18 ಗ್ರಂಥಗಳನ್ನು ಅವರು ರಚಿಸಿದ್ದಾರೆ. ದೇಶೀಯ ಮತ್ತು ಅಂತರ್ದೇಶೀಯ ನಿಯುಮಗಳಿಗೆ ಸಂಬಂಧಿಸಿದ ಹಾಗೂ ಧಾರ್ಮಿಕ ಪುಸ್ತಕಗಳಾಗಿವೆ ಅವು. ಬ್ರಿಟನ್ ಮತ್ತು ಅಮೇರಿಕದ ಪ್ರಖ್ಯಾತ ಪ್ರಕಾಶಕರು ಅವುಗಳನ್ನು ಪ್ರಕಾಶನಗೊಳಿಸಿರುವರು. ಅವರು ಎರಡು ಆತ್ಮಕತೆಗಳನ್ನು ಸಹ ಬರೆದಿದ್ದಾರೆ: ಇಂಗ್ಲಿಷ್‌ನಲ್ಲಿ ಮತ್ತು ಉರ್ದುವಿನಲ್ಲಿ ಅವರು ರಚಿಸಿದ ಪವಿತ್ರ ಖುರ್‌ಆನಿನ ಇಂಗ್ಲಿಷ್ ಭಾಷಾಂತರ ಪಾಶ್ಚಾತ್ಯ ಲೋಕದಲ್ಲಿ ಅಂಗೀಕಾರ ಗಳಿಸಿದೆ. **Agony of Pakistan, Servent of God, Islam its Meaning for Man, Pilgrimage to the House of Allah, Islam and Human Rights** ಎಂಬೀ ಗ್ರಂಥಗಳು ಅವರ ಕೃತಿಗಳ ಪೈಕಿ ಕೆಲವು.

# ಝಫ್ರುಲ್ಲಾ ಖಾನ್ : ಜೀವನದ ಮುಖ್ಯ ಘಟನೆಗಳು

★ ಆರ್.

1893 ಫೆಬ್ರವರಿ 6ರಂದು ಪಂಜಾಬಿನ ಸಿಯಾಲ್‌ಕೋಟ್ ಜಿಲ್ಲೆಯ ಡಸ್ಕದಲ್ಲಿ ಜನಿಸಿದರು.

ನಾಲ್ಕು ವರ್ಷ ನಾಲ್ಕು ಮಾಸ ನಾಲ್ಕು ದಿವಸ ಪ್ರಾಯದಲ್ಲಿ ಶಾಲೆಗೆ ಸೇರಿದರು.

1907ರಲ್ಲಿ ಸಿಯಾಲ್‌ಕೋಟ್ ಅಮೇರಿಕನ್ ಮಿಶನ್ ಸ್ಕೂಲಿನಿಂದ ಮೆಟ್ರಿಕ್ ಪಾಸಾದರು.

1911ರಲ್ಲಿ ಲಾಹೋರ್ ಗವರ್ನ್‌ಮೆಂಟ್ ಕಾಲೇಜಿನಿಂದ ಬಿ. ಎ. (ಆನರ್ಸ್) ಪಾಸಾದರು. ಅರಬಿ ಭಾಷೆಯಲ್ಲಿ ವಿಶ್ವ ವಿದ್ಯಾಲಯದಲ್ಲಿ ಪ್ರಥಮ ರ್‍ಯಾಂಕ್ ಪಡೆದರು. ಎಂ. ಎ.ಗೆ ಸ್ಕಾಲರ್‌ಶಿಪ್ ದೊರೆತರೂ ಅವರು ಸ್ವೀಕರಿಸಲಿಲ್ಲ.

1911 ಸಪ್ಟೆಂಬರ್‌ನಲ್ಲಿ ನ್ಯಾಯಶಾಸ್ತ್ರ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಹೋದರು.

1914 ಜೂನಿನಲ್ಲಿ ಲಿಂಕನ್ಸ್‌ಇನ್ನಿನಿಂದ 'ಬಾರ್ ಅಟ್ ಲಾ' ಆದರು.

1914 ಒಕ್ಟೋಬರ್‌ನಲ್ಲಿ ಲಂಡನ್ ಕಿಂಗ್ಸ್ ಕಾಲೇಜ್‌ನಲ್ಲಿ ಎಲ್.ಎಲ್.ಬಿ. ಮಾಡಿ ಲಂಡನ್ ಯುನಿವರ್ಸಿಟಿಯಲ್ಲಿ ಪ್ರಥಮ ಸ್ಥಾನ ಪಡೆದು ತೇರ್ಗಡೆ ಹೊಂದಿದರು.

1914 ಡಿಸೆಂಬರ್‌ನಲ್ಲಿ ಲಾಹೋರ್ ಚೀಫ್ ಕೋರ್ಟ್‌ನಲ್ಲಿ ನ್ಯಾಯವಾದಿ.

1915ರಲ್ಲಿ ಸಿಯಾಲ್‌ಕೋಟ್‌ನಲ್ಲಿ ತಂದೆಯ ಜೂನಿಯರ್ ಆಗಿ ಪ್ರಾಕ್ಟಿಸ್ ಆರಂಭಿಸಿದರು.

1916ರಲ್ಲಿ 'ಇಂಡಿಯನ್ ಕೇಸ್'ನ ಸಹ ಸಂಪಾದಕ.

1916 ಡಿಸೆಂಬರ್‌ನಲ್ಲಿ ಮೊತ್ತ ಮೊದಲಾಗಿ ಪಾಟ್ನಾ ಹೈಕೋರ್ಟಿನಲ್ಲಿ ಹಾಜರಾದರು.

1917ರಿಂದ 1931ರ ವರೆಗೆ ಲಾಹೋರ್ ಹೈಕೋರ್ಟಿನಲ್ಲಿ ಪ್ರಾಕ್ಟಿಸ್.

1919ರಿಂದ 1924ರ ವರೆಗೆ ಲಾಹೋರ್ ಲಾ ಕಾಲೇಜ್‌ನಲ್ಲಿ ಲೆಕ್ಚರರ್.

1926ರಿಂದ 1935ರ ವರೆಗೆ ಪಂಜಾಬ್ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಮೆಂಬರ್.

1927ರಲ್ಲಿ ಪಂಜಾಬ್ ಕೌನ್ಸಿಲಿನ ಮುಸ್ಲಿಂ ಸದಸ್ಯರ ಪ್ರತಿನಿಧಿಯಾಗಿ ಇಂಗ್ಲೆಂಡಿನಲ್ಲಿ.

1928ರಲ್ಲಿ ಸೈಮನ್ ಕಮಿಷನಿನೊಂದಿಗೆ ಚರ್ಚೆ ನಡೆಸಲು ಪಂಜಾಬ್ ಸಂಸ್ಥಾನ ಕಮಿಟಿ ಮೆಂಬರ್.

1930ರಲ್ಲಿ ಪ್ರಥಮ ಲಂಡನ್ ದುಂಡುಮೇಜು ಪರಿಷತ್ತಿನಲ್ಲಿ ಮುಸ್ಲಿಂ ಪ್ರತಿನಿಧಿ.

1931ರಲ್ಲಿ ಢೆಲ್ಲಿ ಗೂಢಾಲೋಚನಾ ಮೊಕದ್ದಮೆಯಲ್ಲಿ ಕ್ರೌನ್ ಕೌನ್ಸಲರ್.

1931ರಲ್ಲಿ ಮುಸ್ಲಿಂ ಲೀಗ್ ಅಧ್ಯಕ್ಷ (ಢೆಲ್ಲಿ ಸಮ್ಮೇಳನ).

1931ರಲ್ಲಿ ದ್ವಿತೀಯ ದುಂಡುಮೇಜು ಪರಿಷತ್ತಿನಲ್ಲಿ ಸದಸ್ಯ.

1932 ಒಕ್ಟೋಬರ್‌ನಲ್ಲಿ ತೃತೀಯ ದುಂಡುಮೇಜು ಪರಿಷತ್ತಿನಲ್ಲಿ ಸದಸ್ಯ.

1933ರಲ್ಲಿ ಟೊರೊಂಟೋ ಕಾಮನ್‌ವೆಲ್ತ್ ರಿಲೇಶನ್ಸ್ ಕಾನ್ಫರೆನ್ಸಿನಲ್ಲಿ ಭಾರತೀಯ ಪ್ರತಿನಿಧಿ ಸಂಘದ ನಾಯಕ.

1935ರಲ್ಲಿ ವೈಸರಾಯಿಯ ಎಕ್ಸಿಕ್ಯೂಟಿವ್ ಕೌನ್ಸಿಲ್‌ನಲ್ಲಿ ತಾತ್ಕಾಲಿಕ ಮೆಂಬರ್.

1935ರಿಂದ 1940ರ ವರೆಗೆ ವೈಸರಾಯಿಯ ಎಕ್ಸಿಕ್ಯೂಟಿವ್ ಕೌನ್ಸಿಲ್‌ನಲ್ಲಿ ಖಾಯಂ ಸದಸ್ಯ.

1937ರಲ್ಲಿ ಆರನೆಯ ಜಾರ್ಜ್ ಅವರ ಕಿರೀಟ ಧಾರಣೋತ್ಸವ ಸಮಾರಂಭದಲ್ಲಿ ಬ್ರಿಟಿಷ್ ಇಂಡಿಯನ್ ಪ್ರತಿನಿಧಿ.

1937ರಲ್ಲಿ ಸರ್ ಗೌರವ ಬಿರುದು ಲಭಿಸಿತು.

1938ರಲ್ಲಿ ಲಂಡನಿನಲ್ಲಿ ಡೊಮಿನಿಯನ್ ಮಿನಿಸ್ಟರ್ಸ್ ಕಾನ್ಫರೆನ್ಸಿನಲ್ಲಿ ಭಾರತೀಯ ಪ್ರತಿನಿಧಿ ಸಂಘದ ಮುಖಂಡ.

1940ರಲ್ಲಿ ವೈಸರಾಯಿಯ ಎಕ್ಸಿಕ್ಯೂಟಿವ್ ಕೌನ್ಸಿಲ್‌ನಲ್ಲಿ ಪುನಃ ಸಪ್ಲೈಮೆಂಬರ್. 1945ರ ವರೆಗೆ ಈ ಸ್ಥಾನದಲ್ಲಿದ್ದರು.

1941 ಸಪ್ಟೆಂಬರ್‌ನಿಂದ 1947 ಜೂನ್ 10ರ ವರೆಗೆ ಫೆಡರಲ್ ಕೋರ್ಟಿನಲ್ಲಿ ಜಡ್ಜ್.

1942ರಲ್ಲಿ ಚೀನಾದ ಚುಂಗಿಂಗ್‌ನಲ್ಲಿ ಭಾರತದ ಏಜೆಂಟ್ ಜನರಲ್.

1942ರಲ್ಲಿ ಮೋಂಟ್ರೀಲ್ ಫೆಸಫಿಕ್ ರಿಲೇಶನ್ಸ್ ಕಾನ್ಫರೆನ್ಸ್‌ನಲ್ಲಿ ಭಾರತೀಯ ಪ್ರತಿನಿಧಿ ಸಂಘದ ಮುಂದಾಳು.

1947 ಜೂನಿನಲ್ಲಿ ಚೀಫ್ ಆಫ್ ಇಂಡಿಯನ್ ಪ್ರಿನ್ಸಸ್ ಆದ ಭೋಪಾಲ್ ನವಾಬರ ಕಾನೂನು ಸಲಹೆಗಾರ.

1947 ಜುಲಾಯಿಯಲ್ಲಿ ಪಂಜಾಬ್ ಬೌಂಡರಿ ಕಮಿಷನಿನಲ್ಲಿ ಅಖಿಲ ಭಾರತ ಮುಸ್ಲಿಂ ಲೀಗಿನ ಸೀನಿಯರ್ ಅಡ್ವೊಕೇಟ್.

1947 ಅಗೋಸ್ತಿನಲ್ಲಿ ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನದ ಪ್ರತಿನಿಧಿ ಸಂಘದ ನೇತಾರ.

1947 ಡಿಸೆಂಬರ್‌ನಿಂದ 1954 ನವೆಂಬರ್ ತನಕ ಪಾಕಿಸ್ತಾನದ ವಿದೇಶಾಂಗ ಮಂತ್ರಿ.

1954ರಲ್ಲಿ ಹೇಗ್‌ನಲ್ಲಿರುವ ಜಾಗತಿಕ ನ್ಯಾಯಾಲಯದ ನ್ಯಾಯಾಧೀಶ.

1958ರಲ್ಲಿ ಜಾಗತಿಕ ನ್ಯಾಯಾಲಯದ ಉಪಾಧ್ಯಕ್ಷ.

1961 ಅಗೋಸ್ತಿನಿಂದ 1964 ಫೆಬ್ರವರಿ ವರೆಗೆ ಯು. ಎನ್. ಓ.ದಲ್ಲಿ ಪಾಕಿಸ್ತಾನದ ಖಾಯಂ ಪ್ರತಿನಿಧಿ.

1962–63ರಲ್ಲಿ ಯು. ಎನ್. ಓ. ಜನರಲ್ ಅಸೆಂಬ್ಲಿಯ ಅಧ್ಯಕ್ಷ.

1964 ಫೆಬ್ರವರಿ 6ರಂದು ಪುನಃ ಜಾಗತಿಕ ನ್ಯಾಯಾಲಯದ ಜಡ್ಜ್.

1970ರಲ್ಲಿ ಜಾಗತಿಕ ನ್ಯಾಯಾಲಯದ ಅಧ್ಯಕ್ಷ.

1973 ಫೆಬ್ರವರಿಯಲ್ಲಿ ನಿವೃತ್ತಿ.

1973 ಫೆಬ್ರವರಿಯಿಂದ 1985ರ ವರೆಗೆ ಲಂಡನ್ ಅಹ್ಮದಿಯಾ ಮಿಷನಿನಲ್ಲಿ ಧರ್ಮ ಸೇವೆ.

1985 ಸಪ್ಟಂಬರ್ 1ರಂದು ನಿಧನ.

# ಅಹ್ಮದಿಯಾ ವಾರ್ತೆಗಳು

## ಹಾಲೇಂಡ್‌ನಲ್ಲಿ ಹೊಸ ಅಹ್ಮದಿಯಾ ಕೇಂದ್ರ

ಕಳೆದ ಸಪ್ಟಂಬರ್ 13ನೇ ಶುಕ್ರವಾರದಂದು ಆಮ್‌ಸ್ಟರ್ಡೇಮ್ ಸಮೀಪ ನನ್‌ಸ್ಪೀಟ್ ಎಂಬ ಸುಂದರ ಪಟ್ಟಣದಲ್ಲಿ ನೂತನ ಅಹ್ಮದಿಯಾ ಸೆಂಟರ್ "ಬೈತುನ್ನೂರ್" ಉದ್ಘಾಟಿಸಲ್ಪಟ್ಟಿತು. ಅಹ್ಮದಿಯಾ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಜುಮಾ ಪ್ರಾರ್ಥನೆ ನಿರ್ವಹಿಸಿ ಉದ್ಘಾಟನೆ ಮಾಡಿದರು.

ಕಟ್ಟಡದ ಸುತ್ತುಮುತ್ತು ಒಂದೂಕಾಲು ಎಕ್ರೆ ವಿಸ್ತೀರ್ಣದ ನಿವೇಶನ ಜಮಾಅತಿನ ವಶದಲ್ಲಿದೆ. ಮುಂದೆ ಈ ಕೇಂದ್ರವನ್ನು ವಿಸ್ತಾರಗೊಳಿಸುವ ಯೋಜನೆಯಿದೆ.

## ಬೆಲ್ಜಿಯಂನಲ್ಲಿ ಅಹ್ಮದಿಯಾ ಸೆಂಟರ್

ಕಳೆದ ಸಪ್ಟೆಂಬರ್ 15ರಂದು ಬೆಲ್ಜಿಯಂನಲ್ಲಿ ಬರ್‌ಸಲ್ಸ್‌ಗೆ ಸಮೀಪ ಅಹ್ಮದಿಯಾ ಕೇಂದ್ರವೊಂದು ಉದ್ಘಾಟಿತವಾಯಿತು. ಅಹ್ಮದಿಯಾ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್ ಅವರು ಕೇಂದ್ರವನ್ನು ಉದ್ಘಾಟಿಸಿದರು. ಸ್ಥಳೀಯ ಮೇಯರ್ ಮಿ। ಜೆ. ಬಲ್ಕೆನಿಯರ್ಸ್ ಹಾಗೂ ಇನ್ನಿತರ ಅನೇಕ ಗಣ್ಯರು ಸಮಾರಂಭದಲ್ಲಿ ಭಾಗವಹಿಸಿದರು. ಮೇಯರ್ ಅವರಿಗೆ ಖಲೀಫರು ಖುರ್‌ಆನಿನ ಡಚ್ ಭಾಷಾಂತರವನ್ನು ಪಾರಿತೋಷಕವಾಗಿ ನೀಡಿದರು.

ಈ ಸಮಾರಂಭದಲ್ಲಿ ಹಾಲೇಂಡ್, ಸ್ವಿಝರ್ಲೇಂಡ್, ಜರ್ಮನಿ, ಡೆನ್ಮಾರ್ಕ್, ನಾರ್ವೆ, ಸ್ವೀಡನ್ ಮಾತ್ರವಲ್ಲ ಕೆಲವು ಅರಬ್ ರಾಷ್ಟ್ರಗಳ ಮತ್ತು ಪಾಕಿಸ್ತಾನದ ಅನೇಕರು ಸಹ ಭಾಗವಹಿಸಿದರು.

ಬೆಲ್ಜಿಯಮಿನಲ್ಲಿ ಇಸ್ಲಾಮಿನ ಪ್ರಚಾರ ಕೇಂದ್ರಕ್ಕಾಗಿ ಇತ್ತೀಚೆಗೆ ಖರೀದಿಸಲಾದ ಸುಮಾರು ಒಂದೂ ಮುಕ್ಕಾಲು ಎಕ್ರೆ ವಿಸ್ತೀರ್ಣದ ನಿವೇಶನದಲ್ಲಿ ಎರಡು ಅಂತಸ್ತಿನ ಚಲೋದಾದ ಕಟ್ಟಡವೂ ಚಾವಣಿಯಿರುವ ವಿಶಾಲ ಸ್ಥಳವೂ ಇದೆ. ಅದನ್ನು ಮಸೀದಿಗೋಸ್ಕರ ಉಪಯೋಗಿಸಲಾಗುವುದು. ಈ ಕಟ್ಟಡವು ಬರ್‌ಸಲ್ಸ್ ಶಹರದ ಪಶ್ಚಿಮ ದಿಕ್ಕಿನಲ್ಲಿ ಅತ್ಯಂತ ಸ್ವಚ್ಛ ಪರಿಸರದಲ್ಲಿದೆ. ಕಟ್ಟೋಣದ ಹಿಂಭಾಗದಲ್ಲಿ 1½ ಎಕ್ರೆ ವಿಸ್ತೀರ್ಣದ ಸುಂದರವಾದೊಂದು ಹೂದೋಟವಿದೆ.

## ಪಶ್ಚಿಮ ಜರ್ಮನಿಯಲ್ಲಿ ನೂತನ ಕೇಂದ್ರ

ಬೆಲ್ಜಿಯಮ್‌ನಿಂದ ಖಲೀಫರು ಪಶ್ಚಿಮ ಜರ್ಮನಿಗೆ ತೆರಳಿದರು. ಅಲ್ಲಿನ ಪ್ರಸಿದ್ಧ ನಗರ Cologne ಯಲ್ಲಿ ಜಮಾಅತಿನ ಹೊಸ ಕೇಂದ್ರವನ್ನು ಉದ್ಘಾಟಿಸಿದರು. ಇದು ಸೇರಿ ಖಲೀಫರು ಒಂದೇ ವಾರದಲ್ಲಿ ಯುರೋಪಿನಲ್ಲಿ ಇಸ್ಲಾಮಿನ ಪ್ರಚಾರಕ್ಕಾಗಿ ಮೂರು ಕೇಂದ್ರಗಳನ್ನು ಉದ್ಘಾಟಿಸಿ ಅಹ್ಮದಿಯಾ ಜಮಾಅತಿನ ಪ್ರಗತಿಯಲ್ಲಿ ಒಂದು ನೂತನ ದಾಖಲೆಯನ್ನು ಸ್ಥಾಪಿಸಿದರು.

## ಪ್ಯಾರೀಸ್‌ನಲ್ಲಿ ಪ್ರಚಾರ ಕೇಂದ್ರ

ಪ್ಯಾರೀಸಿನ ನಿವಾಹ್ ಎಂಬಲ್ಲಿ ಕಳೆದ ಒಕ್ಟೋಬರ್ 13ರಂದು ಅಹ್ಮದಿಯಾ ಪ್ರಚಾರ ಕೇಂದ್ರವೊಂದನ್ನು ತೆರೆಯಲಾಯಿತು. ಮೂರು ಅಂತಸ್ತುಗಳುಳ್ಳ ಕಟ್ಟಡದಲ್ಲಿ ಸ್ಥಾಪಿಸಲಾದ ಮಿಷನ್ ಹೌಸನ್ನು ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಉದ್ಘಾಟಿಸಿದರು.

## ಟ್ರಿನಿಡಾಡ್‌ನಲ್ಲಿ ಅಹ್ಮದಿಯಾ ಮಿಷನರಿಯ ಹತ್ಯೆ

ಕಳೆದ ಅಗೋಸ್ತು 10ರಂದು ಟ್ರಿನಿಡಾಡ್‌ನ ಆಹ್ಮದಿಯಾ ಮಿಷನರಿ ಜನಾಬ್ ಖುರೈಶಿ ಮುಹಮ್ಮದ್ ಅಸ್ಲಂ ಸಾಹೇಬರು ತನ್ನ ಕಾರನ್ನು ನಡೆಸುತ್ತಾ ಪುತ್ರ ನೊಂದಿಗೆ ಸಂಚರಿಸುತ್ತಿದ್ದಾಗ ಮೂವರು ಮುಸುಕು ಧಾರಿಗಳು ತಡೆಗಟ್ಟಿ ಅವರನ್ನು ಕಾರಿನಿಂದ ಹೊರಗೆಳೆದು ಬಹಳ ಸಮೀಪದಿಂದ ಗುಂಡಿಕ್ಕಿ ಹತ್ಯೆ ಮಾಡಿದರು. ಖುರೈಶಿ ಸಾಹೇಬರು ಸ್ಥಳದಲ್ಲೇ ಮೃತ್ಯುವಶರಾದರು.

ಒಂದು ತಂಡ ಮುಲ್ಲಾಗಳು ಇಂಗ್ಲೆಂಡಿನ ಹಲ ವೆಡೆಗಳಲ್ಲಿ ಸಂಚರಿಸಿ ಅಹ್ಮದಿಯರಿಗೆ ವಿರುದ್ಧವಾಗಿ ಹಿಂಸಾ ಪ್ರಚೋದಕ ಭಾಷಣ ಮಾಡಿದ ವರದಿಗಳು ಪತ್ರಿಕೆಗಳಲ್ಲಿ ಕಂಡು ಬಂದ ನಂತರವಾಗಿದೆ ಈ ಘಟನೆ ನಡೆದದ್ದು.

## ಯುನೆಸ್ಕೋದಿಂದ ಪಾಕ್ ಕ್ರಮ ಖಂಡನೆ

ಕಳೆದ ಅಗೋಸ್ತು 27ರಂದು ಸಂಯುಕ್ತ ರಾಷ್ಟ್ರ ಸಂಘದ ಅಂಗ ಸಂಸ್ಥೆ "ಯುನೈಟೆಡ್ ನೇಷನ್ಸ್ ಇಕೊನಾಮಿಕ್ ಆ್ಯಂಡ್ ಸೋಷ್ಯಲ್ ಕಮಿಷನ್ ಆನ್ ಹ್ಯೂಮನ್ ರೈಟ್ಸ್" ಜಿನೇವಾದಲ್ಲಿ ನಡೆದ 38ನೇ ಅಧಿವೇಶನದಲ್ಲಿ ಅಹ್ಮದಿಯಾ ವಿರುದ್ಧ ಪಾಕ್ ಸರಕಾರ ಹೊರಡಿಸಿದ ಆಧ್ಯಾದೇಶವನ್ನು ಗೊತ್ತುವಳಿಯೊಂದರ ಮೂಲಕ ಖಂಡಿಸಿತು.

ಪಾಕ್ ಆಧ್ಯಾದೇಶವು ಮಾನವ ಸ್ವಾತಂತ್ರ್ಯವನ್ನೂ ಭದ್ರತೆಯನ್ನೂ ಮತ ಸ್ವಾತಂತ್ರ್ಯವನ್ನೂ ಹಾನಿಗೊಳಿಸುತ್ತದೆಂದು ಅದು ಆಪಾದಿಸಿದೆ. ಪ್ರಸ್ತುತ ಅಧ್ಯಾದೇಶವನ್ನು ರದ್ದುಗೊಳಿಸಬೇಕೆಂದು ಅದು ಪಾಕ್ ಸರಕಾರವನ್ನು ಒತ್ತಾಯ ಪಡಿಸಿದೆ.

## ರಶ್ಯನ್ ಮತ್ತು ಇಟೆಲಿಯನ್ ಭಾಷೆಗಳಲ್ಲಿ ಖುರ್‌ಆನ್ ಅನುವಾದ

ರಶ್ಯನ್ ಮತ್ತು ಇಟೆಲಿಯನ್ ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಅನುವಾದಗಳು ಅಹ್ಮದಿಯಾ ಜಮಾಅತಿನ ವತಿಯಿಂದ ಸಿದ್ಧಗೊಂಡಿವೆ. ಅವುಗಳ ಮುದ್ರಣ ಕಾರ್ಯ ನಡೆಯುತ್ತಿದೆ. "ಇಸ್ಲಾಂ ಮತ ತತ್ವಜ್ಞಾನ" ಸಹ ಇಟೆಲಿಯನ್ ಭಾಷೆಯಲ್ಲಿ ಅನುವಾದ ಗೊಂಡಿದೆ.

## ಬ್ರಿಟನಿನಲ್ಲಿ ಅಹ್ಮದಿಯಾ ಸಮರ್ ಸ್ಕೂಲ್

ಬ್ರಿಟನಿನ ಟಿಲ್‌ಫೋರ್ಡ್‌ನಲ್ಲಿರುವ ಅಹ್ಮದಿಯಾ ಕೇಂದ್ರ "ಇಸ್ಲಾಮಾಬಾದ್"ನಲ್ಲಿ ಸಮರ್ ಸ್ಕೂಲೊಂದನ್ನು ತೆರೆಯಲಾಗಿದೆ. ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್ ಅವರು ಜುಲಾಯಿ 27 ರಂದು ಪೂರ್ವಾಹ್ನ 11 ಗಂಟೆಗೆ ಶಾಲೆಯ ಉದ್ಘಾಟನೆಯನ್ನು ನೆರವೇರಿಸಿದರು.

ಹಾಲೇಂಡ್, ಕೆನಡಾ, ಫ್ರಾನ್ಸ್, ಜರ್ಮನಿ, ಸ್ವಿಝರ್ಲೇಂಡ್, ವೆಸ್ಟ್ ಇಂಡೀಸ್ ಮತ್ತು ಇಂಗ್ಲೆಂಡಿನಿಂದ ಬಂದ ವಿದ್ಯಾರ್ಥಿಗಳು ಈ ಶಾಲೆಯಿಂದ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದಾರೆ.

## ಕೆನಡಾದಲ್ಲಿ ಸರ್ವಧರ್ಮ ಸಮ್ಮೇಳನ

ಅಹ್ಮದಿಯಾ ಸಂಘಟನೆಯ ವತಿಯಿಂದ ಕೆನಡಾದ ಎಡ್ಮಂಡ್ ಶಹರದಲ್ಲಿ ಇತ್ತೀಚೆಗೆ ಸರ್ವಧರ್ಮ ಸಮ್ಮೇಳನವೊಂದು ಜರಗಿತು.

ಇಸ್ಲಾಂ, ಯಹೂದಿ, ಕ್ರೈಸ್ತ, ಹಿಂದೂ ಮತ್ತು ಸಿಖ್ ಮತಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದರು.

## ಸಿರ್‍ರಾಲಿಯೋನ್‌ನಲ್ಲಿ ಹೊಸ ಘಟಕ

ಸಿರ್‍ರಾಲಿಯೋನಿನ್ ಮಮಾಕ ಎಂಬಲ್ಲಿ ಅಹ್ಮದಿಯಾ ಜಮಾಅತಿನ ಹೊಸ ಘಟಕವೊಂದನ್ನು ಸ್ಥಾಪಿಸಲಾಗಿದೆಯೆಂದು ಸಿರ್‍ರಾಲಿಯೋನ್ ಮಿಷನರಿ ಖಲೀಲ್ ಅಹ್ಮದ್ ಸಾಹೇಬ್ ತಿಳಿಸಿದ್ದಾರೆ. ಸುಮಾರು 85 ಮಂದಿ ಅಲ್ಲಿ ಇತ್ತೀಚೆ ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ.

## ಖಾದಿಯಾನಿನಲ್ಲಿ ಯುವಜನ ಮತ್ತು ಮಕ್ಕಳ ವಾರ್ಷಿಕ ಸಮ್ಮೇಳನ

ಕಳೆದ ಒಕ್ಟೋಬರ್ 18, 19 ಮತ್ತು 20ರಂದು ಭಾರತದ ಅಹ್ಮದಿಯಾ ಕೇಂದ್ರ ಖಾದಿಯಾನಿನಲ್ಲಿ 8ನೇ

ಖುದ್ದಾಮುಲ್ ಅಹ್ಮದಿಯಾ ವಾರ್ಷಿಕ ಸಮ್ಮೇಳನ ಹಾಗೂ 7ನೇ ಅತ್‌ಫಾಲುಲ್ ಅಹ್ಮದಿಯಾ ವಾರ್ಷಿಕ ಸಮ್ಮೇಳನ ಸಮಾವೇಶಗೊಂಡುವು. ದೇಶದ ವಿವಿಧ ಕಡೆಗಳಿಂದ 35 ಘಟಕಗಳ ಪ್ರತಿನಿಧಿಗಳು ಸಮ್ಮೇಳನ ದಲ್ಲಿ ಭಾಗವಹಿಸಿದರು.

ಸಮ್ಮೇಳನದ ಅಂಗವಾಗಿ ಭಾಷಣ, ಖುರ್‌ಆನ್ ಕಂಠಪಾಠ, ಹಾಡು ಇತ್ಯಾದಿ ಸ್ಪರ್ಧೆಗಳನ್ನೂ ವಿವಿಧ ಪಂದ್ಯಾಟಗಳನ್ನೂ ಏರ್ಪಡಿಸಲಾಗಿತ್ತು.

## ಒರಿಸ್ಸಾದಲ್ಲಿ 21ನೇ ವಾರ್ಷಿಕ ಸಮ್ಮೇಳನ

ಒರಿಸ್ಸಾದ ಕೇರಂಗ್‌ನಲ್ಲಿ ಅಹ್ಮದಿಯಾ ಜಮಾಅತಿನ 21ನೇ ವಾರ್ಷಿಕ ಸಮ್ಮೇಳನವು ಕಳೆದ ಮೇ 11 ಮತ್ತು 12ರಂದು ಸಮಾವೇಶಗೊಂಡಿತು.

ಪ್ರಥಮ ದಿನದ ಸಾರ್ವಜನಿಕ ಸಭೆ ಸಂಜೆ 5 ಗಂಟೆಗೆ ಕಲ್ಕತ್ತಾ ಅಮೀರ್ ಸಯ್ಯದ್ ಮುಹಮ್ಮದ್ ನೂರ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಮೌಲವಿ ಮುಹಮ್ಮದ್ ಉಮರ್ ಸಾಹೇಬ್ ಮತ್ತು ಮೌಲವಿ ಹಮೀದುದ್ದೀನ್ ಶಮ್ಸ್ ಸಾಹೇಬ್ ಅವರು ಭಾಷಣ ಮಾಡಿದರು. ಅತಿಥಿಯಾಗಿ ಆಗಮಿಸಿದ್ದ ರಾಜ್ಯ ಆಹಾರ ಸಚಿವ ಹಬೀಬುಲ್ಲಾಹ್ ಖಾನ್ ಸಾಹೇಬರು ಮಾತನಾಡುತ್ತಾ, ಅಹ್ಮದಿಯಾ ಜಮಾಅತಿನ ನ್ಯಾಯೋಚಿತ ಬೇಡಿಕೆಗಳನ್ನು ಪೂರೈಸಲಾಗುವುದೆಂದು ಭರವಸೆಯಿತ್ತರು.

ದ್ವಿತೀಯ ದಿನದ ಸಭೆಯಲ್ಲಿ, ಅತಿಥಿಯಾಗಿ ಆಗಮಿಸಿದ್ದ "ಸಮಾಜ್" ಪತ್ರಿಕೆಯ ಸಂಪಾದಕ ಶ್ರೀ ರಾಧಾನಾಥ್ ಮಾತನಾಡುತ್ತಾ ಲೋಕದಲ್ಲಿ ಶಾಂತಿ ಸಮಾಧಾನ ಹೇಗೆ ಉಂಟಾಗಲು ಸಾಧ್ಯವೆಂದು ವಿವರಿಸಿದರು. ವಿವಿಧ ಜನಾಂಗಗಳೆಡೆ ಮೈತ್ರಿ–ಸಾಮರಸ್ಯವನ್ನು ಸೃಷ್ಟಿಸಲಿಕ್ಕೆ ಅಹ್ಮದಿಯಾ ಜಮಾಅತಿನ ಸ್ಥಾಪಕರು ಮುಂದಿಟ್ಟ ಸೂಚನೆಗಳನ್ನು ಅವರು ಎತ್ತಿ ಹೇಳಿದರು.

## ಖಾದಿಯಾನಿನಲ್ಲಿ 94ನೇ ವಾರ್ಷಿಕ ಮಹಾ ಸಮ್ಮೇಳನ

ಅಹ್ಮದಿಯಾ ಕೇಂದ್ರ ಖಾದಿಯಾನಿನಲ್ಲಿ ಇದೇ ಬರುವ ಡಿಸೆಂಬರ್ 18, 19, 20ರಂದು 94ನೇ ವಾರ್ಷಿಕ ಮಹಾ ಸಮ್ಮೇಳನ ಜರಗುವುದೆಂದು ತಿಳಿದು ಬಂದಿದೆ. ದೇಶ ವಿದೇಶಗಳ ವಿದ್ವಾಂಸರು ಸಮ್ಮೇಳನ ದಲ್ಲಿ ಭಾಷಣ ಮಾಡಲಿರುವರು.

## ಕೇರಳ ಅಮೀರ್ – ಸಿದ್ದೀಖ್ ಅಮೀರಲಿ ಸಾಹೇಬ್

ಅಹ್ಮದಿಯಾ ಮುಸ್ಲಿಂ ಮಿಷನಿನ ಕೇರಳದ ಮೊತ್ತ ಮೊದಲ ಅಮೀರ್ ಆಗಿ ಜನಾಬ್ ಸಿದ್ದೀಖ್ ಅಮೀರಲಿ ಸಾಹೇಬರು ಚುನಾಯಿತರಾಗಿದ್ದಾರೆ. ಆಯ್ಕೆಯನ್ನು ಖಲೀಫರು ಅಂಗೀಕರಿಸಿದ್ದಾರೆ. ಈಗಿನ ಸಂಸ್ಥಾನ ಸಮಿತಿ ಅಧ್ಯಕ್ಷ ಡಾ। ಮನ್‌ಸೂರ್ ಅಹ್ಮದ್ (ಮಟ್ಟನ್ನೂರ್) ಅವರನ್ನು ಉಪ ಅಮೀರ್ ಆಗಿ ಖಲೀಫರು ನೇಮಿಸಿದ್ದಾರೆ.

ಕಾಸರಗೋಡು ಜಿಲ್ಲೆಯ ಮೊಗ್ರಾಲ್ ನಿವಾಸಿಯಾದ ಅಮೀರಲಿ ಸಾಹೇಬ್ ಅವರು ಮೊದಲು ಅನೇಕ ವರ್ಷ ನಿರಂತರವಾಗಿ ಅಹ್ಮದಿಯಾ ಸಂಸ್ಥಾನ ಸಮಿತಿಯ ಅಧ್ಯಕ್ಷರಾಗಿದ್ದರು. ಈಗ ಅವರು ಖಾದಿಯಾನ್ ಕೇಂದ್ರ ಸಮಿತಿಯ ಸದಸ್ಯರೂ ಆಗಿದ್ದಾರೆ.

## ಚೌಧರಿ ಮುಹಮ್ಮದ್ ಅಸದುಲ್ಲಾ ಖಾನ್ ಸಾಹೇಬ್ ನಿಧನ

ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ ಅವರ ಕಿರಿಯ ಸಹೋದರ ಜನಾಬ್ ಚೌಧರಿ ಮುಹಮ್ಮದ್ ಅಸದುಲ್ಲಾ ಖಾನ್ ಸಾಹೇಬರು ಕಳೆದ ಸಪ್ಟಂಬರ್ 18 ರಂದು ತನ್ನ 80ನೇ ವಯಸ್ಸಿನಲ್ಲಿ ನಿಧನ ಹೊಂದಿದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್".

ಮುಹಮ್ಮದ್ ಅಸದುಲ್ಲಾ ಖಾನ್ ಸಾಹೇಬರು ಅತ್ಯಂತ ಧರ್ಮನಿಷ್ಠರೂ ಸಾತ್ವಿಕರೂ ಆಗಿದ್ದರು. ಅವರು ಜಮಾಅತ್‌ಅಹ್ಮದಿಯಾ ಲಾಹೋರಿನ ಅಮೀರ್ ಆಗಿ ಅನೇಕ ವರ್ಷಗಳ ಕಾಲ ಸೇವೆಯರ್ಪಿಸಿದ್ದರು.

ಮೃತರ ಆತ್ಮಕ್ಕೆ ಅಲ್ಲಾಹನು ಶಾಂತಿಯನ್ನೂ ಉನ್ನತ ದರ್ಜೆಯನ್ನೂ ದಯಪಾಲಿಸಲಿ.


●

# AHMADIYYA ENGLISH LITERATURE

| | | |
|---|---|---|
| 1. | Introduction to the Study of the Holy Quran<br>By Hazrat Mirza Bashiruddin Mahmood Ahmad | 16-00 |
| 2. | The Philosophy of the Teachings of Islam<br>By Hazrat Mirza Ghulam Ahmad | 6-00 |
| 3. | Characteristics of the Quranic Teachings<br>By Hazrat Mirza Bashiruddin Mahmood Ahmad | 2-00 |
| 4. | The Holy Prophet Muhammad<br>By Haz at Mirza Bashiruddin Mahmood Ahmad | 2-00 |
| 5. | Ahmadiyya Movement<br>By Hazrat Mirza Bashiruddin Mahmood Ahmad | 2-25 |
| 6. | What is Ahmadiyyat?<br>By Hazrat Mirza Bashiruddin Mahmood Ahmad | 1-50 |
| 7. | The Economic Structure of Islamic Society<br>By Hazrat Mirza Bashiruddin Mahmood Ahmad | 2-50 |
| 8. | The New World Order of Islam<br>By Hazrat Mirza Bashiruddin Mahmood Ahmad | 2-25 |
| 9. | Truth About Khatme Nabuwat<br>By Hazrat Mirza Bashir Ahmed M.A. | 2-50 |
| 10. | Islam and Slavery By Hazrat Mirza Bashir Ahmad, M A. | 1-25 |
| 11. | Forty Gems of Beauty By Hazrat Mirza Bashir Ahmad, M.A. | 2-50 |
| 12. | Our Teachings By Hazrat Mirza Ghulam Ahmad | 1-00 |
| 13. | An Interpretation of Islam By Laura Viccia Vaglieri | 3-00 |
| 14. | Muhammad the Most Successful Prophet<br>By Moulana Sharif Ahmad Amini | 1-00 |
| 15. | The Goal of Man and the Way to Reach it<br>By Muhammad Karimullah Naujawan & Dr. Hafiz Saleh Muhammad Allahdin. Ph.D | 0-50 |
| 16. | Jesus in India By Hazrat Mirza Ghulam Ahmad | 2-25 |
| 17. | A Review of Christianity By Hazrat Mirza Ghulam Ahmad | 1-00 |
| 18. | Four Questions by a Christian and their Answers<br>By Hazrat Mirza Ghulam Ahmad | 1-25 |
| 19. | How to get rid of the Bondage of Sin<br>By Hazrat Mirza Ghulam Ahmad | 1-25 |
| 20. | Where did Jesus Die? By J D Shams | 5-00 |
| 21. | Did Jesus Redeem Mankind? | 2-50 |
| 22. | The Tomb of Jesus By Sufi Mutiur Rahman Bengalee. M.A. | 1-00 |
| 23. | The Christian Doctrine of Atonement<br>By Dr. M. M. Sadiq. D.D LL.D S.S.P (London) | 1-00 |
| 24. | Why did early Christians accept Islam? By J D Shams | 1-00 |
| 25. | Latest Findings about Jesus Christ | 0-50 |

Write to : **Secretary for Mission Works**
Sadr Anjuman Ahmadiyya, Qadian-143 516 (Punjab)

Regd. with the Registrar of Newspapers for India. Regd No. R N. 27354/75
**YUGARASHMI Kannada Quarterly, December 1985 / Fatah 1364**




## English Translation of the
## HOLY QURAN
## with Arabic Text & Extensive Index

**Price : Rs. 20-00**
**Postage Extra**

Write to :

NAZIR DAWAT-O-TABLIGH
Sadr Anjuman Ahmadiyya
Qadian - 143 516 [Punjab]

ಎಲ್ಲಾ ಬಗೆ ಹಂಚುಗಳಿಗೆ ವಿಚಾರಿಸಿರಿ :

# STANDARD TILERY
## KADUR
**CHICKMANGALUR DISTRICT**

★

**RAJA MARK** Roofing Tiles, Ridges, Wall Tiles, Span Tiles, Floorings, Decorative Tiles, Ceilings, Etc. Etc.

## All Clay Products Available.

**Edited and Published by Muhammad Yusuf on behalf of Jamath Ahmadiyya at 10-23 1008, Ansari Road, Bunder, Mangalor-575 001. Phone: 32039**
**Printed at Karavali Printers, Azizuddin Road, Bunder, Mangalore-575 001.**